ಸಂವಾದ

ಮಾರ್ಚ್ ೨೦೦೭ ರೂ. ೨೦

ಕದಲ ತದಿಯ ತಾತ್ವಿಕ ಪಳವಂಡ

ಮೊಟ್ಟೆ ರಾಜಕಾರಣ

ಕಳೆದು ಹೋಗಲಿದೆ ಕಾವೇರಿ!

ಸಂವಾದ

ಮಾಸ ಪತ್ರಿಕೆ

ಸಂಪುಟ ೫ ಸಂಚಿಕೆ ೫
ಮಾರ್ಚ್ ೨೦೦೭

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಬಿ.ಯು.ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
© ೨೩೨೮೭೯೪೩/೯೪೪೮೦ ೪೮೩೦೬
ಇ-ಮೇಲ್ : **samvaada@hotmail.com**
honnapura@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
© 080-23287943, 94480 48306
e-mail : **samvaada@hotmail.com**
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೩
❑ ಅಂತರಂಗ:
ಕಾವೇರಿ ಮತ್ತು ಕಪಟ ರಾಜಕಾರಣ ೫
❑ ಕಮ್ಯೂನಲ್ ಬ್ರಾಂಡಿನಲ್ಲಿ
ಜನಪ್ರಿಯಗೊಳ್ಳುತ್ತಿರುವ
ಕ್ರಿಮಿನಲ್ ಕೃತ್ಯಗಳು ೬
○ ಬಿ.ಎಂ. ಮುಸ್ತಫಾ ಆತೂರು
❑ ಕಳೆದು ಹೋಗಲಿದೆ ಕಾವೇರಿ! ೮
○ ಹೆಚ್.ಎನ್. ನಂಜೇಗೌಡ
❑ ರಾಜಕೀಯದಲ್ಲಿ ಮಹಿಳೆಯ ಪಾಲು ೧೧
○ ತೇಜಾಕ್ಷಿ ಶೆಟ್ಟಿ

❑ ಮೊಟ್ಟೆ ರಾಜಕಾರಣ: ೧೪
○ ವೈ ಮರಿಸ್ವಾಮಿ
❑ ಹಿಂದೂ ಸಮಾಜೋತ್ಸವ ೧೬
○ ವಡ್ಡಗೆರೆ ನಾಗರಾಜಯ್ಯ
❑ ಹೀಗೊಬ್ಬ ಸರಣಿ ಅಪಹರಣಕಾರ ೨೦
❑ ಕಡಲ ತಡಿಯ ತಾತ್ವಿಕ ಹಳವಂಡಗಳು ೨೨
○ ಶ್ರೀಶ ಉಡುಪ
❑ ಬ್ರಾಹ್ಮಿನ್ ಸೂಪರ್ ಮ್ಯಾನ್! ೩೦
○ ಡಾ॥ ಲಕ್ಷ್ಮಿಪತಿ
❑ ಸುವರ್ಣ ಕರ್ನಾಟಕ
ಮರೆತ ಕಾರ್ಮಿಕ ಹಿರಿಮೆ ೩೨
○ ನಾ. ದಿವಾಕರ
❑ ಭಾರತದಲ್ಲಿ ದಲಿತರೇಕೆ ಕ್ರೈಸ್ತರಾಗುತ್ತಾರೆ? ೩೫
○ ಮನೋರಂಜನಿ
❑ ದಲಿತ್ ಡೈರಿ ೩೮
○ ಚಂದ್ರ ಭಾನ್ ಪ್ರಸಾದ್
❑ ಬುದ್ಧಾಯಣ ೪೨
○ ಸಿ. ಎಚ್. ರಾಜಶೇಖರ್

ಕವನಗಳು : ❑ ರಾಜಯೋಗ ೨೯



ಮುಖಪುಟ ಕಲೆ – ವಿನ್ಯಾಸ: ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಕಂಬಾಲಪಲ್ಲಿ: ಕೆಲವು ಪ್ರಶ್ನೆಗಳು

ಗೌರವಾನ್ವಿತ ಇಂದೂಧರ ಹೊನ್ನಾಪುರ ಸರ್‌ಗೆ ವಂದನೆಗಳು.

'ಸಂವಾದ' ಪತ್ರಿಕೆಯ ಲೇಖನಗಳನ್ನು ಓದಲು ಆರಂಭಿಸಿದಾಗಿನಿಂದ ನನ್ನ ಆಲೋಚನಾಕ್ರಮಗಳೇ ಬದಲಾಗತೊಡಗಿವೆ. ಸುಮಾರು ೮-೧೦ ವರ್ಷಗಳ ಕಾಲ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತನಾಗಿ ದುಡಿದ ನಾನು ಈಗ ಧಾರವಾಡ ವಿ.ವಿ. ಯಲ್ಲಿ ಸ್ನಾತಕೋತ್ತರ ವ್ಯಾಸಂಗ ಮುಗಿಸಿ ನಿರುದ್ಯೋಗಿಯಾಗಿ ಭೂಮಿಗೆ ಭಾರವಾಗಿ ಮನೆಯಲ್ಲಿದ್ದೀನಿ. ನಾನು ಓದಿದ ಶಿಕ್ಷಣವೂ ನನಗೆ ಬದುಕುವ ದಾರಿ ತೋರಲಿಲ್ಲ. ನಾನು ದುಡಿದ ದಲಿತ ಸಂಘರ್ಷ ಸಮಿತಿಯೂ ನನಗೆ ಬದುಕುವ ಮಾರ್ಗ ಸೂಚಿಸಲಿಲ್ಲ. ನಾನೀಗ ಎಡಬಿಡಂಗಿ ಮನುಷ್ಯನಾಗಿದ್ದೇನೆ.

ಆದರೆ ಕಳೆದ ಒಂದು ವರ್ಷದ ಹಿಂದೆ ನನ್ನ ಗೆಳೆಯನೊಬ್ಬ ಓದಲೆಂದು ಕೊಟ್ಟ 'ಸಂವಾದ' ನನ್ನ ಯೋಚನೆಯ ರೀತಿಯನ್ನೇ ಬದಲಾಯಿಸಿದೆ. ನನಗೀಗ ಮೊದಲಿನ ತಬ್ಬಲಿತನ ಇಲ್ಲ. ನೌಕರಿ ನನಗಿನ್ನೂ ಗಗನ ಕುಸುಮವಾದರೂ ಏನಾದರೂ ಮಾಡಿ ಬದುಕಬಹುದೆಂಬ ಆಸೆ ಮೂಡುತ್ತಿದೆ. ಅದಕ್ಕಾಗಿಯೇ ದುಡಿಮೆ ಇಲ್ಲದಿದ್ದರೂ ಗೆಳೆಯರಿಂದ ಕಾಡಿ ಬೇಡಿ ಪಡೆದ ಹಣದಲ್ಲೇ 'ಸಂವಾದ'ಕ್ಕೆ ಚಂದಾ ಕಳುಹಿಸಿರುವೆನು.

ಮುಖ್ಯ ವಿಷಯವೇನೆಂದರೆ, 'ಸಂವಾದ'ದ ಫೆಬ್ರವರಿ ಸಂಚಿಕೆಯಲ್ಲಿ ಕಂಬಾಲಪಲ್ಲಿ ನರಮೇಧ ಕುರಿತು ಲೇಖನ ಪ್ರಕಟಪಡಿಸಿದ್ದೀರಿ. ಅದರಲ್ಲಿನ ಲೇಖಕರ ಕಾಳಜಿ, ನೋವು, ಆಕ್ರೋಶ ಇವುಗಳೆಲ್ಲ ಸರಿಯಾದವುಗಳೇ ಆಗಿವೆ. ಆದರೆ ನನಗನಿಸುತ್ತಿರುವುದೇ ಬೇರೆ. ಯಾಕೆಂದರೆ, ಕಂಬಾಲಪಲ್ಲಿಯ ನರಮೇಧಕ್ಕೆ ಮೇಲ್ಜಾತಿಯ ಹಿಂದುಗಳು ಎಷ್ಟು ಕಾರಣರೋ ನಮ್ಮ ದಲಿತರೂ ಅಷ್ಟೇ ಕಾರಣರು ಎಂದು ನನಗೆ ಅನ್ನಿಸುತ್ತಿದೆ. ದಲಿತ ಸಂಘರ್ಷ ಸಮಿತಿ ದಲಿತರಿಗೆ 'ಕುರುಡು ಸ್ವಾಭಿಮಾನ' ಕಲಿಸಿತೇ ಹೊರತು 'ಅರಿವಿನ ಸ್ವಾಭಿಮಾನ' ಹುಟ್ಟಿಸಲಿಲ್ಲ. ಅರಿವಿನ ಸ್ವಾಭಿಮಾನ ಹುಟ್ಟಿಸಿದ್ದರೆ ಬಹುಷಃ ಇಂಥ ಘಟನೆಗಳು ನಡೆಯುತ್ತಿರಲಿಲ್ಲ. ನಡೆದಿದ್ದರೂ ಇಷ್ಟು ಪ್ರಮಾಣದಲ್ಲಿ ನಡೆಯುತ್ತಿರಲಿಲ್ಲ.

ಎಲ್ಲಕ್ಕಿಂತ ಹೆಚ್ಚಾಗಿ ಕಂಬಾಲಪಲ್ಲಿ ಘಟನೆ ನಡೆದ ಮೇಲೆ ದಲಿತ ಸಂಘಟನೆಗಳು 'ಉರಿವ ಮನೆಯಲ್ಲೂ ಲಾಭ ತೆಗೆಯುವ' ಕೆಲಸ ಮಾಡಿದವೇ ವಿನಃ ಘಟನೆಗೆ ಪ್ರಾಮಾಣಿಕವಾಗಿ ಸ್ಪಂದಿಸಲಿಲ್ಲ. ಸಂಘಟನೆಗಳು ಇಷ್ಟೆಲ್ಲ ಅಬ್ಬರದಿಂದ ಕಿರುಚಾಡಿದರೂ ಅಲ್ಲಿ ಕೇಸು ನಡೆಸಲು ಒಬ್ಬನೇ ಒಬ್ಬ ಉತ್ತಮ ವಕೀಲನನ್ನು ನಿಯಮಿಸಲು ಪ್ರಯತ್ನಿಸಲಿಲ್ಲ. ದೌರ್ಜನ್ಯಕ್ಕೊಳಗಾದವರಿಗೆ ಸಾಂತ್ವನ ನೀಡಿ ನ್ಯಾಯಾಲಯದಲ್ಲಿ ಅಪರಾಧದ ಬಗೆಗೆ ಸತ್ಯ ಹೇಳಿಸುವಂಥ ಆತ್ಮ ಸ್ಥೈರ್ಯವನ್ನು ಅವರಲ್ಲಿ ತುಂಬಲಿಲ್ಲ. ನನಗೆ ಕೋಲಾರದ ಗೆಳೆಯನೊಬ್ಬ ಹೇಳಿದ ಪ್ರಕಾರ, ದೌರ್ಜನ್ಯದ ನಂತರ ಸರ್ಕಾರ ನೀಡುವ ಪರಿಹಾರದಲ್ಲಿ ಪಾಲು ಪಡೆಯಲು ಈ ಸಂಘಟನೆಗಳ ಮುಖಂಡರು ಸ್ಪರ್ಧೆಗೆ ಇಳಿದಿದ್ದರೇ ವಿನಃ ನೊಂದವರಲ್ಲಿ ಆತ್ಮವಿಶ್ವಾಸ ಮೂಡಿಸುವುದರಲ್ಲಲ್ಲ. ಕೆಲವು ನಾಯಕರುಗಳಂತೂ ಈ ಘಟನೆಯಿಂದಾಗಿ ಒಳ್ಳೆ ಕಮಾಯಿ ಮಾಡಿಕೊಂಡರು. ಕಂಬಾಲಪಲ್ಲಿಗೆ ಭೇಟಿ ನೀಡುವ ರಾಜಕಾರಣಿಗಳು ಅಧಿಕಾರಸ್ಥರೊಂದಿಗೆ ಭಾವಚಿತ್ರ ತೆಗೆಸಿಕೊಳ್ಳಲು ಸಂಘಟನೆಯ ಮುಖಂಡರಲ್ಲಿ ಗುದಮುರಿಗಿ ನಡೆಯುತ್ತಿತ್ತೆಂಬುದು ಎಲ್ಲರಿಗೂ ತಿಳಿದ ವಿಚಾರ. ಇಂತಿರುವಲ್ಲಿ ಕಂಬಾಲಪಲ್ಲಿ ಪ್ರಕರಣದಲ್ಲಿ ನ್ಯಾಯದ ತೀರ್ಪನ್ನು ನಿರೀಕ್ಷಿಸುವುದಾದರೂ ಹೇಗೆ ಸಾಧ್ಯವಾಗುತ್ತದೆ.?

ನನ್ನ ಪ್ರಕಾರ ಕಂಬಾಲಪಲ್ಲಿ ತೀರ್ಪು ಕೇವಲ ನ್ಯಾಯಾಂಗದ ಸೋಲಲ್ಲ. ನಾಡಿನ ನಾಗರಿಕ ಸಮಾಜದ ಸೋಲು. ಕೋಮುವಾದದ ಬಗ್ಗೆ, ಸಂಘ ಪರಿವಾರದ ಬಗ್ಗೆ ಇಷ್ಟೊಂದು ಚೀರಾಡುವ ಬುದ್ಧಿ ಜೀವಿಗಳೇಕೆ ಈ ವಿಚಾರದಲ್ಲಿ ಮೌನರಾದರು? ತಾವಷ್ಟೇ ಕ್ರಾಂತಿಕಾರಿಗಳೆಂದು ಬೀಗುವ ಸಾಹಿತಿ-ಕಲಾವಿದರೇಕೆ ತಣ್ಣಗಾದರು? ದೀನ-ದಲಿತರ ಹೆಸರಿನಲ್ಲಿ ಲಕ್ಷ ಲಕ್ಷ ಹಣ ಪಡೆಯುವ ಸ್ವಯಂ ಸೇವಾ ಸಂಸ್ಥೆಗಳೇಕೆ ಮೂಕವಾದವು? ಯಾವೊಬ್ಬ ವಕೀಲನಿಗೂ ಮಾನವೀಯತೆ ಮಿಡಿಯಲಿಲ್ಲವೇಕೆ? ಮಾನವ ಹಕ್ಕುಗಳಿಗಾಗಿ ಹೋರಾಡುವವರೆಲ್ಲ ಎಲ್ಲಿ ಅಡಗಿ ಕುಳಿತಿದ್ದರು? 'ನ್ಯಾಯಕ್ಕಾಗಿ ಬಂದೂಕು ಎತ್ತುವ' ನಕ್ಸಲೀಯರೇಕೆ ಸುಮ್ಮನಿದ್ದರು?

ನಮ್ಮ ಪೊಲೀಸರು, ನ್ಯಾಯಾಂಗ ವ್ಯವಸ್ಥೆ, ಆಡಳಿತಗಾರರು ರಾಜಕಾರಣಿಗಳೂ ಎಲ್ಲರನ್ನು ಕಳ್ಳರೆಂದುಕೊಳ್ಳೋಣ. ಆದರೆ ಉಳಿದವರೇಕೆ ನರಸತ್ತ ನಾಮರ್ಧರಂತಾಗಿದ್ದರು?

ಈ ನನ್ನ ಪ್ರಶ್ನೆಗಳಿಗೆ ಪ್ರಾಮಾಣಿಕ ಉತ್ತರ ಬೇಕು. ಮೊದಲು ದಲಿತ ಚಳುವಳಿಯ ವಿವಿಧ ಬಣಗಳ ಮುಖಂಡರು, ಸಾಹಿತಿ-ಕಲಾವಿದರು ಉತ್ತರಿಸಬೇಕು. ನಂತರ ಉಳಿದವರು. ಉತ್ತರಿಸುವ ಎದೆಗಾರಿಕೆ ಇಲ್ಲದಿದ್ದರೆ ಇನ್ನು ಮುಂದಾದರೂ ಜನರ ಕಣ್ಣಿಗೆ ಮಣ್ಣೆರಚುವ ನೀಚ ಕೆಲಸವನ್ನು ಇವರುಗಳು ನಿಲ್ಲಿಸಬೇಕು.

ಬಹಳ ನೋವಿನಿಂದ ಈ ಪತ್ರ ಬರೆಯುತ್ತಿದ್ದೇನಾದ್ದರಿಂದ ತಾವು ಅನ್ಯಥಾ ಭಾವಿಸಬಾರದು. ನನ್ನ ಪ್ರಶ್ನೆಗಳು ಅರ್ಥವಿಲ್ಲದವು ಅನ್ನಿಸಿದರೆ ದಯವಿಟ್ಟು ಈ ಪತ್ರವನ್ನು ಹರಿದು ಹಾಕಿ. ಅರ್ಥಪೂರ್ಣ ಅನ್ನಿಸಿದರೆ ಪ್ರಕಟಿಸಿರಿ.

ಇನ್ನೊಬ್ಬ ಅಂಬೇಡ್ಕರ್ ಹುಟ್ಟುವುದಕ್ಕಾಗಿ ನಾನು ಕಾಯುತ್ತೇನೆ.

ಅರವಿಂದ ಮಾನೆ
ಬೆಳಗಾವಿ

ಪತ್ರಾಗಾರ

ಚಂದಾ ವಿವರ
ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ	ರೂ.೧೦೦/-	ರೂ.೩೦೦/-	ರೂ.೫೦೦/-
ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-
ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಜಾಗತೀಕರಣ: ಅರ್ಥವಿಲ್ಲದ ವಿರೋಧ

ಪ್ರೀತಿಯ ಸಂಪಾದಕರೇ,

ಜಾಗತೀಕರಣ ವಿರೋಧಿಸುವ ಮತ್ತೊಂದು ಲೇಖನ 'ಸಂವಾದ'ದಲ್ಲಿ ಪ್ರಕಟವಾಗಿದೆ. ಆದರೆ ನನ್ನ ಪ್ರಶ್ನೆ ಇರುವುದು ಈ ವಿರೋಧ ವಿಶ್ಲೇಷಣೆಗಳಿಂದ ಈಗೇನು ಪ್ರಯೋಜನ ಅಂತ.

ಜಾಗತೀಕರಣ ಎನ್ನುವುದು 'ಇನ್ನೂ ಬರುತ್ತಿದೆ' ಎನ್ನುವ ಸ್ಥಿತಿಯಲ್ಲಿಲ್ಲ. ಅದು ಬಂದಾಗಿದೆ. ಹಾಗೆ ಬಂದ ಜಾಗತೀಕರಣವನ್ನು 'ಎದುರಿಸುವುದು ಹೇಗೆ' ಎಂಬ ಬಗ್ಗೆ ನಾವೀಗ ತಲೆ ಕೆಡಿಸಿಕೊಳ್ಳಬೇಕಾಗಿದೆ. 'ನೀರಿನಲ್ಲಿ ಮುಳುಗಿರುವವನಿಗೆ ಚಳಿ ಏನು? ಮಳೆ ಏನು?' ಎನ್ನುವಂತ ಸ್ಥಿತಿಯಲ್ಲಿ ನಾವಿರುವಾಗ ನೀರಿನಲ್ಲಿ ಮುಳುಗುವುದರಿಂದಾಗುವ ಲಾಭ ನಷ್ಟದ ಲೆಕ್ಕ ಹಾಕುವುದರಿಂದ ಪ್ರಯೋಜನವೇನು ಇಲ್ಲ. ಬದಲಿಗೆ ಮುಳುಗಿರುವ ನೀರಿನಲ್ಲಿ ಬದುಕಿ ಉಳಿಯುವುದು ಹೇಗೆಂಬ ಬಗ್ಗೆ ಚಿಂತಿಸಬೇಕು. ಅದಕ್ಕೆ ಮಾರ್ಗೋಪಾಯಗಳನ್ನು ಕಂಡು ಹಿಡಿಯಬೇಕು.

ಆದುದರಿಂದ ಜಾಗತೀಕರಣ, ಖಾಸಗಿಕರಣ ಈಗ ನಮ್ಮ ಮನೆ ಬಾಗಿಲಲ್ಲಿ ಇಲ್ಲ. ಮನೆಯೊಳಗೆ ಅಡಿಗೆ ಮನೆ. ದೇವರ ಕೋಣೆ ಎಲ್ಲ ಕಡೆ ಬಂದು ಕೂತಿದೆ. ಅದನ್ನು ಎದುರಿಸಿ ಉಳಿಯುವ ಕಡೆ ಯೋಚಿಸಿ ಕಾರ್ಯೋನ್ಮುಖರಾಗಬೇಕಾಗಿದೆ. ಈ ನಿಟ್ಟಿನಲ್ಲಿ ಜಾಗತೀಕರಣದಲ್ಲಿ ಉಳಿದು ಬೆಳೆಯುವ ಕಾರ್ಯತಂತ್ರಗಳ ಬಗ್ಗೆ ಬರೆದರೆ ಒಳ್ಳೆಯದು. ಇಲ್ಲದಿದ್ದರೆ ಬತ್ತಲಾಗಿ ಎದುರು ನಿಂತಿರುವ 'ಭವಿಷ್ಯ'ವನ್ನು ಬಿಟ್ಟು ದೆವ್ವದಂತೆ ಬೆಂಬತ್ತಿದ 'ಭೂತ'ವನ್ನ ಕಟ್ಟಿಕೊಂಡಂತಾಗುತ್ತದೆ. ದಯವಿಟ್ಟು ಈ ಬಗ್ಗೆ ಲೇಖನಗಳನ್ನು ಪ್ರಕಟಿಸಿರಿ.

ಕೆ.ಎಸ್. ಸತೀಶ್ ರಾಜು
ಚಿಕ್ಕ ಮಗಳೂರು

ಕಾವೇರಿ: ರಾಜ್ಯಕ್ಕೆ ಲಾಭ-ನಷ್ಟ ಎಷ್ಟು?

ಕಾವೇರಿ ನ್ಯಾಯ ಮಂಡಳಿ ತೀರ್ಪು ಬಂದನಂತರ ನಡೆಯುತ್ತಿರುವ ಕೂಡುವ ಕಳೆಯುವ ಗುಣಿಸುವ ಭಾಗಿಸುವ ಲೆಕ್ಕಗಳು ಅವ್ಯಾಹತವಾಗಿ ನಡೆಯುತ್ತಿವೆ. ಈ ಲೆಕ್ಕಾಚಾರ ಎಷ್ಟು ಜನರ ತಲೆ ಕೆಡಿಸಿದೆ ಎಂಬುದನ್ನು ತಲೆ ಕೆಡಿಸಿಕೊಂಡವರೊಂದಿಗೆ ಮಾತಾಡಿಯೇ ತಿಳಿದುಕೊಳ್ಳಬೇಕು. ಇಂಥ ಗೊಂದಲದ ಸಮಯದಲ್ಲಿ ಇದ್ದುದರಲ್ಲಿ ಉತ್ತಮ ಎನಿಸಬಹುದಾದ ಲೆಕ್ಕ 'ಪ್ರಜಾವಾಣಿ'ಯಲ್ಲಿ ಬಂತು. ಹಾಗಾಗಿ ಅದನ್ನಿಲ್ಲಿ ಪುನರ್ ಮುದ್ರಿಸುತ್ತಿದ್ದೇವೆ.- ಸಂ

ನವದೆಹಲಿ: ನೆಲ-ಜಲದ ವಿಷಯದಲ್ಲಿ ಮನುಷ್ಯ ಮೊದಲು ಕಿವಿಗೊಡುವುದು ಹೃದಯಕ್ಕೆ, ಭಾವನೆಗಳು ಭೋರ್ಗರೆದು ಹರಿಯುವಾಗ ಬುದ್ಧಿಯ ಕಿವಿಮಾತು ಕೇಳುವುದಿಲ್ಲ. ಭಾವೋನ್ಮಾದದ ಬೆಂಕಿಯ ಉರಿ ಕಡಿಮೆಯಾಗುತ್ತಾ ಹೋಗಿ ಅರಿವಿನ ಬೆಳಕು ಮೂಡುತ್ತಿದ್ದಂತೆ ಮಸುಕಾಗಿದ್ದ ವಾಸ್ತವದ ಚಿತ್ರ ಸ್ಪಷ್ಟವಾಗುತ್ತಾ ಹೋಗುತ್ತದೆ. ಈ ಬೆಳಕಿನಲ್ಲಿ ಕಾವೇರಿ ನ್ಯಾಯಮಂಡಳಿಯ ಅಂತಿಮ ಐತೀರ್ಪು ಪರಿಶೀಲಿಸಲು ಈಗ ಸರಿಯಾದ ಕಾಲ. ಕರ್ನಾಟಕಕ್ಕೆ ಅನ್ಯಾಯ ಆಗಿದೆಯೇ? ಖಂಡಿತ ಆಗಿದೆ. ನ್ಯಾಯ ಸಿಕ್ಕಿಯೇ ಇಲ್ಲವೇ? ಇಲ್ಲವೇ ಇಲ್ಲ ಎಂದೂ ಹೇಳಲಾಗದು. ನ್ಯಾಯ ಮತ್ತು ಅನ್ಯಾಯದ ಲೆಕ್ಕ ಹೀಗಿದೆ:

ಅನ್ಯಾಯ ೧: ಜೂನ್‌ನಿಂದ ಸೆಪ್ಟೆಂಬರ್ ವರೆಗಿನ ಅವಧಿಯಲ್ಲಿ ತಮಿಳುನಾಡಿಗೆ ಹರಿಸಬೇಕಾಗಿರುವ ನೀರಿನ ಪ್ರಮಾಣ ತಗ್ಗಿಲ್ಲ. ಮಧ್ಯಂತರ ಐತೀರ್ಪಿನ ಪ್ರಕಾರ ೧೩೭ ಟಿಎಂಸಿ ಹರಿಸಬೇಕಾಗಿತ್ತು. ಈಗ ೧೩೪ ಟಿಎಂಸಿ ಈ ನೀರಿನ ಪಾಲಿನ ಭಾರದಿಂದಾಗಿ ಅಂತಿಮ ಐತೀರ್ಪಿನ ಅನುಷ್ಠಾನ ಅಸಾಧ್ಯವೆನಿಸಿ ವಿವಾದ ಜೀವಂತವಾಗಿಯೇ ಉಳಿದಿದೆ. ಹರಿಸಬೇಕಾದ ನೀರಿನ ಪಾಲನ್ನು ೨೦೫ ಟಿಎಂಸಿಗಷ್ಟೇ ಉಳಿಸಿಕೊಂಡು ಸೆಪ್ಟಂಬರ್ ತಿಂಗಳವರೆಗೆ ೧೦೦, ಅದರ ನಂತರ ೧೦೫ ಟಿಎಂಸಿ ಬಿಡುಗಡೆಗೊಳಿಸಿ ಎಂದು ಹೇಳಿದ್ದರೂ ಈ ವಿವಾದ ಇತ್ಯರ್ಥಪಡಿಸಲು ನೆರವಾದಂತಾಗುತ್ತಿತ್ತೇನೋ? ತಮಿಳುನಾಡು ಖುದ್ದಾಗಿ ಒಪ್ಪಿಕೊಂಡ ೨೦ ಟಿಎಂಸಿ ಅಂತರ್ಜಲದ ಬಳಕೆಯನ್ನು ಪರಿಗಣಿಸಿದ್ದರೂ ರಾಜ್ಯದ ಮೇಲಿನ ಅಷ್ಟು ಭಾರ ಕಡಿಮೆಯಾಗಲು ಸಾಧ್ಯ ಇತ್ತು.

ಅನ್ಯಾಯ೨: ಕಾವೇರಿ ಕಣಿವೆ ಪ್ರದೇಶದ ಜನತೆಗೆ ಕುಡಿಯುವ ನೀರಿನ ಅವಶ್ಯಕತೆಗೆ ಪಾಲು ನಿಗದಿಪಡಿಸದೆ ಇರುವುದು ಐತೀರ್ಪಿನ ಇನ್ನೊಂದು ಲೋಪ. ರಾಜ್ಯದ ನೀರಾವರಿ ಯೋಜನೆಗಳಿಗೆ ೨೫೦ ಟಿಎಂಸಿ ಮತ್ತು ಕುಡಿಯುವ ಮತ್ತು ಕೈಗಾರಿಕಾ ಬಳಕೆಗೆ ೧.೮೫ ಟಿಎಂಸಿ ನೀರನ್ನು ನಿಗದಿಪಡಿಸಿರುವ ನ್ಯಾಯಮಂಡಳಿ ಹೆಚ್ಚುವರಿಯಾಗಿ ೧೭ ಟಿಎಂಸಿ ನೀರು ಬಳಸುವ ಅಧಿಕಾರವನ್ನು ರಾಜ್ಯಕ್ಕೆ ನೀಡಿದೆ. ಅದನ್ನು ಕುಡಿಯುವ ನೀರಿಗಾಗಿ ನಿಗದಿಪಡಿಸಿದ್ದರೆ ಈ ಲೋಪಕ್ಕೆ ಅವಕಾಶ ಇರುತ್ತಿರಲಿಲ್ಲ. ಇದನ್ನು ಯಾವ ರಾಜ್ಯ ಕೂಡ ಆಕ್ಷೇಪಿಸುತ್ತಿರಲಿಲ್ಲ. ತನ್ನ ಪಾಲಿನ ನೀರನ್ನು ಕಾವೇರಿಯೇತರ ಕಣಿವೆಗೆ ಹರಿಸಲು ಕೇರಳ ಕೇಳಿದ್ದ ಅನುಮತಿಯನ್ನು ನಿರಾಕರಿಸಿರುವ ಹಿನ್ನೆಲೆಯಲ್ಲಿಯೇ ಕಾವೇರಿ ಕಣಿವೆಯಲ್ಲಿ ಇಲ್ಲದ ಪೆನ್ನಾರ್ ನದಿ ಕಣಿವೆಗೆ ಸೇರಿದ ಬೆಂಗಳೂರು ನಗರದ ಮೂರನೆ ಎರಡರಷ್ಟು ಪ್ರದೇಶಕ್ಕೆ ನ್ಯಾಯಮಂಡಳಿ ನೀರು ನಿರಾಕರಿಸಿದೆಯೆಂದು ಹೇಳಲಾಗಿದೆ.

ಆದರೆ ಕುಡಿಯುವ ನೀರಿಗಾಗಿ ಒಂದು ನದಿ ಕಣಿವೆಯಿಂದ ಇನ್ನೊಂದು ನದಿ ಕಣಿವೆಗೆ ನೀರು ಹರಿಸಿದ ಹಲವು ಉದಾಹರಣೆಗಳಿವೆ. ತಮಿಳುನಾಡು ರಾಜಧಾನಿ ಚೆನ್ನೈಗೆ ಕೃಷ್ಣಾ ನದಿಯಿಂದ ನೀರು ಹರಿಸಲು ೧೫ ಟಿಎಂಸಿ ಸಾಮರ್ಥ್ಯದ ತೆಲುಗುಗಂಗಾ ಯೋಜನೆ ಇದೆ. ಅದಕ್ಕೆ ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ತಮ್ಮ ಪಾಲಿನ ತಲಾ ೫ ಟಿಎಂಸಿ ನೀರು ನೀಡುತ್ತಿದೆ. ಇದೇ ರೀತಿ ಯಮುನಾ ನದಿ ಕಣಿವೆಗೆ ಸೇರಿದ ದೆಹಲಿಯ ಕುಡಿಯುವ ನೀರಿನ ಯೋಜನೆಗೆ ಭಾಕ್ರಾ ಕಾಲುವೆಯಿಂದ ಪಂಜಾಬ್ ನೀರು ಹರಿದುಬರುತ್ತಿದೆ.

ಅನ್ಯಾಯ ೩: ಕೇರಳಕ್ಕೆ ೩೦ ಟಿಎಂಸಿ ನೀರು ನಿಗದಿಪಡಿಸಿದ್ದರೂ ಸದ್ಯಕ್ಕೆ ಅದು ಬಳಸುತ್ತಿರುವುದು ಒಂಭತ್ತು ಟಿಎಂಸಿ. ಉಳಿದ ನೀರನ್ನು ಸಂಪೂರ್ಣವಾಗಿ ತಮಿಳುನಾಡಿಗೆ ನೀಡಬೇಕೆಂದು ನ್ಯಾಯಮಂಡಳಿ ಹೇಳಿದೆ. ರಕ್ಷಿತ ಅರಣ್ಯ ಪ್ರದೇಶದಲ್ಲಿ ಆ ರಾಜ್ಯದ ನದಿ ಕಣಿವೆ ಇರುವುದರಿಂದ ನೀರಾವರಿ-ವಿದ್ಯುತ್‌ನ ಐದು ಯೋಜನೆಗಳಿಗೆ ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆ ಕೊಕ್ಕೆ ಹಾಕಿ ಕೂತಿದೆ. ಅದಕ್ಕೆ ಮುಕ್ತಿ ಯಾವಾಗಲೋ ಗೊತ್ತಿಲ್ಲ. ಅಲ್ಲಿಯವರೆಗೆ ನೀರು ತಮಿಳುನಾಡು ಪಾಲು. ಇದರಲ್ಲಿ ಕನಿಷ್ಠ ಅರ್ಧದಷ್ಟು ನೀರನ್ನು ಕರ್ನಾಟಕಕ್ಕೆ ನೀಡಬಹುದಿತ್ತು.

ನ್ಯಾಯ ೧: ತಲೆಮೇಲಿದ್ದ ೧೯೨೪ ರ ಒಪ್ಪಂದದ ತೂಗುಕತ್ತಿಯಿಂದ ಶಾಶ್ವತ ಮುಕ್ತಿ. ಈ ಒಪ್ಪಂದದ ಪ್ರಕಾರ ಕರ್ನಾಟಕದ ಅಚ್ಚುಕಟ್ಟು ಪ್ರದೇಶ ೨,೩೫,೦೦೦ ಎಕರೆ. ಬಳಸಬಹುದಾದ ನೀರಿನ ಪಾಲು ೮೯.೮೨ ಟಿಎಂಸಿ. ಅದಕ್ಕಿಂತ ಹೆಚ್ಚಿನ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಿನ ಬಳಕೆಗಾಗಿ ಮದ್ರಾಸ್ ಪ್ರಾಂತ್ಯದ ಅನುಮತಿ ಅಗತ್ಯವಾಗಿತ್ತು.

ನ್ಯಾಯ–ಅನ್ಯಾಯ

* ೧೯೨೪ ಒಪ್ಪಂದದಿಂದ ಮುಕ್ತಿ
* ಮಧ್ಯಂತರ ಐತೀರ್ಪಿನಲ್ಲಿದ್ದ ೧೧.೨೪ ಲಕ್ಷ ಎಕರೆಗಳ ನಿರ್ಬಂಧ ರದ್ದು
* ಅಚ್ಚುಕಟ್ಟು ವಿಸ್ತರಣೆಗೆ ಮುಕ್ತ ಅವಕಾಶ
* ಹೆಚ್ಚುವರಿ ನೀರು ಬಳಕೆಗೆ ಅನುಮತಿ
* ಬಿಳಿಗುಂಡ್ಲು ಜಲಮಾಪನದಲ್ಲಿ ಲೆಕ್ಕದಿಂದ ನೀರಿನ ಉಳಿತಾಯ
* ಸಂಕಷ್ಟ ಹಂಚಿಕೆ ಸೂತ್ರ ಅನ್ಯಾಯ
* ತಗ್ಗದ ಜೂನ್–ಸೆಪ್ಟೆಂಬರ್ ತಿಂಗಳ ನೀರು ಬಿಡುಗಡೆಯ ಭಾರ
* ಕುಡಿಯುವ ನೀರಿಗೆ ಇಲ್ಲದ ಕಾವೇರಿ

ನ್ಯಾಯ ೨: ಮಧ್ಯಂತರ ವರದಿಯಲ್ಲಿದ್ದ ೧೧.೨೪ ಲಕ್ಷ ಎಕರೆ ಮೇಲಿನ ನಿರ್ಬಂಧ ರದ್ದಾಗಿರುವುದು ಕರ್ನಾಟಕಕ್ಕೆ ಸಿಕ್ಕಿರುವ ಮೊದಲ ಜಯ. ೨೭ ಲಕ್ಷ ಎಕರೆ ಅಚ್ಚುಕಟ್ಟು ಅಭಿವೃದ್ಧಿಯ ಗುರಿ ಇದೆ. ೨೪ ಲಕ್ಷ ಎಕರೆ ಅಚ್ಚುಕಟ್ಟು ಅಭಿವೃದ್ಧಿಗೆ ಯೋಜನೆ ಸಿದ್ಧಪಡಿಲಾಗಿದೆ ಎಂದು ಕರ್ನಾಟಕ ನ್ಯಾಯಮಂಡಳಿಯ ಮುಂದೆ ತಿಳಿಸಿದೆ. ಆದರೆ ರಾಜ್ಯದ ೧೮.೮೫ ಲಕ್ಷ ಅಚ್ಚುಕಟ್ಟು ಪ್ರದೇಶವನ್ನಷ್ಟೇ ಗುರುತಿಸಿ ಅದಕ್ಕೆ ೨೫೦ ಟಿಎಂಸಿ ನೀರನ್ನು ನೀಡಲಾಗಿದೆ. ಹೀಗಿದ್ದಾಗ ಹೆಚ್ಚುವರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿಗೆ ಹೆಚ್ಚುವರಿ ನೀರೆಲ್ಲಿದೆ? ಈ ಪ್ರಶ್ನೆಗೂ ನ್ಯಾಯಮಂಡಳಿ ಪರೋಕ್ಷವಾಗಿ ಉತ್ತರ ನೀಡಿದೆ. ರಾಜ್ಯದ ಕಾವೇರಿ ಕಣಿವೆ ಪ್ರದೇಶದಲ್ಲಿ ಲಭ್ಯ ಇರುವ ಹೆಚ್ಚುವರಿ ನೀರಿನ ಮೇಲಿನ ಹಕ್ಕನ್ನು ರಾಜ್ಯಕ್ಕೆ ನೀಡಿದೆ.

ನ್ಯಾಯ ೩: ನ್ಯಾಯಮಂಡಳಿ ರಾಜ್ಯಕ್ಕೆ ಅಧಿಕೃತವಾಗಿ ನೀಡಿರುವ ಪಾಲು ೨೭೦ ಟಿಎಂಸಿಯಾದರೂ ರಾಜ್ಯ ಬಳಸಲು ಅವಕಾಶ ನೀಡುರುವ ಹೆಚ್ಚುವರಿ ನೀರಿನ ಪಾಲನ್ನು ಸೇರಿಸಿದರೆ ಇದು ೩೧೦ ಟಿಎಂಸಿಗಿಂತಲೂ ಹೆಚ್ಚಾಗುತ್ತದೆ ಎನ್ನುತ್ತಿದೆ. ಒಳ ಲೆಕ್ಕ. ೧೯೭೨-೭೩ ರಿಂದ ೨೦೦೪-೦೫ರ ವರೆಗಿನ ೩೨ ವರ್ಷಗಳ ಅವಧಿಯಲ್ಲಿ ಬಿಳಿಗುಂಡ್ಲು ಜಲಮಾಪನದ ವರೆಗಿನ ಸರಾಸರಿ ನೀರಿನ ಬಳಕೆಯು ಹಕ್ಕು ರಾಜ್ಯದ ಪ್ರಮುಖ ಗೆಲುವು.

ನ್ಯಾಯ ೪: ಬಿಳಿಗುಂಡ್ಲು ಜಲಮಾಪನದ ಲೆಕ್ಕವೇ ಅಧಿಕೃತ ಎಂದು ನ್ಯಾಯಮಂಡಳಿ ಘೋಷಿಸಿ ಕರ್ನಾಟಕದ ತಲೆಮೇಲಿನ ದೊಡ್ಡ ಭಾರವನ್ನು ಇಳಿಸಿದೆ. ಬಿಳಿಗುಂಡ್ಲು ಮತ್ತು ಮೆಟ್ಟೂರು ಜಲಮಾಪನದ ಲೆಕ್ಕದಲ್ಲಿ ಸುಮಾರು ೪೦-೫೦ ಟಿಎಂಸಿಗಳ ಅಂತರ ಇದೆ. ೧೯೮೨-೮೩ ರಿಂದ ೧೯೮೯-೯೦ರವರೆಗಿನ ಏಳು ವರ್ಷಗಳ ಅವಧಿಯಲ್ಲಿ ಮೆಟ್ಟೂರು ಜಲಾಶಯಕ್ಕೆ ಸರಾಸರಿ ೨೦೫ ಟಿಎಂಸಿ ನೀರು ಹರಿದುಹೋಗಿದೆ ಎನ್ನುವುದನ್ನು ಒಪ್ಪಿಕೊಂಡು ಅಷ್ಟು ನೀರು ಹರಿಸಲು ಮಧ್ಯತರ ಐತೀರ್ಪಿನಲ್ಲಿ ತಿಳಿಸಲಾಗಿತ್ತು. ಆದರೆ ಆ ಅವಧಿಯಲ್ಲಿ ಬಿಳಿಗುಂಡ್ಲುವಿನಿಂದ ಬಿಡುಗಡೆಯಾದ ನೀರಿನ ಸರಾಸರಿ ಪ್ರಮಾಣ ೨೨೭ ಟಿಎಂಸಿ. ಈ ಲೆಕ್ಕದಲ್ಲಿ ಪ್ರತಿ ವರ್ಷ ಸರಾಸರಿ ೪೭ ಟಿಎಂಸಿಯಷ್ಟು ನೀರು ಕರ್ನಾಟಕಕ್ಕೆ ನಷ್ಟವಾಗಿದೆ. ಮೆಟ್ಟೂರಿನ ಈ ಮೋಸದ ಲೆಕ್ಕಕ್ಕೆ ಇನ್ನು ಅವಕಾಶ ಇಲ್ಲ.

ನ್ಯಾಯ ೫: ತಮಿಳುನಾಡಿನ ಈಶಾನ್ಯ ಮಾರುತ ಮತ್ತು ಕಾವೇರಿ ಕಣಿವೆಯ ಎಲ್ಲ ಜಲಾಶಯಗಳ ಸಂಗ್ರಹದ ಲೆಕ್ಕವನ್ನು ಕಾವೇರಿ ನಿಯಂತ್ರಣಾ ಪ್ರಾಧಿಕಾರ ಇಟ್ಟುಕೊಳ್ಳಬೇಕೆಂದು ನ್ಯಾಯಮಮಡಳಿ ಹೇಳಿದೆ. ಸಂಕಷ್ಟ ಹಂಚಿಕೆ ಸೂತ್ರಕೆ ಈ ಎರಡು ಅಂಶಗಳನ್ನು ಪರಿಗಣಿಸಬೇಕೆಂಬ ಕರ್ನಾಟಕದ ವಾದಕ್ಕೆ ಇದು ನೆರವಾಗಲಿದೆ.

ದಿನೇಶ್ ಅಮೀನ್ ಮಟ್ಟು
ಸೌಜನ್ಯ: ಪ್ರಜಾವಾಣಿ

ಸಂಪಾದಕೀಯ

ಕಾವೇರಿ ಮತ್ತು ಕಪಟ ರಾಜಕಾರಣ

ಕಾವೇರಿ ನ್ಯಾಯ ಮಂಡಳಿ ತೀರ್ಪು ಬಂದು ಹದಿನೈದು ದಿನಗಳು ಸರಿದು ಹೋಗಿವೆ. ಆದರೆ, ಪಾಪ ಕರ್ನಾಟಕ ಸರ್ಕಾರಕ್ಕೆ ಇನ್ನೂ ಆ ತೀರ್ಪನ್ನು ಓದಲು ಸಾಧ್ಯವಾಗಿಲ್ಲ. ಒಂದು ಸಾವಿರ ಪುಟಗಳ ದೀರ್ಘ ತೀರ್ಪು ಅದು. ಬಹುಷಃ ಕರ್ನಾಟಕಕ್ಕೆ ತಾವು ನೀಡುವ ತೀರ್ಪನ್ನು ಓದಲೂ ಇಷ್ಟು ಕಷ್ಟವಾಗುತ್ತದೆ ಎಂದು ನ್ಯಾಯ ಮಂಡಳಿಗೆ ಮೊದಲೇ ಗೊತ್ತಾಗಿದ್ದರೆ ಇಂಥ ಸುದೀರ್ಘ ತೀರ್ಪನ್ನು ನೀಡುತ್ತಿರಲಿಲ್ಲ!

ನನ್ನ ವ್ಯಂಗ್ಯದ ಹಿಂದಿನ ನೋವು ನಿಮಗೆ ಅರ್ಥವಾಗಿದೆ ಅಂದುಕೊಂಡಿರುವೆ. ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ಎಲ್ಲ ರಾಜ್ಯಗಳಿಗೂ ಸಮಾನ' ಅವಕಾಶ, ಸ್ಥಾನ-ಮಾನಗಳಿಲ್ಲ. ಹೇಳಿ-ಕೇಳಿ ನಮ್ಮದು ಅಸಮಾನ ಸಮಾಜ ವ್ಯವಸ್ಥೆ. ಹಾಗಿರುವಾಗ ಅದು ಒಕ್ಕೂಟ ವ್ಯವಸ್ಥೆಗೂ ಅನ್ವಯಿಸುತ್ತದೆ ಅಲ್ಲವೆ? 'ಭಾರತ ದೇಶ' ವೆಂಬ ನಮ್ಮ 'ನೂರಾರು ದೇಶ'ಗಳ ಒಕ್ಕೂಟ ತನ್ನೊಳಗೆ ಹೇಗೆ ಅಸಮಾನತೆಯನ್ನು ತುಂಬಿಕೊಂಡಿದೆ ಅನ್ನುವುದಕ್ಕೆ ಈ ಕಾವೇರಿ ನ್ಯಾಯಮಂಡಳಿ ತೀರ್ಪು ಅತ್ಯುತ್ತಮ ಉದಾಹರಣೆ. ಅದಕ್ಕಿಂತಲೂ ಮುಖ್ಯವಾದುದು ಕನ್ನಡ ನಾಡಿನ ರಾಜಕೀಯ ಮುಖಂಡರ ನಿರಭಿಮಾನ. ನಾಡಿನ ಅಭಿವೃದ್ಧಿಯನ್ನು ನಿರಂತರವಾಗಿ ನಿರ್ಲಕ್ಷಿಸಿದ ಕೀರ್ತಿ ಈ ಕಪಟ ರಾಜಕಾರಣಿಗಳಿಗೇ ಸಲ್ಲಬೇಕು. ನಾಡಿನ ಸಂಪನ್ಮೂಲಗಳ ಬಳಕೆಯಲ್ಲಿ ನಿರ್ಲಕ್ಷ್ಯ ತೋರಿ ಆಡಂಬರದಲ್ಲೇ ಜೀವನ ತಳ್ಳುವ ಹೇಡಿಗಳು ನಮ್ಮ ರಾಜಕಾರಣಿಗಳು.

ಈ ಎಲ್ಲದರ ಫಲವೇ ಈ ಕಾವೇರಿ ನ್ಯಾಯಾಧಿಕರಣದ ತೀರ್ಪು. ಮುಖ್ಯಮಂತ್ರಿ ಕುಮಾರಸ್ವಾಮಿ ತೀರ್ಪು ಬಂದ ಹದಿನೈದು ದಿನಗಳ ನಂತರ ಕೂಡ 'ಈ ತೀರ್ಪಿನಿಂದ ನಮಗೆ ಅನ್ಯಾಯವಾಗಿದೆ' ಎಂದು ಹೇಳುವ ಧೈರ್ಯ ತೋರುತ್ತಿಲ್ಲ. ಇನ್ನೂ ತೀರ್ಪಿನ ಅಧ್ಯಯನ ಪೂರ್ಣವಾಗಿಲ್ಲ ಎಂಬ ಬಾಲಿಷ ಮಾತುಗಳಲ್ಲೇ ದಿನ ದೂಡುತ್ತಿದ್ದಾರೆ. ಇಡೀ ರಾಜ್ಯ ಅದರಲ್ಲೂ ಕಾವೇರಿ ಕಣಿವೆ ಪ್ರದೇಶ ಕ್ಷೋಭೆಗೊಂಡಿದೆ. ಜನ ಜೀವನ ಅಸ್ತವ್ಯಸ್ಥವಾಗಿದೆ. ಜನ ಆತಂಕದಲ್ಲಿ ದಿನ ದೂಡುತ್ತಿದ್ದಾರೆ. ವ್ಯವಸಾಯಕ್ಕಿರಲಿ ಕುಡಿಯುವ ನೀರಿಗೂ ಗಂಡಾಂತರ ಬಂದೊದಗಿದೆ. ಆದರೆ ಸರ್ಕಾರ ನಿರ್ಲಿಪ್ತವಾಗಿದೆ. ಇಡೀ ಪ್ರಕರಣದಿಂದ ತನಗೆ ಬರಬಹುದಾದ ರಾಜಕೀಯ ಲೆಕ್ಕಾಚಾರದಲ್ಲಿ ಕಾಲಹರಣ ಮಾಡುತ್ತಿದೆ.

ಇದು ಬಹಳ ಇಕ್ಕಟ್ಟಿನ ಮತ್ತು ಸಂಕಟದ ಸಂದರ್ಭ. ಸಮಸ್ಯೆ ಇರುವುದು ಎರಡು ರಾಜ್ಯಗಳ ನಡುವೆ ಎಂಬುದು ಮೇಲ್ನೋಟಕ್ಕೆ ಕಂಡರೂ, ಅದರ ಬೇರುಗಳು ರಾಜಕೀಯ ಲಾಭ ನಷ್ಟಗಳ ಲೆಕ್ಕಾಚಾರದ ಮೇಲೆ ನಿಂತಿವೆ. ಈ ಸಂಕಟ ಆರಂಭವಾದ ೧೮೯೨ ರಿಂದ ೨೦೦೭ ರ ಇಂದಿನ ವರೆಗೂ ಕಾವೇರಿ ವಿವಾದ ನಿಂತಿರುವುದೇ ರಾಜಕೀಯ ಲೆಕ್ಕಾಚಾರದ ಮೇಲೆ. ಯಾವುದೇ ರಾಜ್ಯ ತನ್ನ ಅಭಿವೃದ್ಧಿಗಾಗಿ ಚೌಕಾಶಿ ಮಾಡುವುದು ಸಾಮಾನ್ಯ. ಅದನ್ನು ತಮಿಳುನಾಡು ನಿರಂತರವಾಗಿ ಮಾಡಿಕೊಂಡು ಬಂದಿದೆ. ಅದರಲ್ಲೂ ಕಾವೇರಿ ನೀರು ತಮಿಳು ನಾಡಿನ ರಾಜಕೀಯ ಪಕ್ಷಗಳ ಭವಿಷ್ಯವನ್ನು ನಿರ್ಧರಿಸುವುದರಿಂದ ಅವರು ಇದಕ್ಕಾಗಿ ಯಾವಾಗಲೂ ಎಂಥ ಹೋರಾಟಕ್ಕೂ ಸಿದ್ಧರು. ಆದರೆ ಕರ್ನಾಟಕ ಪರಿಸ್ಥಿತಿ ಬೇರೆ. ಇಲ್ಲಿ ನೆಲ, ಜಲ, ಭಾಷೆ ಬದುಕಿಗಾಗಿ ಹೋರಾಡುವವರಿಗೆ ಜನ ಬೆಂಬಲ ಕಡಿಮೆ. ರಾಜಕೀಯ ಪಕ್ಷಗಳ ಭವಿಷ್ಯ ಕೂಡ ಇಂಥ ವಿಚಾರಗಳನ್ನು ಅಧರಿಸಿರುವುದಿಲ್ಲ. ಹಾಗಾಗಿ ಇಲ್ಲಿನ ರಾಜಕಾರಣಿಗಳೂ 'ದಿನ ದೂಡುವ' ಪ್ರವೃತ್ತಿಯವರೇ.

ನನಗೆ ಆಶ್ಚರ್ಯವಾಗಿದ್ದು, ನಮ್ಮ ಜನರ ನಿರ್ಲಿಪ್ತತೆ. ಕಾವೇರಿ ನ್ಯಾಯ ಮಂಡಳಿ ತೀರ್ಪು ಹೊರಬಿದ್ದ ದಿನ ಕರ್ನಾಟಕದ ಮನೆಮನೆಗಳಲ್ಲೂ ಕರಾಳ ದಿನ ಆಚರಿಸಬೇಕಾಗಿತ್ತು. ಮಕ್ಕಳು ಮರಿಗಳಾದಿಯಾಗಿ ಉಪವಾಸ ಸತ್ಯಾಗ್ರಹ ಮಾಡಬೇಕಾಗಿತ್ತು. ಇಡೀ ಸರ್ಕಾರಿ ಯಂತ್ರವನ್ನು ನಿಲ್ಲಿಸಿ ನ್ಯಾಯ ಮಂಡಳಿಗೆ ಎಚ್ಚರಿಕೆ ನೀಡಬೇಕಾಗಿತ್ತು. ಅನ್ಯಾಯದ ತೀರ್ಪನ್ನು ನಾವು ತಿರಸ್ಕರಿಸುವುದಾಗಿ ಒಕ್ಕೊರಲಿನಿಂದ ಘೋಷಿಸಬೇಕಾಗಿತ್ತು.

ಆರಂಭದ ಆವೇಶದಲ್ಲಿ ಅಬ್ಬರದ ಪ್ರತಿಭಟನೆ ಎದುರಾದರೂ ನಂತರ ಅದಕ್ಕೊಂದು ತಾತ್ವಿಕ ತಳಹದಿ ಬರಬೇಕಾಗಿತ್ತು. ಸಾಮೂಹಿಕ ಮತ್ತು ಸೈದ್ಧಾಂತಿಕ ನಾಯಕತ್ವ ಬರಬೇಕಾಗಿತ್ತು. ಇದಾವುದೂ ನಡೆಯಲಿಲ್ಲ. ಕೆಲವು ವೃತ್ತಿನಿರತ ಚಳವಳಿಗಾರರು ತಮಗೆ ಬೇಕಾದಂತೆ ಚಳವಳಿಯನ್ನು ಮುನ್ನಡೆಸತೊಡಗಿದರು. ಅದೂ ಆಳುವ ಕಪಟ ರಾಜಕಾರಣಿಗಳ ಆಣತಿಯಂತೆ. 'ಕರ್ನಾಟಕ ಬಂದ್' ಕರೆಯನ್ನು 'ಏರ್ ಷೋ'ಗಾಗಿ ಮುಂದೂಡುವ ವಂಚನೆಯ ನಾಟಕ ಕೂಡ ಇದರ ಒಂದು ಭಾಗವಾಗಿತ್ತು. ಆಳುವವರನ್ನು ಓಲೈಸಲೆಂದೇ ಚಳವಳಿಗಳನ್ನು ನಡೆಸುವ ಇಂಥವರಿಗೆ ಏನೆನ್ನಬೇಕು?

ಇನ್ನು ವಿರೋಧ ಪಕ್ಷಗಳ ಸ್ಥಿತಿಯಂತೂ ಹೇಳತೀರದು. ಈ ಕಾಂಗ್ರೆಸ್ ಎಂಬ ಪಕ್ಷದ ತುಂಬಾ ಬರೀ ಮುಖ ಹೇಡಿಗಳೇ ತುಂಬಿ ಹೋಗಿದ್ದಾರೆ. ಯಾರಿಗೂ ಸಾರ್ವಜನಿಕ ಜೀವನದಲ್ಲಿ ಮುಖ ಎತ್ತಿ ತಿರುಗುವ ಜಾಯಮಾನ ಇಲ್ಲ. ಎಲ್ಲರೂ ಬೃಹನ್ನಳೆಯರು! ಸದಾ ಬೇರೆಯವರ ಕೃಪಾಕಟಾಕ್ಷದಲ್ಲೇ ಬದುಕು ದೂಡಬೇಕಾದ ಇವರ ಸ್ಥಿತಿಯಂತೂ ಕರುಣಾಜನಕ! ಯಾವೊಬ್ಬ ವಿರೋಧ ಪಕ್ಷದ ನಾಯಕನ ಬಳಿಯೂ ಕಾವೇರಿ ಸಂಕಷ್ಟಕ್ಕೆ ಪರಿಹಾರವಿಲ್ಲ. ಇಂಥ ಸಂಕಷ್ಟದ ದಿನಗಳಲ್ಲಿ ಇಡೀ ನಾಡಿನ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಸಬೇಕಾದ್ದು ವಿರೋಧ ಪಕ್ಷದ ಕರ್ತವ್ಯ ಮತ್ತು ನೈತಿಕ ಜವಾಬ್ದಾರಿ. ಆದರೆ ಮುಖವೇ ಇಲ್ಲದ ಕಾಂಗ್ರೆಸ್‌ಗೆ ಈ ಶಕ್ತಿ-ಯುಕ್ತಿ ಎಲ್ಲಿಂದ ಬರಬೇಕು?

ಇಷ್ಟಾದರೂ ಜನ ಸುಮ್ಮನಿಲ್ಲ. ತಮ್ಮನ್ನು ಮುನ್ನಡೆಸುವ ನಾಯಕನೊಬ್ಬ ಇಲ್ಲದಿದ್ದರೂ, ಜನ ತಮ್ಮಷ್ಟಕ್ಕೆ ತಾವೇ ಚಳವಳಿಯನ್ನು ಮುನ್ನಡೆಸುತ್ತಿದ್ದಾರೆ. ಚಳವಳಿಯ ರೂಪ, ಅಭಿವ್ಯಕ್ತಿಗಳಲ್ಲಿ ಘನತೆ-ಗಾಂಭೀರ್ಯ-ನೋವು ಕಾಣುವುದಕ್ಕಿಂತ ಒಂದು ರೀತಿಯ 'ಸಾಮೂಹಿಕ ಸನ್ನಿ' ಆವಾಹನೆಯಾದಂತಿದೆ.

ಅತ್ಯಂತ ಸೂಕ್ಷ್ಮ ಹಾಗೂ ಸಂಕಷ್ಟದ ಈ ಸಂದರ್ಭದಲ್ಲಿ ಕರ್ನಾಟಕ ಮತ್ತೆ ಕಳೆದುಕೊಳ್ಳುವವರ ಸಾಲಿನಲ್ಲೇ ಇದೆ ಎಂಬುದೇ ಅತ್ಯಂತ ನೋವಿನ ಸಂಗತಿ. ಕಾವೇರಿ ತೀರ್ಪು ಆಕಸ್ಮಿಕವಲ್ಲ. ನೂರು ವರ್ಷಗಳಿಂದ ನಡೆದ ಅನ್ಯಾಯದ ಸರಮಾಲೆ ಮುಂದುವರೆದಿದೆ. ಇದಕ್ಕೆ ರಾಜಕೀಯವಾಗಿಯೇ ನಾವು ಉತ್ತರ ನೀಡಬೇಕಾಗಿದೆ. ಈಗಿರುವ ಯಾವ ರಾಜಕೀಯ ಪಕ್ಷಗಳೂ ನಾಡಿನ ಹಿತವನ್ನು ಕಾಪಾಡಲಾರವು. ಯಾಕೆಂದರೆ ಆ ಎಲ್ಲ ಪಕ್ಷಗಳ ಜೀವವನ್ನು 'ಹೊರಗಿನ ಶಕ್ತಿ'ಗಳ ಗೂಡಿನಲ್ಲಿ ಒತ್ತೆ ಇಡಲಾಗಿದೆ.

ನಾಡನ್ನು ಉಳಿಸಿಕೊಳ್ಳಬೇಕಾದರೆ ಕರ್ನಾಟಕ ಈಗ ಅನಿವಾರ್ಯವಾಗಿ 'ಸ್ಥಳೀಯ ಮನಸ್ಸು ಮತ್ತು ರಾಷ್ಟ್ರೀಯ ಆಶಯ' ಹೊಂದಿರುವ ರಾಜಕೀಯ ಶಕ್ತಿಯನ್ನು ಹುಟ್ಟಿಹಾಕಬೇಕಾಗಿದೆ. ತಮಿಳು ನಾಡಿನ ಇಚ್ಛಾಶಕ್ತಿ ನಮ್ಮಲ್ಲಿ ಮೂಡದಿದ್ದರೆ ನಾವು ನಿರಂತರ ಬಲಿಪಶುಗಳಾಗಿಯೇ ಇರಬೇಕಾಗುತ್ತದೆ.

○ ಇಂದೂಧರ ಹೊನ್ನಾಪುರ

ಅಂತರಂಗ

ಕಮ್ಯೂನಲ್ ಬ್ರಾಂಡಿನಲ್ಲಿ ಜನಪ್ರಿಯಗೊಳ್ಳುತ್ತಿರುವ
ಕ್ರಿಮಿನಲ್ ಕೃತ್ಯಗಳು

ಬಿ.ಎಂ. ಮುಸ್ತಫಾ
ಆತೂರು

ಗಾಂಧಿ, ಅಂಬೇಡ್ಕರ್, ನೆಹರೂರವರನ್ನು ಚುನಾವಣಾ ಸಮಯದಲ್ಲಿ ಜಪಿಸುವ, ಅಧಿಕಾರಕ್ಕಾಗಿ ಈ ಮಹಾಪುರುಷರ ನೆರಳನ್ನು ಆಶ್ರಯಿಸುವ ಜಾತ್ಯತೀತ ಪಕ್ಷಗಳು, ಸೆಕ್ಯುಲರ್ ರಣಧೀರರೂ ಕೋಮು ರಾಜಕಾರಣದ ತಂತ್ರಗಳಿಂದ ತತ್ತರಿಸಿ ಹೋಗಿದ್ದಾರೆ. ಸೈದ್ಧಾಂತಿಕ ನೆಲೆಯಲ್ಲಿ ಇವುಗಳಿಗೆ ಪ್ರಖರ ಪ್ರತಿರೋಧವನ್ನೊಡ್ಡುವ ನೈತಿಕ ಸ್ಥೈರ್ಯವನ್ನೆ ಕಳೆದು ಕೊಂಡಿದ್ದಾರೆ. 'ಕಮ್ಯೂನಲ್ ರಾಜ ಕಾರಣ' ಮತ್ತು ಕಮ್ಯೂ ನಲ್ ಹಿಂಸೆಗೆ ಮೂಕ ಸಾಕ್ಷಿಗಳಾಗಿರುವ ಈ ಸೆಕ್ಯುಲರ್ ವಾದಿಗಳು ಮತ್ತು ಸೆಕ್ಯುಲರ್ ಸಿದ್ಧಾಂತ ವಿರಾಟ್ ಕಮ್ಯೂನಲ್ ಅಜೆಂಡಾದ ಮುಂದೆ ಮಂಡಿಯೂರಿ ಶರಣಾಗತರಾಗಿದ್ದಾರೆ. ಅವಕಾಶ ಬಂದರೆ ಕೋಮುವಾದಿಗ ಳೊಂದಿಗೆ ಶಾಮಿಲಾಗಿ ತಾವೇನು ಕಡಿಮೆಯಲ್ಲ ವೆಂದು ತಮ್ಮ ಎಡೆಬಿಡಂಗಿ ತನವನ್ನು ಪ್ರದರ್ಶಿಸಲು ಹೇಸುವುದಿಲ್ಲ.

ಒಂದು ಕಾಲಕ್ಕೆ ಭಾರತ ಸಂವಿಧಾನದ ಶ್ರೇಷ್ಠ ಆದರ್ಶ ಮತ್ತು ನಮ್ಮ ರಾಷ್ಟ್ರೀಯತೆಯ ಮೂಲದ್ರವ್ಯವೆನಿಸಿರುವ ಸೆಕ್ಯುಲರ್ ಎಂಬ ಸಿದ್ಧಾಂತ ರಾಷ್ಟ್ರ ಜೀವನದ ವೈವಿಧ್ಯತೆ ಮತ್ತು ಭಿನ್ನತೆಗಳ ನಡುವಿನ ಸಮತೋಲನ ಶಕ್ತಿಯಾಗಿತ್ತು. 'ಕಮ್ಯೂನಲಿಸಂ' ಅಥವಾ ಕೋಮುವಾದ ರಾಷ್ಟ್ರದ ಐಕ್ಯತೆ, ಅಖಂಡತೆ ಮತ್ತು ಪಗ್ರತಿಗೆ ಮಾರಕವೆನಿಸಿದ್ದು ಅದರ ಪ್ರತ್ಯಾಘಾತಗಳು ಗಂಭೀರ ಸ್ವರೂಪದಿಂದ ಕೂಡಿದ್ದು ಶಾಂತಿ ಮತ್ತು ಸಹಬಾಳ್ವೆಗೆ ವಿನಾಶಕಾರಿಯೆಂಬ ಪ್ರಜ್ಞೆ ಮತ್ತು ವಿವೇಕ ಜನ ಮಾನಸದಲ್ಲಿ ಬೇರೂರಿತ್ತು. ಹಿಂಸೆ, ರಕ್ತಪಾತ, ದೌರ್ಜನ್ಯ, ಅನಾಗರಿಕತೆ ಮತ್ತು ಮಾನವಹಕ್ಕುಗಳ ಉಲ್ಲಂಘನೆಯ ಕುರಿತು ತೀವ್ರ ಕಳವಳ, ಆತಂಕ ಮತ್ತು ಭೀತಿಯ ಕರಿನೆರಳಿನಲ್ಲಿ ಜರ್ಜರಿತಗೊಂಡ ಮಾನವಮನಸ್ಸುಗಳು ಶಾಂತಿ ಮತ್ತು ಪ್ರೀತಿಯ ಸಿಹಿ ಸಿಂಚನಕ್ಕಾಗಿ ತವಕ ಪಡುತ್ತಿದ್ದರೆ, ಈಗ ಸೌಹಾರ್ದದ ತಾಣಗಳಾದ ನಮ್ಮ ಊರು, ನಗರ, ನಾಡನ್ನು ಹಿಂಸೆ ಮತ್ತು ಪ್ರಕ್ಷುಬ್ಧತೆಯ ಕರಾಳ ಅನುಭವಗಳತ್ತ ನಾವೇ ಅಣಿಗೊಳಿಸುತ್ತಿದ್ದೇವೆ.

ಕಾನೂನು ಮತ್ತು ವ್ಯವಸ್ಥೆಯನ್ನು ನೆಲೆಗೊಳಿಸಿ, ಜನರ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ರಕ್ಷಿಸುವ ಹೊಣೆಗಾರಿಕೆ, ಜನತೆಯ ಜೀವ ಮತ್ತು ಆಸ್ತಿಪಾಸ್ತಿಗಳಿಗೆ ಪೂರ್ಣ ರಕ್ಷಣೆಯನ್ನೊದಗಿಸುವ ಪ್ರಾಥಮಿಕ ಕರ್ತವ್ಯದೊಂದಿಗೆ ಅಧಿಕಾರದಲ್ಲಿರುವ ಸರಕಾರ ಮತ್ತು ಅದರ ಸಂಸ್ಥೆಗಳು ಈ ನಿಟ್ಟಿನಲ್ಲಿ ಸಂಪೂರ್ಣ ವಿಫಲವಾಗಿವೆ. ಪ್ರಜಾ ಪ್ರಭುತ್ವ ಕಾನೂನಿನ ಆಡಳಿತ (Rule of Law) ದುರ್ಬಲಗೊಂಡು ಕಾಡಿನ ನ್ಯಾಯ (Law of Jungly) ವಿಜೃಂಭಿಸುತ್ತಿದೆ. ಕೆಲವು ಸಂಘಟನೆಗಳು ಮತ್ತು ಶಕ್ತಿಗಳಿಗೆ ನಾವು ಕಾನೂನಿಗೆ ಅತೀತರು ನಮ್ಮ ಯಾವುದೇ ದುಂಡಾವರ್ತಿಗಳು ಈ ನೆಲದ ಕಾನೂನಿನ ಕಕ್ಷೆಯೊಳಗೆ ಬರುವುದಿಲ್ಲವೆಂಬ ದುರಹಂಕಾರದಿಂದ, ಕಾನೂನನ್ನೇ ಕೈಗೆತ್ತಿಕೊಂಡು ಮೆರೆಯುತ್ತಿದ್ದಾರೆ. 'ವಿರಾಟ್' ಸಮಾಜದ ಹೆಸರಿನಲ್ಲಿ ಅದರ ಕಾರ್ಯಕರ್ತರು ಬೀದಿ, ಪಟ್ಟಣಗಳಲ್ಲಿ ಜಮಾಯಿಸಿ ಪುಂಡಾಟಿಕೆ, ದರೋಡೆ ಲೂಟಿ, ಕೊಲೆ ಕೃತ್ಯಗಳಲ್ಲಿ ತೊಡಗಿರುವ ಅನೇಕ ಪ್ರಕರಣಗಳೂ ದಿನ ನಿತ್ಯ ನಮ್ಮ ಕಣ್ಣ ಮುಂದೆಯೇ ನಡೆಯುತ್ತಿವೆ.

ಕಾನೂನು ಬಾಹಿರ, ಸಮಾಜಘಾತಕ, ಸುಸಂಸ್ಕೃತ-ಪ್ರಬುದ್ಧ ಸಮಾಜಕ್ಕೆ ಕಳಂಕ, ಅನೈತಿಕ ಮುಂತಾದ ವಿಶೇಷಣಗಳನ್ನು ಕಳಚಿಕೊಂಡಿರುವ ಈ ದುಷ್ಕೃತ್ಯಗಳೆಲ್ಲ ಕಾನೂನು ಬದ್ಧತೆ (Legitimacy) ಯನ್ನು ಪಡೆಯುತ್ತಿದೆ. ಶಿಕ್ಷಾರ್ಹ ಗಂಭೀರ ಅಪರಾಧಗಳಾಗಿರುವ ಘೋರ ಕ್ರಿಮಿನಲ್ ಕೃತ್ಯಗಳೆಲ್ಲ ಈಗ 'ಕಮ್ಯುನಲ್' ಎಂಬ ಗೌರವಾಹಶ ಬ್ರಾಂಡಿನಡಿಯಲ್ಲಿ ಕಾನೂನಿನ ಚೌಕಟ್ಟಿನಿಂದ ಹೊರಗುಳಿಯುವಂತಹ ವಿಲಕ್ಷಣ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಈಗ 'ಕಮ್ಯೂನಲಿಸಂ' ಪ್ರಧಾನ-ವಾಹಿನಿಯಾಗಿ ಎಲ್ಲಾ ಸ್ತರಗಳಲ್ಲೂ ಅಂಗೀಕಾರಕೊಳಗಾಗಿದೆ. ಈ ಶಕ್ತಿಗಳು ದೇಶದ ಸ್ವಾತಂತ್ರ್ಯದ ರಕ್ಷಣೆ ಮತ್ತು ಭಯೋತ್ಪಾದನೆ ವಿರುದ್ಧ ಹೋರಾಡುತ್ತಿರುವ ವೀರಸಿಪಾಯಿಗಳು. ಇವರನ್ನು ಹದ್ದುಬಸ್ತಿನಲ್ಲಿಡುವುದು ದೇಶದ್ರೋಹದ ಕೆಲಸವೇನೋ ಎಂಬ ಮನೋಭೂಮಿಕೆಯನ್ನು ವ್ಯವಸ್ಥಿತವಾಗಿ ಪಡಿ ಮೂಡಿಸಲಾಗುತ್ತದೆ.

ನಮ್ಮ ಜನ ಪ್ರತಿನಿಧಿಗಳು ತಮ್ಮ ಪ್ರಜಾತಾಂತ್ರಿಕ ಹೊಣೆಗಾರಿಕೆ ಮತ್ತು ಕರ್ತವ್ಯಗಳನ್ನು 'ನಿರ್ಲಕ್ಷಿಸಿ, ಜನರನ್ನು ರೋಚ್ಚಿಗೆಬ್ಬಿಸಿ, ಹಿಂಸೆಯಲ್ಲಿ ನಿರತರಾಗುವಂತೆ ಪ್ರಚೋದಿಸಲು ಕ್ಷೇತ್ರ ಪ್ರವಾಸಗಳನ್ನು ಕೈಗೊಳ್ಳುತ್ತಿದ್ದಾರೆ. ಜನರ ಮೂಲಭೂತ ಸಮಸ್ಯೆಗಳಾಗಿರುವ ಅನ್ನ, ನೀರು, ವಸತಿ, ಶಿಕ್ಷಣ ಉದ್ಯೋಗ, ಆರೋಗ್ಯ ಮುಂತಾದ ನ್ಯಾಯಯುತ ಬೇಡಿಕೆಗಳಿಗೆ ಸ್ಪಂದಿಸಲು ಇಚ್ಛಾಶಕ್ತಿ ತೋರದೆ, ನಮ್ಮ ಜೀವ ಮಾನವಿಡೀ ಸಂಘರ್ಷದಲ್ಲೇ ಕೊಳೆಯುವಂತಾಗಲು ಜನ ಪ್ರತಿನಿಧಿಗಳು ಮತ್ತು ರಾಜಕಾರಣಿಗಳು ವ್ಯವಸ್ಥಿ ಪಿತೂರಿಯನ್ನು ಮಾಡುತ್ತಿದ್ದಾರೆ. ಮುಗ್ಧ ಜನರು ಇದರ ಬಲಿಪಶುಗಳಾಗುತ್ತಿದ್ದಾರೆ. ನಮ್ಮ ರಾಜ

ಕಾರಣಿಗಳಿಗೆ ಬೇಕಾಗಿರುವುದು ಅಧಿಕಾರ ಅದಕ್ಕಾಗಿ ನಾವು ಕೇವಲ 'ಓಟು' ಮಾತ್ರ ಕೊಡುತ್ತಿಲ್ಲ. ನಮ್ಮ ಮನೆ-ಮಾರು, ಜೀವ-ಸೊತ್ತು, ಉತ್ಪನ್ನಗಳನ್ನೆಲ್ಲಾ ನಾಶ ಮಾಡುತ್ತಿದ್ದೇವೆ. ಜೀವನಪರ್ಯಂತ ಅಧಿಕಾರದ ಗದ್ದುಗೆಯನ್ನು ಉಳಿಸಿಕೊಳ್ಳಲು ರಾಜಕಾರಣಿಗಳು ಬಡಜನರನ್ನು ಈ ರೀತಿ ವಂಚಿಸುತ್ತಾ, ಅವರ ಪ್ರಾಣ-ಮಾನಗಳೊಂದಿಗೆ ಚೆಲ್ಲಾಟವಾಡುತ್ತಾರೆ. ದುರದೃಷ್ಟವಶಾತ್ ಇಂತಹ ಲಜ್ಜೆಗೆಟ್ಟ ರಾಜಕಾರಣಿಗಳನ್ನೇ! ನಾವು ತಲೆಯಲ್ಲಿ ಹೊತ್ತು ತಿರುಗಾಡುತ್ತಿದ್ದೇವೆ. ಜನರ ಜೀವಕ್ಕೆ ಬೆಲೆಕಲ್ಪಿಸದ, ಮಾನವ ಜೀವಗಳಿಗೆ ಜಾತಿ-ಮತ-ಧರ್ಮದ ಲೇಬಲ್‌ಹಚ್ಚಿ ಸೇಡು+ಪ್ರತೀಕಾರಕ್ಕಾಗಿ ಹಾತೊರೆಯುವಂತೆ ಪ್ರೇರೇಪಿಸುವ ರಾಜಕಾರಣಿಗಳು ನಮ್ಮ ನೆಮ್ಮದಿಯ ನಾಳೆಗಳನ್ನು ಅಧಿಕಾರಕ್ಕಾಗಿ ಕಬಳಿಸುತ್ತಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರು ಪ್ರಭುಗಳು, ಆಡಳಿತಗಾರರು ಜನ ಸೇವಕರೆಂಬ ನೀತಿ ಈಗ ಸವಕಲಾಗುತ್ತಿದೆ. ವಿವಿಧ ಸರಕಾರಗಳ ಮುಂದೆ ಹಲವು ಬೇಡಿಕೆಗಳನ್ನು ಮುಂದಿಡುತ್ತಾ. ಆ ಬೇಡಿಕೆಗಳನ್ನು ಸರಕಾರ ಈಡೇರಿಸಲು ವಿಫಲವಾದಾಗ ಆ ಸರಕಾರಗಳನ್ನೇ ಜನರು ಕಿತ್ತೆಸೆಯುತ್ತಿದ್ದರು. ಆದರೆ ಈಗ ಯಾವ ಸರಕಾರ ತಮ್ಮನ್ನು ತಮ್ಮ ಪಾಡಿಗೆ ಬದುಕಲು ಬಿಡುತ್ತದೋ, ಆ ಸರಕಾರಕ್ಕೆ ಮತ ನೀಡಿ ಚುನಾಯಿಸುವ ಪರಿಸ್ಥಿತಿ ಬರಬಹುದು. ಸರಕಾರದಿಂದ ನಾವೇನನ್ನೂ ನಿರೀಕ್ಷಿಸುವುದಿಲ್ಲ. ಆದರೆ ನಮ್ಮ ಮೇಲೆ ದೌರ್ಜನ್ಯವೆಸಗದಂತೆ, ಅದರ ಸೊತ್ತು-ಸಂಪತ್ತನ್ನು ಲೂಟಿ ಮಾಡದಂತೆ, ಸುರಕ್ಷಿತವಾಗಿ ಬದುಕುವ ಸ್ವಾತಂತ್ರ್ಯಕ್ಕಾಗಿ ಸರಕಾರಗಳ ಮುಂದೆ ದುಂಬಾಲು ಬಿದ್ದು ಪ್ರಾಣಭಿಕ್ಷೆ ಬೇಡುವ ದಯನೀಯ ಸ್ಥಿತಿ ಈ ಪ್ರಜಾಪ್ರಭುತ್ವಕ್ಕೆ ಬರುವ ದಿನಗಳು ದೂರವಿಲ್ಲ ಎಂದೆನಿಸುತ್ತದೆ.

ಯಾವುದೇ ಬಿಂದು ಸಮಾಜ, ಸಂಸ್ಕೃತಿ, ಧರ್ಮದ ಉತ್ಥಾನಕ್ಕಾಗಿ ನಡೆಸುವ ಕಾರ್ಯಕ್ರಮಗಳು ಇನ್ನೊಂದು ಜನ ವಿಭಾಗದ ವಿರುದ್ಧ ದ್ವೇಷ-ಸಂಘರ್ಷಕ್ಕೆ ಯಾಕೆ ಕಾರಣವಾಗಬೇಕು. ತಮ್ಮ ಜಾತಿ-ಸಮಾಜದ ಕಲ್ಯಾಣಕ್ಕಾಗಿ ರಚನಾತ್ಮಕ, ಪ್ರಗತಿಪರ ಕಾರ್ಯಯೋಜನೆಗಳನ್ನು ಹಮ್ಮಿಕೊಂಡು ಅವರ ಬದುಕನ್ನು ಹಸನುಗೊಳಿಸಲು ಹೊರಟರೆ ಅದು ಸರ್ವತ್ರ-ಸ್ವಾಗತಾರ್ಹ. ಆದರೆ ಸಮಷ್ಟಿಯ ಹಿತವನ್ನು ನಿರಾಕರಿಸುವ, ಸ್ವಸ್ಥಮಾನವೀಯ ಸಮಾಜವನ್ನು ದುಸ್ತರಗೊಳಿಸುವ, ಪ್ರೀತಿಗೆ ವಿರುದ್ಧವಾದ, ನ್ಯಾಯಕ್ಕೆ ಹೊರತಾದಮಾನವೀಯತೆಗೆ ಮಾರಕವಾದ ಸಿದ್ಧಾಂತ ಮತ್ತು ಆಶಯಗಳನ್ನು ಹೊಂದಿರುವ ಕಾರ್ಯಕ್ರಮಗಳು ಯಾವ ಸಮಾಜದ ಒಳಿತನ್ನು ಸಾಧಿಸುತ್ತದೆ ಎಂಬುದು ಮುಗ್ಧ ಜನತೆಗೆ ಚೆನ್ನಾಗಿ ಅರ್ಥವಾಗಬೇಕಿದೆ. ಬೆಂಕಿ ಮತ್ತು ಬೆಳಕಿನ 'ನಡುವಿನ ವ್ಯತ್ಯಾಸ' ಚೆನ್ನಾಗಿ ಗೋಚರಿಸಬೇಕಿದೆ.

ನಮ್ಮ ಸ್ವಾತಂತ್ರ್ಯದ ವೀರಕೇಸರಿಗಳು, ಹತಾತ್ಮರು, ರಾಷ್ಟ್ರೀಯತೆ ಮತ್ತು ದೇಶಭಕ್ತಿಯ ಸ್ಫೂರ್ತಿ ಚೇತನಗಳಾದ ರಾಷ್ಟ್ರಪಿತ ಮಹಾತ್ಮಗಾಂಧಿ, ಸಂವಿಧಾನ ಶಿಲ್ಪಿ ಡಾ॥ ಅಂಬೇಡ್ಕರ್ ಮುಂತಾದ ಶ್ರೇಷ್ಠ ರಾಷ್ಟ್ರ ನಾಯಕರ ಜಯಂತಿ-ಶತಾಬ್ದಿಗಳಿಗೆ ಶಾಲಾ-ಕಾಲೇಜು ಮಟ್ಟದಿಂದಲೇ ಬಹಳ ನೀರಸ ಪ್ರತಿಕ್ರಿಯೆ ಅಥವಾ ಕೇವಲ ಕಾಟಾಚಾರಕ್ಕಾಗಿಯಷ್ಟೇ ಒಂದಷ್ಟು ಪ್ರೋತ್ಸಾಹ ದೊರೆಯುತ್ತಿದೆ. ಆ ಮಹಾನ್ ಪುರುಷರ ನೆನಪು ಮತ್ತು ವ್ಯಕ್ತಿತ್ವಗಳು ಅಳಿವಿನಂಚಿನಲ್ಲಿದೆ.

ನಮ್ಮ ಬಹುರೂಪಿ ಸಮಾಜ, ಸ್ವಾತಂತ್ರ್ಯದ ಶ್ರೇಷ್ಠ ಪರಂಪರೆ ನ್ಯಾಯ, ಸಮಾನತೆ ಮತ್ತು ಬ್ರಾತೃತ್ವ ವಿರೋಧಿ ಸಿದ್ಧಾಂತಗಳ ಜನಕರನ್ನು ರಾಷ್ಟ್ರದ ಮಾದರಿ ಸತ್ಪುರುಷರೆಂದೂ, ಅವರ ಆದರ್ಶಗಳಿಂದಲೇ ದೇಶಕ್ಕೆ ಮುಕ್ತಿ ದೊರೆಯಲಿದೆಯೆಂದು ಬಿಂಬಿಸುವ ಸಂಘಟಿತ ಸಂಚುಗಳನ್ನು ಸೂಕ್ಷ್ಮವಾಗಿ ಗಮನಿಸಬೇಕಿದೆ.

ಗಾಂಧಿ, ಅಂಬೇಡ್ಕರ್, ನೆಹರೂರವರನ್ನು ಚುನಾವಣಾ ಸಮಯದಲ್ಲಿ ಜಪಿಸುವ, ಅಧಿಕಾರಕ್ಕಾಗಿ ಈ ಮಹಾಪುರುಷರ ನೆರಳನ್ನು ಆಶ್ರಯಿಸುವ ಜಾತ್ಯತೀತ ಪಕ್ಷಗಳು, ಸೆಕ್ಯುಲರ್ ರಣಧೀರರೂ ಕೋಮು ರಾಜಕಾರಣದ ತಂತ್ರಗಳಿಂದ ತತ್ತರಿಸಿ ಹೋಗಿದ್ದಾರೆ. ಸೈದ್ಧಾಂತಿಕ ನೆಲೆಯಲ್ಲಿ ಇವುಗಳಿಗೆ ಪ್ರಖರ ಪ್ರತಿರೋಧವನ್ನೊಡ್ಡುವ ನೈತಿಕ ಸ್ಥೈರ್ಯವನ್ನೆ ಕಳೆದುಕೊಂಡಿದ್ದಾರೆ. 'ಕಮ್ಯೂನಲ್ ರಾಜಕಾರಣ' ಮತ್ತು ಕಮ್ಯೂನಲ್ ಹಿಂಸೆಗೆ ಮೂಕ ಸಾಕ್ಷಿಗಳಾಗಿರುವ ಈ ಸೆಕ್ಯುಲರ್ ವಾದಿಗಳು ಮತ್ತು ಸೆಕ್ಯುಲರ್ ಸಿದ್ಧಾಂತ ವಿರಾಟ್ ಕಮ್ಯೂನಲ್ ಅಜೆಂಡಾದ ಮುಂದೆ ಮಂಡಿಯೂರಿ ಶರಣಾಗತರಾಗಿದ್ದಾರೆ. ಅವಕಾಶ ಬಂದರೆ ಕೋಮುವಾದಿಗಳೊಂದಿಗೆ ಶಾಮೀಲಾಗಿ ತಾವೇನು ಕಡಿಮೆಯಲ್ಲವೆಂದು ತಮ್ಮ ಎಡೆಬಿಡಂಗಿತನವನ್ನು ಪ್ರದರ್ಶಿಸಲು ಹೇಸುವುದಿಲ್ಲ.

ಜಗತ್ತೇ ಮೆಚ್ಚಿ ತಲೆದೂಗಿದ ಅದ್ವಿತೀಯ ತತ್ವಜ್ಞಾನಿ ವಿಶ್ವದರ್ಶನ ಹೊಂದಿದ್ದ ಆಧ್ಯಾತ್ಮಿಕ ಮೇರು ಪುರುಷ, ಸನಾತನ ಹಿಂದೂ ಧರ್ಮದ ಪ್ರೇಮದ ಸಂದೇಶವನ್ನು ಜಗದಗಲಕ್ಕೇ ಬಿತ್ತರಿಸಿದ ಮಾನವತೆಯ ಹರಿಕಾರ ಸ್ವಾಮಿ ವಿವೇಕಾನಂದರಿಗೆ ದೊರೆಯದ ಗೌರವ-ಜನಮನ್ನಣೆ, ಹಿಂಸೆ, ಆಕ್ರಮಣ ಮತ್ತು ಪರಮತ ದ್ವೇಷದ ಕಹಳೆಯೂದಿದ ಸಂಘಪರಿವಾರದ ಗುರೂಜಿಗೆ ಪಕ್ಷ ಸಿದ್ಧಾಂತಗಳ ಭೇದಗಳಿಲ್ಲದೆ ಸಾರ್ವತ್ರಿಕವಾಗಿ ದೊರೆಯುತ್ತಿದೆ ಇದರ ಹೆಸರಿನಲ್ಲಿ ನಡೆಯುತ್ತಿರುವ ವಿರಾಟ್ ಸಮಾವೇಶದ ಅಬ್ಬರದಲ್ಲಿ ಶಿಕ್ಷಾರ್ಹ ಕ್ರಿಮಿನಲ್ ಕೃತ್ಯಗಳೆಲ್ಲಾ ದೇಶಭಕ್ತಿಯ ವೀರ ಸಾಂಸ್ಕೃತಿಕ ಗಾಥೆಯ ಅಪ್ಪಟ ಚಿನ್ನಗಳಾಗಿ ನಮ್ಮ ನಡುವೆ ವಿಜ್ರಂಭಿಸುತ್ತಿದೆ. ಆಧುನಿಕ ಪೋಷಕನ್ನು ತೊಟ್ಟಿರುವ ಆದಿಮಾನವ ಚಿಂತನೆಗಳಿಗೆ ಎಲ್ಲೆಲ್ಲೂ ಅಬ್ಬರದ ಸ್ವಾಗತ-ಸಂಭ್ರಮಗಳ ಮಹಾಪೂರ. ಇದು ನಮ್ಮ ರಾಷ್ಟ್ರದ ಶ್ರೇಷ್ಠ ದಾರ್ಶನಿಕರ, ಸಂತರ, ತತ್ವಜ್ಞಾನಿಗಳ ಉದಾತ್ತ ತತ್ವಗಳನ್ನೇ ಅಣಕಿಸುತ್ತಿದೆ.

ಗೋಖಲೆ, ರಾನಡೆ, ಗಾಂಧಿ, ಡಾ॥ ಅಂಬೇಡ್ಕರ್, ರವೀಂದ್ರನಾಥ್ ಟಾಗೋರ್‌ರವರು ಭಾರತೀಯ ನಾಗರಿಕತೆಯನ್ನು ಸಂಕುಚಿತ ಧಾರ್ಮಿಕ ಸ್ವರೂಪದಿಂದ ಪ್ರತ್ಯೇಕಿಸಿ ಅದನ್ನು ಆಧ್ಯಾತ್ಮದ ಮಟ್ಟಕ್ಕೆ ಏರಿಸಿದರು. ಸಹಿಷ್ಣುತೆಯ ಮೌಲ್ಯಕ್ಕೆ ಬದ್ಧತೆಯನ್ನು ಹೊಂದಿರುವ ವಿಕೇಂದ್ರೀಕೃತ, ತಳಸ್ಪರ್ಶಿ, ಸಮ್ಮಿಶ್ರ ಅಂಶಗಳನ್ನು ತನ್ನ ಜೀವಾಳವನ್ನಾಗಿಸಿಕೊಂಡು ಜನ್ಮ ತಾಳಿದ ಈ ಬೃಹತ್ ನಾಗರಿಕತೆ ಮತ್ತು ಸಂಸ್ಕೃತಿ ಭಾರತಕ್ಕೆ ಸಂಪೂರ್ಣ ನವೀನ ಮತ್ತು ಆಧುನಿಕ ಮುಂಗಾಣ್ಕೆಯನ್ನು ನೀಡಿದೆ.

ಈ ಆಧುನಿಕ ಭಾರತದ ಕಲ್ಪನೆ ಪೌರ ರಾಷ್ಟ್ರಿಯತೆ ಅಥವಾ ರಾಜಕೀಯ ಚಿಂತಕ ಹೆಟರ್‌ಮಾಸ್‌ರವರು ಗುರುತಿಸುವ ಸಂವಿಧಾನಾತ್ಮಕ ನೆಲೆಗೊಳಿಸುವ ರಾಜಕೀಯ ವ್ಯವಸ್ಥೆಯ ಚೌಕಟ್ಟನ್ನು ಅನುಸರಿಸುಬೇಕಾಗುತ್ತದೆ.

ಧರ್ಮ, ಭಾಷೆ, ಪ್ರದೇಶ ಹಾಗೂ ಇನ್ನಿತರ ಎಲ್ಲಾ ರೀತಿಯ ಭಿನ್ನತೆಗಳನ್ನು ಗೌಣವಾಗಿಸಿ ಭಾರತೀಯರೆಂಬ ಅರ್ಹತೆಯಿಂದಲೇ ನಮ್ಮನ್ನು ವ್ಯಾಖ್ಯಾನಿಸಿಕೊಳ್ಳಬೇಕು. ರವೀಂದ್ರನಾಥ್ ಟಾಗೋರರ ರಾಷ್ಟ್ರೀಯತೆಯಲ್ಲಿ ಭಾರತ ಚಿನ್ಮಯಿ (Conciousnees) ಅದು ಅವರಿಗೆ ಮೃನ್ಮಯಿ (Geographical) ಅಲ್ಲ. ಟಾಗೋರರ ಭಾರತದ ಕಲ್ಪನೆಯಲ್ಲಿ, ಭಾರತ ವಿವಿಧ ಸಮುದಾಯಗಳ ಮತ್ತು ಸಮಾಜಗಳನ್ನೊಳಗೊಂಡ ತಾಣವಾಗಿತ್ತು.

ಗಾಂಧೀಜಿಯವರ ಸತ್ಯಾಗ್ರಹದ ಕಲ್ಪನೆ ವೈರಿಯ ದೇಹವನ್ನಲ್ಲ, ಮನಸ್ಸನ್ನು ಗುರಿಯಾಗಿಸಿತ್ತು. ಹಿಂಸೆಯಲ್ಲಿ ನೀವು ವೈರಿಗಳನ್ನು ಆಕ್ರಮಿಸುತ್ತೀರಿ, ಆದರೆ ಆ ಹಿಂಸೆ ವೈರಿಯ ಆತ್ಮ ಸಾಕ್ಷಿಯನ್ನು ಬಡಿದೆಚ್ಚರಿಸುತ್ತದೆ. ಸತ್ಯ, ಅಹಿಂಸೆ ಮತ್ತು ತಪಸ್ಯದ ಮೂಲಕ ಗಾಂಧಿ ಎಲ್ಲರ ಹೀರೋ ಅನಿಸಿಕೊಳ್ಳುತ್ತಾರೆ. ಆದರೆ ನರೇಂದ್ರ ಮೋದಿಯ ಪಾಳೆಗಾರಿಕೆಯ ಗುಜರಾತ್‌ನ ಶಾಲೆಗಳ ಪಠ್ಯ ಪುಸ್ತಕಗಳಲ್ಲಿ ಗಾಂಧಿಯನ್ನು ಹೊಡೆದೋಡಿಸಿ ಈ ಶತಮಾನದ ಕ್ರೂರ ನರಪಾತಕಿ ಹಿಟ್ಲರನ್ನು ಹೀರೋ ಆಗಿ ಚಿತ್ರಿಸುತ್ತಿದ್ದಾರೆ. ಇದು ನಮ್ಮ ವಿರಾಟ್ ಪ್ರಜಾಪ್ರಭುತ್ವದ ದುರಂತವೇ ಸರಿ.

ಈ ಎಲ್ಲಾ ಆಘಾತಕಾರಿ ವಿದ್ಯಮಾನಗಳನ್ನು ಗಮನಿಸಿದಾಗ ಭಾರತ ಯಾವ ದಿಕ್ಕಿನತ್ತ ಚಲಿಸುತ್ತಿದೆ, ನಮ್ಮ ಪ್ರಜಾಪ್ರಭುತ್ವದ ಸತ್ವಸಾರಗಳು ಅವನತಿಯತ್ತ ಸಾಗುತ್ತಿದೆಯೇ ಎಂಬ ಬಗ್ಗೆ ಸಂಶಯಗಳು ಬಲಗೊಳ್ಳುತ್ತಿದೆ. ಕಮ್ಯೂನಲ್ ಬ್ರಾಂಡಿನಲ್ಲಿ ಕ್ರಿಮಿನಲ್ ಕೃತ್ಯಗಳೆಲ್ಲಾ ಬಹಳ ಜನಪ್ರಿಯವಾಗತೊಡಗಿದೆ! □

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರು ಪ್ರಭುಗಳು, ಆಡಳಿತಗಾರರು ಜನ ಸೇವಕರೆಂಬ ನೀತಿ ಈಗ ಸವಕಲಾಗುತ್ತಿದೆ. ವಿವಿಧ ಸರಕಾರಗಳ ಮುಂದೆ ಹಲವು ಬೇಡಿಕೆಗಳನ್ನು ಮುಂದಿಡುತ್ತಾ. ಆ ಬೇಡಿಕೆಗಳನ್ನು ಸರಕಾರ ಈಡೇರಿಸಲು ವಿಫಲವಾದಾಗ ಆ ಸರಕಾರಗಳನ್ನೇ ಜನರು ಕಿತ್ತೆಸೆಯುತ್ತಿದ್ದರು. ಆದರೆ ಈಗ ಯಾವ ಸರಕಾರ ತಮ್ಮನ್ನು ತಮ್ಮ ಪಾಡಿಗೆ ಬದುಕಲು ಬಿಡುತ್ತದೋ, ಆ ಸರಕಾರಕ್ಕೆ ಮತ ನೀಡಿ ಚುನಾಯಿಸುವ ಪರಿಸ್ಥಿತಿ ಬರಬಹುದು. ಸರಕಾರದಿಂದ ನಾವೇನನ್ನೂ ನಿರೀಕ್ಷಿಸುವುದಿಲ್ಲ. ಆದರೆ ಸುರಕ್ಷಿತವಾಗಿ ಬದುಕುವ ಸ್ವಾತಂತ್ರ್ಯಕ್ಕಾಗಿ ಸರಕಾರಗಳ ಮುಂದೆ ದುಂಬಾಲು ಬಿದ್ದು ಪ್ರಾಣಭಿಕ್ಷೆ ಬೇಡುವ ದಯನೀಯ ಸ್ಥಿತಿ ಈ ಪ್ರಜಾಪ್ರಭುತ್ವಕ್ಕೆ ಬರುವ ದಿನಗಳು ದೂರವಿಲ್ಲ ಎಂದೆನಿಸುತ್ತದೆ.

ಕಳೆದು ಹೋಗಲಿದೆ ಕಾವೇರಿ!

ವಿವಾದ ಪ್ರಾರಂಭವಾಗಿ ೨೦೦ ವರ್ಷಗಳಾದರೂ ಅಂದಿನ ಮೈಸೂರು ಭಾಗದ ಜನರಿಗೆ ಇಂದಿಗೂ ನ್ಯಾಯ ದೊರಕಿಲ್ಲ. ಈ ಕುರಿತು ಇಲ್ಲಿವರೆಗೆ ನಡೆದ ಘಟನೆಗಳನ್ನು ಸ್ಥೂಲವಾಗಿ ಮೆಲಕು ಹಾಕಿದರೆ ಇದು ಸಾಬೀತಾಗುತ್ತದೆ. ಅಂದಿನ ಮೈಸೂರು ರಾಜ್ಯ ಕೆರೆ, ಕಟ್ಟೆಗಳನ್ನು ನಿರ್ಮಿಸಲು ಮಾಡಿದ ಪ್ರಯತ್ನ, ಅದಕ್ಕಾಗಿ ಕ್ರಿ.ಶ. ೧೮೦೭ ನೇ ಇಸವಿಯಲ್ಲೇ ಮದ್ರಾಸ್ ರಾಜ್ಯದ ಜೊತೆ ಪತ್ರ ವ್ಯವಹಾರ, ಜೊತೆ ಜೊತೆಯಲ್ಲೇ ಕೆರೆಗಳ ದುರಸ್ತಿ ಮತ್ತು ಸಣ್ಣನೀರಾವರಿ ಯೋಜನೆಗಳ ಕೆಲಸ ಪ್ರಾರಂಭ. ಅಲ್ಲದೆ ಬಹು ಮುಖ್ಯವಾಗಿ ನೀರು ಪೋಲಾಗದಂತೆ ಬಳಕೆ ಮಾಡಿಕೊಳ್ಳುವ ಯೋಜನೆ ಕುರಿತು 1866 ರಲ್ಲಿ 'Master Plan' ಒಂದನ್ನು ತಯಾರು ಮಾಡಿಸಿ ಅದರ ಅನುಷ್ಠಾನಕ್ಕೆ ಪ್ರಾರಂಭಿಸಿತು.

ಹೆಚ್.ಎನ್. ನಂಜೇಗೌಡ
ನೀರಾವರಿ ತಜ್ಞರು

ಸುಮಾರು 800 ಕಿಲೋಮೀಟರ್ ಉದ್ದವಿರುವ ಮತ್ತು ಸುಮಾರು 87,900 ಚದುರ ಕಿಲೋಮೀಟರ್ ವಿಸ್ತೀರ್ಣದ ಜಲಾಯನ ಪ್ರದೇಶ (Basin Area) ವುಳ್ಳ ಹಾಗೂ ಸುಮಾರು 25 ಉಪನದಿಗಳು ಮತ್ತು ಅವುಗಳ ಉಪನದಿಗಳುಳ್ಳ ಕಾವೇರಿ ನದಿ ನೀರಿನ ವಿವಾದ ಪ್ರಾರಂಭವಾದದ್ದು ಕಿ.ಶ. 1807ನೇ ಇಸವಿ. ಟಿಪ್ಪು ಸುಲ್ತಾನನ ಮೇಲೆ ಬ್ರಿಟಿಷರಿಗಿದ್ದ ಮಾಗದ ದ್ವೇಷ ಕಾವೇರಿ ನದಿ ನೀರಿನ ಹಂಚಿಕೆಯಲ್ಲಿ ಉದ್ದಕ್ಕೂ ಮೈಸೂರನ್ನು ಶಿಕ್ಷಿಸಲು ಬುನಾದಿಯಾಯಿತು.

ವಿವಾದ ಪ್ರಾರಂಭವಾಗಿ 200 ವರ್ಷಗಳಾದರೂ ಅಂದಿನ ಮೈಸೂರು ಭಾಗದ ಜನರಿಗೆ ಇಂದಿಗೂ ನ್ಯಾಯ ದೊರಕಿಲ್ಲ. ಈ ಕುರಿತು ಇಲ್ಲಿವರೆಗೆ ನಡೆದ ಘಟನೆಗಳನ್ನು ಸ್ಥೂಲವಾಗಿ ಮೆಲಕು ಹಾಕಿದರೆ ಇದು ಸಾಬೀತಾಗುತ್ತದೆ.

ಅಂದಿನ ಮೈಸೂರು ರಾಜ್ಯ ಕೆರೆ, ಕಟ್ಟೆಗಳನ್ನು ನಿರ್ಮಿಸಲು ಮಾಡಿದ ಪ್ರಯತ್ನ, ಅದಕ್ಕಾಗಿ ಕ್ರಿ.ಶ. 1807 ನೇ ಇಸವಿಯಲ್ಲೇ ಮದ್ರಾಸ್ ರಾಜ್ಯದ ಜೊತೆ ಪತ್ರ ವ್ಯವಹಾರ, ಜೊತೆ ಜೊತೆಯಲ್ಲೇ ಕೆರೆಗಳ ದುರಸ್ತಿ ಮತ್ತು ಸಣ್ಣನೀರಾವರಿ ಯೋಜನೆಗಳ ಕೆಲಸ ಪ್ರಾರಂಭ. ಅಲ್ಲದೆ ಬಹು ಮುಖ್ಯವಾಗಿ ನೀರು ಪೋಲಾಗದಂತೆ ಬಳಕೆ ಮಾಡಿಕೊಳ್ಳುವ ಯೋಜನೆ ಕುರಿತು col.R.J. Sankey ಎಂಬ ನೀರಾವರಿ ಪರಿಣತನಿಂದ 1866 ರಲ್ಲಿ 'Master Plan' ಒಂದನ್ನು ತಯಾರು ಮಾಡಿಸಿ ಅದರ ಅನುಷ್ಠಾನಕ್ಕೆ ಪ್ರಾರಂಭಿಸಿತು. ಇದರಿಂದ ತೀವ್ರಗೊಂಡ ಮದ್ರಾಸ್ ರಾಜ್ಯದ ಕಿರುಕುಳ ನಮಗೆ ಮುಳುವಾದ 1892ರ ಒಪ್ಪಂದಕ್ಕೆ ಕಾರಣವಾಯಿತು.

ತದನಂತರ ಕನ್ನಂಬಾಡಿ (ಈಗಿನ ಕೆ.ಆರ್.ಎಸ್) ಯೋಜನೆ ಕೈಗೊಳ್ಳಲು 1907ರಲ್ಲಿ ಮೈಸೂರು ರಾಜ್ಯ ಅಂದಿನ ಕೇಂದ್ರ ಸರ್ಕಾ ರದ ಮಂಜೂರಾತಿ ಕೇಳಿತು. ಅದೇ ಕಾಲಕ್ಕೆ ಮದ್ರಾಸ್ ಸರ್ಕಾರ "ಮದ್ರಾಸ್ ಕಾವೇರಿ ಯೋಜನೆ" (ಇಂದಿನ ಮೆಟ್ಟೂರು) ಎಂಬ ಅಂದಿನ ಕಾಲಕ್ಕೆ ಪ್ರಪಂಚದಲ್ಲೇ ಅತೀ ದೊಡ್ಡದಾದ (94Tmc) ಯೋಜನೆಯನ್ನು ತಯಾರು ಮಾಡಿ ಅದಕ್ಕೆ ಮಂಜೂರಾತಿ ಕೇಳಿ ಮೈಸೂರಿನ "ಕನ್ನಂಬಾಡಿ" (ಕೆ.ಆರ್.ಎಸ್) ಯೋಜನೆಗೆ ತೀವ್ರ ವಿರೋಧ ವ್ಯಕ್ತಪಡಿಸಿತು. "Power cum irrigation" ಯೋಜನೆ ಯಾದ ಕನ್ನಂಬಾಡಿ ಯೋಜನೆಯ ಜನಕ, Sir, ಎಂ ವಿಶ್ವೇಶ್ವರಯ್ಯ ನವರು. ಅವರನ್ನು ಮೈಸೂರು ರಾಜ್ಯ (ಕರ್ನಾಟಕ) ಸದಾ ಸ್ಮರಿಸಬೇಕು.



ಮದ್ರಾಸ್ ಸರ್ಕಾರದ ವಿರೋಧವನ್ನು ಮಾನ್ಯ ಮಾಡಿದ ಕೇಂದ್ರ ಸರ್ಕಾರ ಜೂನ್ 1913 ರಂದು Sir H.D Griffin ಎಂಬ ವವರನ್ನು ಈ ವಿವಾದ ಬಗೆ ಹರಿಸಲು Arbitrator ಆಗಿ ನೇಮಿಸಿತು. Griffin ರವರು 1914 ನೇ ಇಸವಿಯಲ್ಲಿ ಮೈಸೂರಿನ ನ್ಯಾಯವಾದ ಬೇಡಿಕೆಯನ್ನು ಪರಸ್ಕರಿಸಿ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿದರು. ಅಂದಿನ ಇಂಡಿಯಾ ಸರ್ಕಾರ ಈ ವರದಿಯನ್ನು ಪುರಸ್ಕರಿಸಿತು. ಆದರೆ ಇಂಡಿಯಾ ಸರ್ಕಾರದ ತೀರ್ಮಾನವನ್ನೂ ತಿರಸ್ಕರಿಸಿ ಅಂದಿನ ಮದ್ರಾಸ್ ರಾಜ್ಯ "British privy council" ಗೆ ವಿವಾದವನ್ನು ಕೊಂಡೊಯ್ಯಿತು. "privy council" ಮದ್ರಾಸ್ ಪರ ನಿರೀಕ್ಷೆಯಂತೆ ತೀರ್ಪಿತ್ತು, ಪುನಃ ಕುಳಿತು ಮಾತನ್ನಾಡಿ ಒಪ್ಪಂದಕ್ಕೆ ಬರು ವಂತೆ ಮೈಸೂರು ರಾಜ್ಯವನ್ನು ಆಗ್ರಹಪಡಿಸಿತು. ಇದರ ಪರಿಣಾಮವೇ ಮೈಸೂರಿಗೆ ತೀರಾ ವಿರುದ್ಧವಾದ, ಯಾವುದೇ ನ್ಯಾಯ ಸಮ್ಮತವಲ್ಲದ 1924 ರ ಒಪ್ಪಂದ. ಈ ಒಪ್ಪಂದದ ಅತ್ಯಂತ ಗಂಡಾಂತರಕಾರಿ ಅಂಶ ವೆಂದರೆ, ಮೈಸೂರು ರಾಜ್ಯ, ಮದ್ರಾಸ್ ರಾಜ್ಯದ 'upper anekat' ಮೇಲೆ ವರ್ಷದ ಪ್ರತಿದಿನ ಹರಿಯುವ ನೀರಿನ ಎತ್ತರಕ್ಕೆ ತಕ್ಕಂತೆ, ಆ ಎತ್ತರಕ್ಕೆ ತೊಂದರೆಯಾಗದಂತೆ ಕನ್ನಂಬಾಡಿಯಿಂದ ನೀರು ಬಿಡಬೇಕು.

(should Maintaim limit flow everyday) ಈ liheit flow ಹರಿವನ್ನು ಪ್ರತಿ ನಿತ್ಯಕಾಯಲು ಮದ್ರಾಸ್ ಅಧಿಕಾರಿಗಳ ತುಕಡಿ 1929ರಿಂದಲೇ KRS ನಲ್ಲಿ ಬೀಡು ಬಿಟ್ಟಿತ್ತು. ಶ್ರೀ. ಡಿ ದೇವರಾಜ ಅರ್ಸ್‌ರವರು 1972 ರಲ್ಲಿ ಮುಖ್ಯಮಂತ್ರಿಗಳಾದ ತಿಂಗಳೊಳಗೆ ಈ ಮದ್ರಾಸ್ ಅಧಿಕಾರಿಗಳ ತುಕಡಿಯನ್ನು KRS ಪ್ರದೇಶದೊಳಕ್ಕೆ ಬಿಡಲಿಲ್ಲ ವಷ್ಟೇ ಅಲ್ಲ ಅವರನ್ನು ಆ ಪ್ರದೇಶದಿಂದ Evict ಮಾಡಿ ಹೊರಕ್ಕೆ ಕಳುಹಿಸಲಾಯಿತು. ಆಗ ಮದ್ರಾಸ್ ರಾಜ್ಯ ಕೇಂದ್ರಕ್ಕೆ ಮೈಸೂರಿನ ಕ್ರಮವನ್ನು ಪ್ರತಿಭಟಿಸಿ ದೂರು ಸಲ್ಲಿಸಿತು. ಇದರ ಪರಿಣಾಮ ಕೇಂದ್ರದ grrigation and power Minister K.L. Rao ಅಧ್ಯಕ್ಷತೆಯಲ್ಲಿ 1972ರ ಮೇ ತಿಂಗಳು 29,30 ಮತ್ತು 31ರಂದು ಮೂರು ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ನಡೆಯಿತು.

ಪ್ರಮುಖವಾದ ಅಂಶವೆಂದರೆ, 1924ರ ಒಪ್ಪಂದ ಮುಗಿಯಲು ಕೇವಲ ಎರಡು ವರ್ಷಗಳು ಮಾತ್ರ ಉಳಿದಿದ್ದು ಈ ಒಪ್ಪಂದವನ್ನು ಬದಿಗೊತ್ತಿ, ಹೊಸದಾಗಿ ಒಂದು ಸಮಗ್ರ ತೀರ್ಮಾನಕ್ಕೆ ಬರಲು ಒಪ್ಪಿಗೆಯಾಯಿತು. ಮತ್ತು ಹೊಸ ತೀರ್ಮಾನಕ್ಕೆ ಬರಲು ಅನುಕೂಲವಾಗುವಂತೆ ಅವಶ್ಯಕವಾದ ಅಂಕಿ ಅಂಶಗಳು ಬೇಕೆಂತಲೂ ಇದಕ್ಕಾಗಿ ಕೇಂದ್ರ ಸರ್ಕಾರದ ಅಧಿಕಾರಿಯೊಬ್ಬರ ನೇತೃತ್ವದಲ್ಲಿ ಒಂದು "Fact finding committtee" ನೇಮಿಸಬೇಕೆಂತಲೂ ಮತ್ತು ಈ ಸಮಿತಿಯ ವರದಿಯ ಆಧಾರದ ಮೇಲೆ ಪುನಃ ಸಭೆ ಸೇರಿ ಹೊಸ ಒಪ್ಪಂದಕ್ಕೆ ಬರಬೇಕೆಂತಲೂ ತೀರ್ಮಾನವಾಯಿತು. ಈ ಸಮಿತಿ 6 ತಿಂಗಳೊಳಗೆ ತನ್ನ ವರದಿ ಸಲ್ಲಿಸಬೇಕೆಂತಲೂ ತೀರ್ಮಾನಿಸಲಾಯಿತು. ಈ ತಾತ್ಕಾಲಿಕ ಒಪ್ಪಂದಕ್ಕೆ ಮುಖ್ಯಮಂತ್ರಿಗಳಾಗಿದ್ದ, ಕರುಣಾನಿಧಿ, ದೇವರಾಜ ಅರಸ್ ಮತ್ತು ಅಚ್ಯುತ್ ಮೆನನ್ ಸಹಿಹಾಕಿದ್ದಾರೆ.

ತಾತ್ಕಾಲಿಕ ಒಪ್ಪಂದದಂತೆ "Fact finding committee" ವರದಿಯೂ ಬಂತು. ಈ ವರದಿಯ ಅಂಕಿ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಚರ್ಚಿಸಿ 1976 ರಲ್ಲಿ ಹೊಸದೊಂದು ಒಪ್ಪಂದವನ್ನು ಮಾಡಿಕೊಂಡದ್ದೂ ಆಯಿತು. ಆದರೆ ಈ ಒಪ್ಪಂದವಾದಾಗ ತಮ್ಮ ರಾಜ್ಯದಲ್ಲಿ ಚುನಾಯಿತ ಸರ್ಕಾರವಿರಲಿಲ್ಲ. ರಾಜ್ಯಪಾಲರು ಸಹಿ ಹಾಕಿದ್ದಾರೆ. ಅವರಿಗೆ ಮದ್ರಾಸ್ ರಾಜ್ಯದ ಸಮಸ್ಯೆಯ ಅರಿವಿಲ್ಲ, ಆದ್ದರಿಂದ ಈ ಒಪ್ಪಂದ ಒಪ್ಪುವುದಿಲ್ಲ ಎಂದು 1977 ರಲ್ಲಿ ಮದ್ರಾಸ್ ರಾಜ್ಯ ನಿಲುವು ತೆಗೆದುಕೊಂಡಿತು.

ತದನಂತರ ಕೇಂದ್ರ ಸರ್ಕಾರದ ಅನಿಸಿಕೆಯಂತೆ 1990ರ ಮೇ 4 ರಂದು ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ತಿಂಗಳೊಳಗೆ "Cauvery Water Disputer Tribunal" ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚನೆ ಕೊಟ್ಟಿತು. ಆದರಂತೆ 1990ರ ಜೂನ್ 2ನೆ ತಾರೀಖು. ಕೇಂದ್ರ ಸರ್ಕಾರ Tribunal ನೇಮಿಸಿ ಆಜ್ಞೆ ಹೊರಡಿಸಿತು.

ಕೋರ್ಟಿನ ಮೆಟ್ಟಲು ಹತ್ತದೆ ರಾಜೀ ಸೂತ್ರದಿಂದಲೇ ಈ ವಿವಾದ ಬಗೆ ಹರಿಯುತ್ತಿತ್ತೋ ಏನೋ ದುರಂತವೆಂದರೆ, ರಾಜಕೀಯ ಒತ್ತಡಕ್ಕೆ ಶರಣಾಗಿ V.P. ಸಿಂಗ್ ಸರ್ಕಾರ ಈ ಸಮಸ್ಯೆಯನ್ನು ನ್ಯಾಯಾಂಗದ

ಲಭ್ಯವಿರುವ ನೀರಿನ ಪ್ರಮಾಣ ಕುರಿತು Assessors ತಮ್ಮದೇ ಅಭಿಪ್ರಾಯ ವ್ಯಕ್ತಪಡಿಸಿಲ್ಲ. ಅಲ್ಲದೆ ನೀರಿನ ಅವಶ್ಯಕತೆಯನ್ನು ಲೆಕ್ಕ ಹಾಕುವಾಗ ನೀರಾವರಿಗೆ ಒಳ ಪಡುವ ಪ್ರದೇಶಗಳನ್ನು ಮೂರು ಹಂತಗಳಾಗಿ ವಿಂಗಡಿಸಿದ್ದಾರೆ. ಅವುಗಳೆಂದರೆ 1. 1924 ರ ಒಪ್ಪಂದಕ್ಕೆ ಮುಂಚೆ ಇದ್ದದ್ದು 2. 1924ರ ಒಪ್ಪಂದಕ್ಕೆ ಅನುಗುಣವಾಗಿ ಲಭ್ಯವಾದದ್ದು 3. 1924 ನಂತರ ಅಭಿವೃದ್ಧಿ ಪಡಿಸಿದ್ದು, ಇದನ್ನು ಅವರು 'Merit and Equity catagoy' ಎಂದು ಕರೆದಿದ್ದಾರೆ.

ಮಡಿಲಿಗೆ ಹಾಕಿತು. ಸಮ್ಮಿಶ್ರ ಸರ್ಕಾರಗಳಿಂದಾಗುವ ದುರಂತಗಳಿಗೆ ಇದೊಂದು ಉದಾಹರಣೆ. ನ್ಯಾಯಾಧಿಕರಣದ ಕಲಾಪ ಪ್ರಾರಂಭ ಆದದ್ದು 1990 ರ ಜುಲೈ 28ರಂದು. 1972 ರಲ್ಲಿ ಮತ್ತು ಅದಕ್ಕೂ ಮುಂಚೆ ಕರ್ನಾಟಕ ತನ್ನ ಜಲಾಶಯಗಳಲ್ಲಿ ಎಷ್ಟು ನೀರು ಶೇಖರಣೆ ಮಾಡುತ್ತಿತ್ತೊ ಅದನ್ನು ಮೀರಿ ಶೇಖರಣೆ ಮಾಡದಂತೆ ಮಧ್ಯಂತರ ಆಜ್ಞೆ ಹೊರಡಿಸಬೇಕೆಂದು ಕಲಾಪ ಪ್ರಾರಂಭವಾದಮೊದಲ ದಿನವೇ ತಮಿಳುನಾಡು ಸರ್ಕಾರ ಅರ್ಜಿ ಸಲ್ಲಿಸಿ ನ್ಯಾಯಾಧಿಕರಣಕ್ಕೆ ಒತ್ತಾಯ ಮಾಡಿತು. ನ್ಯಾಯಾಧಿಕರಣ ಮಧ್ಯಂತರ ಆಜ್ಞೆ ಹೊರಡಿಸಲು ಕಾನೂನಿನಲ್ಲಿ ತನಗೆ ಅಧಿಕಾರವಿಲ್ಲ ಎಂಬ ನಿಲುವನ್ನು ತೆಗೆದುಕೊಂಡರೂ ಅಂತಿಮವಾಗಿ, ಸುಪ್ರೀಂ ಕೋರ್ಟಿನ 1910 ರ ಏಪ್ರಿಲ್ 26 ರ ತೀರ್ಪಿನಿಂದಾಗಿ, 1991 ರ ಜೂನ್ 25 ರಂದು ಮಧ್ಯಂತರ ಆಜ್ಞೆ ಹೊರಡಿಸಿ ಕರ್ನಾಟಕ ಮೆಟ್ಟೂರು ಜಲಾಶಯಕ್ಕೆ ಅಂತಿಮ ತೀರ್ಪು ಬರೋವರೆಗೆ, ವರ್ಷಂಪ್ರತಿ 205 Tmc ನೀರು ಬಿಡಬೇಕೆಂದೂ ಮತ್ತು ಈ ನೀರನ್ನು ಯಾವಾಗ ಎಷ್ಟೆಷ್ಟು ಬಿಡಬೇಕೆಂದು ಸೂಚಿಸಿತು.

ಈ ತೀರ್ಪು ಅನುಷ್ಠಾನ ಯೋಗ್ಯವಲ್ಲದ್ದು ಮತ್ತು "Self Contradictorm" ವಿಚಾರಗಳನ್ನೊಳಗೊಂಡು, ಸಾಕಷ್ಟು Arthmetic errors ಇರತಕ್ಕಂತ ತೀರ್ಪು. ಸರಿಯಾದ ಮಾನದಂಡಗಳನ್ನು ಯೋಚಿಸದೆ ಆತುರಾತುರವಾಗಿ ಕೊಟ್ಟಂತ ಮಧ್ಯಂತರ ಆಜ್ಞೆ, ಅನೇಕ ಬಾರಿ Clarigicatory Order" ಗಳ ಮುಖಾಂತರ ತಿದ್ದುಪಾಟು ಮಾಡಿರುವುದೇ ಇದಕ್ಕೆ ಸಾಕ್ಷಿ. ಈ ತೀರ್ಪಿನ ವಿರುದ್ಧ ಕರ್ನಾಟಕ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿದ್ದೂ ಆಯಿತು. ಇದನ್ನು ಕುರಿತು ರಾಷ್ಟ್ರಪತಿಗಳು Supreme court Advice ಕೇಳಿದ್ದೂ ಆಯಿತು. ಅಂತಿಮವಾಗಿ ಇದು ರಾಜ್ಯಾಂಗ ಬದ್ಧವಾಗಿಲ್ಲ ಎಂದು ಹೇಳಿದ್ದೂ ಆಯಿತು.

ಈಗಿನ ಹಂತ. ಎಲ್ಲಾ ಮುಗಿದು ನ್ಯಾಯಾಧಿರಣದ ಬರುವ 5ನೇ ತಾರೀಖಿನ ಅಂತಿಮ ತೀರ್ಪಿಗೆ ಎಲ್ಲರೂ ಕಾಯ್ದಿದ್ದಾರೆ Assessors ಕೂಡ ತಮ್ಮ ವರದಿಯನ್ನು ಸಲ್ಲಿಸಿದ್ದಾರೆ.

ಆದರೆ ಲಭ್ಯವಿರುವ ನೀರಿನ ಪ್ರಮಾಣ ಕುರಿತು Assessors ತಮ್ಮದೇ ಅಭಿಪ್ರಾಯ ವ್ಯಕ್ತಪಡಿಸಿಲ್ಲ. ಅಲ್ಲದೆ ನೀರಿನ ಅವಶ್ಯಕತೆಯನ್ನು ಲೆಕ್ಕ ಹಾಕುವಾಗ ನೀರಾವರಿಗೆ ಒಳ ಪಡುವ ಪ್ರದೇಶಗಳನ್ನು ಮೂರು ಹಂತಗಳಾಗಿ ವಿಂಗಡಿಸಿದ್ದಾರೆ. ಅವುಗಳೆಂದರೆ 1. 1924 ರ ಒಪ್ಪಂದಕ್ಕೆ ಮುಂಚೆ ಇದ್ದದ್ದು 2. 1924ರ ಒಪ್ಪಂದಕ್ಕೆ ಅನುಗುಣವಾಗಿ ಲಭ್ಯವಾದದ್ದು 3. 1924 ನಂತರ ಅಭಿವೃದ್ಧಿ ಪಡಿಸಿದ್ದು, ಇದನ್ನು ಅವರು 'Merit and Equity catagoy' ಎಂದು ಕರೆದಿದ್ದಾರೆ. ಇದೊಂದು ಅನರ್ಥಕಾರಿ ವಿಂಗಡಣೆ. 1892 ರ ಒಪ್ಪಂದ ಮತ್ತು 1924 ರ ಒಪ್ಪಂದ, ಇವುಗಳನ್ನು ಕರ್ನಾಟಕ ಒಪ್ಪಿಲ್ಲ. ಈ ಒಪ್ಪಂದಗಳು "ಸಾಮ್ರಾಟರ ಮತ್ತು ಸಾಮಂತರ" ಮಧ್ಯೆ ಆದ ಒಪ್ಪಂದಗಳು 1947 ಆಗಸ್ಟ್ 15ರ ನಂತರ ಕರ್ನಾಟಕ ಸಾಮಂತರೂ ಅಲ್ಲ ತಮಿಳು ನಾಡ ಸಾಮ್ರಾಟರೂ ಅಲ್ಲ, ಎಲ್ಲ ರಾಜ್ಯಗಳೂ ಸಮಾನ. ಈ ಒಪ್ಪಂದಗಳನ್ನು ಕುರಿತು ಕರ್ನಾಟಕದ ವಕೀಲರು ಸಾಕಷ್ಟು ವಾದ ಮಂಡಿಸಿ ಬೆಳಕು ಚಲ್ಲಿದ್ದಾರೆ ಅವುಗಳನ್ನೆ ಕರ್ನಾಟಕ ಒಪ್ಪದ ಮೇಲೆ 1924 ರ ಒಪ್ಪಂದವನ್ನೇ Basic ಆಗಿ ಇಟ್ಟು ಕೊಂಡು Assess ಮಾಡುವುದು ಅಷ್ಟೊಂದು ಸರಿಕಾಣುವುದಿಲ್ಲ. ಕರ್ನಾಟಕದವರು ಈ ವಿಷಯವನ್ನು ನ್ಯಾಯಾಧಿಕರಣದ ಗಮನಕ್ಕೆ ತಂದಿದ್ದಾರೆ ಎಂದು ಭಾವಿಸುತ್ತೇನೆ.

Assessors ಮಾಡಿರುವ Assessment ಪ್ರಕಾರ ವ್ಯವಸಾಯಕ್ಕಾಗಿ ರಾಜ್ಯಗಳಿಗೆ ಬೇಕಾದಂತ ನೀರಿನ ಪ್ರಮಾಣ ಮತ್ತು ನೀರಾವರಿ ಪ್ರದೇಶದ ಪ್ರಮಾಣ ಕೆಳಕಂಡಂತಿದೆ.

1. ಪಾಂಡಿಚೆರಿಗೆ..ಕುಡಿಯುವ ನೀರು ಸೇರಿ 7 Tmc
2. ತಮಿಳುನಾಡಿಗೆ.. 24.71 Lakh Acres 395 Tmc
3. ಕರ್ನಾಟಕಕ್ಕೆ.. ·18.85 Lakh Acres 251 Tmc
4. ಕೇರಳಕ್ಕೆ .. ಕುಡಿಯೋ ನೀರು ಸೇರಿ... 34 Tmc

ಒಟ್ಟು.. 687 Tmc

740 Tmc ಲಭ್ಯತೆಯನ್ನಿಟ್ಟುಕೊಂಡರೆ ಅದರಲ್ಲಿ 687 Tmc. ನೀರನ್ನು ಯಾರಿಗೆ ಎಷ್ಟೆಷ್ಟು ಎಂದು ಸಲಹೆ ಮಾಡಿದ್ದಾರೆ. ಇನ್ನು ಉಳಿಯುವುದು ಕೇವಲ 53 Tmc. Assessors ಕರ್ನಾಟಕ ಹಾಗೂ ತಮಿಳು ನಾಡಿನ ಕುಡಿಯುವ ನೀರಿನ ಅವಶ್ಯಕತೆಯನ್ನು ಪರಿಗಣಿಸಿಯೇ ಇಲ್ಲ.

740 Tmc ಲಭ್ಯತೆ ಹೀಗಿದೆ:

೧. ಕೇರಳದಿಂದ ಕಬಿನಿಗೆ ಬರುವ ನೀರು 110 Tmc ಮತ್ತು ಕರ್ನಾಟಕದ ಉತ್ಪನ್ನ ಹಾಗೂ ಕರ್ನಾಟಕದ ಗಡಿಯಿಂದ ಮೆಟ್ಟೂರುವರೆಗಿನ 25 Tmc ಸೇರಿ ಮೆಟ್ಟೂರು ಬಳಿ 508 Tmc

೨. ಪಾಂಡಿಚೆರಿ ಸೇರಿ ತಮಿಳುನಾಡು Below Metter 232 Tmc

ಒಟ್ಟು ಲಭ್ಯತೆ 740 Tmc

ಕರ್ನಾಟಕಕ್ಕೆ ತನ್ನ Boundary ಒಳಗೆ ಉಳಿಯುವ ನೀರು:

ಮೆಟ್ಟೂರು ಬಳಿ..........	508 Tmc
ಮೆಟ್ಟೂರು– ಕರ್ನಾಟಕ ಗಡಿ ಮಧ್ಯೆ	25 Tmc
ಕರ್ನಾಟಕದ ಗಡಿ ಬಳಿ	483 Tmc
ಕೇರಳಕ್ಕೆ ಕೊಟ್ಟಿರುವುದು	
(ಕಬಿನಿ 25+ ಭವಾನಿ 9=34)	

ಕರ್ನಾಟಕಕ್ಕೆ ಬರುವುದರಲ್ಲಿ
25 Tmc ಕೇರಳ ಉಪಯೋಗಿಸುತ್ತದೆ.
ಅಂದರೆ ಕರ್ನಾಟಕದ ಪ್ರದೇಶದಲ್ಲಿ,
ಕರ್ನಾಟಕದ ಸಂಪೂರ್ಣ ಹಿಡಿತದಲ್ಲಿ ಉಳಿಯುವ ನೀರು 483 Tmc-25 Tmc
=458 Tmc-

Assessors ವರದಿ ಪ್ರಕಾರ ತಮಿಳುನಾಡಿನ ಅವಶ್ಯಕತೆ: 394 Tmc
ಪಾಂಡಿಚೇರಿ ಅವಶ್ಯಕತೆ. 7 Tmc
ಒಟ್ಟು... 401 Tmc

ತಮಿಳುನಾಡಿಗೆ ಲಭ್ಯವಿರುವ ನೀರು:
ಮೆಟ್ಟೂರು ಕೆಳಗೆ.. 232 Tmc
ಭವನಿಯಿಂದ ಕೇರಳಕ್ಕೆ ಕೊಡಬೇಕಿದ್ದು.. 9 Tmc
ಉಳಿಕೆ 223 Tmc
ತಮಿಳುನಾಡಿನ ಅವಶ್ಯಕತೆ (ಪಾಂಡಿಚೇರಿ) 401 Tmc
ಲಭ್ಯವಿರುವ ನೀರು... 223 Tmc
ಕೊರತೆ... 178 Tmc

ತಮಿಳುನಾಡಿನ ಈ ಕೊರತೆಯನ್ನು ನೀಗಿಸುವುದು ಹೇಗೆ? ಮೇಲೆ ತಿಳಿಸಿದಂತೆ ಮೆಟ್ಟೂರು ಕೆಳಗಿನ ಲಭ್ಯತೆ 223 Tmc ಇದ್ದು ಕೊರತೆ 178 Tmc ಆಗಿದೆ. ಈ 178 Tmc ಕೊರತೆಯನ್ನು ನೀಗಲು ಕರ್ನಾಟಕ ಗಡಿ ಮತ್ತು ಮೆಟ್ಟೂರು ಮಧ್ಯೆ ಲಭ್ಯವಿರುವ 25 Tmc ಒದಗುತ್ತದೆ. ಅಂದರೆ ಕೊರತೆ ಇನ್ನೂ ಕಡಿಮೆಯಾಗುತ್ತದೆ.

ಮೆಟ್ಟೂರು ಕೆಳಗಿನ ಕೊರತೆ 178 Tmc
ಮೆಟ್ಟೂರು ಮೇಲಿನ ಲಭ್ಯತೆ 25 Tmc
ಉಳಿಯುವ ಕೊರತೆ 153 Tmc

ಹಿಂದೆ ತಿಳಿಸಿರುವಂತೆ ತಮಿಳುನಾಡಿನ ಕೊರತೆ 153 Tmc ಗೆ ನಿಲ್ಲುತ್ತದೆ. ಇದನ್ನು ಯಾವ ರೀತಿ ನೀಗುವುದು? ಒಂದು ಮಾರ್ಗವೆಂದರೆ ಕರ್ನಾಟಕ ತನ್ನ ಸ್ವಾಮ್ಯದಲ್ಲಿ ಉಳಿಯುವ 45 Tmc ಯಿಂದ ಬಿಡಬೇಕು. ಮತ್ತೊಂದು ಮಾರ್ಗ ತಮಿಳುನಾಡು ಪ್ರದೇಶದಲ್ಲಿರುವ "ground water" ನಿಂದ ಕೊರತೆ ನೀಗಬೇಕು. ಅಥವಾ Ground water" ಮತ್ತು ಕರ್ನಾಟಕದ Surface water (i.e. out of 458 Tmc) ಎರಡನ್ನು ಉಪಯೋಗಿಸಿ ಕೊರತೆ ನೀಗಿಸಬೇಕು.

UNDP Report ಪ್ರಕಾರ ತಮಿಳು ನಾಡಿನ Delta ಪ್ರದೇಶದಲ್ಲಿ 129 Tmc ಮತ್ತು Colaroon ಉತ್ತರಭಾಗದಲ್ಲಿ 21 Tmc ಅಂದರೆ ಒಟ್ಟು ಲಭ್ಯವಿರುವ Ground water 129+21=150 Tmc Accepted approved norms ಪ್ರಕಾರ 1 Tmc of Ground water is equal to 1.6 Tmc of surface water ಆದ್ದರಿಂದ 150 Tmc Ground water 230 Tmc Surface water ಗೆ ಸಮನಾಗುತ್ತದೆ.

ಈ 230 Tmc Ground water ನಲ್ಲಿ ಎಷ್ಟನ್ನು ಉಪಯೋಗಿಸಬಹುದು? ತಜ್ಞರ ಪ್ರಕಾರ ಎಲ್ಲಾ 150 Tmc (230 Tmc) Ground water ಅನ್ನು ಉಪಯೋಗಿಸುವುದಕ್ಕೆ ಆಗುವುದಿಲ್ಲ. ಆದರೆ ಹೆಚ್ಚಿನ ಭಾಗವನ್ನು ಉಪಯೋಗಿಸಬಹುದು. ತಮಿಳುನಾಡೇ Tribunal ಮುಂದೆ ಹೇಳಿರುವ ಪ್ರಕಾರ 1988-1989 ರ ಸಾಲಿನಲ್ಲಿ ಅವರು ಉಪಯೋಗಿಸಿದ Ground water ಪ್ರಮಾಣ 47 Tmc ಅಥವಾ Effective 75 Tmc. (1 Tmc=1.6 Tmc ಯಂತೆ) ಅಲ್ಲಿಗೆ ಕರ್ನಾಟಕ ತನ್ನ Boundary ಬಳಿ ತಮಿಳುನಾಡಿಗೆ ಬಿಡಬೇಕಾದ್ದು 153-75=78 Tmc ಮಾತ್ರ. ಇಷ್ಟನ್ನು ಕೆಳಗಡೆಗೆ ಹರಿಯ ಬಿಟ್ಟರೆ ಕರ್ನಾಟಕಕ್ಕೆ ಉಳಿಯುವುದು:– 458-78=380 Tmc ಮಾತ್ರ. ಇದು ಕರ್ನಾಟಕದ ಅವಶ್ಯಕತೆಯನ್ನು ಪೂರೈಸುವುದು ಬಹಳ ಕಷ್ಟದ ಕೆಲಸ.

ಈ 230 Tmc Ground water ನಲ್ಲಿ ಎಷ್ಟನ್ನು ಉಪಯೋಗಿಸಬಹುದು? ತಜ್ಞರ ಪ್ರಕಾರ ಎಲ್ಲಾ 150 Tmc (230 Tmc) Ground water ಅನ್ನು ಉಪಯೋಗಿಸುವುದಕ್ಕೆ ಆಗುವುದಿಲ್ಲ. ಆದರೆ ಹೆಚ್ಚಿನ ಭಾಗವನ್ನು ಉಪಯೋಗಿಸಬಹುದು. ತಮಿಳುನಾಡೇ Tribunal ಮುಂದೆ ಹೇಳಿರುವ ಪ್ರಕಾರ 1988-1989 ರ ಸಾಲಿನಲ್ಲಿ ಅವರು ಉಪಯೋಗಿಸಿದ Ground water ಪ್ರಮಾಣ 47 Tmc ಅಥವಾ Effective 75 Tmc. (1 Tmc=1.6 Tmc ಯಂತೆ) ಅಲ್ಲಿಗೆ ಕರ್ನಾಟಕ ತನ್ನ Boundary ಬಳಿ ತಮಿಳುನಾಡಿಗೆ ಬಿಡಬೇಕಾದ್ದು 153-75=78 Tmc ಮಾತ್ರ. ಇಷ್ಟನ್ನು ಕೆಳಗಡೆಗೆ ಹರಿಯ ಬಿಟ್ಟರೆ ಕರ್ನಾಟಕಕ್ಕೆ ಉಳಿಯುವುದು:– 458-78=380 Tmc ಮಾತ್ರ. ಇದು ಕರ್ನಾಟಕದ ಅವಶ್ಯಕತೆಯನ್ನು ಪೂರೈಸುವುದು ಬಹಳ ಕಷ್ಟದ ಕೆಲಸ.

ಮೇಲೆ ತಿಳಿಸಿರುವ ಎಲ್ಲಾ ವಿವರಗಳನ್ನು ನ್ಯಾಯಾಧಿಕರಣಕ್ಕೆ ಕರ್ನಾಟಕದ ವಕೀಲರು ಮನದಟ್ಟು ಮಾಡಿದ್ದಾರೆಂದು ನಂಬುತ್ತೇನೆ. ಜೊತೆಗೆ ಕರ್ನಾಟಕದ ಅವಶ್ಯಕತೆ ಕುರಿತು Assessors ಏನೇ ವರದಿ ಕೊಟ್ಟಿರಲಿ ಆದರೆ ವಸ್ತು ಸ್ಥಿತಿ ಕೆಳಗಿನಂತಿದೆ.

ಕರ್ನಾಟಕದ ಅವಶ್ಯಕತೆ: ನೀರಾವರಿಗೆ. 408 Tmc ಇದು ಕರ್ನಾಟಕದಲ್ಲಿನ Committed Projects covering 23.8 Lakh +2.25 Lakh new projects (proposed). ಹೊಸದಾಗಿ ತೆಗೆದುಕೊಳ್ಳಬೇಕಾಗಿರುವ 2.25 ಲಕ್ಷ ಎಕರೆ ಪ್ರದೇಶವನ್ನು ಕೈ ಬಿಟ್ಟರೂ Commit ಆಗಿರುವ 23.8 ಲಕ್ಷ ಎಕರೆಗೆ ಸುಮಾರು 373 Tmc ನೀರು ಬೇಕಾಗುತ್ತದೆ. ಅಂದರೆ ಕರ್ನಾಟಕದ ಅವಶ್ಯಕತೆ ನೀರಾವರಿ –373 Tmc, ಕುಡಿಯುವ ನೀರು (a) ಬೆಂಗಳೂರು 30 Tmc (b) ಉಳಿಕೆ ಪಟ್ಟಣಗಳು 10 Tmc (c) ಗ್ರಾಮಾಂತರ ನೀರು ಸರಬರಾಜು 6 Tmc
(d) ಕೈಗಾರಿಕೆ, ವಿದ್ಯುತ್ ಬಳಕೆ & ಆವಿಯಾಗುವಿಕೆ 9 Tmc **ಒಟ್ಟು 428 Tmc**

ಕರ್ನಾಟಕ ಗಡಿಯಲ್ಲಿ 78 Tmc ನೀರು ಬಿಟ್ಟರೆ ಅದರ ಪಾಲಿಗೆ ಉಳಿಯುವ ನೀರು 380 Tmc ಮಾತ್ರ ಕರ್ನಾಟಕದ ಅವಶ್ಯಕತೆ. 420 Tmc
ಕರ್ನಾಟಕದ ಕೊರತೆ 48 Tmc

ಈ 48 Tmc ಕೊರತೆಯನ್ನು ಯಾವ ರೀತಿ ಬಗೆಹರಿಸುತ್ತಾರೋ ಗೊತ್ತಿಲ್ಲ. ಕರ್ನಾಟಕದ Committed Irrigation Projects ನೀರಾವರಿ ಪ್ರದೇಶ 23.8 ಲಕ್ಷ ಎಕರೆಯಾದರೂ Assessors ಹಾಲಿ ಶಿಫಾರಸು ಮಾಡಿರುವುದು 18.85 ಲಕ್ಷ ಎಕರೆ ಪ್ರದೇಶ. ಈ ರೀತಿ ಏನಾದರೂ ಕಡಿಮೆ ಮಾಡಿದರೆ ಕರ್ನಾಟಕ ರಾಜ್ಯ ತನ್ನ ಸ್ವಂತ ಖರ್ಚಿನಿಂದ ಮಾಡಿದ ಕೆಲಸ ವ್ಯರ್ಥವಾಗುತ್ತದೆ. ಈ ಅಂಶವನ್ನೂ ಕೂಡ ಕರ್ನಾಟಕದ ವಕೀಲರು Effective ಆಗಿ ನ್ಯಾಯಾಧಿಕರಣಕ್ಕೆ ಮನವರಿಕೆ ಮಾಡಿ ಕೊಟ್ಟಿದ್ದಾರೆಂದು ನಂಬುತ್ತೇನೆ.

ಬಹು ಪ್ರಮುಖವಾದ ಅಂಶವೆಂದರೆ ಕುಡಿಯುವ ನೀರು, ಮೇಲೆ ತಿಳಿಸಿದಂತೆ,

1. ಬೆಂಗಳೂರು ನಗರಕ್ಕೆ 30 Tmc
(ಇದು ನ್ಯಾಯಾಧಿಕಾರಕ್ಕೆ ಸಲ್ಲಿಸಿದ ಬಹು ಹಿಂದಿನ ಲೆಕ್ಕ, ಈಗಿನಂತೆ ಜಾಸ್ತಿ ಬೇಕಾಗುತ್ತದೆ)
2. ಉಳಿಕೆ ಪಟ್ಟಣಗಳು....10 Tmc
3. ಗ್ರಾಮಾಂತರ ನೀರು ಸರಬರಾಜು 6 Tmc
4. ಕೈಗಾರಿಕೆ, ಪರಿಸರ ಇತ್ಯಾದಿ 9 Tmc

ಒಟ್ಟು– 55 Tmc

ಯಾವುದೇ ಕಾರ್ಯಕ್ಕೂ ಈ 55 Tmc ಕಡಿಮೆ ಮಾಡಲು ಸಾಧ್ಯವೇ ಇಲ್ಲ. ಈ ಬಾಬ್ತು ನೀರಿನ ಪ್ರಮಾಣ ಹೆಚ್ಚಿಗೆ ಆಗಬಹುದು. ಇರಲಿ, ಈ 55 Tmc 12 ತಿಂಗಳಿಗೆ ಬೇಕು. ಅಂದರೆ ತಿಂಗಳಿಗೆ 4.50 Tmc ಗಿಂತಲೂ ಅಧಿಕ ನೀರು ಬೇಕು ಕರ್ನಾಟಕದ ಕಾವೇರಿ ನದಿಯಲ್ಲಿ ಕಬಿನಿ ಸೇರಿ ಹರಿಯುವ ನೀರು ಸಿಕ್ಕುವುದು ಜೂನ್, ಜುಲೈ, ಆಗಸ್ಟ್, ಸೆಪ್ಟಂಬರ್ ಮಾತ್ರ ಉಳಿದ 8 ತಿಂಗಳು ತಿಂಗಳಿಗೆ 4.50 Tmc ಯಂತೆ ಒಟ್ಟು 36 Tmc ನೀರು ಬೇಕೇ ಬೇಕು. ಈ ನೀರು Reservoir ನಿಂದಲೇ ಒದಗಬೇಕು. ಅಂದರೆ ಸೆಪ್ಟಂಬರ್ ಅಂತ್ಯದ ವೇಳೆಯಲ್ಲಿ ಕರ್ನಾಟಕದ ಕಾವೇರಿ ಜಲಾಶಯಗಳಲ್ಲಿ ಕೊನೆ ಪಕ್ಷ "Dead water" ಬಿಟ್ಟು 36 ರಿಂದ 40 Tmc ನೀರು ಇರಲೇಬೇಕು ಅನುಭವದ ಆಧಾರದ ಮೇಲೆ ಹೇಳುವುದಾದರೆ ಬಹುತೇಕ ವರ್ಷಗಳಲ್ಲಿ ಈ Reservoir ಗಳಲ್ಲಿ ಒಟ್ಟು 40 Tmc ಗಿಂತ ಹೆಚ್ಚಾಗಿ sept ಅಂತ್ಯದಲ್ಲಿ ಇರಲೇ ಇಲ್ಲ. ಆದ್ದರಿಂದ September ಆದ ಮೇಲೆ 40 Tmc ಗಿಂತ ಕಮ್ಮಿ ಇದ್ದರೆ ನೀರು ಬಿಡುವ ಪ್ರಶ್ನೆ ಉದ್ಭವಿಸ ಕೂಡದು, ತಮಿಳುನಾಡಿಗೆ ಅನುಕೂಲವಾಗ ಬೇಕಾದರೆ ಮತ್ತು ಈ 78 Tmc ಮೇಲೆ ಕಾಣಿಸಿದ ನೀರನ್ನು sept ಅನಂತರ ಬಿಡಬೇಕಾದರೆ ಮೇಕೆದಾಟು ಬಳಿ ಒಂದು Balancing Reservoir ಕಟ್ಟಿ, ಕೆಳಗಡೆಗೆ ಬಿಡಬೇಕಾದ ನೀರಿನ ಪ್ರಮಾಣ ಅನುಸರಿಸಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದು. ಈ ಕುಡಿಯುವ ನೀರಿನ ವಿವರ ಮತ್ತು sept ನಲ್ಲಿ ಕರ್ನಾಟಕದ Reservoir ನಲ್ಲಿ 36 Tmc ನೀರು ಇರಲೇಬೇಕಾದ ಅವಶ್ಯಕತೆ ಕುರಿತು ಕರ್ನಾಟಕ ಸರ್ಕಾರ ನ್ಯಾಯಾಧಿಕರಣದ ಮುಂದೆ ಮನದಟ್ಟು ಮಾಡಿಕೊಟ್ಟಿದ್ದಾರೆಂದೂ ಕೂಡ ನಂಬುತ್ತೇನೆ.

ಮೇಲೆ para 25 ರಲ್ಲಿ ತಿಳಿಸಿರುವಂತೆ ಕರ್ನಾಟಕದ ಅವಶ್ಯಕತೆ 428 Tmc ಇದ್ದರೂ Assessoser ವರದಿ ಆಧಾರದ ಮೇಲೆ ಪರಿಗಣಿಸಿದರೆ ಕರ್ನಾಟಕಕ್ಕೆ

(೨೧ನೇ ಪುಟಕ್ಕೆ)

ರಾಜಕೀಯದಲ್ಲಿ ಮಹಿಳೆಯ ಪಾಲು

ತೇಜಾಕ್ಷಿ ಶೆಟ್ಟಿ

ನಮ್ಮ ಸಂವಿಧಾನದ ಅನುಚ್ಛೇದ ೧೫ ಧರ್ಮ, ಜಾತಿ, ವರ್ಗ, ಲಿಂಗ, ಬಣ್ಣ ಮತ್ತು ಪ್ರದೇಶ ಆಧಾರಿತ ಯಾವುದೇ ಬಗೆಯ ಭೇದವನ್ನು ನಿಷೇಧಿಸುತ್ತದೆ. ಅಂದರೆ ಭಾರತದ ಎಲ್ಲಾ ಪ್ರಜೆಗಳಿಗೂ ಸಮಾನ ಹಕ್ಕು, ಅವಕಾಶಗಳನ್ನು ಸ್ವಾತಂತ್ರ್ಯ ಸಮಾನತೆಯನ್ನು ಪ್ರಕಟಿಸುತ್ತದೆ. ಆದರೆ ಪಾರಂಪರಿಕವಾಗಿ ಶ್ರೇಣೀಕರಣಗೊಂಡ ನಮ್ಮ ಸಮಾಜದಲ್ಲಿ ಹಕ್ಕು, ಸ್ವಾತಂತ್ರ್ಯ, ಸಮಾನತೆಯಂತಹ ಮೂಲಭೂತ ಪ್ರಶ್ನೆಗಳು ಕಡತದಲ್ಲಷ್ಟೇ ಉಳಿದು ಎಲ್ಲ ಅವಕಾಶಗಳು ಕೆಲವರಲ್ಲಿ ಕೇಂದ್ರೀಕೃತವಾಗಿವೆ. ಇಂತಹ ಶೋಷಕ ಶೋಷಿತ ವ್ಯವಸ್ಥೆಗಳಲ್ಲಿ ತಮ್ಮ ಮುಂದಿದ್ದ ಸಮಾನ ಅವಕಾಶಗಳನ್ನು ಪಡೆಯಲಾರದ ಸ್ಥಿತಿ ಯಾವಾಗಲೂ ಶೋಷಿತ ಸಮುದಾಯದ್ದಾಗಿರುತ್ತದೆ. ಈ ಅಂತರವನ್ನು ಹೋಗಲಾಡಿಸುವಲ್ಲಿ ಅವಕಾಶ ವಂಚಿತ ಶೋಷಿತ ವರ್ಗಕ್ಕೆ ಅವಕಾಶ ಕಲ್ಪಿಸಲು ಸ್ವಾತಂತ್ರ್ಯಾನಂತರ ವಿಶೇಷ ಯೋಜನೆಗಳನ್ನು ರೂಪಿಸಲಾಗಿದೆ.

ಇಲ್ಲಿ ಉಪಸ್ಥಿತರಿರುವ ಎಲ್ಲರಿಗೂ ನನ್ನ ವಂದನೆಗಳು. ಈಗ ನನಗೆ ನೀಡಲಾಗಿರುವ "ಮಹಿಳೆ ಮತ್ತು ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆ" ಎಂಬ ವಿಷಯದ ಬಗ್ಗೆ ನನ್ನ ಅಭಿಪ್ರಾಯವನ್ನು ಮಂಡಿಸುತ್ತಿದ್ದೇನೆ. ಮೊದಲನೆಯದಾಗಿ ಪ್ರಜಾಪ್ರಭುತ್ವ ಎಂದರೆ ಏನು? ಎಂದು ತಿಳಿದುಕೊಳ್ಳೋಣ. ಇದನ್ನು ರಾಜಕೀಯ ಶಾಸ್ತ್ರದ ಬಗ್ಗೆ ಕನಿಷ್ಠ ಜ್ಞಾನ ಇರುವಂಥ ಯಾರೊಬ್ಬರೂ ಉತ್ತರಿಸಬಹುದು. ಇಲ್ಲಿರುವ ಪ್ರತಿಯೊಬ್ಬರಿಗೂ ಪ್ರಜಾಪ್ರಭುತ್ವದ ಬಗ್ಗೆ ಅಬ್ರಹಾಂ ಲಿಂಕನ್ ಅವರು ನೀಡಿದಂತಹ ವ್ಯಾಖ್ಯೆ ಗೊತ್ತಿರುವಂತಿದೆ. ಲಿಂಕನ್ ಪ್ರಕಾರ ಪ್ರಜಾಪ್ರಭುತ್ವ ಎಂದರೆ ಜನರಿಂದ ಜನರಿಗೋಸ್ಕರ. ಜನರೇ ನಡೆಸುವ ಆಡಳಿತ. ಇದೇ ಮಾದರಿಯ ಸರಕಾರವನ್ನು ಹೊಂದಿರುವ ನಮ್ಮ ಭಾರತ ಒಂದು ಜಾತ್ಯಾತೀತ ರಾಷ್ಟ್ರ ಆದರೆ ಇಲ್ಲಿ ನನ್ನ ಪ್ರಶ್ನೆ ಎಂದರೆ ಇಂತಹ ಭಾರತದಲ್ಲಿ ಈ ಪ್ರಜಾಪ್ರಭುತ್ವದ ಕಲ್ಪನೆಯಲ್ಲಿರುವ "ಜನರು" ಎಂದರೆ ಯಾರು? ಅದು ದೇಶದ ಒಟ್ಟು ಜನಸಂಖ್ಯೆಯನ್ನು ಗಮನದಲ್ಲಿರಿಸಿಕೊಂಡು ಸೂಚಿಸಿದ ಪದವಾ ಅಥವಾ ಆ ಪದ ಕೇವಲ ಪುರುಷ ಸಮಾಜಕ್ಕೆ ಮೀಸಲಾಗಿದೆಯಾ? ಯಾಕೆಂದರೆ ನಮ್ಮ ಪ್ರಜಾಪ್ರಭುತ್ವ ಸರಕಾರದ ಪರಿಸ್ಥಿತಿ ಹಾಗಿದೆ. ಈ ಪ್ರಜಾಪ್ರಭುತ್ವ ಪುರುಷ ಪ್ರಭುತ್ವವಾಗಿದೆ ಎಂಬುದು ನಮ್ಮೆಲ್ಲರ ಅನುಭವ. ಹಾಗಾದರೆ ಪ್ರಜಾಪ್ರಭುತ್ವದಲ್ಲಿನ ಸಮಾನತೆಗೆ ಅವಕಾಶ ಎಲ್ಲಿದೆ? ಅರ್ಥ ಎಲ್ಲಿದೆ? ಯಾಕೆ ಹೀಗಾಗುತ್ತಿದೆ? ರಾಜಕೀಯದಲ್ಲಿ ಮಹಿಳೆಯ ಸ್ಥಾನ ಕುಸಿಯಲು ಕಾರಣವೇನು?

ನಮ್ಮ ಸಂವಿಧಾನದ ಅನುಚ್ಛೇದ ೧೫ ಧರ್ಮ, ಜಾತಿ, ವರ್ಗ, ಲಿಂಗ, ಬಣ್ಣ ಮತ್ತು ಪ್ರದೇಶ ಆಧಾರಿತ ಯಾವುದೇ ಬಗೆಯ ಭೇದವನ್ನು ನಿಷೇಧಿಸುತ್ತದೆ. ಅಂದರೆ ಭಾರತದ ಎಲ್ಲಾ ಪ್ರಜೆಗಳಿಗೂ ಸಮಾನ ಹಕ್ಕು, ಅವಕಾಶಗಳನ್ನು ಸ್ವಾತಂತ್ರ್ಯ ಸಮಾನತೆಯನ್ನು ಪ್ರಕಟಿಸುತ್ತದೆ. ಆದರೆ ಪಾರಂಪರಿಕವಾಗಿ ಶ್ರೇಣೀಕರಣಗೊಂಡ ನಮ್ಮ ಸಮಾಜದಲ್ಲಿ ಹಕ್ಕು, ಸ್ವಾತಂತ್ರ್ಯ, ಸಮಾನತೆಯಂತಹ ಮೂಲಭೂತ ಪ್ರಶ್ನೆಗಳು ಕಡತದಲ್ಲಷ್ಟೇ ಉಳಿದು ಎಲ್ಲ ಅವಕಾಶಗಳು ಕೆಲವರಲ್ಲಿ ಕೇಂದ್ರೀಕೃತವಾಗಿವೆ. ಇಂತಹ ಶೋಷಕ ಶೋಷಿತ ವ್ಯವಸ್ಥೆಗಳಲ್ಲಿ ತಮ್ಮ ಮುಂದಿದ್ದ ಸಮಾನ ಅವಕಾಶಗಳನ್ನು ಪಡೆಯಲಾರದ ಸ್ಥಿತಿ ಯಾವಾಗಲೂ ಶೋಷಿತ ಸಮುದಾಯದ್ದಾಗಿರುತ್ತದೆ. ಈ ಅಂತರವನ್ನು ಹೋಗಲಾಡಿಸುವಲ್ಲಿ ಅವಕಾಶ ವಂಚಿತ ಶೋಷಿತ ವರ್ಗಕ್ಕೆ ಅವಕಾಶ ಕಲ್ಪಿಸಲು ಸ್ವಾತಂತ್ರ್ಯನಂತರ ಹತ್ತಾರು ವಿಶೇಷ ಯೋಜನೆಗಳನ್ನು ರೂಪಿಸಲಾಗಿದೆ. ಇಂತಹ ಒಂದು ಪ್ರಕ್ರಿಯೆಯಾಗಿಯೇ ಮೀಸಲಾತಿಯನ್ನು ಪರಿಕಲ್ಪಿಸಲಾಗಿದೆ. ಎಲ್ಲರಿಗೂ ಸಮಾನ ಅವಕಾಶ ಒದಗಿಸುವಲ್ಲಿ ಸಮನೆಲೆಯ ಬದುಕನ್ನು ಕಟ್ಟಿಕೊಂಡಲ್ಲಿ ಮೀಸಲಾತಿ ಕ್ರಿಯಾತ್ಮಕವಾಗಿ ದುಡಿಯುತ್ತಿದೆ. ಈ ಹಿನ್ನೆಲೆಯಲ್ಲಿ ಮಹಿಳಾ ಪ್ರಶ್ನೆ ಹಾಗೂ ಮಹಿಳಾ ವಿಮೋಚನೆಯಲ್ಲಿ ಮೀಸಲಾತಿ ಒಂದು ಉತ್ತಮ ಕ್ರಮವಾಗಿದೆ. ಹಾಗೆಂದೇ ಮಹಿಳಾ ಮೀಸಲಾತಿ ಎಲ್ಲಾ ಸ್ತ್ರೀಪರ ಮನಸ್ಸುಗಳ ಹಕ್ಕೊತ್ತಾಯವಾಗಿದೆ. ಇವತ್ತು ತುಂಬಾ ಜನ ಕೇಳುವ ಪ್ರಶ್ನೆ ಮಹಿಳೆಯರಿಗೆ ಮೀಸಲಾತಿ ಯಾಕೆ ಬೇಕು? ಪ್ರಾಯಶಃ ಇದಕ್ಕೆ ಉತ್ತರಿಸಬೇಕಾದರೆ ನಮ್ಮ ಮಹಿಳೆಯರ ಪರಿಸ್ಥಿತಿಯನ್ನು ಅವಲೋಕಿಸಬೇಕಾಗುತ್ತದೆ.

ಜಗತ್ತಿನಲ್ಲಿ ಯಾವುದೇ ದೇಶದ ಇತಿಹಾಸವೆನ್ನುವುದು ರಾಜಮಹಾರಾಜರ ಕಥೆ. ಅದು ಪ್ರಭುಗಳ ಇತಿಹಾಸವೇ ಹೊರತು ಪ್ರಜೆಗಳ ಇತಿಹಾಸವಲ್ಲ. ಸಣ್ಣಪುಟ್ಟ ಸಂಸ್ಥಾನಗಳಲ್ಲಿ ಆಳಿಕೊಂಡಿದ್ದ ಮನೆತನಗಳಲ್ಲಿದ್ದು ಅಗತ್ಯಬಿದ್ದಾಗ ರಣರಂಗದಲ್ಲೂ ಹೋರಾಡಿದ ಕೆಲವು ವೀರ ಮಹಿಳೆಯರ ಪ್ರಸ್ತಾಪ ಬಿಟ್ಟರೆ ನಮ್ಮ ದೇಶದ ಇತಿಹಾಸವೂ ಕೂಡ "His Story" ಯೇ ಹೊರತು "Her Story" ಅಲ್ಲ. ಅದರಲ್ಲಿ ಅವನ ಜೀವನ ಸಾಧನೆಗಳೇ ತುಂಬಿರುವುದಲ್ಲದೆ "ಅವಳ" ಪ್ರಸ್ತಾಪ ಇರುವುದು ಅತ್ಯಂತ ಕಡಿಮೆ. ನಮ್ಮ ಸಮಾಜದ ಬೆಳವಣಿಗೆಯಲ್ಲಿ ಹೆಣ್ಣಿಗೆ ದೊರೆತ ಸ್ಥಾನಮಾನವನ್ನು ಗಮನಿಸಿದರೆ ರಾಜ್ಯಭಾರದಲ್ಲಿ ಅವಳಿಗೆ ಸಮಾನ ಅವಕಾಶ ದೊರೆಯುವುದು ಸಾಧ್ಯವೇ ಇರಲಿಲ್ಲ. ಉತ್ಪಾದನ ಸಾಧನಗಳ ಒಡೆತನವನ್ನು ಪಡೆದುಕೊಂಡ ಗಂಡಸು ಹೆಣ್ಣಿನ ದುಡಿಮೆ ಮನೆಗೆ. ನಾಲ್ಕುಗೋಡೆಗಳ ನಡುವೆ ಸೀಮಿತವಾಗುವಂತೆ ನೋಡಿಕೊಂಡ. ಇದು ಇತಿಹಾಸದ ಮೊದಲ ಶ್ರಮ ವಿಭಜನೆ. ಆಸ್ತಿ ಹಕ್ಕಿನಿಂದ ವಂಚಿತಳಾದ ಹೆಣ್ಣು ಇತಿಹಾಸ ಮೊದಲ ಗುಲಾಮಳಾದಳು. ಅದು ಅವಳ ಅರಿವಿಗೆ ಬರದಂತೆ ಸಮಾಜ ನೋಡಿಕೊಂಡಿತು. ರಾಜಕೀಯ ಅಧಿಕಾರ ಮತ್ತು ರಾಜಕೀಯ ನಿರ್ಧಾರಗಳನ್ನು ಕೈಗೊಳ್ಳುವ ಪ್ರಕ್ರಿಯೆಯಿಂದ ಹೆಣ್ಣನ್ನು ದೂರವಿಡಲಾಗಿದೆ. ಸ್ವಾತಂತ್ರ್ಯೋತ್ತರ ಆಧುನಿಕ ಕಾಲದ ರಾಜಕಾರಣದೊಂದಿಗೆ ಮಹಿಳೆ ಗುರುತಿಸಿಕೊಳ್ಳಲಿಲ್ಲವೆಂಬ ವಿಪರ್ಯಾಸಕ್ಕೆ ಹಲವು ಕಾರಣಗಳಿವೆ.

ಮಹಿಳೆ ಲಿಂಗನೆಲೆಯಲ್ಲಿ ದಮನಕ್ಕೆ ಒಳಗಾದವಳು. ಇದು ಮಹಿಳಾ ಸಂಬಂಧಿ ಜಾಗತಿಕ ಸತ್ಯ ಕೂಡಾ ಹೌದು. ಇಲ್ಲಿ ವಿಭಿನ್ನ ಜಾತಿ. ವರ್ಗದ ಮಹಿಳೆಯರೆಲ್ಲರೂ ಶೋಷಿತರೆ.

ಹಾಗಾಗಿಯೇ ಮಹಿಳೆಯರಿಗೆ ದಲಿತರು ಎಂಬ ಪದ ಬಳಕೆಗೆ ಬಂತು. ಪುರುಷಾಧಿಕಾರದ ವ್ಯವಸ್ಥೆಯಲ್ಲಿ ಮಹಿಳೆಯರು ಒಂದು ಶೋಷಿತ ಪ್ರವರ್ಗವಾಗಿದ್ದು ತಮ್ಮ ಸಬಲೀಕರಣಕ್ಕೆ ನೆಲೆಯೊಂದನ್ನು ಕಟ್ಟಿಕೊಳ್ಳಬೇಕಾಗಿದೆ. ಈ ಬಗೆಯ ಎಚ್ಚರದಲ್ಲಿ ೧೯೮೦ ರಲ್ಲಿ ಅಂತರಾಷ್ಟ್ರೀಯ ಮಹಿಳಾ ವರ್ಷದ ಆಚರಣೆ ನಡೆದು ಮಾರ್ಚ್ ೮ನ್ನು ಅಂತರಾಷ್ಟ್ರೀಯ ಮಹಿಳಾದಿನವೆಂದು ಘೋಷಿಸಲಾಯಿತು. ಈ ಮೂಲಕ ಮಹಿಳಾ ಪ್ರಶ್ನೆ ಮೊತ್ತಮೊದಲಿಗೆ ಜಾಗತಿಕವಾಗಿ ಚರ್ಚೆಗೆ ಬಂತು. ಅದರ ಫಲವಾಗಿಯೇ ಮಹಿಳಾಪರ ಚಿಂತನೆ. ಚಟುವಟಿಕೆಗಳು ಅಸ್ತಿತ್ವಕ್ಕೆ ಬಂದವು.

ರಾಷ್ಟ್ರೀಯ ಹಾಗೂ ಜಾಗತಿಕ ನೆಲೆಯಲ್ಲಿ ಮಹಿಳಾ ಸ್ಥಿತಿಗತಿ ಮಹಿಳೆಯ ಸಮಸ್ಯೆಗಳು ಗಂಭೀರವಾಗಿ ಕಾಣಿಸತೊಡಗಿದವು. ಭಾರತದಲ್ಲೂ ಕೂಡಾ ರಾಜಕೀಯದಲ್ಲಿ ಮಹಿಳೆಯರ ಸ್ಥಾನ ಯಾವ ಹಂತದಲ್ಲಿದೆ ಎಂಬುವುದರ ಬಗ್ಗೆ ಗಮನಾರ್ಹ ಚಿಂತನೆಗಳು ನಡೆದವು. ಇಲ್ಲಿ ರಾಜಕೀಯ ಎನ್ನುವುದಕ್ಕೆ ವಿಶಾಲವಾದ ಅರ್ಥವ್ಯಾಪ್ತಿ ಇದೆ. ಅದು ಕೇವಲ ಪಕ್ಷರಾಜಕೀಯಕ್ಕೆ ಸೀಮಿತವಾಗುವುದಷ್ಟು ಸಂಕುಚಿತವಾಗಿಲ್ಲ. ಬದಲಾಗಿ ಶೈಕ್ಷಣಿಕ, ಧಾರ್ಮಿಕ, ಕೌಟುಂಬಿಕ, ಹೀಗೆ ಪ್ರತಿಯೊಂದು ಕ್ಷೇತ್ರದ ರಾಜಕೀಯದಲ್ಲಿ ಅಧಿಕಾರ ಚುಕ್ಕಾಣಿ ಪುರುಷ ಕೇಂದ್ರಿತವಾಗಿದೆ. ಇಂತಹ ಅಧಿಕಾರ ಸಮಸ್ಯೆಯಾಗುವುದು ಅವರ ಕೆಲವೊಂದು ನಿಯಮಗಳಿಂದಾಗಿ ತಮ್ಮ ಮೂಗಿನ ನೇರಕ್ಕೆ ಒಂದೇ ದೃಷ್ಟಿಕೋನದಿಂದ ಸಮಸ್ಯೆಯನ್ನು ಪರಾಮರ್ಶಿಸಿ ಪರಿಹಾರ ಒದಗಿಸಿದಾಗ ಮಹಿಳೆಗೆ ಅನ್ಯಾಯವಾಗುತ್ತದೆ. ಆದರೆ ಇದು ಸರ್ವಕಾಲಿಕವೂ ಅಲ್ಲ. ಸರ್ವವ್ಯಾಪ್ತಿಯೂ ಅಲ್ಲ. ಏಕೆಂದರೆ ಪುರುಷ ಕೇಂದ್ರಿತ ಸಮಾಜದಲ್ಲೂ ಕೂಡ ಮಹಿಳಾಪರ ಚಿಂತನೆಗಳಿಗೆ ಕೆಲವೊಂದು ಕಡೆ ಅವಕಾಶ ಇತ್ತು.

ಪುರುಷನ ಆಡಳಿತದಲ್ಲೂ ಕೆಲವೊಂದು ಮಹಿಳಾಪರ ನಿಯಮಗಳು ಅನುಷ್ಠಾನಗೊಂಡಿದೆ. ಆದರೂ ತನ್ನ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಮಹಿಳೆಗೂ ಅವಕಾಶ ಸಿಗಬೇಕು. ಈ ನಿಟ್ಟಿನಲ್ಲಿ ಅಧಿಕಾರದ ವಿಕೇಂದ್ರೀಕರಣ ಆಗಬೇಕು ಎನ್ನುವುದು ನನ್ನ ಅಭಿಪ್ರಾಯ. ಇಲ್ಲಿ ಅಧಿಕಾರದ ವಿಕೇಂದ್ರೀಕರಣ ಎಂದರೆ ಅಧಿಕಾರದ ವರ್ಗಾವಣೆ ಅಲ್ಲ ಬದಲಾಗಿ ಆಡಳಿತದಲ್ಲಿ ಪುರುಷರ ಜೊತೆಗೆ ಮಹಿಳೆಯರ ಪಾಲ್ಗೊಳ್ಳುವಿಕೆ ಮುಖ್ಯವಾಗಬೇಕು ಹಾಗಾದಾಗ ಮಾತ್ರ ಮಹಿಳೆಯರೂ ಸಾಮಾಜಿಕವಾಗಿ. ಆರ್ಥಿಕವಾಗಿ, ಶೈಕ್ಷಣಿಕವಾಗಿ, ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತದೆ. ಇದರಿಂದ ಎಲೆಮರೆಯ ಕಾಯಿಯಂತೆ ಕುಳಿತ ಆಕೆ ಬಹಿರಂಗವಾಗಿ ಸಾರ್ವಜನಿಕ ಸ್ಥಳದಲ್ಲಿ ತನ್ನಲ್ಲಿರುವ ಪ್ರತಿಭೆ ಸಾಮರ್ಥ್ಯವನ್ನು ಪ್ರಕಟಿಸಬಲ್ಲಳು.

ಪ್ರಸ್ತುತ ಕೌಟುಂಬಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯಕ್ಕಿಂತಲೂ ಪಕ್ಷ ರಾಜಕೀಯದಲ್ಲಿ ಮಹಿಳೆಯ ಸ್ಥಾನದ ಬಗ್ಗೆ ಹೆಚ್ಚು ಚರ್ಚೆಗಳಾಗುತ್ತಾ ಇದೆ. ಪಕ್ಷ ರಾಜಕೀಯವೇ ಮುಖ್ಯ ಆಗ್ತಾ ಇದೆ. ಯಾಕೆಂದರೆ ಅದು ಸಾರ್ವಜನಿಕ ಕ್ಷೇತ್ರ ದೇಶದ ಎಲ್ಲಾ ಪ್ರಜೆಗಳಿಗೂ ಸಂಬಂಧಿಸಿದ ಕ್ಷೇತ್ರ, ಅಲ್ಲಿ ಪ್ರತಿಯೊಬ್ಬರ ಮನವಿಗಳಿಗೂ. ಅಹವಾಲುಗಳಿಗೂ, ಬೇಡಿಕೆಗಳಿಗೂ, ಸಮಸ್ಯೆಗಳಿಗೂ ಸ್ಪಂದಿಸುವ, ಪರಿಹರಿಸುವ ಭರವಸೆ ಇದೆ. ಪ್ರಜಾಪ್ರಭುತ್ವದ ಆಶಯವೇ ಅದು. ಇಂಥ ಕ್ಷೇತ್ರದಲ್ಲಿ ಮಹಿಳೆಯರು ಯಾಕೆ ಅವಕಾಶ ವಂಚಿತರಾಗಿದ್ದಾರೆ? ಎಂಬುದಕ್ಕೆ

ರಾಷ್ಟ್ರೀಯ ಹಾಗೂ ಜಾಗತಿಕ ನೆಲೆಯಲ್ಲಿ ಮಹಿಳಾ ಸ್ಥಿತಿಗತಿ ಮಹಿಳೆಯ ಸಮಸ್ಯೆಗಳು ಗಂಭೀರವಾಗಿ ಕಾಣಿಸತೊಡಗಿದವು. ಭಾರತದಲ್ಲೂ ಕೂಡಾ ರಾಜಕೀಯದಲ್ಲಿ ಮಹಿಳೆಯರ ಸ್ಥಾನ ಯಾವ ಹಂತದಲ್ಲಿದೆ ಎಂಬುವುದರ ಬಗ್ಗೆ ಗಮನಾರ್ಹ ಚಿಂತನೆಗಳು ನಡೆದವು. ಇಲ್ಲಿ ರಾಜಕೀಯ ಎನ್ನುವುದಕ್ಕೆ ವಿಶಾಲವಾದ ಅರ್ಥವ್ಯಾಪ್ತಿ ಇದೆ. ಅದು ಕೇವಲ ಪಕ್ಷ ರಾಜಕೀಯಕ್ಕೆ ಸೀಮಿತವಾಗುವುದಷ್ಟು ಸಂಕುಚಿತವಾಗಿಲ್ಲ. ಬದಲಾಗಿ ಶೈಕ್ಷಣಿಕ, ಧಾರ್ಮಿಕ, ಕೌಟುಂಬಿಕ, ಹೀಗೆ ಪ್ರತಿಯೊಂದು ಕ್ಷೇತ್ರದ ರಾಜಕೀಯ ದಲ್ಲಿ ಅಧಿಕಾರ ಚುಕ್ಕಾಣಿ ಪುರುಷ ಕೇಂದ್ರಿತವಾಗಿದೆ. ಇಂತಹ ಅಧಿಕಾರ ಸಮಸ್ಯೆಯಾಗುವುದು ಅವರ ಕೆಲವೊಂದು ನಿಯಮಗಳಿಂದಾಗಿ ತಮ್ಮ ಮೂಗಿನ ನೇರಕ್ಕೆ ಒಂದೇ ದೃಷ್ಟಿಕೋನದಿಂದ ಸಮಸ್ಯೆಯನ್ನು ಪರಾಮರ್ಶಿಸಿ ಪರಿಹಾರ ಒದಗಿಸಿದಾಗ ಮಹಿಳೆಗೆ ಅನ್ಯಾಯವಾಗುತ್ತದೆ. ಆದರೆ ಇದು ಸರ್ವಕಾಲಿಕವೂ ಅಲ್ಲ. ಸರ್ವವ್ಯಾಪ್ತಿಯೂ ಅಲ್ಲ. ಏಕೆಂದರೆ ಪುರುಷ ಕೇಂದ್ರಿತ ಸಮಾಜದಲ್ಲೂ ಕಡ ಮಹಿಳಾಪರ ಚಿಂತನೆಗಳಿಗೆ ಕೆಲವೊಂದು ಕಡೆ ಅವಕಾಶ ಇತ್ತು. ಪುರುಷನ ಆಡಳಿತದಲ್ಲೂ ಕೆಲವೊಂದು ಮಹಿಳಾಪರ ನಿಯಮಗಳು ಅನುಷ್ಠಾನಗೊಂಡಿದೆ. ಆದರೂ ತನ್ನ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಮಹಿಳೆಗೂ ಅವಕಾಶ ಸಿಗಬೇಕು.

ಉತ್ತರ ಹುಡುಕಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪಕ್ಷರಾಜಕಾರಣದ ಪರಿಕಲ್ಪನೆ ಮತ್ತು ನಿರ್ವಹಣೆ ಹಾಗೂ ಅದರ ಕಾರ್ಯತಂತ್ರವನ್ನು ಮಹಿಳಾವಾದಿಗಳು ಬಯಲುಗೊಳಿಸಿದ್ದಾರೆ. ಮಹಿಳೆಯು ರಾಜಕೀಯ ಕ್ಷೇತ್ರದಲ್ಲಿ ಬಲವಾಗಿ ಬೇರೂರದೇ ಇರಲು ಕಾರಣ ಮಹಿಳೆಯರಿಗೆ ಗೆಲ್ಲುವ ಸಾಮರ್ಥ್ಯವಿಲ್ಲದೆ ಅಲ್ಲ. ಆದರೆ ರಾಜಕೀಯ ಪಕ್ಷಗಳು ಮಹಿಳೆಯರಿಗೆ ಟಿಕೆಟ್ ನೀಡಿ ಅವರನ್ನು ತಮ್ಮ ಪಕ್ಷದ ಅಭ್ಯರ್ಥಿಗಳನ್ನಾಗಿ ಆರಿಸುವುದೇ ಕಡಿಮೆ. ಇದರಿಂದಾಗಿ ಅವರಿಗೆ ರಾಜಕೀಯ ಕ್ಷೇತ್ರದಲ್ಲಿ ನೆಲೆಯೂರಿ ಸ್ವತಂತ್ರವಾಗಿ ಚುನಾವಣೆಗಳನ್ನು ಎದುರಿಸಲು ಅವಕಾಶಗಳು ಕಡಿಮೆಯಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕಾರಣವು ಬದುಕಿನ ಬಹುಮುಖ್ಯ ಅಂಗವಾಗಿರುವುದರಿಂದ ಪುರುಷರ ಜೊತೆಯಲ್ಲಿ ಸ್ತ್ರೀಯು ರಾಜಕೀಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದು ಅಗತ್ಯವಾಗಿದೆ.

ಆದರೆ ಮತದಾನದ ಹಂತದಲ್ಲಿ ಪುರುಷರಷ್ಟೇ ಪ್ರಾಮುಖ್ಯ ಪಡೆಯುವ ಮಹಿಳೆಯರು ಮೇಲೆ ಹೋದಂತೆಲ್ಲಾ ಇತರೇ ಹಂತಗಳಲ್ಲಿ ನೇಪಥ್ಯಕ್ಕೆ ಸರಿದಿರುವುದು ಇಂದಿನ ವಿಪರ್ಯಾಸ. ಏಕೆಂದರೆ ಪುರುಷನ ಶಕ್ತಿ ರಾಜಕೀಯ ರಂಗದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಿದೆ. ಹಾಗಾಗಿ ಪುರುಷ ಅಂಕಿತಕ್ಕೆ ಒಳಪಟ್ಟ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರಿಗೂ ಅವಕಾಶ ಕಲ್ಪಿಸುವುದಕ್ಕಾಗಿ ಅವರನ್ನು ಸಾಮಾಜಿಕವಾಗಿ ಆರ್ಥಿಕವಾಗಿ & ರಾಜಕೀಯವಾಗಿ ಸಬಲೀಕರಣಗೊಳಿಸಲು ದೇಶದ್ಯಾಂತ ಅನೇಕ ಯೋಜನೆಗಳು ಜಾರಿಕೊಂಡಿವೆ. ಮಹಿಳಾ ಸಬಲೀಕರಣ ಪ್ರಕ್ರಿಯೆ ಮಹಿಳೆಗೆ ಶಿಕ್ಷಣ ಉದ್ಯೋಗ, ರಾಜಕೀಯ ಅಧಿಕಾರಗಳಲ್ಲಿ ಅವಕಾಶ ಕಲ್ಪಿಸುವ ಮೀಸಲಾತಿಯಲ್ಲಿ ಸಾಧ್ಯವಾಗಬೇಕಾದ ಅನಿವಾರ್ಯತೆ ಇದೆ. ಮಹಿಳಾ ಸಮೂಹಕ್ಕೆ ಎದುರಾಗಿರುವ ಇಕ್ಕಟ್ಟಿನ ಪರಿಹಾರದಲ್ಲಿ ಮಹಿಳಾ ರಾಜಕೀಯ ಮೀಸಲಾತಿ ಅಗತ್ಯ ಪರಿಕರವಾಗಿ ಕಾರ್ಯನಿರ್ವಹಿಸುತ್ತಿದೆ. ಈ ತಾತ್ವಿಕ ಹಿನ್ನೆಲೆಯಲ್ಲಿ ಮಹಿಳಾ ಮೀಸಲಾತಿ ಚಿಂತನೆ ಬೆಳೆದಿದೆ.

ಮಹಿಳಾ ಮೀಸಲಾತಿ ಚಿಂತನೆಯ ಶುಭಾರಂಭವೋ ಎಂಬಂತೆ ೧೯೯೨ ರಲ್ಲಿ ಸಂವಿಧಾನದ ಅನಚ್ಛೇದ ೭೩.೭೪ ಕ್ಕೆ ತಿದ್ದುಪಡಿ ತಂದು ಸ್ಥಳೀಯ ಆಡಳಿತದಲ್ಲಿ ಆದರೆ ಗ್ರಾಮಪಂಚಾಯತ್ & ನಗರ ಸಭೆಗಳಲ್ಲಿ ಮಹಿಳೆಯರಿಗೆ ಶೇ. ೩೩ ರಷ್ಟು ಮೀಸಲಾತಿ ನೀಡಲಾಯಿತು. ಅದರಲ್ಲೂ ಕರ್ನಾಟಕದಲ್ಲಿ ಸರ್ಕಾರಿ ಸೇವೆ & ಸ್ಥಳೀಯ ಪಂಚಾಯತ್‌ನ ದೇಶದಲ್ಲೇ ಪ್ರಥಮವಾಗಿ ಮಹಿಳೆಯರಿಗೆ ಮೀಸಲಾತಿಯನ್ನು ಒದಗಿಸಲಾಗಿದೆ. ಮಹಿಳಾ ಸಬಲೀಕರಣದ ಇತಿಹಾಸದಲ್ಲಿ ಇದೊಂದು ಉತ್ತಮ ಬೆಳವಣಿಗೆ. ಈ ಬಗೆಯ ಮೀಸಲಾತಿಯಿಂದ ದೇಶದ್ಯಾಂತ ಸಾವಿರಾರು ಮಹಿಳೆಯರು ರಾಜಕೀಯ ಅಧಿಕಾರದ ಕಕ್ಷೆಯೊಳಗೆ ಬಂದರು.

ಇದೇ ಹಿನ್ನೆಲೆಯಲ್ಲಿ ಹಲವಾರು ದಶಕಗಳಿಂದ ಹಲವಾರು ರೂಪಗಳಲ್ಲಿ ಪ್ರಸ್ತಾಪಕ್ಕೆ ಬರುತ್ತಿದ್ದ ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಿಸುವ ಪ್ರಯತ್ನಗಳು ಇದೀಗ ಶಾಸನ ಸಭೆಗಳಲ್ಲಿ ಪ್ರತಿಶತ ೩೩ ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕೆಂಬ ಮಸೂದೆಯ ಮಂಡನೆಯವರೆಗೂ ಬಂದು ನಿಂತಿದೆ.

ಮಸೂದೆಯ ಮುಖ್ಯಾಂಶಗಳು:

* ರಾಜ್ಯ ವಿಧಾನಸಭೆಗಳು & ಲೋಕಸಭೆಯಲ್ಲಿ ಪ್ರತಿಶತ ೩೩ ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕು.

* ಇದರಲ್ಲಿ ೧/೩ ಭಾಗವನ್ನು ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಮೀಸಲಿಡಬೇಕು.

* ಮಸೂದೆಯನ್ನು ಅಂಗೀಕರಿಸಿದ ಸಂದರ್ಭದಲ್ಲಿ ಚಾಲ್ತಿಯಲ್ಲಿರುವ ಲೋಕಸಭೆ & ವಿಧಾನಸಭೆಗಳ ಅವಧಿ ಮುಗಿದ ನಂತರ ಮುಂದಿನ ಅವಧಿಗೆ ಚುನಾಯಿತವಾಗುವ ಸಭೆಗಳಿಗೆ ಈ ಮಸೂದೆ ಅನ್ವಯವಾಗುತ್ತದೆ.

* ಈ ರೀತಿ ಈ ಮೀಸಲಾತಿ ಪ್ರಕ್ರಿಯೆ ಮಹಿಳೆಗೆ ರಾಜಕೀಯ ಪ್ರವೇಶಕ್ಕೆ ಸುಗಮ ಹಾದಿಯನ್ನು ಮಾಡಿಕೊಟ್ಟು ರಾಜಕೀಯವಾಗಿ ಆಕೆಯನ್ನು ಸ್ವಾವಲಂಬನೆಗೊಳಿಸುವ ಉದ್ದೇಶವನ್ನು ಹೊಂದಿದೆ.

ಇದೇ ಕಾರಣಕ್ಕಾಗಿ ಈ ಮೀಸಲಾತಿ ವಿದೇಯಕ

ಹಲವರ ವಿರೋಧವನ್ನು ಎದುರಿಸುತ್ತಿದೆ. ಈ ಮೀಸಲಾತಿಯನ್ನು ವಿರೋಧಿಸುವವರು ಪಂಚಾಯತ್ ವ್ಯವಸ್ಥೆಯಲ್ಲಿ ಬಂದಿರುವ ಟೀಕೆಗಳನ್ನು ಮುಂದಿಡುತ್ತಾರೆ. ಈ ವಿರೋಧಿಗಳು ಪಂಚಾಯತ್ ವ್ಯವಸ್ಥೆಗಳಲ್ಲಿ ಮೀಸಲಾತಿಯಿಂದ ಮಹಿಳೆಯರಲ್ಲಿ ರಾಜಕೀಯ ಪ್ರಜ್ಞೆಯನ್ನು ಬೆಳೆಸಿದಂತೇನೂ ಆಗುವುದಿಲ್ಲ. ಪುರುಷರು ಈಗ ತಮ್ಮ ಬದಲಿಗೆ ತಮ್ಮ ಮನೆಯ ಹೆಂಗಸರನ್ನೇ ಚುನಾವಣೆಗೆ ನಿಲ್ಲಿಸಿ ಅವರು ಗೆದ್ದರೆ ಅವರ ಪರವಾಗಿ ತಾವೇ ಅಧಿಕಾರ ಚಲಾಯಿಸುತ್ತಾರೆ ಎಂಬ ವಾದವನ್ನು ಮುಂದಿಡುತ್ತಾರೆ. ಇದಕ್ಕೆ ಅವರು ಕೆಲವು ಗ್ರಾಮಗಳಲ್ಲಿ ಪಂಚಾಯ್ತಿ ಸಭೆಗೆ ಸದಸ್ಯೆಯರ ಗಂಡಂದಿರೇ ಹಾಸರಾಗಿ ನಿರ್ಣಯಗಳ ಮೇಲೆ ಪ್ರಭಾವ ಬೀರುವುದನ್ನು ಉದಾಹರಣೆಯಾಗಿ ಕೊಡುತ್ತಾರೆ. ಚುನಾಯಿತ ಸದಸ್ಯೆಯರ ಪರವಾಗಿ ಅವರ ಮನೆಯ ಗಂಡಸರು ಆಡಳಿತ ನಡೆಸುವ ಪ್ರಾಕ್ಸಿ ರಾಜಕಾರಣದಿಂದ ಆಗುವ ಪ್ರಯೋಜನವೇನು? ಎಂಬುವುದು ಇವರ ವಾದ.

ಪ್ರಾಕ್ಸಿ ರಾಜಕಾರಣಕ್ಕೆ ಕೆಲವೆಡೆ ಉದಾಹರಣೆಗಳೂ ಇರಬಹುದಾದರು ಉಳಿಗಮಾನ್ಯ ವ್ಯವಸ್ಥೆ ಕುಟುಂಬಗಳಲ್ಲಿ ಇನ್ನೂ ಉಳಿದುಕೊಂಡು ಬಂದಿರುವ ನಮ್ಮ ದೇಶದಲ್ಲಿ ಅದು ಅಚ್ಚರಿಯ ಸಂಗತಿಯಾಗೇನೂ ಕಾಣುವುದಿಲ್ಲ. ಸಮಾಜದಲ್ಲಿ ಧರ್ಮಜಾತಿ, ಜನಾಂಗ ಆಧಾರಿತ ತಾರತಮ್ಯದ ಜೊತೆಗೆ ಸಮಾಜ & ಕುಟುಂಬಗಳಲ್ಲಿ ಲಿಂಗಾಧಾರಿತ ತಾರತಮ್ಯವೂ ಅಗಾಧವಾಗಿದ್ದು ಹೆಣ್ಣೊಬ್ಬಳು ಪಂಚಾಯತ್ ಸದಸ್ಯೆಯಾದ ಮಾತ್ರಕ್ಕೆ ಅದು ದಿಢೀರನೆ ಕಡಿಮೆಯಾಗುವುದಿಲ್ಲ. ಇತಿಹಾಸದುದ್ದಕ್ಕೂ ಸಾಮಾಜಿಕ ವ್ಯವಸ್ಥೆಯಲ್ಲಿ ಅವಳು ಗಂಡಸನ್ನೇ ಅವಲಂಬಿಸುವುದು ರೂಢಿಯಲ್ಲಿರುವಾಗ ಇದ್ದಕ್ಕಿದಂತೆ ಒಂದು ದಿನ ಅವಳು ಅದರಲ್ಲೂ ರಾಜಕೀಯವಾಗಿ ಸ್ವತಂತ್ರಳಾಗುವುದು ಅಸಾಧ್ಯ ಪ್ರಾಕ್ಸಿ ರಾಜಕಾರಣವನ್ನು ವಿರೋಧಿಸುವುದು ಅಗತ್ಯ ಆದರೆ ಈ ಉದಾಹರಣೆ ಕೊಟ್ಟು ಇಡೀ ಮೀಸಲಾತಿಯನ್ನು ಹಳಿಯುವುದಕ್ಕಿಂತ ಮೀಸಲಾತಿಯಿಂದ ಶತಮಾನದಲ್ಲೇ ಮೊದಲ ಬಾರಿಗೆ ಲಕ್ಷಾಂತರ ಹೆಂಗಸರು ರಾಜಕೀಯ ರಂಗ ಪ್ರವೇಶಿಸಲು ಅನುವಾಗಿದ್ದನ್ನು ಮರೆಯಬಾರದು & ಅವರಲ್ಲಿ ಅನೇಕರು ಸ್ವತಂತ್ರವಾಗಿ ಕಾರ್ಯನಿರ್ವಹಣೆ ಮಾಡಲು ಕಲಿಯುತ್ತಿರುವುದನ್ನು ಗಮನಿಸುವುದು ಸೂಕ್ತ.

ಮೀಸಲಾತಿ ವಿರೋಧಿಗಳು ಹೇಳುವಂತೆ "ಹೆಬ್ಬೆಟ್ಟೊತ್ತುವ ಹೆಂಗಸರೆಲ್ಲ" ಪಂಚಾಯತ್ ಆಡಳಿತ ನಡೆಸುವಂತಾಗಿರಬಹುದು. ಆದರೆ ಅದು ಹೆಮ್ಮೆಯ ಸಂಗತಿಯೇ ಆಗಬೇಕು. ಗಂಡಸರು ಹುಟ್ಟುವಾಗಲೇ ರಾಜಕೀಯ ಪ್ರಜ್ಞೆಯನ್ನು ಪಡೆದುಕೊಂಡು ಬಂದಿರುವುದಿಲ್ಲ. ಆಸಕ್ತಿ ಮತ್ತು ಸಿಗುವ ಅವಕಾಶಗಳಿಂದ ಅದನ್ನು ಪಡೆಯುತ್ತಾರೆ ಮತ್ತು ಆಡಳಿತ ನಡೆಸಲು ಕಲಿಯುತ್ತಾರೆ ಎಂಬ ಅಂಶವನ್ನು ಟೀಕಾಕಾರರು ಮರೆಯುತ್ತಾರೆ. ರಾಜಕೀಯ ಪ್ರಕ್ರಿಯೆಗೆ ಮೊದಲ ಬಾರಿಗೆ ಮುಖಾಮುಖಿಯಾಗಿರುವ ಮಹಿಳೆಯರು ಈ ಅವಕಾಶದಿಂದಲೇ ಅದರಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡು ಎಲ್ಲವನ್ನು ಕಾಲಕ್ರಮೇಣ ಕಲಿಯುವ ಸಾಧ್ಯತೆ ಇದೆ.

ಮುಂದಿನ ಪೀಳಿಗೆಯ ಮಹಿಳಾ ರಾಜಕಾರಣಿಗಳು ರಾಜಕೀಯವಾಗಿ ಇನ್ನಷ್ಟು ಪ್ರಜ್ಞಾವಂತರೂ ಆಡಳಿತದಲ್ಲಿ ದಕ್ಷತೆಯುಳ್ಳವರೂ ಆಗಿರುತ್ತಾರೆ ಎಂದು ಇತ್ಯಾತ್ಮಕವಾಗಿ ಯೋಚಿಸಬೇಕು. ಇದಕ್ಕೆ ಕಾರಣವೂ ಇದೆ. ಏಕೆಂದರೆ ದೊರೆತ ಅವಕಾಶಗಳನ್ನು ಸದ್ವಿನಿಯೋಗಪಡಿಸಿಕೊಂಡ ಮೊತ್ತ ಮೊದಲ ಮಹಿಳಾ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ನಮ್ಮ ಕಣ್ಣಮುಂದೆ ಬಂದು ನಿಲ್ಲುತ್ತಾರೆ. ಅವರ ರಾಜಕೀಯ ವೃತ್ತಿಜೀವನದಲ್ಲಿ ಕೆಲವೊಂದು ಋಣಾತ್ಮಕ ಅಂಶಗಳು ಇದ್ದರೂ ಬಡವರ ಪರ ಅವರು ಜಾರಿಗೊಳಿಸಿದ ೨೦ ಅಂಶಗಳ ಕಾರ್ಯಕ್ರಮವನ್ನು ಮರೆಯುವಂತಿಲ್ಲ.

ಒಟ್ಟಾರೆ ಈ ಮೀಸಲಾತಿಯನ್ನು ವಿರೋಧಿಸುವವರಲ್ಲಿ ಈ ಕೆಳಗಿನ ಕೆಲವೊಂದು ಭಯ & ಆತಂಕಗಳಿವೆ.

೧. ಮಹಿಳೆಯರು ಒಂದು ಸಮೂಹವಾಗಿ ಸ್ಥಾಪಿಸಿಕೊಳ್ಳುತ್ತಾರೆ.

೨. ಈಗಾಗಲೇ ಇರುವ ಪುರುಷ ರಾಜಕಾರಣಿಗಳ ಕುಟುಂಬದ ಮಹಿಳೆಯರೇ ಮತ್ತೆ ಅಧಿಕಾರಕ್ಕೆ ಬರುತ್ತಾರೆ.

೩. ಮಹಿಳೆಯರಿಗೆ ರಾಜಕೀಯ ಬುದ್ಧಿ ಇಲ್ಲ & ಅವರು ಆಡಳಿತ ನಡೆಸಲು ಸಮರ್ಥರಲ್ಲ.

೪. ೩೩% ಮೀಸಲಾತಿ ನೀಡುವ ವಿಧೇಯಕ ಪ್ರಗತಿ ವಿರೋಧಿ ಕೌಟುಂಬಿಕ ವ್ಯವಸ್ಥೆಯನ್ನೇ ತಪ್ಪುದಾರಿಗೆ ಎಳೆಯುವ ಶಾಸನ.

೪. ರಾಜಕೀಯ ಪ್ರವೇಶ ಮಹಿಳೆಯ ನೈತಿಕತೆಯ ಅಧಃಪತನ ಇತ್ಯಾದಿ.

ಆದರೆ ಈ ಎಲ್ಲಾ ವಿರೋಧಕ್ಕೆ ಒಡ್ಡುವ ಕಾರಣಗಳು ಕೇವಲ ಮಹಿಳಾ ಸಂದರ್ಭಕಷ್ಟೇ ಉದ್ಭವಿಸುವ ಪ್ರಶ್ನೆಗಳೆಂಬುದನ್ನು ಗಮನಿಸಬೇಕು. ಮಹಿಳೆ ಆಡಳಿತಕ್ಕೆ ಸಮರ್ಥಳಲ್ಲ ಎಂಬ ವಾದದಲ್ಲಿ ಅವಳ ಸಾಮರ್ಥ್ಯವನ್ನು ಅಳೆಯುವವರು ಯಾರು? ಹೀಗೆ ಅಳೆಯುವ ಮಾನದಂಡ ಯಾವುದು ಎನ್ನುವ ಪ್ರಶ್ನೆಗಳನ್ನು ಎತ್ತಬೇಕಾಗುತ್ತದೆ.

ಅಲ್ಲದೆ "೫೦ ವರ್ಷಗಳ ಸುದೀರ್ಘ ಆಡಳಿತಾವಧಿಯಲ್ಲಿ" ಪುರುಷ ರಾಜಕಾರಣಿಗಳು ಮಹತ್ವವಾದದ್ದೇನನ್ನೂ ಸಾಧಿಸಿಲ್ಲ ಎಂಬುವುದನ್ನು ಗಮನಿಸಬೇಕು.

ಮಹಿಳಾ ಮೀಸಲಾತಿ ಅನುಷ್ಠಾನಕ್ಕೆ ಬಂದಲ್ಲಿ ಈಗಿರುವ ಪುರುಷ ರಾಜಕಾರಣಗಳ ಕುಟುಂಬದ ಮಹಿಳೆಯರೇ ಮತ್ತೆ ಅಧಿಕಾರ ಹಿಡಿಯುತ್ತಾರೆ. ಎಂದು ಬೊಬ್ಬೆ ಹಾಕುವ ಇವರು ಪುರುಷ ರಾಜಕಾರಣಿಗಳ ಕುಟುಂಬದ ಮಗ, ಅಳಿಯ, ಸೋದರ, ಭಾವ, ಮೈದುನರು ಅಧಿಕಾರ ನಡೆಸಿದಾಗ ಏಕೆ ಸುಮ್ಮನಾಗುತ್ತಾರೆ? ಅಷ್ಟೇ ಅಲ್ಲದೇ ಮಹಿಳೆಯ ರಾಜಕೀಯ ಪ್ರವೇಶ ದೇಶದ ಅಭಿವೃದ್ಧಿಗೆ ಮಾರಕ, ಕುಟುಂಬ ವ್ಯವಸ್ಥೆಗೆ ದೊಡ್ಡ ಕುಂದು ಎಂಬ ನಿಲುವು ಕೂಡ ಪುರುಷಶಾಹಿ ತನ್ನದೆ ಆಗಿದೆ.

ರಾಜಕೀಯಕ್ಕೆ ಹೋದ ಮಹಿಳೆಯ ನೈತಿಕತೆಯ ಬಗ್ಗೆ ಕೂಡ ಪ್ರಶ್ನಿಸುವವರಿದ್ದಾರೆ. ಆಕೆಯ ಚಾರಿತ್ರ್ಯವಧೆ ಮಾಡಿ ಮಹಿಳೆ ರಾಜಕೀಯಕ್ಕೆ ಹೋದರೆ ಅಲ್ಲಿ ಆಕೆ ಮಾನವಂತಳಾಗಿರಲು ಸಾಧ್ಯವಿಲ್ಲ. ಎಂದು ಹೇಳುತ್ತಾರೆ. ಆದರೆ ನಮ್ಮ ಸಮಾಜದಲ್ಲಿ ಮಹಿಳೆಯರ ವಿಚಾರ ಬಂದಾಗ ಮಾತ್ರ ಏಕೆ ನೈತಿಕತೆಯ, ವಂಶ ಪಾರಂಪರ್ಯದ ಪ್ರಶ್ನೆ ಎದುರಾಗುತ್ತದೆ? ಈ ವಿರೋಧದ ಹಿಂದಿನ ರಾಜಕಾರಣವೇನು? ಎಂಬುವುದನ್ನು ಗಮನಿಸಬೇಕು.

ರಾಜ್ಯಗಳ ವಿಧಾನ ಸಭೆಗಳ & ಸಂಸತ್ತಿನ ಚುನಾವಣೆಗಳಲ್ಲಿ ೩೩% ರಷ್ಟು ಮೀಸಲಾತಿಯನ್ನು ನೀಡಿ ಮಹಿಳೆಯರನ್ನು ರಾಜಕೀಯ ಮುಖ್ಯವಾಹಿನಿಯಲ್ಲಿ ತರುವ ಮಹೋನ್ನತ ಗುರಿಯನ್ನು ಇಟ್ಟುಕೊಂಡು ಸಂಸತ್ತಿನ ಮುಂದೆ ಬಂದ ಸಂವಿಧಾನದ ೮೧ ನೇ ತಿದ್ದುಪಡಿ ಎದುರಿಸುತ್ತಿರುವ ವಿರೋಧ ಮತ್ತು ಅದರ ಹಿಂದಿನ "ರಾಜಕಾರಣ" ನಮ್ಮ ವ್ಯವಸ್ಥೆಯಲ್ಲಿ ಮಹಿಳೆಯ ಪ್ರಗತಿಯ ವಿಚಾರ ಕೇವಲ ಬಾಯಿ ಮಾತಿನದು ಎಂಬುದನ್ನು ಅನೇಕ ರೀತಿಯಲ್ಲಿ ಹೇಳುತ್ತಿದೆ. ಮಸೂದೆಗೆ ತೊಡಕಾಗಿರುವ ಟೀಕೆಗಳು & ವಿರೋಧಗಳನ್ನು ಗಮನಿಸಿದರೆ ಅವುಗಳ ಉದ್ದೇಶ ಏನೆಂಬುದು ಸ್ಪಷ್ಟವಾಗುತ್ತದೆ. ಅವು ತಾತ್ವಿಕ ನೆಲೆಗಟ್ಟಿನ ಟೀಕೆಗಳು & ವಿರೋಧಗಳಲ್ಲ ಎಂಬುದು ಮೇಲ್ನೋಟಕ್ಕೆ ತಿಳಿಯುತ್ತದೆ.

ಮಹಿಳಾ ಸಂಬಂಧ ವಿಚಾರಗಳು ಪರಿಹಾರ ಕಾಣಲು ಹಾಗೂ ಮಹಿಳಾ ಸಬಲೀಕರಣದಂತಹ ಯೋಜನೆಗಳು ಅನುಷ್ಠಾನಗೊಳ್ಳಲು ರಾಜಕೀಯ ಕ್ಷೇತ್ರದಲ್ಲಿ ಸ್ತ್ರೀಯರ ಪ್ರಾತಿನಿಧ್ಯ ಹೆಚ್ಚಬೇಕು. & ಸಮರ್ಥ ಪ್ರತಿನಿಧೀಕರಣ ದಾಖಲಾಗಬೇಕು. ಈ ನೆಲೆಯಲ್ಲಿ ಮೀಸಲಾತಿ ಅತ್ಯಂತ ಅವಶ್ಯಕವಾಗಿದೆ. ಮೀಸಲಾತಿ ಮಸೂದೆಯ ಮಂಡನೆಯ ಬಳಿಕ ಸಂಸತ್ತಿನ ಉಭಯ ಸದನಗಳಲ್ಲಿ ಚರ್ಚೆ ನಡೆಯಲು ಅವಕಾಶವಿದೆ. ಪ್ರತಿಯೊಂದು ರಾಜಕೀಯ ಪಕ್ಷಕ್ಕೆ, ಸಂಸದರಿಗೆ ತಮ್ಮ ಅಭಿಪ್ರಾಯ ಮಂಡಿಸಲು ಅವಕಾಶವಿದೆ. ಸೂಕ್ತ ತಿದ್ದುಪಡಿ ಪರಿಹಾರ ರೂಪಿಸುವ ಹಕ್ಕಿದೆ. ಹೀಗಿರುವಾಗ ಮಹಿಳಾ ಮೀಸಲಾತಿ ಮಸೂದೆ ಮಂಡನೆಗೂ ಅವಕಾಶ ಕೊಡದೆ ತಡೆಹಿಡಿಯುವ ಅಗತ್ಯವಿದೆಯೇ?

ವಿಧಾನಸಭೆ & ಲೋಕಸಭೆಗಳಲ್ಲಿ ಮಹಿಳೆಯರಿಗೆ ೧/೩ ಸ್ಥಾನಗಳ ಮೀಸಲಾತಿ ಕೊಡುವುದರಿಂದ ಮಹಿಳೆಯರ ಎಲ್ಲ ಸಂಕಷ್ಟಗಳೂ ಪರಿಹಾರವಾಗಿ ಅವರ ಸ್ಥಾನಮಾನ ಸುಧಾರಣೆಯಾಗುತ್ತದೆ. ರಾಜಕೀಯ ರಂಗದ ಕಲ್ಮಶವೆಲ್ಲ ದೂರವಾಗಿ ಅದು ನಳನಳಿಸುತ್ತದೆ ಎಂಬ ಭ್ರಮೆಗಳು ಬೇಡ. ರಾಜಕೀಯದಲ್ಲಿ ಮಹಿಳೆಯರಿಗೆ ಮೀಸಲಾತಿಯಿಂದ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದರೂ ಅವರಿಗೇ ಸಿಕ್ಕದೇ ಹೋಗಿರುವ ಪ್ರಾತಿನಿಧ್ಯವನ್ನು ಮಾತ್ರ ಕಾನೂನಿನ ನೆರವಿನಿಂದ ದೊರಕಿಸಿ ಕೊಟ್ಟಂತಾಗುತ್ತದೆ. & ಅಸಮಾನತೆಯನ್ನು ಸ್ವಲ್ಪ ಮಟ್ಟಿಗಾದರೂ ನಿವಾರಿಸಿದಂತಾಗುತ್ತದೆ ಅಷ್ಟೇ. ಮೀಸಲಾತಿ ಮಹಿಳೆಯರ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಅಲ್ಲ ಆದರೆ ಪರಿಹಾರ ಹುಡುಕಲು ಒಂದು ವಿಧಾನ ಮಾತ್ರ, ಆದರಿಂದ ನಿರೀಕ್ಷಿಸಿರುವುದು ಸಾಮಾಜಿಕ ನ್ಯಾಯವನ್ನೇ ಹೊರತು ಸಾಮಾಜಿಕ ಪರಿವರ್ತನೆಯನ್ನಲ್ಲ.

ನಮ್ಮ ರಾಜಕೀಯ ವ್ಯವಸ್ಥೆಯ ಮಾರ್ಪಾಡಿಗೆ ಮಹಿಳೆಯರು & ಪುರುಷರಿಬ್ಬರು ಪ್ರಬುದ್ಧ & ಸೈದ್ಧಾಂತಿಕ ನೆಲೆಯ ರಾಜಕೀಯ ಚಿಂತನೆ & ಪ್ರಯತ್ನ ನಡೆಸುವುದು ಅತ್ಯಗತ್ಯ ಮಹಿಳೆಯರಿಗೆ ಸಮಾನತೆ ಕೇಳುವಾಗ ಮೀಸಲಾತಿ ಅನ್ನುವುದು ಸಮಾನತೆಯ ದಾರಿಯಲ್ಲಿ ಇಡುವ ಒಂದು ಹೆಜ್ಜೆ. ಆದ್ದರಿಂದ ಮಹಿಳೆಯರಿಗೆ ಮೀಸಲಾತಿ ಕೊಡುವುದರಿಂದ ಅಸಮಾನತೆ ಕಡಿಮೆಯಾಗಿ ಅದರಿಂದ ನಮ್ಮ ಸಾಮಾಜಿಕ ರಾಜಕೀಯ ರಂಗಗಳಲ್ಲಿ ಒಟ್ಟಾರೆ ನಮ್ಮ ಸಮಾಜದಲ್ಲಿ ಆಗುವ ಒಳ್ಳೆಯ ಪರಿಣಾಮಗಳನ್ನು ಪ್ರಧಾನವಾಗಿ ಗಮನಿಸುವುದು ಅಗತ್ಯ. ತಾತ್ವಿಕ ಲಾಭವನ್ನೇ ಮುಖ್ಯವಾಗಿ ಗುರುತಿಸಿ, ಮಿಕ್ಕ ಲೋಪದೋಷಗಳನ್ನು ಕಾಲಕ್ರಮೇಣ ನಿವಾರಿಸಿಕೊಳ್ಳಲು ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಮರಗಿಡಗಳನ್ನು ಎಣಿಸುತ್ತಾ ಹೋಗಿ ಒಟ್ಟು ಕಾಡಿನ ನೋಟವನ್ನು ಕಳೆದುಕೊಂಡಂತಾಗುತ್ತದೆ. □

(ಸೆಪ್ಟಂಬರ್ ೩೦ರಂದು ಮಿಲಾಗ್ರಿಸ್ ಕಾಲೇಜು ಕಲ್ಯಾಣಪುರದಲ್ಲಿ ನಡೆದ "ಅಭಿವೃದ್ಧಿ ಯೋಜನೆಗಳು ಮತ್ತು ವಂಚಿತ ವರ್ಗಗಳು" ಎಂಬ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಮಂಡಿಸಲ್ಪಟ್ಟ ಪ್ರಬಂಧ)

ಮೊಟ್ಟೆ ರಾಜಕಾರಣ: ಅಲ್ಪಸಂಖ್ಯಾತರು v/s ಬಹುಜನ ಸಮಾಜ

ವೈ ಮರಿಸ್ವಾಮಿ

ಮತಾಂತರ ನಿಷೇಧ, ಭಯೋತ್ಪಾದನೆ ನಿರ್ಮೂಲನೆ ಹಾಗೂ ಗೋಹತ್ಯ ನಿಷೇಧಕ್ಕಾಗಿ ಹಿಂದುಗಳನ್ನು ಒಗ್ಗೂಡಿಸಲು ಈ ಕಾರ್ಯಕ್ರಮಗಳನ್ನು ನಡೆಸುತ್ತಿರುವುದಾಗಿ ಚೆಡ್ಡಿಗಳು ಸಮರ್ಥಿಸಿಕೊಳ್ಳುತ್ತಿದ್ದಾರೆ. ಧಾರ್ಮಿಕ ಸ್ವಾತಂತ್ರ್ಯವು ಭಾರತದ ಸಂವಿಧಾನದ ಮೂಲ ಭೂತ ಹಕ್ಕುಗಳಲ್ಲೊಂದಾಗಿದ್ದು, ಅದನ್ನು ಕಿತ್ತುಕೊಳ್ಳಲು ಸಂಘಪರಿವಾರ ನಡೆಸುತ್ತಿರುವ ಚಟುವಟಿಕೆಗಳು ಸಂವಿಧಾನ ವಿರೋಧಿ ಚಟುವಟಿಕೆಗಳಾಗಿವೆ. ಭಯೋತ್ಪಾದನೆಯ ನಿರ್ಮೂಲನೆಗಾಗಿ ಗಂಟಲು ಹರಿದುಕೊಳ್ಳುತ್ತಿರುವ ಚೆಡ್ಡಿಗಳೇ ಭಾರತದ ಮುಸ್ಲಿಮ್ ಮತ್ತು ಕ್ರೈಸ್ತ ಬಾಂಧವರಲ್ಲಿ ಭಯವನ್ನು ಉತ್ಪಾದಿಸುವ ಕುಲುಮೆಗಳಾಗಿದ್ದಾರೆ. ಗೋಹತ್ಯೆ ನಿಷೇಧಕ್ಕಾಗಿ ಒತ್ತಾಯಿಸುತ್ತಿರುವ ಸಂಘಪರಿವಾರದ ಕಿಡಿಗೇಡಿಗಳು ಭಾರತದ ವೈವಿಧ್ಯಮಯ ಸಂಸ್ಕೃತಿ, ಆಚಾರ ವಿಚಾರ, ಆಹಾರ ಹಾಗೂ ಸಾಮರಸ್ಯದ ಬದುಕಿಗೆ ಕೊಳ್ಳಿಯಿಡುವ ರಾಷ್ಟ್ರವಿರೋಧಿ ಕೃತ್ಯಗಳಲ್ಲಿ ತೊಡಗಿದ್ದಾರೆ.

ಕೋಮುವಾದಿ-ಜಾತಿವಾದಿ ಪಕ್ಷಗಳ ಖತರ್‌ನಾಕ್ ಮೈತ್ರಿಯ 'ಕೋಜಾ' ಸರ್ಕಾರದ ದಾಂಧಲೆಯಲ್ಲಿ ಕರ್ನಾಟಕದಲ್ಲಡೆ ಅರಾಜಕತೆ ತಾಂಡವವಾಡುತ್ತಿದೆ. ಕೋಮುಗಲಭೆಗಳು-ಜಾತಿ ದೌರ್ಜನ್ಯಗಳು ದಿನನಿತ್ಯದ ಸುದ್ದಿಗಳಾಗಿವೆ. ವಿರಾಟ್ ಹಿಂದೂ ಸಮಾಜೋತ್ಸವದ ಕಾರ್ಯಕ್ರಮಗಳು ಸರ್ಕಾರದ ಅಧಿಕೃತ ಕಾರ್ಯಕ್ರಮಗಳಂತೆ ಕಂಗೊಳಿಸುತ್ತಿವೆ. ಸಂಘಪರಿವಾರದ ಎರಡನೇ ಸಂಚಾಲಕ ಹಾಗೂ ಪರಮತ ದ್ವೇಷದ ವಿಕೃತ ಚಿಂತಕ ಗೋಳ್ವಾಲ್ಕರನ ಜನ್ಮಶತಮಾನೋತ್ಸವವೆಂಬ ಹಿಂದೂ ರಕ್ತರಾಜಕಾರಣದ ಬ್ಯಾನರ್‌ಗಳಲ್ಲಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್, ಬಸವಣ್ಣ, ಭಗತ್‌ಸಿಂಗ್, ಕನಕದಾಸರಂಥ ಹಿಂದುತ್ವ ವಿರೋಧಿ ಸಮಾಜ ಪರಿವರ್ತನಕಾರರ ಭಾವಚಿತ್ರಗಳನ್ನು ಎಗ್ಗಿಲ್ಲದೆ ಬಳಸಿಕೊಳ್ಳಲಾಗುತ್ತಿದೆ. ಮತಾಂತರ ನಿಷೇಧ, ಭಯೋತ್ಪಾದನೆ ನಿರ್ಮೂಲನೆ ಹಾಗೂ ಗೋಹತ್ಯ ನಿಷೇಧಕ್ಕಾಗಿ ಹಿಂದುಗಳನ್ನು ಒಗ್ಗೂಡಿಸಲು ಈ ಕಾರ್ಯಕ್ರಮಗಳನ್ನು ನಡೆಸುತ್ತಿರುವುದಾಗಿ ಚೆಡ್ಡಿಗಳು ಸಮರ್ಥಿಸಿಕೊಳ್ಳುತ್ತಿದ್ದಾರೆ. ಧಾರ್ಮಿಕ ಸ್ವಾತಂತ್ರ್ಯವು ಭಾರತದ ಸಂವಿಧಾನದ ಮೂಲಭೂತ ಹಕ್ಕುಗಳಲ್ಲೊಂದಾಗಿದ್ದು, ಅದನ್ನು ಕಿತ್ತುಕೊಳ್ಳಲು ಸಂಘಪರಿವಾರ ನಡೆಸುತ್ತಿರುವ ಚಟುವಟಿಕೆಗಳು ಸಂವಿಧಾನ ವಿರೋಧಿ ಚಟುವಟಿಕೆಗಳಾಗಿವೆ. ಭಯೋತ್ಪಾದನೆಯ ನಿರ್ಮೂಲನೆಗಾಗಿ ಗಂಟಲು ಹರಿದುಕೊಳ್ಳುತ್ತಿರುವ ಚೆಡ್ಡಿಗಳೇ ಭಾರತದ ಮುಸ್ಲಿಮ್ ಮತ್ತು ಕ್ರೈಸ್ತ ಬಾಂಧವರಲ್ಲಿ ಭಯವನ್ನು ಉತ್ಪಾದಿಸುವ ಕುಲುಮೆಗಳಾಗಿದ್ದಾರೆ. ಗೋಹತ್ಯೆ ನಿಷೇಧಕ್ಕಾಗಿ ಒತ್ತಾಯಿಸುತ್ತಿರುವ ಸಂಘಪರಿವಾರದ ಕಿಡಿಗೇಡಿಗಳು ಭಾರತದ ವೈವಿಧ್ಯಮಯ ಸಂಸ್ಕೃತಿ, ಆಚಾರ ವಿಚಾರ, ಆಹಾರ ಹಾಗೂ ಸಾಮರಸ್ಯದ ಬದುಕಿಗೆ ಕೊಳ್ಳಿಯಿಡುವ ರಾಷ್ಟ್ರವಿರೋಧಿ ಕೃತ್ಯಗಳಲ್ಲಿ ತೊಡಗಿದ್ದಾರೆ. ಸಂವಿಧಾನದ ಕೇಂದ್ರ ಬಿಂದುವಾಗಿರುವ ಜಾತ್ಯತೀತ ಪರಿಕಲ್ಪನೆಗೆ ಗಂಡಾಂತರ ವೊಡ್ಡಿದ್ದಾರೆ. ಪ್ರಜಾಪ್ರಭುತ್ವದ ಮೂಲಧ್ಯೇಯೋದ್ದೇಶಗಳಿಗೆ ಕಂಟಕಪ್ರಾಯರಾಗಿದ್ದಾರೆ.

ಸಂಘಪರಿವಾರದ ಪುಂಡಪೋಕರಿಗಳು ಇಷ್ಟೆಲ್ಲಾ ರಾದ್ಧಾಂತಗಳನ್ನು ಸೃಷ್ಟಿಸುತ್ತಿದ್ದರೂ ಕರ್ನಾಟಕದ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಇದ್ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳದೆ ಹಳ್ಳಿಗಳಲ್ಲಿ ವಾಸ್ತವ್ಯ ಮಾಡುತ್ತ ಗಡದ್ದಾಗಿ ನಿದ್ರೆ ಮಾಡುತ್ತಿದ್ದಾರೆ. ಗೃಹ ಮಂತ್ರಿ ಎಂ.ಪಿ. ಪ್ರಕಾಶ್‌ರವರು ದೇವೇಗೌಡರ ಕುಟುಂಬ ರಾಜಕಾರಣದಲ್ಲಿ ಬೃಹನ್ನಳೆಯಾಗಿ ಸಮಾಜಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ. ಕಾನೂನು ಸುವ್ಯವಸ್ಥೆಯ ಉಸ್ತುವಾರಿಗಳನ್ನು ಸಂಘಪರಿವಾರದ ಸುಪರ್ದಿಗೆ ವಹಿಸಿಬಿಟ್ಟಿದ್ದಾರೆ. ಸಂತೋಷ್ ಹೆಗ್ಡೆ ಎಂಬ ಲೋಕಾಯುಕ್ತರು-ಭ್ರಷ್ಟ ಅಧಿಕಾರಿಗಳ ಮೇಲೆ ರೈಡ್ ಮಾಡುವ, ಅವರನ್ನು ಶಿಕ್ಷಿಸುವ ಹಕ್ಕು ಲೋಕಾಯುಕ್ತಕ್ಕಿಲ್ಲ ಎಂದು ಘೋಷಿಸುವುದರ ಮೂಲಕ 'ಕೋಜಾ' ಸರ್ಕಾರದ ಪರಮಭ್ರಷ್ಟ ಅಧಿಕಾರಿಗಳಲ್ಲಿ ರೋಮಾಂಚನವುಂಟು ಮಾಡುತ್ತಿದ್ದಾರೆ. ಪ್ರತಿಗಾಮಿ ಮಠಾಧೀಶರು ಸರ್ಕಾರದ ವಕ್ತಾರರಾಗಿದ್ದಾರೆ. ವೈದಿಕ ವಕ್ರಬುದ್ಧಿಯ ಸಂಕೇತವಾಗಿರುವ ಪೇಜಾವರ ಸ್ವಾಮಿಯಂಥ ಕ್ರಿಮಿನಲ್‌ಗಳು ತಮಗಾಗದವರ ತಲೆತೆಗೆಯಲು ಸುಪಾರಿಕೊಡುವ ಮಟ್ಟಕ್ಕೆ ಬೆಳೆದಿದ್ದಾರೆ. ಇವರಿಗೆ ಎಸ್ಕಾರ್ಟ್ ಆಗಿ ಯಡಿಯೂರಪ್ಪನಂಥ ಉಪಮುಖ್ಯಮಂತ್ರಿಯೇ ಖುದ್ದಾಗಿ ನಿಂತಿದ್ದಾರೆ!

ಕರ್ನಾಟಕದ ಪ್ರಸ್ತುತ ಸಂದರ್ಭವನ್ನು ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡು ಸಮಾಜದ ಎಲ್ಲಾ ರಂಗಗಳಲ್ಲಿ ವೈದಿಕಶಾಹಿ ಆಚರಣೆಗಳನ್ನು ತುರುಕುವ ಷಡ್ಯಂತ್ರ ನಡೆಯುತ್ತಿದೆ. ಇಲ್ಲಿನ ಬಹುಮುಖಿ ಸಂಸ್ಕೃತಿಯ ಮೇಲೆ ಬ್ರಾಹ್ಮಣರ ಯಜಮಾನ್ಯ ಸಂಸ್ಕೃತಿಯನ್ನು ಹೇರುವ ಹುನ್ನಾರವೇ ವಿರಾಟ್ ಹಿಂದೂ ಸಮಾಜೋತ್ಸವ. ಬ್ರಾಹ್ಮಣ ಸಾಮಾಜಿಕ ವ್ಯವಸ್ಥೆಯನ್ನು ನಿರಂತರವಾಗಿ ಧಿಕ್ಕರಿಸುತ್ತಲೇ ಬಂದಿರುವ ದಲಿತ, ಆದಿವಾಸಿ ಹಾಗೂ ಇತರೆ ಹಿಂದುಳಿದ ಜಾತಿಗಳನ್ನು ಹಿಂದುತ್ವದ ಹೆಸರಿನಲ್ಲಿ ಬಲವಂತದಿಂದ ಬ್ರಾಹ್ಮಣ್ಯದ ತೆಕ್ಕೆಯಲ್ಲಿ ತರುವ ಪ್ರಯತ್ನವೇ ವಿರಾಟ್ ಹಿಂದೂ ಸಮಾಜೋತ್ಸವ. ಚೆಡ್ಡಿಗಳ ಪರಮತ ದ್ವೇಷದ ಕುಲುಮೆಯಲ್ಲಿ ಪಳಗಿದ ಬಾಯಿಬಡುಕರು, ಪ್ರತಿಗಾಮಿ ಮಠಾಧೀಶರು ಹಾಗೂ ರಾಜಕಾರಣಿಗಳು ವೈಧಿಕ ಧರ್ಮದ ಹಾಗೂ ಸಂಸ್ಕೃತಿಯ ವೈಭವೀಕರಣ ಮಾಡುವುದರ ಮುಖಾಂತರ ಶ್ರಮ ಸಂಸ್ಕೃತಿಯ ಬಹುಜನರಲ್ಲಿ ಮಾನಸಿಕ, ಸಾಂಸ್ಕೃತಿಕ ಕೀಳರಿಮೆಯನ್ನು ಭಿತ್ತಿ, ಹುಸಿ ಹಿಂದುತ್ವದ ಭಾವನೆಯನ್ನು ಮೂಡಿಸುವ ಬ್ರೈನ್‌ವಾಶ್ ನಡೆಯುತ್ತಿದೆ. ಭವಿಷ್ಯದಲ್ಲಿ ಅವರೆಂದೂ ವೈಧಿಕಶಾಹಿಯ ಕ್ರೌರ್ಯದ ವಿರುದ್ಧ ಸಿಡಿದೇಳದಂತೆ ನಿರ್ವೀರ್ಯರನ್ನಾಗಿ ಮಾಡಲು ಅವರ ಜಾತಿ ಐಡೆಂಟಿಟಿ ಮತ್ತು ಸಮಾಜೋ-ಸಾಂಸ್ಕೃತಿಕ ಅಸ್ತಿತ್ವವನ್ನು ಅಳಿಸಿ ಹಾಕುವ ಕುತಂತ್ರ ನಡೆಯುತ್ತಿದೆ. ಅದರ ಒಂದು ಭಾಗವೇ-ಶಾಲೆಗಳಲ್ಲಿ ಮಕ್ಕಳಿಗೆ ಮೊಟ್ಟೆ ಬದಲು ಹಾಲು ಕೊಡಬೇಕೆಂಬ ವಿತಂಡವಾದವಾಗಿ ಎದ್ದು ಬಂದಿದೆ.

ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟದ ಜೊತೆಗೆ ಮೊಟ್ಟೆಯನ್ನು ವಿತರಿಸಬೇಕೆಂಬ ಕೇಂದ್ರ ಸರ್ಕಾರದ ಯೋಜನೆಯುನ್ನು ಶತಾಯುಗತಾಯು ಮಣ್ಣು ಮುಕ್ಕಿಸಲು,

ಸಮಾಜದ ವಿವಿಧ ಸ್ತರಗಳಲ್ಲಿ ವಿವಿಧ ರಂಗಗಳಲ್ಲಿ ಬಹುಕೃತ ವೇಷಗಳಲ್ಲಿದ್ದ ಮನುವಾದಿಗಳು ಮೊಟ್ಟೆ ಬೇಡವೆಂದು ಕೋಳಿ ಜಗಳಕ್ಕಿಳಿದರು. ಮನುವಾದಿಗಳ ಆಸೆ ಆಮಿಷಗಳಿಗೆ ಬಲಿಯಾಗಿ ನವ ಮನುವಾದಿಗಳಾಗಿ ಮತಾಂತರಗೊಂಡಿರುವ ವಿಶ್ವ ಬಸವ ಧರ್ಮಸಭಾ, ಅಖಿಲ ಭಾರತ ವೀರಶೈವ ಮಹಾಸಭಾ, ಬಸವ ಸಮಿತಿ, ಬಸವ ಧರ್ಮಪೀಠದಂಥ ವಿವಿಧ ಲಿಂಗಾಯತ ಸಮಘಟನೆಗಳ ಮುಖಂಡರು-ಮಠಾಧೀಶರು ಹಾಗೂ ಸ್ವತಹ ಮಾಂಸಹಾರಿ ಮೊಟ್ಟೆ ಸಂಸ್ಕೃತಿಯಿಂದ ಬಂದ ಆದಿಚುಂಚನಗಿರಿಯ ಮಠಾಧೀಶರು ಹಿಂದುತ್ವದ ಪರ ವಕಾಲತ್ತುವಹಿಸಿ ಮೊಟ್ಟೆ ರಾಜಕಾರಣಕ್ಕಿಳಿದು ತಮ್ಮ ಬೌದ್ಧಿಕ ದಿವಾಳಿತನಕ್ಕೆ ಸಾಕ್ಷಿಯಾದರು. ತಾವು ಹುಟ್ಟಿನಿಂದ ಶೂದ್ರರಾಗಿದ್ದರೂ ಆಯ್ಕೆಯಿಂದ ಮನುಸಂತಾನಕ್ಕೆ ಸೇರಿದವರೆಂದು ನಿರೂಪಿಸಿದರು. ನಿರೂಪಿಸುತ್ತಿದ್ದಾರೆ.

ಕೋಳಿತತ್ತಿ ಬೇಡವೆಂದು ಮನುವಾದಿಗಳು ಮತ್ತು ಅವರ ಚೇಲಾಗಳು ಕೋಳಿ ಜಗಳಕ್ಕೆ ನಿಂತಾಗ ಮೈಕೊಡವಿಕೊಂಡು ಎದ್ದುನಿಂತ ಪ್ರಿಂಟ್ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮದ ಸುದ್ದಿ ಶೂರರೂ, ನಾಲ್ಕು ಜನ ಮತಿಗೆಟ್ಟ ತಲೆತಿರುಕರು ಒದರಿದ್ದನ್ನು ಊಸಿದ್ದನ್ನು ಬಹುಜನರ ಅಭಿಪ್ರಾಯವನ್ನಾಗಿಸಲು ತಿಣುಕಾಡುತ್ತಿದ್ದಾರೆ. ಮೊಟ್ಟೆ ಬೇಕೆಂದು ಸಹಸ್ರಾರು ಜನ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಮೂಲೆಗುಂಪು ಮಾಡುತ್ತಿದ್ದಾರೆ. ಈ ಮನುವಾದಿ ಮಾಧ್ಯಮಗಳ ಪುಕ್ಕಟೆ ಪ್ರಚಾರ ಪಡೆಯಲೆಂದೇ ಮುಖರಹಿತ ವ್ಯಕ್ತಿಗಳು-ಸಂಘಟನೆಗಳು ಪೈಪೋಟಿಗೆ ಬಿದ್ದಂತೆ ಮೊಟ್ಟೆಗಿಂತ ಹಾಲೇ ಶ್ರೇಷ್ಠ ಎಂದು ಫರ್ಮಾನು ಹೊರಡಿಸುತ್ತಿದ್ದಾರೆ.

ಆಹಾರದ ಆಯ್ಕೆಯ ವಿಷಯ ಅವರವರ ವೈಯಕ್ತಿಕ ವಿವೇಚನೆಗೆ ಬಿಟ್ಟ ವಿಚಾರ. ಅದು ವ್ಯಕ್ತಿಯ ಸ್ವಾತಂತ್ರ್ಯವೂ ಹೌದು. ಒಬ್ಬರ ಆಹಾರ ಪದ್ಧತಿಯನ್ನು ಇನ್ನೊಬ್ಬರ ಮೇಲೆ ಹೇರಲು ಪ್ರಯತ್ನಿಸುವುದು ಸ್ವಾತಂತ್ರ್ಯದ ಅಪಹರಣವಾಗುತ್ತದೆ. ಸಾಂಸ್ಕೃತಿಕ ದೌರ್ಜನ್ಯವಾಗುತ್ತದೆ. ಸಂವಿಧಾನ ವಿರೋಧಿ ಕೃತ್ಯವಾಗುತ್ತದೆ. ಬಹುಮುಖಿ ಸಂಸ್ಕೃತಿಯ ಸಮಾಜದಲ್ಲಿ ಒಬ್ಬರು ಇನ್ನೊಬ್ಬರ ಆಹಾರ ಪದ್ಧತಿಯನ್ನು ಗೌರವಿಸಬೇಕಾಗುತ್ತದೆ. ಇತರರಿಗೆ ಅವಮಾನ ಮಾಡುವುದನ್ನೇ ಗೌರವವೆಂದು ಭ್ರಮಿಸಿಕೊಂಡಿರುವ ಸನಾತನಿಗಳು ಮೊಟ್ಟೆಗಿಂತ ಹಾಲೇ ಶ್ರೇಷ್ಠ ಎಂದು ಹೀಗಳೆಯುವುದರ ಮೂಲಕ ವೈಜ್ಞಾನಿಕ ಸತ್ಯವನ್ನೇ ಅಲ್ಲಗಳೆಯುವ ಹೀನಮಟ್ಟಕ್ಕಿಳಿಯುತ್ತಿದ್ದಾರೆ.

<u>ಯಾವುದು ಮೇಲು?</u>

ಜೀವಸತ್ವದ ಪ್ರಮಾಣ ಪ್ರತಿ ೧೦೦ ಗ್ರಾಂಗೆ

ಮೊಟ್ಟೆ – ೧೦ ಗ್ರಾಂ

ಹಾಲು – ೩.೨ ಗ್ರಾಂ

ಬಾಳೆಹಣ್ಣು – ೧ಗ್ರಾಂ

<u>ಜೀವಸತ್ವ ಬಳಕೆ ಪ್ರಮಾಣ</u>

ಮೊಟ್ಟೆ – ಶೇ. ೧೦೦

ಮಾಂಸ – ಶೇ. ೮೦

ಹಾಲು – ಶೇ. ೭೫

<u>ಉತ್ಪಾದನೆಯಾಗುವ ಕ್ಯಾಲರಿ</u>

ಮೊಟ್ಟೆ – ೧೬೧೬ ಕಿಲೋ

ಆಹಾರ ಪದ್ಧತಿಯನ್ನು ಇನ್ನೊಬ್ಬರ ಮೇಲೆ ಹೇರಲು ಪ್ರಯತ್ನಿಸುವುದು ಸ್ವಾತಂತ್ರ್ಯದ ಅಪಹರಣವಾಗುತ್ತದೆ. ಸಾಂಸ್ಕೃತಿಕ ದೌರ್ಜನ್ಯವಾಗುತ್ತದೆ. ಸಂವಿಧಾನ ವಿರೋಧಿ ಕೃತ್ಯವಾಗುತ್ತದೆ. ಬಹುಮುಖಿ ಸಂಸ್ಕೃತಿಯ ಸಮಾಜದಲ್ಲಿ ಒಬ್ಬರು ಇನ್ನೊಬ್ಬರ ಆಹಾರ ಪದ್ಧತಿಯನ್ನು ಗೌರವಿಸಬೇಕಾಗುತ್ತದೆ. ಇತರರಿಗೆ ಅವಮಾನ ಮಾಡುವುದನ್ನೇ ಗೌರವವೆಂದು ಭ್ರಮಿಸಿಕೊಂಡಿರುವ ಸನಾತನಿಗಳು ಮೊಟ್ಟೆಗಿಂತ ಹಾಲೇ ಶ್ರೇಷ್ಠ ಎಂದು ಹೀಗಳೆಯುವುದರ ಮೂಲಕ ವೈಜ್ಞಾನಿಕ ಸತ್ಯವನ್ನೇ ಅಲ್ಲಗಳೆಯುವ ಹೀನಮಟ್ಟಕ್ಕಿಳಿಯುತ್ತಿದ್ದಾರೆ.

ವೈಜ್ಞಾನಿಕ ಸಂಶೋಧನೆಯ ಪ್ರಕಾರ ಮೊಟ್ಟೆ ಹಾಲಿಗಿಂತ ನಾಲ್ಕುಪಟ್ಟು ಪ್ರೋಟೀನನ್ನು ಒದಗಿಸುವ ತಾಕತ್ತಿನ ಆಹಾರ. ಅದು ಕೋಲಿನ್, ವಿವಿಧ ಖನಿಜ ಹಾಗೂ ವಿಟಮಿನ್‌ಗಳನ್ನು ಒಳಗೊಂಡ ಬಡವರ ಆರೋಗ್ಯವರ್ಧಕ ಖನಿಜದ ಗಣಿ ಕಣ್ಣಿನ ಆರೋಗ್ಯಕ್ಕೆ ಅತ್ಯಗತ್ಯವಾಗಿ ಬೇಕಾದ ವಿಟಮಿನ್ ‘ಎ’ ಮೊಟ್ಟೆಯಲ್ಲಿದೆ. ರಕ್ತ ವೃದ್ಧಿ ಮಾಡುವ ಕಬ್ಬಿಣದ ಅಂಶ ಅದರಲ್ಲಿದೆ. ಮಾಂಸ ಖಂಡಗಳು ದಷ್ಟಪುಷ್ಟವಾಗಿ ಬೆಳೆಯಲು ಬೇಕಾದ ಸಸಾರಜನಿಕವನ್ನು ಅದು ಒಳಗೊಂಡಿದೆ. ಬಹುಜನ ಸಮಾಜದ ಶ್ರಮಿಕ ವರ್ಗದ ಮಕ್ಕಳಲ್ಲಿ ಪೌಷ್ಟಿಕಾಂಶದ ಕೊರತೆಯಿದೆ. ಜಾಗತೀಕರಣದ ಪರಿಣಾಮವಾಗಿ ತ್ವರಿತಗತಿಯಲ್ಲಿ ಬದಲಾಗುತ್ತಿರುವ ಆರ್ಥಿಕ ಕಾರಣಗಳಿಂದಾಗಿ ಮಧ್ಯಮ ವರ್ಗವೂ ಕೂಡ ಬಡತನದ ರೇಖೆಗಿಂತ ಕೆಳಗೆ ಸ್ಥಾನಪಲ್ಲಟಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಜನರ ಖರೀದಿಸುವ ಶಕ್ತಿ (ಪರ್ಚೇಸಿಂಗ್ ಪವರ್) ದಿನೇ ದಿನೇ ಕುಗ್ಗುತ್ತಿದೆ. ಮಟನ್, ಚಿಕನ್ ಜೊತೆಗೆ ದನದ ಮಾಂಸವೂ ದುಬಾರಿಯಾಗಿರುವುದರಿಂದ ಅಗ್ಗದ ದರದಲ್ಲಿ ದೊರೆಯುವ ಏಕೈಕ ಪೌಷ್ಟಿಕ ಆಹಾರ ಮೊಟ್ಟೆಯಾಗಿ ಚಾಲ್ತಿಯಲ್ಲಿದೆ. ವೈಜ್ಞಾನಿಕವಾಗಿ ಆರ್ಥಿಕವಾಗಿ ಮೊಟ್ಟೆ ಹಾಲಿಗಿಂತಲೂ ಉತ್ತಮವಾದ ಆಹಾರವಾಗಿದೆ.

ಯಾವ ದೃಷ್ಟಿಯಿಂದ ನೋಡಿದರೂ ಹಾಲು ಮತ್ತು ಬಾಳೇ ಹಣ್ಣಿಗಿಂತ ಮೊಟ್ಟೆ ಉಪಯುಕ್ತವಾದ ಶಕ್ತಿಶಾಲಿ ಆಹಾರವಾಗಿದೆ. ಆದುದರಿಂದಲೇ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ನಡೆಸಿದ ಸಮೀಕ್ಷೆ ಪ್ರಕಾರ ೫೩ ಲಕ್ಷ ವಿದ್ಯಾರ್ಥಿಗಳಲ್ಲಿ ೪೯.೫೦ ಲಕ್ಷ ವಿದ್ಯಾರ್ಥಿಗಳು ಮೊಟ್ಟೆ ಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕೇವಲ ೩.೫ ಲಕ್ಷ ಮಕ್ಕಳು ಮಾತ್ರ ಮೊಟ್ಟೆ ತಮ್ಮ ಆಹಾರ ಪದ್ಧತಿ ಅಲ್ಲ ಎಂದು ತಿಳಿಸಿದ್ದಾರೆ. ಕೇವಲ ಆದರೆ ಊಟದ ಜೊತೆ ಇತರೆ ಮಕ್ಕಳಿಗೆ ಮೊಟ್ಟೆ ವಿತರಿಸುವುದು ಬೇಡ ಎಂದು ಅವರು ವಿರೋಧ ವ್ಯಕ್ತಪಡಿಸಿಲ್ಲ ಎಂಬುದು ಮೆಚ್ಚತಕ್ಕ ವಿಷಯವಾಗಿದೆ. ಯಾವುದೇ ಪೂರ್ವಗ್ರಹ ಪೀಡಿತ ಯೋಚನೆಗಳಿಲ್ಲದೆ ಮೊಟ್ಟೆ ಪರವಾಗಿ ಮಕ್ಕಳು ಅಭಿಮತ ವ್ಯಕ್ತಪಡಿಸಿದರೂ ಸಹ ಚಂಡಿಹಿಡಿವ ಮಕ್ಕಳಂತೆ ಮೊಟ್ಟೆ ವಿತರಣೆ ಬೇಡವೇ ಬೇಡ ಎಂದು ಫತ್ವಾ ಹೊರಡಿಸುವ ಅಧಿಕಾರವನ್ನು ಪ್ರತಿಗಾಮಿ ಮಠಾಧೀಶರಿಗೆ, ‘ಕೋಜಾ’ ಸರ್ಕಾರದ ಪ್ರತಿನಿಧಿಗಳಿಗೆ ಕೊಟ್ಟವರಾರು? ಇವರಿಗೆ ಬಹುಜನ ಸಮಾಜದ ಮಕ್ಕಳ ಆರೋಗ್ಯ ಮುಖ್ಯವೇ ಅಥವಾ ಕರ್ಮಠರ ಗೊಡ್ಡು ಸಂಪ್ರದಾಯ ಮುಖ್ಯವೇ?

ಮಕ್ಕಳಿಗೆ ಮೊಟ್ಟೆ ಕೊಡುವುದನ್ನು ವಿರೋಧಿಸುವ ಭರದಲ್ಲಿ ತರುಣಸಾಗರ ಎನ್ನುವ ವೃದ್ಧನಂತೆ ಕಾಣುವ ದಿಗಂಬರ ಜೈನಮುನಿ, ಕೆಳಸ್ತರದ ಬೆವರಿನ ಸಂಸ್ಕೃತಿಯ ಜನರ ಆಹಾರ ಪದ್ಧತಿಯನ್ನು ವಿಕೃತ ಎಂದು ಘೋಷಿಸಿದ್ದಾನೆ. ಮೊಟ್ಟೆ ತಿನ್ನುವವರು ವೀರಪ್ಪನ್ ರೀತಿ ಬೆಳೆಯುತ್ತಾರೆ. ಎಂದಿದ್ದಾನೆ. ಮೊಟ್ಟೆ-ಮಾಂಸ ತಿನ್ನುವವರೆಲ್ಲಾ ಕ್ರೂರಿಗಳು, ಹಾಲು-ಹಣ್ಣು ಸೇವಿಸುವವರೆಲ್ಲಾ ಸಾತ್ವಿಕ ಗುಣದ ಶಾಂತಿಪ್ರಿಯರೆಂದು ಠಸ್ಸೆ ಹೊಡೆಯುವ ತುರುಣಸಾಗರನಂಥವರು-ಅಮಾನುಷವಾದ ಜಾತಿಪದ್ಧತಿಯನ್ನು ಹುಟ್ಟುಹಾಕಿದವರನ್ನು ಏನೆಂದು ಕರೆಯುತ್ತಾರೋ? ಜೈನ ಧರ್ಮದ ಈತನ ಅನುಯಾಯಿಗಳು ಬಡ್ಡಿದಂಧೆಯಂಥ ವ್ಯಾಪಾರವಹಿವಾಟುಗಳಲ್ಲಿ ಬಡಜನರ ರಕ್ತಹೀರುವ ತಿಗಣೆಗಳಾಗಿದ್ದರೂ, ಸಾತ್ವಿಕರಾಗಿಯೇ ಈತನಿಗೆ ಕಾಣುತ್ತಿದ್ದಾರೆ. ಏಕೆಂದರೆ ಅವರು ಹಾಲುಹಣ್ಣು ಸೇವಿಸುವ ಸಾತ್ವಿಕಗುಣದ ಪರಂಪರೆಗೆ ಸೇರಿದವರಲ್ಲವೇ? ಒಂದು ವೇಳೆ ಮಾಂಸಹಾರಿಗಳು ಕ್ರೂರಿಗಳಾಗಿದ್ದಿದ್ದರೇ ತರುಣಸಾಗರ ಮತ್ತಾತನ ಸಂತತಿಯವರು ಈ ನೆಲದಲ್ಲಿ ಜೀವಂತವಾಗಿರಲು ಸಾಧ್ಯವಾಗುತ್ತಿತ್ತೇ? ಸಾಧ್ಯವಾಗಿದ್ದರೂ ಅವರೂ ಸಹ ಈತನಂತೆಯೇ ದಿಗಂಬರರಾಗಿರಬೇಕಾಗುತ್ತಿತ್ತು! ಬಹುಜನರ ಆಹಾರ ಪದ್ಧತಿಯ ಬಗ್ಗೆ ಕುಹಕವಾಡುವ ಈತನಂಥ ಶಾಖಾಹಾರಿ ಆಹಾರ ಪದ್ಧತಿಯ ತಣ್ಣನೆಯ ಕ್ರೂರಿಗಳು ಮೊಟ್ಟೆಯಿಂದ ಉತ್ಪಾದನೆಯಾದ ಟೂಥ್‌ಪೇಸ್ಟ್-ಬೇಕರಿ ತಿನಿಸುಗಳನ್ನು ಉಪಯೋಗಿಸುವುದಿಲ್ಲವೇ?

ಶಾಲೆಗಳಲ್ಲಿ ಮಧ್ಯಾಹ್ನದ ಊಟದ ಜೊತೆ ಮೊಟ್ಟೆ ಸೇರಿಸಿದರೆ ಸಸ್ಯಾಹಾರಿಗಳಿಗೆ ಪ್ರತ್ಯೇಕಶಾಲೆಗಳನ್ನು ತೆರೆಯಬೇಕಾಗುತ್ತದೆಂದು ಬವ್ವ ಬಿಡುವ ಪೇಜಾವರ, ಇದರಿಂದ ಮಕ್ಕಳಲ್ಲಿ ಭೇದಭಾವ ಸೃಷ್ಟಿಸಿದಂತಾಗುತ್ತದೆ ಎಂದು ಸರ್ಕಾರವನ್ನು ಎಚ್ಚರಿಸಿದ್ದಾರೆ. ತಳಸಮುದಾಯದ ಮಕ್ಕಳ ಪರವಾಗಿ ಅವರಿಗೆ ಎರಡು ಪ್ರಶ್ನೆಗಳನ್ನು ಕೇಳುತ್ತೇನೆ. ೧. ಈ ಯೋಜನೆ ದಲಿತ ಮತ್ತು ಶೂದ್ರ ಸಮುದಾಯದ ಮಕ್ಕಳು ಓದುವ ಸರ್ಕಾರಿ ಶಾಲೆಗಳಿಗೆ ಸಂಬಂಧಿಸಿದ್ದು. ಇವುಗಳಲ್ಲಿ ಹವ್ಯಕ-ಬನಿಯಾ-ಮಾರ್ವಾಡಿ ಜನಾಂಗದ ಎಷ್ಟು ಲಕ್ಷ ಮಕ್ಕಳಿದ್ದಾರೆ? ೨. ಊಟದ ಜೊತೆ ಮೊಟ್ಟೆ ಸೇರಿಸಿದರೆ ಮಕ್ಕಳಲ್ಲಿ ಭೇದಭಾವ ಸೃಷ್ಟಿಸಿದಂತಾದರೆ, ಈಗಾಗಲೇ ಜಾತಿಪದ್ಧತಿಯ ಮೇಲೆ ಸಮಾಜವನ್ನು ಛಿದ್ರಗೊಳಿಸಿರುವ ಹಿಂದುತ್ವದ ಬುನಾದಿಯಾಗಿರುವ ಮನುಧರ್ಮಶಾಸ್ತ್ರವನ್ನು ಯಾಕೆ ಅಪ್ಪಿಕೊಂಡಿರುವಿರಿ?

ಭಾರತೀಯ ಸಮಾಜದಲ್ಲಿ ಶೇ. ೮೫ರಷ್ಟು ಜನ ಮಾಂಸಹಾರಿಗಳಾಗಿದ್ದಾರೆ. ಆದರೆ ಅವರೆಂದೂ ಅಲ್ಪಸಂಖ್ಯಾತ ಸಸ್ಯಾಹಾರಿಗಳ ಮೇಲೆ ತಮ್ಮ ಆಹಾರಪದ್ಧತಿಯನ್ನು ಒತ್ತಾಯಪೂರ್ವಕವಾಗಿ ಪ್ರತಿಷ್ಠಾಪಿಸಲು ಪ್ರಯತ್ನಿಸಿಲ್ಲ. ಆದರೆ ಇದೇ ಸಾತ್ವಿಕ ಗುಣದ ಸಸ್ಯಾಹಾರಿ ಸಿರಿಸಂಪನ್ನರು ಸಹಸ್ರಾರು ವರ್ಷಗಳಿಂದ ಶೇ. ೮೫ ರಷ್ಟಿರುವ ಬಹುಜನರಿಗೆ ವಿದ್ಯೆ, ಉದ್ಯೋಗ, ಒಡೆತನದ ಅಧಿಕಾರ

(೧೯ನೇ ಪುಟಕ್ಕೆ)

ಹಿಂದೂ ಸಮಾಜೋತ್ಸವ:
ವಿಕಾರ ವಿರಾಟ್ ಸ್ವರೂಪ

ವಡ್ಡಗೆರೆ ನಾಗರಾಜಯ್ಯ

ನೆಲದ ಸಂಸ್ಕೃತಿಯ ಕಣ್ಣುಗಳಂತಿರುವ ಮತ್ತು ಭಾರತೀಯ ವೈಚಾರಿಕ ಪರಂಪರೆಯ ಕ್ಷಿತಿಜವನ್ನು ಆಧ್ಯಾತ್ಮದ ಪ್ರಕಾರ ಬೆಳಕಿನಿಂದ ವಿಸ್ತರಿಸಿದ ಬುದ್ಧ, ಬಸವ, ಅಂಬೇಡ್ಕರ್, ಕನಕದಾಸ, ಲೋಹಿಯಾ, ಪೆರಿಯಾರ್, ಮಹಾವೀರ, ಸ್ವಾಮಿ ವಿವೇಕಾನಂದ ಮುಂತಾದ ಬಂಡುಕೋರ ಸಾಮಾಜಿಕ ಸಾಂಸ್ಕೃತಿಕ ನಾಯಕರ, ದಾರ್ಶನಿಕರ ಚಿತ್ರಗಳು ಶಂಕರಾಚಾರ್ಯ, ಹೆಡಗೇವಾರ್, ಗೋಳ್ವಲ್ಕರ್, ವೀರ ಸಾವರ್ಕರ್ ಮುಂತಾದ ಹಿಂದೂ ಧರ್ಮವನ್ನು ಅರ್ಥಾತ್ ವೈದಿಕ ಪುರೋಹಿತಶಾಹಿಯನ್ನು ಪುನರುಜ್ಜೀವನಗೊಳಿಸಿದ ನಾಯಕರ ಚಿತ್ರಗಳೊಂದಿಗೆ ಇಡೀ ತುಮಕೂರು ನಗರದ ತುಂಬ ರಾರಾಜಿಸುತ್ತಿದ್ದವು! ಹಾಗೂ ಇವರೆಲ್ಲರೂ ಹಿಂದೂ ಧರ್ಮವನ್ನು ಪುನರುತ್ಥಾನಗೊಳಿಸಿದ ಧಾರ್ಮಿಕ ನಾಯಕರುಗಳಾಗಿ ಸಮಾವೇಶದ ಭಾಷಣಗಳಲ್ಲಿ ವ್ಯಾಖ್ಯಾನಗೊಂಡರು.

ಇತ್ತೀಚೆಗೆ ಇಡೀ ದೇಶಾದ್ಯಂತ ಆರ್.ಎಸ್.ಎಸ್.ನ. ಎರಡನೆ ಸರಸಂಘ ಚಾಲಕನಾದ ಮಾಧವ ಸದಾಶಿವ ಗೋಳ್ವಲ್ಕರ್‌ನ ಜನ್ಮಶತಮಾನೋತ್ಸವದ ಹೆಸರಿನಲ್ಲಿ ವಿರಾಟ್ ಹಿಂದೂ ಸಮಾಜೋತ್ಸವ ಸಮಾವೇಶಗಳು, ಶೋಭಾ ಯಾತ್ರೆಗಳು ತಾರಕಕ್ಕೇರಿವೆ. ಹಳ್ಳಿಗಾಡಿನ ಗ್ರಾಮೀಣ ಮುಗ್ಧರೂ ಸಹ ಬಲಪಂಥೀಯ ಹಿಂದೂ ರಾಜಕಾರಣದ ಪುನರುತ್ಥಾನಕ್ಕಾಗಿ ಮತ್ತು ಹಿಂದೂ ಧರ್ಮವನ್ನು ಭಾರತದ ಏಕಮೇವ ಸರ್ವಾಧಿಕಾರಿ ಧರ್ಮವನ್ನಾಗಿ ರೂಪಿಸಲು ತೊಡಗಿದ ಸಿಪಾಯಿಗಳಂತೆ ಕೆಂಪು ತಿಲಕ ಧರಿಸಿ-ಲಾಠಿ ತಿರುಗಿಸುವ ತಾಲೀಮು ನಡೆಸತೊಡಗಿದ್ದಾರೆ. ಪರಸ್ಪರ ಸೌಹಾರ್ದ ಭಾವನೆಯಿಂದ ಒಬ್ಬಳೇ ತಾಯಿಯ ಮಕ್ಕಳಂತೆ ಕೂಡಿ ಬಾಳುತ್ತಿದ್ದ ಭಿನ್ನ ಧರ್ಮೀಯರು ಪರಸ್ಪರ ಅಪನಂಬಿಕೆ ಅಸಹಿಷ್ಣುತೆ, ವೈರ ಭಾವನೆಗಳಿಂದ ದೂರ ಸರಿಯತೊಡಗಿದ್ದಾರೆ. ಸಮಾನತೆ, ಐಕ್ಯತೆ, ಭ್ರಾತೃತ್ವ, ಸಹಬಾಳ್ವೆ, ಸಹಿಷ್ಣುತೆ, ಮುಂತಾದ ಮಾನವೀಯ ಮೌಲ್ಯಗಳೇ ಹೂವಾಗಿ ಅರಳಿ ಘಮಘಮಿಸುತ್ತಿದ್ದ ಅವರ ಶಾಂತಿಯ ತೋಟ ಕಮರಿ ಹೋಗುತ್ತಿದೆ!

ರಾಜಕೀಯ ಮತ್ತು ಧರ್ಮ ಪರಸ್ಪರ ಮೇಳೈಸಿಕೊಂಡು ನೆಣಿದಾಟಕ್ಕೆ ಬಿದ್ದರೆ ಏನಾಗಬಹುದು? ಹಾಗೂ ಈಗಾಗಲೇ ಆಕ್ರಮಣಕಾರಿ ವೈದಿಕ ಸಂಸ್ಕೃತಿಯ ದಾಳಿಗಳಿಂದ ಗಾಯಗೊಂಡು ನರಳುತ್ತಿರುವ ತಳಸಮುದಾಯಗಳು ಮತ್ತು ಅಲ್ಪಸಂಖ್ಯಾತರ ಸಾಂಸ್ಕೃತಿಕ ಬದುಕಿನ ಮೇಲೆ ಹಿಂದುತ್ವ ಹೆಸರಿನಲ್ಲಿ ಎಳೆಯುವ ಬ್ರಾಹ್ಮಣ್ಯದ ಬರೆಗಳು ಎಂತಹ ಸ್ವರೂಪದ ರಣಗಾಯಗಳನ್ನು ಮಾಡಬಹುದೆಂಬುದಕ್ಕೆ ಹಿಂದೂ ನಾಯಕರು ಮತ್ತು ರಾಜಕಾರಣಿಗಳ ಜಂಟಿ ಪ್ರಾಯೋಜಕತ್ವದಲ್ಲಿ ಕಳೆದ ಡಿಸೆಂಬರ್ ೨೪ ರಂದು ತುಮಕೂರಿನಲ್ಲಿ ನಡೆದ 'ವಿರಾಟ್ ಹಿಂದೂ ಸಮಾಜೋತ್ಸವ' ಒಂದು ಘೋರ ರೂಪಕದಂತಿತ್ತು.

ಹಿಂದೂ ಸಮಾಜೋತ್ಸವದಲ್ಲಿ ಈ ಬಡಿಗೆಗೇನು ಕೆಲಸ?

ನೆಲದ ಸಂಸ್ಕೃತಿಯ ಕಣ್ಣುಗಳಂತಿರುವ ಮತ್ತು ಭಾರತೀಯ ವೈಚಾರಿಕ ಪರಂಪರೆಯ ಕ್ಷಿತಿಜವನ್ನು ಆಧ್ಯಾತ್ಮದ ಪ್ರಕಾರ ಬೆಳಕಿನಿಂದ ವಿಸ್ತರಿಸಿದ ಬುದ್ಧ, ಬಸವ, ಅಂಬೇಡ್ಕರ್, ಕನಕದಾಸ, ಲೋಹಿಯಾ, ಪೆರಿಯಾರ್, ಮಹಾವೀರ, ಸ್ವಾಮಿ ವಿವೇಕಾನಂದ ಮುಂತಾದ ಬಂಡುಕೋರ ಸಾಮಾಜಿಕ ಸಾಂಸ್ಕೃತಿಕ ನಾಯಕರ, ದಾರ್ಶನಿಕರ ಚಿತ್ರಗಳು ಶಂಕರಾಚಾರ್ಯ, ಹೆಡಗೇವಾರ್, ಗೋಳ್ವಲ್ಕರ್, ವೀರ ಸಾವರ್ಕರ್ ಮುಂತಾದ ಹಿಂದೂ ಧರ್ಮವನ್ನು ಅರ್ಥಾತ್ ವೈದಿಕ ಪುರೋಹಿತಶಾಹಿಯನ್ನು ಪುನರುಜ್ಜೀವನಗೊಳಿಸಿದ ನಾಯಕರ ಚಿತ್ರಗಳೊಂದಿಗೆ ಇಡೀ ತುಮಕೂರು ನಗರದ ತುಂಬ ರಾರಾಜಿಸುತ್ತಿದ್ದವು! ಹಾಗೂ ಇವರೆಲ್ಲರೂ ಹಿಂದೂ ಧರ್ಮವನ್ನು ಪುನರುತ್ಥಾನಗೊಳಿಸಿದ ಧಾರ್ಮಿಕ ನಾಯಕರುಗಳಾಗಿ ಸಮಾವೇಶದ ಭಾಷಣಗಳಲ್ಲಿ ವ್ಯಾಖ್ಯಾನಗೊಂಡರು. ಸಂಘ ಪರಿವಾರದ ಹಿಂದುತ್ವ ರಾಜಕಾರಣ ಮೊದಲಿನಿಂದಲೂ ಇಂತಹ ಐತಿಹಾಸಿಕ ಜನಪರ ನಾಯಕರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ ತಂತ್ರವನ್ನು ಅನುಸರಿಸುತ್ತಲೇ ಬಂದಿದೆ.

ಹಿಂದೂ ಧರ್ಮದ ಅನಿಷ್ಟಗಳು ಮತ್ತು ಕೆಡುಕುಗಳನ್ನೆಲ್ಲಾ ಬಯಲು ಮಾಡುವ ಮೂಲಕ ಹಿಂದೂ ಧರ್ಮವನ್ನು ಅಪರಾಧಿ ಸ್ಥಾನದಲ್ಲಿರಿಸಿ, ಸಾಮಾಜಿಕ ನ್ಯಾಯದ ಕಟಕಟೆಗೆ ನಿಲ್ಲಿಸಿ ವಿಶ್ವಮಟ್ಟದಲ್ಲಿ ಛೀಮಾರಿ ಹಾಕಿದ್ದ ನಾಯಕರುಗಳನ್ನೆಲ್ಲಾ ಹಿಂದೂ ಧರ್ಮದ ಮುಕುಟಮಣಿಗಳೆಂದು ಸಮಾವೇಶದಲ್ಲಿ ಕೊಂಡಾಡುತ್ತಿದ್ದ ಯಾವ ಭಾಷಣಕಾರನೂ ಸಹ ಒಮ್ಮೆಯಾದರೂ ಈ ಎಲ್ಲಾ ಕ್ರಾಂತಿಕಾರಿ ದಾರ್ಶನಿಕರ ಕೃತಿಗಳನ್ನು ತಿರುವಿ ನೋಡಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದು. ಸ್ವಾಮಿ ವಿವೇಕಾನಂದರು "Mind you neither these rascals of priests nor their fore-fathers have seen a Volume of Vedas for the last 400 Generations" ಎಂದು ಆಕ್ರೋಶಭರಿತ ಮಾತುಗಳಲ್ಲಿ ಪುರೋಹಿತಶಾಹಿಗಳನ್ನು ಖಂಡಿಸಿರುವುದು ಕೇವಲ ವಿಡಂಬನೆಗಾಗಿ ಅಲ್ಲವೆನ್ನಿಸುತ್ತದೆ. (Vivekananda: The Complete Works: Vol8. pp 290)

ಇದಕ್ಕಿಂತಲೂ ಮುಖ್ಯವಾಗಿ ಸಿದ್ಧಗಂಗಾ ಮಠದ ಡಾ॥ ಶಿವಕುಮಾರ ಸ್ವಾಮೀಜಿ, ಚಿತ್ರದುರ್ಗದ ಕೋಡಿಹಳ್ಳಿ ಆದಿಜಾಂಬವ ಬೃಹನ್ಮಠದ ಶ್ರೀ ರುದ್ರಾಕ್ಷಿಮುನಿ ದೇಶೀಕೇಂದ್ರ ಸ್ವಾಮೀಜಿ, ತುಮಕೂರು ರಾಮಕೃಷ್ಣಾಶ್ರಮದ ಸ್ವಾಮಿ ವೀರೇಶಾನಂದ, ಸ್ವಯಂ ಘೋಷಿತ

ಕ್ರಾಂತಿಕಾರಿ ಜೈನಮುನಿ ತರುಣಸಾಗರ ಮುಂತಾದ ಸ್ವಾಮೀಜಿಗಳು ಮಧ್ಯಾಹ್ನದ ಬ್ರಾಹ್ಮಣರಾಗಿ ವೇದಿಕೆ ಮೇಲೆ ವಿಜೃಂಭಿಸುತ್ತಿದ್ದುದು 'ಅಬ್ಬರಾಟ್' ಹಿಂದು ಸಮಾಜೋತ್ಸವದ ಬಹುದೊಡ್ಡ ಸಾಂಸ್ಕೃತಿಕ ಲೋಪವೇ ಸರಿ.

ವೈದಿಕ ಪುರೋಹಿತಶಾಹಿ ಶೋಷಣೆ ವಿರುದ್ಧ ಸಮಾಜದಲ್ಲಿರುವ ಜಾತಿ ವ್ಯವಸ್ಥೆ, ಕೋಮುವಾದ, ಅನಕ್ಷರತೆ, ಅಂಧಶ್ರದ್ಧೆ ಮುಂತಾದ ಅನಿಷ್ಟಗಳ ವಿರುದ್ಧ ಮತ್ತು ಕೋಮುವಾದಿ ರಾಜಕಾರಣದ ವಿರುದ್ಧ ಮತ್ತು ಕೋಮುವಾದಿ ರಾಜಕಾರಣದ ವಿರುದ್ಧ ಪ್ರಬಲ ಪ್ರತಿಭಟನೆಯ ದನಿಯನ್ನು ದಾಖಲಿಸಬೇಕಾದ ವೀರಶೈವ, ಶೂದ್ರ ಮತ್ತು ದಲಿತ ಮಠಾಧೀಶರು ಬಿಜೆಪಿ ರಾಜಕಾರಣಿಗಳಿಗಿಂತಲೂ ಅಪಾಯಕಾರಿಯಾಗಿ ಮಾತನಾಡುತ್ತಾ ಸಮಾಜ ಪರಿವರ್ತನೆಯ ದಾರಿಯಲ್ಲಿ ನಿವಾರಿಸಲಾಗದ ಅಡಚಣೆಯಾಗಿ ಪರಿಣಮಿಸುತ್ತಿರುವುದು ಸಂಸ್ಕೃತಿಯ ಯಾವ ನಡಿಗೆಯನ್ನು ತೋರಿಸುತ್ತದೆ? ಆ ದಿನ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಪ್ರತಿಯೊಬ್ಬ ಸ್ವಾಮೀಜಿಯ ಮಾತುಗಳಲ್ಲಿಯೂ ಹಿಂದೂ ರಾಷ್ಟ್ರ ನಿರ್ಮಾಣದ ಪರಿಕಲ್ಪನೆ ಮತ್ತು ಹಿಂದೂ ಸಾಂಸ್ಕೃತಿಕ ರಾಷ್ಟ್ರೀಯತೆಯ ಪರಿಕಲ್ಪನೆ ವ್ಯಕ್ತವಾಯಿತೇ ಹೊರತು ಅಲ್ಪಸಂಖ್ಯಾತರನ್ನು, ದಲಿತರನ್ನು ಆದಿವಾಸಿಗಳನ್ನು ಒಳಗೊಳ್ಳುವ ಸಂಯುಕ್ತ ರಾಷ್ಟ್ರೀಯತೆಯ ಮಾನವೀಯ ಪರಿಕಲ್ಪನೆ ವ್ಯಕ್ತವಾಗಲೇ ಇಲ್ಲ. ಹಿಂದುತ್ವದ ಗುತ್ತಿಗೆ ಪಡೆದಿರುವ ಆರ್.ಎಸ್.ಎಸ್. ಬಜರಂಗದಳ, ಶಿವಸೇನೆ, ವಿಶ್ವ ಹಿಂದೂ ಪರಿಷತ್, ಎಬಿವಿಪಿ, ಬಿಜೆಪಿ, ಮುಂತಾದ ಹಿಂದೂ ವಾದಿಗಳ ಬ್ರಾಹ್ಮಣ ಯಾಜಮಾನ್ಯದ ಧಾರ್ಮಿಕ ರಾಜಕಾರಣವನ್ನು ಈ ಮಠಾಧಿಪತಿಗಳು ಸಮರ್ಥಿಸಿಕೊಂಡಿದ್ದು ಮಾತ್ರ ದುರದೃಷ್ಟಕರ ಸಂಗತಿ.

ಈ ನಡುವೆ ಎಂ.ಎಸ್. ಗೋಳ್ವಲ್ಕರ್ ಜನ್ಮ ಶತಮಾನೋತ್ಸವ ಸಮಿತಿ ಸದಸ್ಯನಾಗಿರುವ ಪ್ರೊ॥ ಮುಮ್ತಾಝ್ ಅಲಿಖಾನ್ ಎನ್ನುವ ಮುಸ್ಲಿಂ ಬ್ರಾಹ್ಮಣನೊಬ್ಬ ಗೋವು ಹಿಂದೂ ಧರ್ಮದ ಪವಿತ್ರ ಪ್ರತೀಕ, ಗೋವಧೆಯನ್ನು ಖುರಾನ್ ಕೂಡ ಸಮರ್ಥಿಸಿಲ್ಲ. ಆದ್ದರಿಂದ ಗೋವಧೆ ಥರವಲ್ಲ 'ಎಂದು' ಅಭಿಪ್ರಾಯಿಸುವ ಮೂಲಕ ಅತ್ಯಂತ ಅಗ್ಗದ ಬೆಲೆಗೆ ದೊರಕುವ ಪೌಷ್ಠಿಕವಾದ ದನದ ಬಾಡನ್ನು (ಗೋವು?!) ತಿನ್ನಬಾರದೆಂದು ಪರಂಪರಾನುಗತವಾಗಿ ಬಂದ ಶ್ರಮಜೀವಿಗಳ ಆಹಾರ ಸಂಸ್ಕೃತಿಯನ್ನು ಪಲ್ಲಟಿಸಿ ಬ್ರಾಹ್ಮಣರ ಪುಳಿಚಾರು ಸಂಸ್ಕೃತಿಯನ್ನು ಹೇರಲು ಪ್ರಯತ್ನಿಸುತ್ತಾರೆ. (ಕುರಿಕೋಳಿಗೆ ಹೆಚ್ಚು ದುಡ್ಡು ತರಲಾರದ ಬಡವರ ಪಾಲಿಗೆ ದನದ ಬಾಡು ಬಿಟ್ಟರೆ ಪುಳಿಚಾರೇ ಗತಿ ತಾನೆ?) ಈ ಮನುಷ್ಯ ಯಾವ ಪ್ರಮಾಣದಲ್ಲಿ ಬ್ರಾಹ್ಮಣ್ಯ ಅಳವಡಿಸಿಕೊಂಡಿದ್ದಾರೆಂದರೆ ಹಿಂದೂವಾದಿಗಳು 'ಮಂದಿರ'ವನ್ನು ಬಾಬ್ರಿಮಸೀದಿ ಕೆಡವಿದ ನಿವೇಶನದಲ್ಲೇ ಕಟ್ಟುತ್ತೇವೆ' ಎಂದರೆ ಈತನೂ ಗೋಣು ತೂಗುತ್ತಾ "ಹೌದು ಆರ್ಯ ಶ್ರೇಷ್ಠ ಶ್ರೀ ರಾಮ ಹುಟ್ಟಿದ್ದು ಅಲ್ಲೇ ಆದುದರಿಂದ ಮಂದಿರ ನಿರ್ಮಾಣದ ಕಾರ್ಯದಲ್ಲಿ ಮುಸ್ಲಿಮರೂ ದುಡಿಯೋಣ ಬನ್ನಿ" ಎನ್ನುತ್ತಾರೆ.

ಬ್ರಾಹ್ಮಣ ಪರಂಪರೆಯ ಮಠಗಳ ಮಾದರಿಯಲ್ಲಿಯೇ ಡಾ॥ ಶಿವಕುಮಾರ ಸ್ವಾಮೀಜಿಯ ಗುರುಗಳಾದ ಉದ್ದಾನ ಶಿವಯೋಗಿಗಳು ಸ್ವಾತಂತ್ರ್ಯ ಪೂರ್ವ ೧೯೧೭ರಷ್ಟೊತ್ತಿಗಾಗಲೇ ಸಿದ್ಧಗಂಗಾಮಠದಲ್ಲಿ ೪೦ ವಿದ್ಯಾರ್ಥಿಗಳುಳ್ಳ ಸಂಸ್ಕೃತ ಶಾಲೆಯನ್ನು ಪ್ರಾರಂಭಿಸುವ ಮೂಲಕ ವೀರಶೈವ ಮಠವನ್ನು ಬ್ರಾಹ್ಮಣೈಕರಿಸಿ ವೇದಾಧ್ಯಯನ,

ದೇವಾಲಯ ವಿರೋಧಿಗಳಾಗಿಯೂ ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಲೇ ಕೋಮುಶಕ್ತಿಗಳನ್ನು ಮಟ್ಟಹಾಕಿದ ವಚನಕಾರರ ಬಂಡುಕೋರ ಆಧ್ಯಾತ್ಮ ಪರಂಪರೆ ಡಾ॥ ಶಿವಕುಮಾರ ಸ್ವಾಮೀಜಿಗೆ ಅರ್ಥವಾಗುತ್ತಿಲ್ಲವೋ? ಅಥವಾ ಗಾಂಧೀಜಿ, ಅಂಬೇಡ್ಕರ್, ನೆಲ್ಸನ್ ಮಂಡೇಲಾ ಮುಂತಾದ ನಾಯಕರು ಸಾಮ್ರಾಜ್ಯಶಾಹಿಗಳಾದ ಬ್ರಿಟಿಷರ ಇಂಗ್ಲಿಷ್ ಭಾಷೆಯನ್ನು ಕಲಿತುಕೊಂಡು, ಅದೇ ಭಾಷೆಯ ಅಸ್ತ್ರದಿಂದ ಬ್ರಿಟಿಷ್ ಪ್ರಭುತ್ವವನ್ನು ಎದುರಿಸಿದ ರೀತಿಯೇ ಬ್ರಾಹ್ಮಣರ ಸಂಸ್ಕೃತವನ್ನು ಶೂದ್ರರಿಗೆ ಕಲಿಸುವ ಮೂಲಕ ಸಂಸ್ಕೃತ ಭಾಷೆಯ ಅಸ್ತ್ರದಿಂದ ಬ್ರಾಹ್ಮಣರನ್ನು ಎದುರಿಸುವಂತಹ ಸಾಂಸ್ಕೃತಿಕ ಸೇನೆಯೊಂದನ್ನು ಕಟ್ಟುವ ಉದ್ದೇಶವಿದೆಯೋ? ಬಹುಶಃ ಮೇಲಿನ ಎರಡೂ ಅಂಶಗಳನ್ನು ಡಾ॥ ಶಿವಕುಮಾರ ಸ್ವಾಮೀಜಿಯಿಂದ ನಿರೀಕ್ಷಿಸಲು ಸಾಧ್ಯವಿಲ್ಲ.

ಸಂಸ್ಕೃತ ವ್ಯಾಕರಣವನ್ನು ಕಲಿಸುವ ವೈದಿಕ ಕೈಂಕರ್ಯಕ್ಕೆ ಮುನ್ನುಡಿ ಬರೆಯಲಾಗಿತ್ತು. ೧೯೩೦ರ ಆರಂಭದಲ್ಲಿ ಪಟ್ಟಾಧಿಕಾರವಹಿಸಿಕೊಂಡ ಡಾ॥ ಶಿವಕುಮಾರ್ ಸ್ವಾಮೀಜಿ ಸಂಸ್ಕೃತ ಕಲಿಸುವ ತಮ್ಮ ಗುರುಗಳ ಪರಂಪರೆಯನ್ನು ಅತ್ಯಂತ ಶ್ರದ್ಧೆಯಿಂದ ಮುಂದುವರೆಸಿದರು. ವೀರಶೈವ ಧರ್ಮದ ಅಧ್ವೈರ್ಯಗಳಾದ ಬಸವಣ್ಣ, ಅಲ್ಲಮಪ್ರಭು ಅಕ್ಕ ಮಹಾದೇವಿ ಮುಂತಾದ ಶರಣರು ಸಂಸ್ಕೃತ ಕಲಿತೇ ಮಾನವ ಘನತೆಯ ವೈಚಾರಿಕ ಕ್ರಾಂತಿಗೆ ತೊಡಗಿಕೊಂಡರೇನು?

ದೇವಾಲಯ ವಿರೋಧಿಗಳಾಗಿಯೂ ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಲೇ ಕೋಮುಶಕ್ತಿಗಳನ್ನು ಮಟ್ಟಹಾಕಿದ ವಚನಕಾರರ ಬಂಡುಕೋರ ಆಧ್ಯಾತ್ಮ ಪರಂಪರೆ ಡಾ॥ ಶಿವಕುಮಾರ ಸ್ವಾಮೀಜಿಗೆ ಅರ್ಥವಾಗುತ್ತಿಲ್ಲವೋ? ಅಥವಾ ಗಾಂಧೀಜಿ, ಅಂಬೇಡ್ಕರ್, ನೆಲ್ಸನ್ ಮಂಡೇಲಾ ಮುಂತಾದ ನಾಯಕರು ಸಾಮ್ರಾಜ್ಯ ಶಾಹಿಗಳಾದ ಬ್ರಿಟಿಷರ ಇಂಗ್ಲಿಷ್ ಭಾಷೆಯನ್ನು ಕಲಿತುಕೊಂಡು, ಅದೇ ಭಾಷೆಯ ಅಸ್ತ್ರದಿಂದ ಬ್ರಿಟಿಷ್ ಪ್ರಭುತ್ವವನ್ನು ಎದುರಿಸಿದ ರೀತಿಯೇ ಬ್ರಾಹ್ಮಣರ ಸಂಸ್ಕೃತವನ್ನು ಶೂದ್ರರಿಗೆ ಕಲಿಸುವ ಮೂಲಕ ಸಂಸ್ಕೃತ ಭಾಷೆಯ ಅಸ್ತ್ರದಿಂದ ಬ್ರಾಹ್ಮಣರನ್ನು ಎದುರಿಸುವಂತಹ ಸಾಂಸ್ಕೃತಿಕ ಸೇನೆಯೊಂದನ್ನು ಕಟ್ಟುವ ಉದ್ದೇಶವಿದೆಯೋ? ಬಹುಶಃ ಮೇಲಿನ ಎರಡೂ ಅಂಶಗಳನ್ನು ಡಾ॥ ಶಿವಕುಮಾರ ಸ್ವಾಮೀಜಿಯಿಂದ ನಿರೀಕ್ಷಿಸಲು ಸಾಧ್ಯವಿಲ್ಲ. ಯಾಕೆಂದರೆ ತಮ್ಮ ಮಠದಲ್ಲಿ ಸಂಸ್ಕೃತ ಕಲಿಸತೊಡಗಿ ಒಂದು ಶತಮಾನದ ಅಂಚಿಗೆ ತಲುಪುತ್ತಿದ್ದರೂ ಪುರೋಹಿತಶಾಹಿಯೊಂದಿಗೆ ಸಮರ್ಥವಾಗಿ ಸಂಘರ್ಷಿಸಬಲ್ಲ ಯಾವೊಬ್ಬ ಸಾಂಸ್ಕೃತಿಕ ವೀರನೂ ಈತನಕ ಈ ಮಠದಲ್ಲಿ ಜನ್ಮಿಸಿದಂತೆ ಕಾಣುತ್ತಿಲ್ಲ. ಹಾಗೊಂದು ವೇಳೆ ಹೇಳುವುದಾದರೆ ಈ ದೇಶದಲ್ಲಿ ಮೊದಲಿಗೆ ಸಂಸ್ಕೃತವನ್ನು ಅರಗಿಸಿಕೊಂಡು ಪುರೋಹಿತಶಾಹಿಯೊಂದಿಗೆ ವಿರೋಚಿತ ಕಾಳಗಕ್ಕಿಳಿದದ್ದು ಡಾ॥ ಅಂಬೇಡ್ಕರ್ ಮಾತ್ರ.

ಡಾ॥ ಶಿವಕುಮಾರಸ್ವಾಮೀಜಿ ವೀರಶೈವ ಧರ್ಮವನ್ನು ಹಿಂದೂ ಧರ್ಮವೆಂದು ವಾದಿಸುತ್ತಾರೆ. ಹಾಗಿದ್ದ ಮೇಲೆ ಬಸವಣ್ಣ ಯಾವ ಧರ್ಮದ ವಿರುದ್ಧ ಹೋರಾಡಿ ಹತ್ಯೆಯಾದದ್ದು? ಬುದ್ಧ, ಅಂಬೇಡ್ಕರ್, ಲೋಹಿಯಾ, ಪೆರಿಯಾರ್ ಮುಂತಾದವರೆಲ್ಲಾ ಸೆಣಸಿದ್ದು ಯಾವ ಧರ್ಮದ ವಿರುದ್ಧ? ಇಸ್ಲಾಂ ಅಥವಾ ಕ್ರೈಸ್ತಧರ್ಮಗಳ ವಿರುದ್ಧವಂತೂ ಅಲ್ಲ ತಾನೆ?

ತುಮಕೂರಿನ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಸ್ವಾಮೀಜಿ, ಹಿಂದೂಧರ್ಮದ ಸಂಸ್ಕೃತಿ ಬಗ್ಗೆ ಎಲ್ಲರೂ ಪ್ರೀತಿ ಇಟ್ಟುಕೊಳ್ಳಬೇಕು. ಧರ್ಮದ ಐಕ್ಯತೆ ಮತ್ತು ಸಂಘಟನೆಗೆ ಇಂತಹ ಸಮಾವೇಶ ಆಗಾಗ್ಗೆ ಆಗಬೇಕು ಗುರೂಜಿ ಗೋಳ್ವಲ್ಕರ್ ಸಿದ್ಧಗಂಗಾ ಮಠದ ಮೇಲೆ ಅಪಾರ ಗೌರವ ಇಟ್ಟುಕೊಂಡಿದ್ದರು. ಮೂರು ಬಾರಿ ಮಠಕ್ಕೆ ಬಂದಿದ್ದರು. ಅವರ ಕ್ರಾಂತಿಕಾರಿ ಭಾಷಣ ಕೇಳಿ ಇಷ್ಟವಾಗಿತ್ತು. ಎಂದದ್ದು ಸ್ವಾಮೀಜಿಯಲ್ಲಿರುವ ಆರ್.ಎಸ್.ಎಸ್. ಒಲವನ್ನು ಎತ್ತಿ ತೋರಿಸುತ್ತದೆ. ಬ್ರಾಹ್ಮಣರಂತೆ ಸಂಸ್ಕೃತವನ್ನು ಕಲಿಸುತ್ತಾ ಬ್ರಾಹ್ಮಣ ಶ್ರೇಷ್ಠತೆಯನ್ನು ಸಾರುವ ರಾಮಮಂತ್ರ ಜಪಿಸುವ ಡಾ॥ ಶಿವಕುಮಾರ ಸ್ವಾಮೀಜಿ ತಮ್ಮ ಜೀವಿತದ ಕೊನೆಯ ಘಳಿಗೆಯಲ್ಲಿ ಸಂಘ ಪರಿವಾರ ಸಾಂಸ್ಕೃತಿಕ ಸೇನೆಯ ಗಂಡುಗಲಿಯಂತೆ ಹಿಂದೂಧರ್ಮ ರಕ್ಷಣೆಗಾಗಿ ಅವರು ಕೊಟ್ಟ ಕರೆ ಒಂದು ಅಪಾಯಕಾರಿ ಸಂದೇಶವೇ ಸರಿ.

ಇಷ್ಟಿದ್ದೂ ಶಿವಕುಮಾರ ಸ್ವಾಮೀಜಿಯಲ್ಲಿರುವ ಅಸಾಧಾರಣ ಕರ್ತೃತ್ವ ಶಕ್ತಿ, ಸಂಕಲ್ಪಶಕ್ತಿ, ಕಾಯಕದಾಸೋಹ, ಅನ್ನದಾಸೋಹ ಮತ್ತು ವಿದ್ಯಾದಾಸೋಹಗಳಿಂದ ಅವರು ನಾಡಿಗೆ ಸಲ್ಲಿಸಿರುವ ಸೇವೆ, ಗ್ರಾಮೀಣ ಬಡಜನರ ಏಳ್ಗೆಗಾಗಿ ತಮ್ಮನ್ನು ಸಮರ್ಪಿಸಿಕೊಂಡ ರೀತಿ, ವಿದ್ಯಾರ್ಥಿ ದೇವರುಗಳೊಂದಿಗೆ ಜೀವಿಸಿ 'ಜೋಳಿಗೆ ಜಂಗಮ' ಎಂದು ಕೀರ್ತಿಗೆ ಪಾತ್ರವಾದ ಬಗೆ ಇವೆಲ್ಲವೂ ಒಂದು ಮಹಾ ಪವಾಡದಂತೆ ಕಾಣಿಸುತ್ತದೆ. ಆ ಮಟ್ಟಿಗೆ ತಮ್ಮ ಸೇವೆ, ಸಾಧನೆ ತ್ಯಾಗಗಳಿಂದ ಅನುಕರಣೀಯ ವ್ಯಕ್ತಿತ್ವವಾಗಿ ನಿಲ್ಲುತ್ತಾರೆ. ಆದರೆ ಕೋಮುವಾದಿಗಳು ಹತ್ತಿಸುವ ಬೆಂಕಿಯನ್ನೇ ಬೆಳಕಿನ ಜ್ಯೋತಿಯನ್ನಾಗಿ ಪರಿವರ್ತಿಸುವ ಕುಶಾಗ್ರಮತಿ ವೈಚಾರಿಕ ಶಕ್ತಿ ಅಥವಾ ಬಂಡುಕೋರ ಆಧ್ಯಾತ್ಮದ ಪ್ರಖರತೆಯನ್ನು ಡಾ॥ ಶಿವಕುಮಾರ ಸ್ವಾಮೀಜಿಯಂಥ ದೇಶಿ ಸಂತರು ತೋರಿದ ಪಕ್ಷದಲ್ಲಿ ಎದುರಾಳಿಗಳ ಅಸ್ತ್ರವನ್ನು ಕೊಂಚಮಟ್ಟಿಗೆ ಮೊಂಡು ಮಾಡಬಹುದು. ಬಸವಣ್ಣನ ವಿಚಾರ ತತ್ವಗಳ ವಕ್ತಾರಿಕೆ ವಹಿಸಿಕೊಳ್ಳಬಲ್ಲ ಚೇತನಗಳಿಂದ ಅಂತಹದ್ದೊಂದು ಕ್ರಾಂತಿಯನ್ನು ಸಮಾಜ ನಿರೀಕ್ಷಿಸುವುದರಲ್ಲಿ ತಪ್ಪಿಲ್ಲವೆನಿಸುತ್ತದೆ.

ತುಮಕೂರಿನ ವಿರಾಟ್ ಹಿಂದೂ ಸಮಾಜೋತ್ಸವದಲ್ಲಿ ಮುಖ್ಯ ಆಶೀರ್ವಚನ ನೀಡಬೇಕಾಗಿದ್ದ ಬಾಲಗಂಗಾಧರನಾಥ ಸ್ವಾಮೀಜಿ ಪಾಲ್ಗೊಳ್ಳದೆ ಇದ್ದದ್ದು ಹಿಂದೂ ಸಾಮ್ರಾಜ್ಯ ಶಾಹಿಯ ವಿರುದ್ಧ ತಮ್ಮ ಪ್ರತಿರೋಧ ವ್ಯಕ್ತಪಡಿಸಲಂತೂ ಅಲ್ಲ. ಮನುವಾಗಿ ಬ್ರಾಹ್ಮಣರಿಗಿಂತಲೂ ಮಿಗಿಲಾದ ಧಾರ್ಮಿಕ fudal lord ಆಗಿ

ಮಠದಲ್ಲಿರುವ ಬಾಲಗಂಗಾಧರನಾಥ ಸ್ವಾಮೀಜಿ ಯಾವತ್ತಿಗೂ ದಲಿತರು ಮತ್ತು ಅಲ್ಪಸಂಖ್ಯಾತರಿಗೆ ಏರು [illegible] ನಿಲುವುಗಳನ್ನು ತಳೆಯುತ್ತಲೇ ಬ್ರಾಹ್ಮಣ್ಯದ ಕಂಪು ಬೀರಿದವರು. ಒಕ್ಕಲಿಗ ಜನಾಂಗದ ರಾಜಕಾರಣಿಗಳು ಮೊದಲು ಒಕ್ಕಲಿಗ ಜಾತಿಗೆ ನಿಷ್ಠೆ ತೋರಿಸಿರಿ. ಕರ್ನಾಟಕಕ್ಕೆ ನಿಷ್ಠೆ ತೋರಿಸುವುದು ಇದ್ದೇ ಇದೆ. ಎಂದು ಸಾರ್ವಜನಿಕವಾಗಿಯೇ ಒಕ್ಕಲಿಗರಿಗೆ ಕರೆ ನೀಡಿದರು.

ಆರ್‌ಎಸ್‌ಎಸ್‌ನ ಸಭೆ ಶಿಬಿರಗಳಲ್ಲಿ ಪಾಲ್ಗೊಂಡು 'ರಾಮ ಮಂದಿರವನ್ನು ಭಾರತದಲ್ಲಿ ಕಟ್ಟದೆ ಪಾಕಿಸ್ತಾನದಲ್ಲಿ ಕಟ್ಟಲಾದೀತೆ? ಹಿಂದೂಗಳಿಗೆ ಇರುವುದು ಹಿಂದೂಸ್ತಾನ ಮಾತ್ರ, ಮುಸ್ಲಿಮರಿಗೆ ಪಾಕಿಸ್ತಾನವಿದೆ, ಹೋಗಲಿ ಎಂದು ಅಪಾಯಕಾರಿ ಹೇಳಿಕೆಗಳನ್ನು ನೀಡುವುದು. ಚುಂಚನಗಿರಿ ಮಠದಲ್ಲಿ ಬ್ರಾಹ್ಮಣರ ಪೌರೋಹಿತ್ಯದಲ್ಲಿ ಧಾರ್ಮಿಕ ಉತ್ಸವಗಳನ್ನು ಆಚರಿಸುವುದು, ಸಂಸ್ಕೃತ ಪಾಠಶಾಲೆ ನಡೆಸುವುದು, ಮಂಡ್ಯ ಮತ್ತು ಬಾಗಲಕೋಟೆಗಳಲ್ಲಿ ಗೋಶಾಲೆಗಳನ್ನು ಸ್ಥಾಪಿಸಿ 'ಗೋಮಾತೆ' ಮಂತ್ರ ಜಪಿಸುವುದು ಮುಂತಾದವುಗಳನ್ನೆಲ್ಲ ಗಮನಿಸಿದರೆ ಬಾಲಗಂಗಾಧರನಾಥ ಸ್ವಾಮಿಜಿಯು ಬ್ರಾಹ್ಮಣಶಾಹಿ ವೈದಿಕ ಮೌಲ್ಯಗಳನ್ನು ಎಷ್ಟೊಂದು ವ್ಯವಸ್ಥಿತವಾಗಿ ನೆಲೆಗೊಳಿಸುತ್ತಿದ್ದಾರೆಂಬುದು ತಿಳಿಸಯುತ್ತದೆ. ಬ್ರಾಹ್ಮಣಶಾಹಿಯನ್ನು ವಿರೋಧಿಸಿದ ನಾಥ ಸಿದ್ದರ ಸಾಂಸ್ಕೃತಿಕ ಹಿರಿಮೆಯುಳ್ಳ ಪರಂಪರೆಗೆ ಸಹಜವಾದ ಬಂಡುಕೋರ ಗುಣವನ್ನು ತೋರದೆ ಹೋದ ಈ ಶೂದ್ರ ಸ್ವಾಮೀಜಿ ಬ್ರಾಹ್ಮಣ ಸ್ವಾಮೀಜಿಗಳಿಗಿಂತಲೂ ಅಪಾಯಕಾರಿ ಎಂಬುದನ್ನು ಸಮಾಜ ಅರಿತುಕೊಳ್ಳಬೇಕಾಗಿದೆ.

ಪುರೋಹಿತಶಾಹಿಯ ಹಿಂದುತ್ವದ ಪರವಹಿಸಿ ಅಲ್ಪಸಂಖ್ಯಾತರ ವಿರುದ್ಧ ಮಾತನಾಡುತ್ತಾ ಅಮಾನವೀಯ ಜಾತಿ ವ್ಯವಸ್ಥೆಯನ್ನು ಪೋಷಿಸುವ ಇಂತಹ ಧೋರಣೆಗಳ ವಿರುದ್ಧ ಸ್ವಾಮಿ ವಿವೇಕಾನಂದರು ತೀಕ್ಷ್ಣವಾಗಿ ಮಾತನಾಡಿದ್ದಾರೆ. ಸ್ವಾಮಿ ವಿವೇಕಾನಂದರನ್ನು ಹಿಂದೂ ಅವತಾರ ಪುರುಷನೆಂದು ಬಿಂಬಿಸಲಾಗುತ್ತಿದೆ. ಆದರೆ ಅವರು ಹಿಂದುತ್ವವಾದಿಯಾಗಿರಲಿಲ್ಲ. ಹಿಂದೂಧರ್ಮದ ಕಟು ಟೀಕಾಕಾರರಾಗಿದ್ದ ಅವರ ಒಂದು ಟೀಕೆ ಹೀಗಿದೆ. 'ಜಾತಿ ಕಾಳಗಗಳು ನಿಷ್ಪ್ರಯೋಜಕ. ಅವುಗಳಿಂದ ಸಾಧಿಸುವುದಾದರೂ ಏನು? ಜಾತಿಗಳು ನಮ್ಮ ನಡುವೆ ಬಿರುಕುಗಳನ್ನು ಮೂಡಿಸುತ್ತದೆ. ಆ ಮೂಲಕ ನಮ್ಮ ಶಕ್ತಿಯನ್ನೇ ಕುಂದಿಸುತ್ತದೆ. ಪ್ರತ್ಯೇಕತೆಯ ದಿನಗಳು ಭಾರತದ ನೆಲೆಯಿಂದ ಗತಿಸಿ ಯಾವುದೋ ಕಾಲವಾಗಿದೆ.

ಇದು ಬ್ರಿಟಿಷರ ಆಳ್ವಿಕೆ ಭಾರತಕ್ಕೆ ನೀಡಿರುವ ಅತ್ಯುತ್ತಮ ಕೊಡುಗೆ. ಮಹಮ್ಮದೀಯರ ಆಳ್ವಿಕೆಯಿಂದ ಈ ಪ್ರತ್ಯೇಕತೆ ನಶಿಸಿದ್ದಕ್ಕೆ ನಾವು ಋಣಿಗಳಾಗಿರಬೇಕು. ಮಹಮ್ಮದೀಯರು ಭಾರತವನ್ನು ವಶಪಡಿಸಿಕೊಂಡಿದ್ದರಿಂದಲೇ ಇಲ್ಲಿನ ಶೋಷಿತರಿಗೆ ಬಡವರಿಗೆ ಮುಕ್ತಿ ದೊರಕಿದ್ದು. ಈ ಕಾರಣದಿಂದಲೇ ನಮ್ಮಲ್ಲಿ ಶೇ ೫ ರಷ್ಟು ಜನ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡಿದ್ದರು. ಈ ಮತಾಂತರ ಖಡ್ಗದಿಂದಾದದ್ದಲ್ಲ. ಅವರೆಲ್ಲ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದು ಬರೀ ಖಡ್ಗದಿಂದಾಗಿ ಎಂದು ಹೇಳುವುದು ಮೂರ್ಖತನವಾದೀತು'. ಹಿಂದೂ ಧರ್ಮದ ವಿರುದ್ಧ ಹೀಗೆಲ್ಲಾ ಕಟು ಟೀಕೆ ಮಾಡಿದ ಸ್ವಾಮಿ ವಿವೇಕಾನಂದರ ಕ್ರಾಂತಿಕಾರಿ ವಿಚಾರಗಳನ್ನು ಬಿತ್ತರಿಸಬೇಕಾದ ತುಮಕೂರಿನ ರಾಮಕೃಷ್ಣಾಶ್ರಮದ ಸ್ವಾಮಿ ವೀರೇಶಾನಂದ 'ವಿರಾಟ್ ಹಿಂದೂ ಸಮಾಜೋತ್ಸವದಲ್ಲಿ ಯಾವುದೇ

ಬ್ರಾಹ್ಮಣ ಮಹರ್ಷಿ ವಸಿಷ್ಠನು ಮಾದಿಗರ ಹೆಣ್ಣುಮಗಳಾದ ಆರಂಜ್ಯೋತಿಯನ್ನು ಮದುವೆಯಾಗಿ ಅವಳನ್ನು ಅರುಂಧತಿಯನ್ನಾಗಿ ಪರಿವರ್ತಿಸಿಕೊಂಡನು. ತಾರಾ ಮಂಡಲದ ಒಂದು ನಕ್ಷತ್ರಕ್ಕೆ ಮಾದಿಗರ ಹೆಣ್ಣುಮಗಳ ಹೆಸರನ್ನೇ ನೀಡಿ ಅರುಂಧತಿ ನಕ್ಷತ್ರವೆಂದು ಕರೆಯಲಾಗುತ್ತಿದೆ.

ಎಗ್ಗು ಸಿಗ್ಗಿಲ್ಲದೆ ಪಾಲ್ಗೊಂಡು ಹಿಂದೂ ಸನಾತನಿಗಳ 'ಭಜಗೋವಿಂದಂ' ಮಂತ್ರ ಜಪಿಸಿದ್ದು ನಾಚಿಕೆಗೇಡಿನ ಸಂಗತಿ.

ಡಾ॥ ಅಂಬೇಡ್ಕರ್ ಜಾತಿವಿನಾಶವಾಗಬೇಕೆಂದು ವಾದಿಸುತ್ತಿದ್ದರು. ಅದಕ್ಕಾಗಿಯೇ 'ಜಾತಿ ವಿನಾಶ' (Anihilation of Caste) ಎಂಬ ಕಿರು ಹೊತ್ತಿಗೆಯನ್ನೂ ಹೊರತಂದರು. ಅಸ್ಪೃಶ್ಯರ ಶೋಷಣೆಗೆ ಮೂಲ ಕಾರಣವನ್ನು ಹಿಂದೂ ಜಾತಿ ಪದ್ಧತಿಯಲ್ಲಿ ಹುಡುಕಿದರು ಹಿಂದೂಧರ್ಮದ ಚೌಕಟ್ಟಿನಲ್ಲಿ ಅಸ್ಪೃಶ್ಯರಿಗೆ ಮುಕ್ತಿ ಇಲ್ಲವೆಂದು ಮನಗಂಡ ಅವರು ಹಿಂದೂಧರ್ಮ ನಾಶವಾಗಬೇಕು. ಅದಕ್ಕಾಗಿ ಜಾತಿವಿನಾಶ ಆಗಲೇಬೇಕು. ಅನಂತರದಲ್ಲಿ ದಲಿತರಿಗೆ ಮುಕ್ತಿ ಸಾಧ್ಯವೆಂದರು. ತನ್ನ ಜೀವಿತಾವಧಿಯಲ್ಲಿ ಜಾತಿವಿನಾಶ ಮಾಡುವ ತನ್ನ ಹೋರಾಟವು ನಿರೀಕ್ಷಿತ ಫಲ ನೀಡದೆ ಹೋದ ಕಾರಣದಿಂದ ದಲಿತರು ಬೌದ್ಧ ಧರ್ಮೀಯರಾಗಿ ಬುದ್ಧನೆಡೆಗೆ ಮರಳಿ ಮನೆಗೆ ಹೋಗಬೇಕೆಂದು ಕರೆ ನೀಡಿದರು. ಇಂತಹ ಅಂಬೇಡ್ಕರ್‌ರನ್ನು ಹಿಂದೂ ಅವತಾರ ಪುರುಷನೆಂಬಂತೆ ಸಂಘ ಪರಿವಾರವು ವ್ಯವಸ್ಥಿತವಾಗಿ ಪ್ರಚಾರ ಮಾಡುತ್ತಿದೆ. ಮಹಾರಾಷ್ಟ್ರದಲ್ಲಿ ಶಿವಶಕ್ತಿ ನಾಯಕ ಬಾಳಾಠಾಕ್ರೆಯ ಚಿತ್ರದೊಂದಿಗೆ ಅಂಬೇಡ್ಕರ್ ಚಿತ್ರವನ್ನು ಹಾಕಿಕೊಂಡು "ಶಿವಶಕ್ತಿ+ಭೀಮಶಕ್ತಿ=ದೇಶಭಕ್ತಿ" ಎಂಬ ಘೋಷಣೆಯ ಪೋಸ್ಟರುಗಳು ಆಗಾಗ ತಲೆ ಎತ್ತುತ್ತದೆ! 'ನೋಬೆಲ್' ಪ್ರಶಸ್ತಿ ನೀಡುವ ಮಾದರಿಯಲ್ಲಿಯೇ ಸುಳ್ಳನ್ನು ಪ್ರಚಾರ ಮಾಡಿ ಕ್ರಮೇಣ ನಿವೆಂದು ಸಮರ್ಥಿಸುವ ಸಂಘ ಪರಿವಾರದವರಿಗೆ 'ಗೊಬೆಲ್' ಪ್ರಶಸ್ತಿ ನೀಡುವುದು ಚಂದವೆನ್ನಿಸುತ್ತದೆ.

ವಿಶ್ವಸಂಸ್ಥೆಯಿಂದ 'ಆಗ್ನೇಯ ಏಷ್ಯಾದ ಸಾಕ್ರೆಟಿಸ್' ಎಂಬ ಗೌರವಕ್ಕೆ ಪಾತ್ರರಾದ ಪೆರಿಯಾರ್ ಇ.ವಿ. ರಾಮಸ್ವಾಮಿ ನಾಯ್ಕರ್ ಅವರು ಡಾ॥ ಅಂಬೇಡ್ಕರ್‌ರಿಗಿಂತಲೂ ಉಗ್ರಪ್ರತಿಭಟನಾಕಾರರಾಗಿ ದಕ್ಷಿಣ ಭಾರತದಲ್ಲಿ ಹಿಂದೂ ಧರ್ಮದ ವಿರುದ್ಧ ಸಾಮಾಜಿಕ ಕ್ರಾಂತಿಯನ್ನು ಮಾಡಿದ ಮಹಾನ್ ವಿಚಾರವಾದಿ. 'ದ್ರಾವಿಡ ಮುನ್ನೇತ್ರ ಕಳಗಂ ಪಕ್ಷ'ದ ಮೂಲಕ ಹಿಂದು ದೇವಾನುದೇವತೆಗಳ ಚಿತ್ರಪಟಗಳನ್ನು ಬಹಿರಂಗವಾಗಿ ಸುಡುವ ಕಾರ್ಯಕ್ರಮಗಳನ್ನು ಹಾಕಿಕೊಂಡು, 'ದೇವರೆಂದರೆ ನರಮಾನವರಿಗಿಂತ ಶ್ರೇಷ್ಠ ಗುಣಗಳಿರಬೇಕು ತಾನೆ? ರಾಮನು ಸೀತೆಯನ್ನು ತುಂಬಿದ ಗರ್ಭಿಣಿಯಾಗಿದ್ದಾಗ ಕಾಡಿಗೆ ಅಟ್ಟಿದ. ರಾಮನನ್ನು ಸ್ತ್ರೀಕುಲ ಯಾವತ್ತು ಕ್ಷಮಿಸಲಾರದು' ಎಂದು ಶ್ರೀರಾಮನ ಚಿತ್ರಪಟಗಳನ್ನು ಸುಟ್ಟು ದಲಿತರು, ಮಹಿಳೆಯರು ವಿಚಾರವಂತರಾಗಬೇಕಾದ ಅನಿವಾರ್ಯತೆಯನ್ನು ತಿಳಿಸಿಕೊಟ್ಟರು.

ಅಂತಹ ಮಹಾನ್ ಕ್ರಾಂತಿಕಾರಿಯ ಚಿತ್ರವನ್ನು "ಅಯೋಧ್ಯೆಯ ವಿವಾದಿತ ಸ್ಥಳದಲ್ಲಿ ರಾಮಮಂದಿರವನ್ನು ಕಟ್ಟೇ ಕಟ್ಟುತ್ತೇವೆ" ಎನ್ನುವ ಘೋಷಣೆಯುಳ್ಳ ಪೋಸ್ಟರುಗಳಲ್ಲಿ ಬಳಸಿದ್ದಾರೆ!

ಕನಕನ ಕಿಂಡಿಯನ್ನು ನವಗ್ರಹಕಿಂಡಿ ಎಂದು ಕರೆದದ್ದು ಸಾಲದೆ ಕನಕಗೋಪುರವನ್ನೂ ಧ್ವಂಸ ಮಾಡಿದ ಇದೇ ಪುರೋಹಿತಶಾಹಿಗಳು ಕನಕನ ಚಿತ್ರಗಳನ್ನು ಹಾಕಿಕೊಳ್ಳುತ್ತಿರುವುದನ್ನು ನೋಡಿದರೆ ಇವರಿಗೆ ಆತ್ಮಗೌರವ ಇರುವ ಬಗ್ಗೆ ಅನುಮಾನ ಉಂಟಾಗುತ್ತದೆ? ಇವರನ್ನು ಹೀಗೇ ಬಿಟ್ಟರೆ ಕುವೆಂಪು ಚಿತ್ರ ಹಾಕಿಕೊಳ್ಳುವ ದಿನದೂರವಿಲ್ಲ!

ನಾನೀಗ ಈ ಲೇಖನದಲ್ಲಿ ಮುಖ್ಯವಾಗಿ ಪ್ರಸ್ತಾಪಿಸಬಯಸಿರುವುದು ನಮ್ಮ ಸಮಕಾಲೀನ ಕರ್ನಾಟಕದಲ್ಲಿ ಏಳೆಂಟುನೂರು ವರ್ಷಗಳ ಇತಿಹಾಸವುಳ್ಳ ಚಿತ್ರದುರ್ಗದ ಕೋಡಿ ಹಳ್ಳಿಯ ಆದಿಜಾಂಬವ ಮಠದ ದಲಿತ ಮಠಾಧೀಶರಾದ ಶ್ರೀರುದ್ರಾಕ್ಷಿಮುನಿ ದೇಶೀಕೇಂದ್ರ ಸ್ವಾಮೀಜಿ ಬಗ್ಗೆ, ತುಮಕೂರಿನ 'ವಿಕಾರ' ಹಿಂದೂ ಸಮಾಜೋತ್ಸವವನ್ನು ಉದ್ಘಾಟಿಸಿದ ಈ ಸ್ವಾಮೀಜಿಯು ತನ್ನ ಜನಾಂಗದ ವೈಚಾರಿಕ ಸಾಂಸ್ಕೃತಿಕ ಪರಂಪರೆಯನ್ನು ಅರಿತುಕೊಳ್ಳುವುದು ಉತ್ತಮ ಇಡೀ ಜಗತ್ತನ್ನು ಸೃಷ್ಟಿಸಿದ್ದು ತಾತ ಜಾಂಬವರು.

ಬ್ರಾಹ್ಮಣ ಮಹರ್ಷಿ ವಸಿಷ್ಠನು ಮಾದಿಗರ ಹೆಣ್ಣುಮಗಳಾದ ಆರಂಜ್ಯೋತಿಯನ್ನು ಮದುವೆಯಾಗಿ ಅವಳನ್ನು ಅರುಂಧತಿಯನ್ನಾಗಿ ಪರಿವರ್ತಿಸಿಕೊಂಡನು. ತಾರಾ ಮಂಡಲದ ಒಂದು ನಕ್ಷತ್ರಕ್ಕೆ ಮಾದಿಗರ ಹೆಣ್ಣು ಮಗಳ ಹೆಸರನ್ನೇ ನೀಡಿ ಅರುಂಧತಿ ನಕ್ಷತ್ರವೆಂದು ಕರೆಯಲಾಗುತ್ತಿದೆ. ವಿಶ್ವ ಬ್ರಹ್ಮನ ತಾಯಿ ಕಾಳಿಕಾಮಾತೆಯು ಮಾದಿಗರ ಗಲ್ಲೇಬಾನಿ (ಕಾಳಿಮಂತು)ಯ ಪವಿತ್ರ ಜಲದಲ್ಲಿ ಹುಟ್ಟಿದವಳು. ೧೨ನೇ ಶತಮಾನದಲ್ಲಿ ಹರಳಯ್ಯನ ಗಲ್ಲೇಬಾನಿಯ ಜಲ, ಜಾತಿಕುಲ ಮತಗಳ ನವೆಯಿಂದ ಮೈ ಪರಚಿಕೊಂಡು ಬೆಂದು ಹೋಗುತ್ತಿದ್ದ ಮದುವರಸನಿಗೆ ಸೋಂಕಿ ನವೆ ಅಡಗಿ ತಂಪಾಗುತ್ತಾನೆ ಹರಳಯ್ಯ ಮತ್ತು ಕಲ್ಯಾಣಮ್ಮನವರ ತೊಡೆತೊಗಲ ಉರಿಚಮ್ಮಾಳಿಗೆ (ಕೆರ)ಗಳನ್ನು ಬಸವಣ್ಣನು ತಲೆ ಮೇಲೆ ಹೊತ್ತು ಪೂಜಿಸುತ್ತಾನೆ. ಅಲ್ಲದೆ ಮಾದಾರ ಚೆನ್ನಯ್ಯನನ್ನು ತನ್ನ ಗೋತ್ರ ಪುರುಷನನ್ನಾಗಿ ಸ್ವೀಕರಿಸಿದ ಬಸವಣ್ಣ 'ಮಾದರ ಮಗನಾನು' ಎಂದು ಘೋಷಿಸಿಕೊಂಡಿದ್ದಾನೆ.

ಹೀಗೆ ಪ್ರತಿಭಟನಾತ್ಮಕವೂ, ಸೃಜನಶೀಲ ಸಮೃದ್ಧತೆಯಿಂದಲೂ ಇರುವ ಆದಿಜಾಂಬವ ಕುಲ ಪುರಾಣವನ್ನು ಕಟ್ಟಿಕೊಟ್ಟ 'ಮಹಾ ಆದಿಗ' ಜನಾಂಗವು. ಮಾತಂಗ ಕನ್ಯೆಯಾದ ಸರಸ್ವತಿ (ಮಾತಂಗಿ)ಯು ಮಾದಿಗರ ಮಗಳು, ಜಾಂಬವಂತನ ಮಗಳು ಜಾವಂವತಿಯನ್ನು ಮದುವೆಯಾದ ಕೃಷ್ಣ ಮಾದಿಗರಿಗೆ ಅಳಿಯನಾಗಬೇಕು. ಜಂಬೂದ್ವೀಪ ಅಥವಾ ಜಂಬೂ ಸ್ಥಾನವನ್ನು ಜಾಂಬವತಾತ ಜಂಬು ನೇರಳೆ ಮರದಡಿ ಸೃಷ್ಟಿ ಮಾಡಿದನು. ಆದುದರಿಂದ ಜಂಬೂದ್ವೀಪ ಆದಿಜಾಂಬವ ಜನಾಂಗಕ್ಕೆ ಸೇರಿದ್ದು ಎಂಬೆಲ್ಲ ಆದಿಮ ಕುಲ ಪುರಾಣಗಳನ್ನು ಕಟ್ಟಿಕೊಡುವ ಮೂಲಕ ಹಾಗೂ ಇಂತಹ ತನ್ನ ಕುಲ ಪುರಾಣಗಳನ್ನು ಆಂಧ್ರದ ಶ್ರೀ ಶೈಲ ಕಡಪ, ಬೆಜವಾಡ, ಪೆನುಗೊಂಡೆ, ಕೊಂಕಲ್ ಮಠಗಳು, ಕರ್ನಾಟಕದ ನೆಲಮಂಗಲ, ಕೋಡಿಹಳ್ಳಿ ಮಠ, ಹಾಗೂ ತಮಿಳುನಾಡಿನ ಸಾಂಸ್ಕೃತಿಕ ಕೇಂದ್ರವಾದ ಕಂಚಿಮಠ ಮುಂತಾದ ಪ್ರಾಚೀನ ಮಠಗಳ

ಮೂಲಕ ವೈಚಾರಿಕ ಸಾಂಸ್ಕೃತಿಕ ಪರಂಪರೆಯನ್ನು ಸಾರುತ್ತಾ ಬಂದಿದೆ.

ಹಾಗೆಯೇ 'ಹೊಲ'ದ ಒಡೆಯನೇ ಹೊಲೆಯನೆಂದೂ ಹೊಲೆಯರ ಹೊನ್ನಯ್ಯನ ಮನೆಯಲ್ಲಿ ಅಂಬಲಿ ಕುಡಿದು ಶಿವಪಾರ್ವತಿಯರು ಥೈತೋಂ ಎಂದು ಸಂತೋಷದಿಂದ ಕುಣಿದಾಡಿದರೆಂದೂ, 'ಹೊಲ' ಎಂದರೆ 'ನೆಲ' ಹಾಗಾಗಿ ಈ ನೆಲದ ಒಡೆಯರು ಹೊಲೆಯರೇ ಆಗಿದ್ದು ಸಹಜವಾಗಿ ಮೊದಲಿಗೆ ವಿಶ್ವಕ್ಕೆ ಹೊಲ ಉಳುಮೆ ಮಾಡಿ ಬೇಸಾಯ ಮಾಡುವುದನ್ನು ಕಲಿಸಿದ್ದು ಹೊಲೆಯರೇ ಎಂದು ಸಾರುವ ಕುಲ ಪುರಾಣಗಳಿರುವ ಇಂತಹ ದಲಿತ ಮಠಗಳ ಸ್ವಾಮೀಜಿಗಳು ತಮ್ಮ ಜನಾಂಗಗಳು ಕಟ್ಟಿ ಕೊಟ್ಟ ಅಖಂಡವೂ ಅತ್ಯಂತ ಪ್ರಾಚೀನವೂ ಆದ ಸಮೃದ್ಧ ವೈಚಾರಿಕ ಪರಂಪರೆಗೆ ಹಾಗೂ ತಮ್ಮ ಜನಾಂಗದ ಸಾಂಸ್ಕೃತಿಕ ಅನನ್ಯತೆಗೆ ಮುಕ್ಕಾಗದಂತೆ ಉಳಿಸಿಕೊಳ್ಳಲು ಆಕ್ರಮಣಶೀಲ ವೈದಿಕ ಸಂಸ್ಕೃತಿಯೊಡನೆ ಘರ್ಷಿಸಬೇಕಾದ ಇವೊತ್ತಿನ ಸನ್ನಿವೇಶದಲ್ಲಿ ದಲಿತ ಸ್ವಭಾವಕ್ಕನುಗುಣವಾಗಿ ಹಾಗೂ ದಲಿತ ಸಂಸ್ಕೃತಿಯ ಜೀವದ್ರವ್ಯದ ಕಸುವಿಗನುಗುಣವಾಗಿ ಪ್ರತಿರೋಧವನ್ನು ತೋರದೆ ಪ್ರಧಾನ ಸಂಸ್ಕೃತಿಯ ಕಾವಲು ಕಾಯುವ ಊಳಿಗದ ತೊತ್ತುಗಳಾಗಿರುವುದು ಯಾವ ಲಕ್ಷಣವನ್ನು ತೋರಿಸುತ್ತದೆ?

ಇಂದು ಅಸ್ಪೃಶ್ಯ ಜಾತಿಗಳೆಂದು ಗುರುತಿಸುವುದು ಸಮಾಜದ ತೀರಾ ತಳದಲ್ಲಿರುವ ಹೊಲೆಯ ಮಾದಿಗ ಪರಿವಾರದ ಜಾತಿಗಳನ್ನು ಮಾತ್ರ, ಆದರೆ ಜಾಂಬವ ಮುನಿ, ಮಾತಂಗ ಮುನಿಯಂಥ ದೇಸಿ ಸಂತರಿಂದಲೂ, ಹರಳಯ್ಯ, ಚೆನ್ನಯ್ಯ, ಹೊಲೆಯರ ಹೊನ್ನಯ್ಯನಂಥ ಶರಣರಿಂದಲೂ, ಆರಂಜ್ಯೋತಿ, ಎಲ್ಲಮ್ಮ, ಮಾತಂಗಿ (ಸರಸ್ವತಿ), ಜಾಂಬವತಿ ಇನ್ನೂ ಮುಂತಾದ ಮಹಿಳಾ ಸಂಸ್ಕೃತಿಕ ನಾಯಕಿಯರಿಂದಲೂ ಕೂಡಿದ ಬಂಡುಕೋರ ಆಧ್ಯಾತ್ಮದ ದಲಿತ ಸಾಂಸ್ಕೃತಿಕ ಪರಂಪರೆಯ ಅಧಿಕೃತ ವಕ್ತಾರಿಕೆ ವಹಿಸಿಕೊಳ್ಳಬೇಕಾದ ಹಾಗೂ ಆ ಪರಂಪರೆಯನ್ನು ಜೀವಂತವಾಗಿ ಮುಂದುವರೆಸಬೇಕಾದ ದಲಿತ ಮಠಾಧಿಪತಿಗಳು ಇಂದು ಆಕ್ರಮಣಶೀಲವೂ ಅಮಾನವೀಯವೂ ಆದ ವೈದಿಕ ಪುರೋಹಿತಶಾಹಿಗಳ ಜೀರ್ಣಾಗ್ನಿಯಲ್ಲಿ ಕರಗುವುದು ಯಾವ ದುರಂತದ ಮುನ್ಸೂಚನೆ?

ಇಂದಿನ ದಲಿತವರ್ಗದ ಸ್ವಾಮೀಜಿಗಳು ಮತ್ತು ಹೋರಾಟಗಾರರಿಗೆ ವಿರೋಧಿಶಕ್ತಿಗಳನ್ನು ಗುರುತಿಸುವಿಕೆಯಲ್ಲಿ ಇರುವ ಅರಿವುಗೇಡಿತನ, ಚಾರಿತ್ರಿಕ ಸಾಂಸ್ಕೃತಿಕ ತಿಳುವಳಿಕೆಯ ಕೊರತೆ, ಸಾಂಸ್ಕೃತಿಕ ಪಲ್ಲಟಗಳು, ಆರ್ಥಿಕ ಅಭದ್ರತೆ, ಅನಾಥಪ್ರಜ್ಞೆ ಮುಂತಾದ ಅಂಶಗಳು ಸಾಂಸ್ಕೃತಿಕ ಲೋಪಗಳನ್ನೆ ಸಗಲು ಮುಖ್ಯ ಕಾರಣವಾಗಿವೆ ಎನ್ನಿಸುತ್ತದೆ.

ಇಂತಹ ಲೋಪಗಳನ್ನೆಸಗುವ ಮೂಲಕ ಬಸವಣ್ಣನನ್ನು ಹತ್ಯೆಗೈದ, ಗಾಂಧಿಯ ಎದೆಗೆ ಗುಂಡಿಕ್ಕಿದ, ದಲಿತರ ಮಾರಣ ಹೋಮ ನಡೆಸಿದ, ಬಾಬ್ರಿ ಮಸೀದಿಯನ್ನು ಕೆಡವಿದ, ಬೌದ್ಧಧರ್ಮವನ್ನು ನಾಶ ಮಾಡಿದ, ಗ್ರಹಾಂಸ್ಟ್ರೆನ್‌ನನ್ನು ಸುಟ್ಟು ಹಾಕಿದ ಇನ್ನೂ ಮುಂತಾದ ಬೀಬತ್ಸಕಾರಕ ಅಮಾನವೀಯ ಕೃತ್ಯಗಳನ್ನೆಸಗಿದ ಹಿಂದೂ ಸಾಮ್ರಾಜ್ಯಶಾಹಿಗಳ ವಿರುದ್ಧ ಸಮರ ಸಾರಿದ ಬುದ್ಧ-ಬಸವ ಅಂಬೇಡ್ಕರ್‌ರ ತತ್ವಗಳಿಗಿಂತಲೂ ಹಿಂದೂತ್ವವನ್ನು ಒಪ್ಪಿಕೊಳ್ಳಬೇಕೆಂಬ ಸಂದೇಶವನ್ನು ಸಮಾಜಕ್ಕೆ ರವಾನಿಸಿದಂತಾಗುತ್ತದೆ! ಹಾಗೂ ಅಸ್ಪೃಶ್ಯತಾಚರಣೆ ಮಾಡುವ ಕೋಮು ಸಂಘರ್ಷಣೆಯ ವಾತಾವರಣ ನಿರ್ಮಿಸುವ ಅಮಾನವೀಯ ಜನವರ್ಗದ ಸಂಸ್ಕೃತಿಯೇ ಶ್ರೇಷ್ಠವೆಂದು ಒಪ್ಪಿಕೊಂಡಂತಾಗುತ್ತದೆ.

ಹಿಂದುತ್ವವನ್ನು ಅರ್ಥಾತ್ ಬ್ರಾಹ್ಮಣ ಸಂಸ್ಕೃತಿಯನ್ನು ಅಳವಡಿಸಿಕೊಳ್ಳದ ಹೊರತು ಈ ನೆಲದ ಮೂಲ ನಿವಾಸಿಗಳಾದ ದಲಿತರು, ಆದಿವಾಸಿಗಳು ಹಾಗೂ ಅಲ್ಪಸಂಖ್ಯಾತರು ನಿರುಮ್ಮಳವಾಗಿ ಬದುಕಲು ಸಾಧ್ಯವಿಲ್ಲವೆಂಬ ಅನಿವಾರ್ಯತೆಯ 'ಸಾಂಸ್ಕೃತಿಕ ಭೀತಿ'ಯನ್ನು ಸೃಷ್ಟಿಸುತ್ತಿರುವ ಹಿಂದೂ ಕೋಮುವಾದವನ್ನು ನೀಗಿಕೊಳ್ಳಬೇಕಾಗಿದೆ. ಇದೇ ನಿಷ್ಠುರ ನಿಲುವನ್ನು ಅಂತಾರಾಷ್ಟ್ರೀಯ ಯಜಮಾನರ ಪೋಷಣೆಯಿಂದ ಉಲ್ಬಣಗೊಳ್ಳುತ್ತಿರುವ ಮುಸ್ಲಿಂ ಮತ್ತಿತರ ಕೋಮುಶಕ್ತಿಗಳ ಮೂಲ ಭೂತವಾದ ವಿರುದ್ಧವೂ ತಳೆಯಬೇಕಾಗಿದೆ. □

ಮೊಟ್ಟೆ ರಾಜಕಾರಣ: ಅಲ್ಪಸಂಖ್ಯಾತರು V/S ಬಹುಜನ ಸಮಾಜ

(೧೫ನೇ ಪುಟದಿಂದ)

ವನ್ನು ನಿರಾಕರಿಸುತ್ತ ಜಾತಿ-ಭಾಷೆ ಮತ್ತು ಧರ್ಮದ ಹೆಸ ರಿನಲ್ಲಿ ಪರಸ್ಪರ ಕಚ್ಚಾಡುವಂತೆ ಮಾಡಿದ್ದಾರೆ. ಅದರ ಮುಂದುವರಿದ ಭಾಗವೇ ಮನುವಾದಿಗಳ ಮೊಟ್ಟೆ ರಾಜಕಾರಣ. ಇಂಗ್ಲೀಷ್ ಕಲಿಸುವಿಕೆಯನ್ನು ವಿರೋಧಿ ಸಿದ ಕುಯುಕ್ತಿಯವರೇ ಇಂದು ಮೊಟ್ಟೆಯನ್ನು ವಿರೋ ಧಿಸುತ್ತಿದ್ದಾರೆ. ಈ ಕುತಂತ್ರಿಗಳಿಗೆ ತಲೆಯೊಪ್ಪಿಸಿರುವ 'ಕೋಜಾ' ಸರ್ಕಾರದ ಪ್ರತಿನಿಧಿಗಳು ದಿವಾಳಿಯೆದ್ದಿರುವ ರೈತಾಪಿ ವರ್ಗಕ್ಕೆ ಸಹಾಯ ಮಾಡಲು ಮೊಟ್ಟೆ ಬದಲು ಹಾಲು ವಿತರಿಸುವುದಾಗಿ ಕೊಚ್ಚಿಕೊಳ್ಳುತ್ತಿದ್ದಾರೆ. ಈ ಸರ್ಕಾರಕ್ಕೆ ನಿಜವಾಗಿಯೂ ರೈತರಿಗೆ ಸಹಾಯ ಮಾಡುವ ರಾಜಕೀಯ ಇಚ್ಛಾಶಕ್ತಿಯಿದ್ದರೆ ರೈತರಿಗೆ ಕಂಟ ಕವಾಗಿರುವ ಬಹುರಾಷ್ಟ್ರೀಯ ಕಂಪನಿಗಳನ್ನು, ನಕಲಿ ಬೀಜ-ಗೊಬ್ಬರ-ರಾಸಾಯನಿಕಗಳ ತಯಾರಕರನ್ನು ಭ್ರಷ್ಟ ಮಾರುಕಟ್ಟೆ ದಲ್ಲಾಳಿಗಳನ್ನು, ಭೂಗಳ್ಳರನ್ನು ಮತ್ತು ಶ್ರಿಮಂತರಿಗೆ ಮಣೆ ಹಾಕುವ ಬ್ಯಾಂಕುಗಳನ್ನು ಹಣೆಯಲಿ! ಅದು ಬಿಟ್ಟು ಶಾಲಾಮಕ್ಕಳಿಗೆ ಹಾಲು ವಿತರಿಸುವು ದರಿಂದ ಅವರ ತಾಪತ್ರಯಗಳನ್ನು ಬಗೆಹರಿಸುತ್ತೇವೆಂಬ ಬಾಲಿಶತನ ಹಾಸ್ಯಾಸ್ಪದವಾಗಿ ಕಾಣುತ್ತದಷ್ಟೇ!

ಮೊಟ್ಟೆ ನೀಡಿದರೆ ಕೆಲ ಉದ್ಯಮಿಗಳಿಗೆ ಮಾತ್ರ ಅನುಕೂಲವಾಗುವುದರಿಂದ, ಅದನ್ನು ತಪ್ಪಿಸಿ ರೈತರಿಗೆ ಅನುಕೂಲವಾಗಲು ಹಾಲುಕೊಡಲು ಸಚಿವ ಸಂಪುಟ ಒಲವು ವ್ಯಕ್ತಪಡಿಸಿದೆ ಎಂದು ಗೃಹಮಂತ್ರಿಗಳು ಹೇಳಿದ್ದಾರೆ. ಹಾಗಾದರೆ ಮೊಟ್ಟೆಯಿಂದ ಅನುಕೂಲ ಪಡೆಯುವ ಆ ವರ್ಗಯಾವುದು? ಅದು ನಿಸ್ಸಂಶಯವಾಗಿ ಮುಸ್ಲಿಮ್ ವರ್ಗ. ಇವರೊಂದಿಗೆ ಕೆಲ ದಲಿತ ಹಾಗೂ ಹಿಂದುಳಿದ ಜಾತಿಯವರೂ ಆ ವರ್ಗದಲ್ಲಿ ಬರುತ್ತಾರೆ. ವರ್ಷಕ್ಕೆ ಕೋಟ್ಯಾಂತರ ರೂಪಾಯಿಗಳ ವಹಿವಾಟಿನ ಮೊಟ್ಟೆ ಸರಬರಾಜು ಮಾಡುವ ಅವಕಾಶ ಈ ವರ್ಗಗಳಿಗೆ ದಕ್ಕದಂತೆ ಮಾಡಲು ಸಂಘಪರಿವಾರ ಹೆಣೆದ ಸೂತ್ರವೇ ಮೊಟ್ಟೆಗೆ ಪರ್ಯಾಯವಾಗಿ ಹಾಲುಹಣ್ಣು ಪೂರೈಸುವ ವಿಧಾನ. ಇದನ್ನು ಸಮರ್ಥಿಸಲು ಮತ್ತೊಂದು ಕಾರಣವನ್ನು ಮುಂದಿಡಲಾಗಿದೆ. ಮೊಟ್ಟೆಗಳು ಕೆಡುತ್ತವೆ-ಹಾಳಾಗುತ್ತವೆ, ಇದರಿಂದ ನಷ್ಟವುಂಟಾಗುತ್ತದೆ, ಬಾಳೆಹಣ್ಣು ಮತ್ತು ಹಾಲು ಕೆಡದಿರುವುದರಿಂದ ನಷ್ಟದ ಪ್ರಶ್ನೆಯೇ ಉದ್ಭವಿಸುವುದಿಲ್ಲ, ಇದರೊಂದಿಗೆ ಮಕ್ಕಳಿಗೆ ತಾಜಾ ಹಾಲು ಹಣ್ಣು ದೊರೆಯುತ್ತದೆ. ಎಂಬುದು. ಕೆಟ್ಟು ಹೋಗುವ ಮೊಟ್ಟೆಗಳಿಗಿಂತ-ಕೊಳೆತು ಹೋಗುವ ಬಾಳೇ ಹಣ್ಣುಗಳ ಪ್ರಮಾಣವೇ ಅತ್ಯಧಿಕ. ಸರ್ಕಾರ ಪೂರೈಸುವ ಹಾಲು ಕಲಬೆರಕೆ ಡೈರಿ ಹಾಲೇ ಹೊರತು ಶುದ್ಧ ತಾಜಾ ಹಾಲು ಅಲ್ಲವೇ ಅಲ್ಲ. ಈ ಹಿನ್ನೆಲೆಯಲ್ಲಿ 'ಕೋಜಾ' ಕಲಬೆರಕೆ ಸರ್ಕಾರ ಕೊಡುವ ಕಾರಣಗಳಿಗೆ ತಳಬುಡವಿಲ್ಲ.

ಪಕ್ಕದ ತಮಿಳುನಾಡಿನಲ್ಲಿ ಈಗಾಗಲೇ ಈ ಯೋಜನೆ ಯಶಸ್ವಿಯಾಗಿ ಜಾರಿಯಲ್ಲಿದ್ದರೂ,ಅದನ್ನು ಅನುಸರಿಸುವ ವ್ಯವಧಾನ ಕರ್ನಾಟಕ ಸರ್ಕಾರಕ್ಕಿಲ್ಲ. ಸರ್ಕಾ ರದ ಈ ಮನುವಾದಿ ನಿರ್ಧಾರವನ್ನು ಸಮರ್ಥವಾಗಿ ಜಾಡಿಸಿ ಬಹುಜನರ ಪರವಾಗಿ ರಾಜಕೀಯ ಹೋರಾಟ ಮಾಡುವ ಛಾತಿ ಮೊಟ್ಟೆ-ಮಾಂಸದ ತಳಸಮುದಾಯ ಗಳ ಸಂಸ್ಕೃತಿಯಿಂದಲೇ ಬಂದ ಖರ್ಗೆ-ಸಿದ್ದರಾಮಯ್ಯ ನವರ ಕಾಂಗ್ರೆಸ್ ಪಕ್ಷಕ್ಕಿಲ್ಲ. ಕರ್ನಾಟಕದ ಬಹುಜನರ ಪರವಾದ ತೃತೀಯ ಪಕ್ಷವೂ ಅಸ್ತಿತ್ವದಲ್ಲಿ ಎದ್ದು ಕಾಣುತ್ತಿಲ್ಲವಾದ್ದರಿಂದ ಪರ್ಯಾಯ ರಾಜಕೀಯದ ಜಿಜ್ಞಾಸೆ ಮೂಡಿದೆ. ಬ್ರಾಹ್ಮಣ, ಲಿಂಗಾಯತ ಹಾಗೂ ಒಕ್ಕಲಿಗ ಜಾತಿಗಳ ಬಹುತೇಕ ಜನರು 'ಕೋಜಾ' ಪಕ್ಷಗಳಲ್ಲಿ ಸಂಘಟಿತರಾಗುತ್ತಿರುವ ಸ್ಪಷ್ಟ ಸೂಚನೆ ಚಾಮುಂಡೇಶ್ವರಿ ಉಪಚುನಾವಣೆಯಲ್ಲಿ ಸಾಬೀತಾಗಿದೆ. ವಿರಾಟ್ ಹಿಂದೂ ಸಮಾಜೋತ್ಸವ ಹಾಗೂ ಮೊಟ್ಟೆ ರಾಜಕಾರ ಣವನ್ನು ಕೂಡ ಈ ದಿಸೆಯಲ್ಲಿ ನೋಡಬೇಕಾಗಿದೆ.

ಅವಕಾಶದ ಸಿದ್ಧಾಂತರಹಿತ ರಾಜಕೀಯ ಪಕ್ಷಗಳ ಸ್ವಾರ್ಥ ರಾಜಕಾರಣದಿಂದ ಸಮಾಜದ ಬಹುಜನರಿಗೆ ದ್ರೋಹವೊಂದನ್ನು ಬಿಟ್ಟು ಯಾವುದೇ ಪ್ರಯೋಜನವಾಗದಿರುವುದರಿಂದ, ಮನುವಾದದ ವಿರುದ್ಧ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಂದೋಲನವೇ ಪರ್ಯಾಯವಾಗಿ ಗೋಚರಿಸುತ್ತಿದೆ! □

ಹೀಗೊಬ್ಬ ಸರಣಿ ಅಪಹರಣಕಾರ

ಮುಂಬೈನ ನ್ಯಾಯಾಲಯದ ಆದೇಶದ ಮೇರೆಗೆ ನಡೆಸಲಾದ ಪೊಲೀಸ್ ವಿಚಾರಣೆಯ ಪ್ರಕಾರ, ಬಾಬುಭಾಯಿ ಹುಡುಗಿಯರನ್ನು ಅಪಹರಿಸುವುದೇ ಅಲ್ಲದೆ, ಅವರಿಗೆ ಹೊಡೆದು ಬಡಿದು, ಹಿಂಸಿಸುವ ಪ್ರಕರಣಗಳೂ ನಡೆದಿವೆ. ಗರ್ಭಿಣಿಯಾಗಿದ್ದವರಿಗೆ ಗರ್ಭಪಾತ ಮಾಡಿಸಲಾಗಿದೆ. ಪೊಲೀಸರ ವರದಿಯಲ್ಲಿ, ಬಾಬು ಭಾಯಿಯನ್ನು ಬಂಧಿಸಿ ವಿಚಾರಣೆಗೊಳಪಡಿಸಿದಲ್ಲಿ, ಇನ್ನೂ ಹೆಚ್ಚು ಅಪಹರಣವಾದ ಹುಡುಗಿಯರ ಸುಳಿವು ದೊರೆಯುವ ಸಾಧ್ಯತೆಗಳಿವೆ ಎಂದು ಹೇಳಲಾಗಿದೆಯಾದರೂ, ಅಪಹೃತ ಪತ್ನಿಯರು ಇದಕ್ಕೆ ಪೂರಕವಾಗಿ ಹೇಳಿಕೆಗಳನ್ನು ನೀಡದಿರುವುದರಿಂದ, ಈ ಮೊಕದ್ದಮೆಯನ್ನು ವೈವಾಹಿಕ ನ್ಯಾಯಾಲಯದಲ್ಲೇ ಬಗೆಹರಿಸಬಹುದೆಂದು ಅಭಿಪ್ರಾಯಪಟ್ಟಿದೆ. ಬಾಬು ಭಾಯಿ ವಿರುದ್ಧ ದೂರು ಸಲ್ಲಿಸಿರುವ ನಾಲ್ವರು ಯುವಕರು, ಸರ್ವೋಚ್ಛ ನ್ಯಾಯಾಲಯದ ಮೊರೆ ಹೋಗಲು ನಿರ್ಧರಿಸಿದ್ದಾರೆ.

"ನೀವು ಒಂದು ಹುಡುಗಿಯನ್ನು ರಕ್ಷಿಸಿದರೆ, ನೂರು ಗೋವುಗಳನ್ನು ರಕ್ಷಿಸಿದಂತೆ. ಒಬ್ಬ ಮಗಳು ನೂರು ಪವಿತ್ರ ಗೋವುಗಳಿಗೆ ಸಮಾನ" ಇದು ಯಾವುದೇ ಮಹಾನ್ ಯೋಗಿಯ ವಾಣಿಯಲ್ಲ. ಅಹಮದಾಬಾದ್‌ನ ನವಚೇತನ್ ಟ್ರಸ್ಟ್‌ನ ಬಾಬು ಭಜರಂಗಿಯವರ ಕರಪತ್ರದಲ್ಲಿ ಮುದ್ರಿತವಾದ ದಿವ್ಯವಾಣಿ. ಗುಜರಾತಿನ ಈ ಸರಣಿ ಅಪಹರಣಕಾರನ ಬಳಿ ಹಲವಾರು ಅಪಹೃತ ಹುಡುಗಿಯರು ದೊರೆಯುತ್ತಾರೆ. ಈತನು ಅಪಹರಿಸುವ ಹುಡುಗಿಯರೆಲ್ಲರೂ ಪಟೇಲ್ ಸಮುದಾಯಕ್ಕೆ ಸೇರಿದವರೇ ಆಗಿರುತ್ತಾರೆ. ಇತರ ಅಪಹರಣಕಾರರಂತೆ ಈತ ಹಣಕ್ಕಾಗಿ ಅಥವಾ ಇನ್ನಾವುದೇ ಆಮಿಷಗಳಿಗಾಗಿ ಹುಡುಗಿಯರನ್ನು ಅಪಹರಿಸುವುದಿಲ್ಲ. ಆದರೆ ತಾನು ಮಾಡುತ್ತಿರುವ ಕೆಲಸದ ಬಗ್ಗೆ ಈತನಿಗೆ ಖೇದವೂ ಇಲ್ಲ.

ಅಹಮದಾಬಾದ್‌ನ ನರೋಡದಲ್ಲಿರುವ ಬಾಬು ಭಾಯಿ ಪಟೇಲ್ ಅಲಿಯಾಸ್ ಬಾಬುಭಜರಂಗಿ, ಭಜರಂಗದಳದ ಸಕ್ರಿಯ ಕಾರ್ಯಕರ್ತ. ೨೦೦೨ರ ಗುಜರಾತ್ ಕೋಮುಗಲಭೆಗಳಲ್ಲಿ ನರೋಡ ಪಾತಿಯಾ ಹತ್ಯಾಕಾಂಡದಲ್ಲಿ ಈತ ಪ್ರಮುಖ ಆರೋಪಿ. ಆದರೆ ಈತನಿಗಿನ್ನೂ ಶಿಕ್ಷೆಯಾಗದಿರುವುದರಿಂದ ಸ್ವತಂತ್ರವಾಗಿ ಓಡಾಡಿಕೊಂಡಿದ್ದಾರೆ. ನವಚೇತನ ಎಂಬ ಟ್ರಸ್ಟ್ ಆರಂಭಿಸುವ ಮೂಲಕ, ಪಟೇಲ್ ಸಮುದಾಯದ ಹುಡುಗಿಯರು ತಮ್ಮ ಸಮುದಾಯದಿಂದ ಹೊರಗೆ ವಿವಾಹವಾಗದಂತೆ ಎಚ್ಚರ ವಹಿಸುವುದೇ ಬಾಬುಭಾಯಿಯವರ ಪರಮೋದ್ದೇಶ.

"ನಮ್ಮ ಪ್ರತಿಯೊಂದು ಕುಟುಂಬಗಳಲ್ಲೂ ಒಂದು ಜೀವಂತ ಬಾಂಬು ಇರುತ್ತದೆ. ಈ ಬಾಂಬುಗಳು ಯಾವ ಕ್ಷಣದಲ್ಲಾದರೂ ಸಿಡಿಯಬಹುದು. ಆ ಬಾಂಬು ಯಾರೆಂದುಕೊಂಡಿರಿ? ನಮ್ಮ ಹೆಣ್ಣು ಮಕ್ಕಳು. ಹೆಣ್ಣು ಮಕ್ಕಳು ನಮ್ಮ ಕುಟುಂಬಗಳ ಮತ್ತು ಸಮುದಾಯದ ಘನತೆ, ಗೌರವದ ಪ್ರತೀಕ. ಅದನ್ನು ಕಾಪಾಡುವುದು ನಮ್ಮ ಹಿಂದೂ ಸಂಪ್ರದಾಯ ಮತ್ತು ಹಿಂದೂಗಳ ಕರ್ತವ್ಯವೂ ಹೌದು. ಬನ್ನಿ ಎಲ್ಲರೂ ಕೈ ಜೋಡಿಸಿ ಈ ಬಾಂಬುಗಳನ್ನು ರಕ್ಷಿಸೋಣ, ಜೈ ಶ್ರೀ ರಾಂ" ಈ ಸಂದೇಶವನ್ನು ಸಾರುವ ಲಕ್ಷಾಂತರ ಕರಪತ್ರಗಳನ್ನು ಬಾಬುಭಾಯಿ ಇಡೀ ಗುಜರಾತಿನಲ್ಲಿ ಹಂಚಿದ್ದಾರೆ.

"ನನಗೆ ಪ್ರೇಮ ವಿವಾಹದಲ್ಲಿ ನಂಬಿಕೆಯಿಲ್ಲ. ನಾವು ನಮ್ಮ ಪಂಗಡದೊಳಗೇ ಮದುವೆಯಾಗುವುದು ಸೂಕ್ತ ಎಂದು ನಂಬುತ್ತೇನೆ. ಈ ಹುಡುಗಿಯರು ಕಾಲೇಜಿಗೆ ಹೋಗುತ್ತಾರೆ, ಅಲ್ಲಿ ಕೆಲವು ಲಫಂಗರೊಡನೆ ಸ್ನೇಹ ಬೆಳೆಸುತ್ತಾರೆ, ಅವರೊಡನೆ ಬೈಕುಗಳಲ್ಲಿ ಓಡಾಡಿ, ಪ್ರೇಮಾಂಕುರವಾಗಿ, ಮದುವೆಯಾಗಿ ಓಡಿ ಹೋಗುತ್ತಾರೆ. ಇಂತಹವರನ್ನು ನಾನು ಅಪಹರಿಸಿ ತಂದು, ಅವರನ್ನು ನಮ್ಮ ಪಂಗಡದೊಳಗೇ ವಿವಾಹವಾಗಲು ಒಪ್ಪಿಸಿ, ನಂತರ ಅವರ ಪೋಷಕರ ಬಳಿಗೆ ಕಳುಹಿಸುತ್ತೇನೆ. ಅವರು ಮಾಡುತ್ತಿರುವ ತಪ್ಪನ್ನು ಅವರಿಗೆ ಮನವರಿಕೆಯಾಗುವಂತೆ ಮಾಡಿ, ಅವರಿಗೆ ಆಶ್ರಯ ನೀಡಿ, ಅವರ ಮನಸ್ಸನ್ನು ಶುದ್ಧೀಕರಿಸಿ ನಂತರ ಅವರ ಮನೆಗೆ ಕಳುಹಿಸುತ್ತೇವೆ, ಹಾಗಾಗಿಯೇ ಅವರು ನಮ್ಮೊಡನೆ ಸಹಕರಿಸುತ್ತಾರೆ" ಎನ್ನುತ್ತಾರೆ ಬಾಬುಭಾಯಿ.

ಹಲವಾರು ಸಂದರ್ಭಗಳಲ್ಲಿ ಬಾಬು ಭಾಯಿಯವರು ಹುಡುಗಿಯರನ್ನು ಬಿಡಿಸಿಕೊಳ್ಳಲು ಕೆಲವರನ್ನು ಥಳಿಸಿದ್ದೂ ಇದೆ. "ಹುಡುಗಿಯರನ್ನು ಬಿಡಿಸಿ ತರಲು ನಾವು ಯಾವ ಮಾರ್ಗವನ್ನಾದರೂ ಉಪಯೋಗಿಸುತ್ತೇವೆ. ಹುಡುಗರು ಮುಸಲ್ಮಾನರಾದರೆ, ನಮ್ಮ ಹುಡುಗಿ ಅವರನ್ನು ಬಿಟ್ಟು ಬರಲು ಒಪ್ಪದಿದ್ದರೂ, ಆ ಮುಸಲ್ಮಾನ ಹುಡುಗನನ್ನು ಥಳಿಸಿ, ನಮ್ಮ ಹುಡುಗಿಯನ್ನು ಬಿಡಿಸಿ ತರುತ್ತೇವೆ. ಈ ಮುಸ್ಲಿಂ ಹುಡುಗರಿಗೆ ನಮ್ಮ ಹುಡುಗಿಯರನ್ನು ಮದುವೆಯಾಗಲು ಎಷ್ಟು ಧೈರ್ಯವಿರಬೇಕು, ಅವರಿಗೆ ನಮ್ಮ ದೇಶದಲ್ಲಿ ನೆಲೆಸುವ ಹಕ್ಕೇ ಇಲ್ಲ" ಎನ್ನುತ್ತಾರೆ ವೀರಾವೇಶದ ಬಾಬುಭಾಯಿ. ಆದರೆ ನ್ಯಾಯಾಲಯದಲ್ಲಿ ಬಾಬುಭಾಯಿಯ ವಿರುದ್ಧ ಮೊಕದ್ದಮೆ ಹೂಡಿರುವುದು ಮುಸ್ಲಿಂ ಯುವಕರಲ್ಲ. ಬದಲಾಗಿ ಮಹಾರಾಷ್ಟ್ರದ ನಾಲ್ವರು ಹಿಂದೂ ಯುವಕರು.



'ಅಪಹರಣವೇ ಸೇವೆ' ಬಾಬು ಭಜರಂಗಿ

ಅಜಯ್ ಮತ್ತು ಗೀತಾ ಪರಸ್ಪರ ಪ್ರೀತಿಸಿ, ಐದು ವರ್ಷಗಳ ನಂತರ ವಿವಾಹವಾದವರು. ತನ್ನ ಪದವಿ ಮುಗಿಯುವವರೆಗೆ ತನ್ನ ತಂದೆ ತಾಯಿಯರೊಡನೆಯೇ ಇದ್ದ ಗೀತಾ, ನಂತರ ತನ್ನ ಸ್ವ ಇಚ್ಛೆಯಿಂದ ಅಜಯ್‌ನನ್ನು ವರಿಸಿದ್ದಳು. ಕುಟುಂಬಗಳಿಂದಲೂ ಯಾವುದೇ ರೀತಿಯ ವಿರೋಧ ವ್ಯಕ್ತವಾಗಿರಲಿಲ್ಲ. ಒಂದು ದಿನ ಮುಂಬೈನಲ್ಲಿ ತನ್ನ ತಾಯಿಯೊಡನೆ ವೈದ್ಯರ ಬಳಿಗೆ ಹೋಗುತ್ತಿದ್ದ ಗೀತಾಳನ್ನು ಅಪಹರಿಸಿ ಗುಜರಾತಿಗೆ ಕರೆದೊಯ್ಯಲಾಯಿತೆಂದು ಗೀತಾ ಹೇಳುತ್ತಾರೆ. ಹತ್ತು ದಿನಗಳ ಬಳಿಕ ತನ್ನನ್ನು ಭೇಟಿಯಾಗುವಂತೆ ಫೋನ್ ಮಾಡಿದ ಗೀತಾಳನ್ನು ಹುಡುಕಿಕೊಂಡು ಗುಜರಾತ್‌ಗೆ ಹೊರಟ ಅಜಯ್‌ನನ್ನೂ ಸಹ ನರೋಡಾದಲ್ಲಿ ಬಾಬುಭಾಯಿಯ ಸಶಸ್ತ್ರ ಗುಂಪು ಅಪಹರಿಸಿತು.

ಮುಂಬೈನ ನ್ಯಾಯಾಲಯದ ಆದೇಶದ ಮೇರೆಗೆ ನಡೆಸಲಾದ ಪೊಲೀಸ್ ವಿಚಾರಣೆಯ ಪ್ರಕಾರ, ಬಾಬು ಭಾಯಿ ಹುಡುಗಿಯರನ್ನು ಅಪಹರಿಸುವುದೇ ಅಲ್ಲದೆ, ಅವರಿಗೆ ಹೊಡೆದು ಬಡಿದು, ಹಿಂಸಿಸುವ ಪ್ರಕರಣಗಳೂ ನಡೆದಿವೆ. ಗರ್ಭಿಣಿಯಾಗಿದ್ದವರಿಗೆ ಗರ್ಭಪಾತ ಮಾಡಿಸಲಾಗಿದೆ. ಪೊಲೀಸರ ವರದಿಯಲ್ಲಿ, ಬಾಬು ಭಾಯಿಯನ್ನು ಬಂಧಿಸಿ ವಿಚಾರಣೆಗೊಳಪಡಿಸಿದಲ್ಲಿ, ಇನ್ನೂ ಹೆಚ್ಚು ಅಪಹರಣವಾದ ಹುಡುಗಿಯರ ಸುಳಿವು ದೊರೆಯುವ ಸಾಧ್ಯತೆಗಳಿವೆ ಎಂದು ಹೇಳಲಾಗಿದೆಯಾದರೂ, ಅಪಹೃತ ಪತ್ನಿಯರು ಇದಕ್ಕೆ ಪೂರಕವಾಗಿ ಹೇಳಿಕೆಗಳನ್ನು ನೀಡದಿರುವುದರಿಂದ, ಈ ಮೊಕದ್ದಮೆಯನ್ನು ವೈವಾಹಿಕ ನ್ಯಾಯಾಲಯದಲ್ಲೇ ಬಗೆಹರಿಸಬಹುದೆಂದು ಅಭಿಪ್ರಾಯಪಟ್ಟಿದೆ. ಬಾಬುಭಾಯಿ ವಿರುದ್ಧ ದೂರು ಸಲ್ಲಿಸಿರುವ ನಾಲ್ವರು ಯುವಕರು, ಸರ್ವೋಚ್ಛ ನ್ಯಾಯಾಲಯದ ಮೊರೆ ಹೋಗಲು ನಿರ್ಧರಿಸಿದ್ದಾರೆ. ಏತನ್ಮಧ್ಯೆ ಬಾಬು ಭಾಯಿಯ ಅಪಹರಣಗಳು ಅವ್ಯಾಹತವಾಗಿ ನಡೆಯುತ್ತಲೇ ಇವೆ. ಇದುವರೆವಿಗೂ ೨೦೬ ಹುಡುಗಿಯನ್ನು ಅಪಹರಿಸಿರುವುದಾಗಿ ಅವರೇ ಹೇಳಿರುತ್ತಾರೆ.

ಈ ಪ್ರಕರಣದಲ್ಲಿ ಭಾಗಿಯಾಗಿರುವ ಅಜಯ್ ನಿಕಮ್‌ರವರ ಕಥೆ ಸಿನಿಮಾ ಕಥೆಯಂತೆಯೇ ಇದೆ. ಅಜಯ್ ಮತ್ತು ಗೀತಾ ಪರಸ್ಪರ ಪ್ರೀತಿಸಿ, ಐದು ವರ್ಷಗಳ ನಂತರ ವಿವಾಹವಾದವರು. ತನ್ನ ಪದವಿ ಮುಗಿಯುವವರೆಗೆ ತನ್ನ ತಂದೆ ತಾಯಿಯರೊಡನೆಯೇ ಇದ್ದ ಗೀತಾ, ನಂತರ ತನ್ನ ಸ್ವ ಇಚ್ಛೆಯಿಂದ ಅಜಯ್‌ನನ್ನು ವರಿಸಿದ್ದಳು. ಕುಟುಂಬಗಳಿಂದಲೂ ಯಾವುದೇ ರೀತಿಯ ವಿರೋಧ ವ್ಯಕ್ತವಾಗಿರಲಿಲ್ಲ. ಒಂದು ದಿನ ಮುಂಬೈನಲ್ಲಿ ತನ್ನ ತಾಯಿಯೊಡನೆ ವೈದ್ಯರ ಬಳಿಗೆ ಹೋಗುತ್ತಿದ್ದ ಗೀತಾಳನ್ನು ಅಪಹರಿಸಿ ಗುಜರಾತಿಗೆ ಕರೆದೊಯ್ಯಲಾಯಿತೆಂದು ಗೀತಾ ಹೇಳುತ್ತಾರೆ. ಹತ್ತು ದಿನಗಳ ಬಳಿಕ ತನ್ನನ್ನು ಭೇಟಿಯಾಗುವಂತೆ ಫೋನ್ ಮಾಡಿದ ಗೀತಳನ್ನು ಹುಡುಕಿಕೊಂಡು ಗುಜರಾತ್‌ಗೆ ಹೊರಟ ಅಜಯ್‌ನನ್ನೂ ಸಹ ನರೋಡಾದಲ್ಲಿ ಬಾಬುಭಾಯಿಯ ಸಶಸ್ತ್ರ ಗುಂಪು ಅಪಹರಿಸಿತು. "ನಾವು ಕ್ರೈಂ ಬ್ರಾಂಚ್‌ನಿಂದ ಬಂದಿದ್ದೇವೆ ಎಂದು ಹೇಳಿ ನನ್ನನ್ನು ಕಾರಿನಲ್ಲಿ ಎತ್ತಿ ಹಾಕಿಕೊಂಡು ಹೋದರು, ಅವರ ಕೈಗಳಲ್ಲಿ ಸ್ಟೆನ್‌ಗನ್ನುಗಳನ್ನು ಹೊಂದಿದ್ದರಿಂದ ನಾನೂ ನಂಬಬೇಕಾಯಿತು" ಎನ್ನುತ್ತಾರೆ ಅಜಯ್ ನಿಕಮ್. ನಂತರ ಅಜಯ್‌ನನ್ನು ಅವನ ಹೆಂಡತಿಯ ಬಳಿಗೆ ಕರೆದೊಯ್ಯಲಾಯಿತಲ್ಲದೆ, ಇಬ್ಬರಿಂದಲೂ ಕೆಲವು ಪತ್ರಗಳ ಮೇಲೆ ಸಹಿ ಹಾಕಿಸಿಕೊಳ್ಳಲಾಯಿತು" ನಿನಗೆ ನನ್ನ ಮೇಲೆ ಪ್ರೀತಿ ಇದ್ದರೆ ಈ ಪತ್ರಗಳಿಗೆ ಸಹಿ ಹಾಕು" ಎಂಬ ಹೆಂಡತಿಯ ಮಾತಿನಿಂದ ಅಪಾಯದ ಸುಳಿವನ್ನು ಅರಿತ ಅಜಯ್ ಮಾತನಾಡದೆ ಸಹಿ ಮಾಡಿದ್ದ.

ನಂತರ ಮುಂಬೈಗೆ ಬಂದ ಅಜಯ್ ಕೂಡಲೇ ಪೊಲೀಸರಿಗೆ ದೂರು ಸಲ್ಲಿಸಲು ಹೋದರೂ, ಫಲಪ್ರದವಾಗದೆ, ಅಜಯ್ ಕೊನೆಗೆ ನ್ಯಾಯಾಲಯದ ಮೊರೆ ಹೋಗಬೇಕಾಯಿತು. ಮೊಕದ್ದಮೆ ನಡೆಯುವ ದಿನ ಗೀತಾಳ ಜೊತೆಯಲ್ಲಿ ಬಹಳಷ್ಟು ಜನ ಬಂದಿದ್ದರಿಂದ ಆಕೆಗೆ ನ್ಯಾಯಾಲಯದಲ್ಲಿ ಮಾತನಾಡಲೂ ಆಗಲಿಲ್ಲ ಎನ್ನುತ್ತಾನೆ ಅಜಯ್. ನಂತರ ನ್ಯಾಯಾಧೀಶರ ಖಾಸಗಿ ಕೊಠಡಿಯಲ್ಲಿ ಮಾತನಾಡಿದಾಗ "ನಮ್ಮಿಬ್ಬರ ಜೀವಕ್ಕೂ ಅಪಾಯವಿದೆ, ಹಾಗಾಗಿ ತಾನು ಬಲವಂತವಾಗಿ ಸಹಿ ಮಾಡಿದೆ, ಬಾಬು ಭಜರಂಗಿಯ ಭಯದಿಂದ ಕಟಕಟೆಯಲ್ಲಿ ಏನೂ ಮಾತನಾಡಲಾಗಲಿಲ್ಲ" ಎಂದು ಗೀತಾ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದಾಳೆ. ಮುಂಬೈಗೆ ಮರಳಿದ ನಂತರ ಗೀತಾ ಮತ್ತು ಅಜಯ್ ಭೇಟಿಯಾಗಲು ಯತ್ನಿಸಿದರೂ, ಪೋಷಕರು ಅಡ್ಡಿಪಡಿಸುತ್ತಿದ್ದಾರೆನ್ನಲಾಗಿದೆ. ಗೀತಾ ಕೆಲವು ಬಾರಿ ಆತ್ಮಹತ್ಯೆಗೂ ಪ್ರಯತ್ನಿಸಿದ್ದಿದೆ. ಈ ವೇಳೆಗೆ ಗೀತಾಳನ್ನು ಮತ್ತೊಬ್ಬರಿಗೆ ಕೊಟ್ಟು ಮದುವೆ ಮಾಡಿರಬಹುದೆಂದು ಹೇಳುವ ಅಜಯ್, ತನ್ನ ಸ್ನೇಹಿತ ರಾಜುವಿನ ಪತ್ನಿಯನ್ನು ಬಾಬುಭಾಯಿಯ ಸಂಬಂಧಿ ಮದುವೆಯಾಗಿರುವುದನ್ನೂ ನೋವಿನಿಂದ ಹೇಳಿಕೊಳ್ಳುತ್ತಾರೆ.

> **ನೂರಾರು ಹುಡುಗಿಯರು ಬಾಬು ಭಾಯಿಯ ಬಳಿ ಬಂಧಿತರಾಗಿದ್ದಾರೆ. ಸಂಪ್ರದಾಯ ಮತ್ತು ಧರ್ಮ ರಕ್ಷಣೆಯ ಹೆಸರಿನಲ್ಲಿ ಅಪಹರಣಗಳು ನಡೆಯುತ್ತಲೇ ಇವೆ. ಗೀತಾ, ರೀಮಾಗಳು ಯಾತನೆ ಅನುಭವಿಸುತ್ತಲೇ ಇದ್ದಾರೆ. ಈ ನಡುವೆ ಬಾಬುಬಾಯಿ ಭಜರಂಗಿ ಸ್ವೇಚ್ಛೆಯಿಂದ ತಿರುಗಾಡುತ್ತಿದ್ದಾನೆ.**

ಅಜಯ್ ಗೀತಾರ ಸುದ್ದಿಯನ್ನು ಪತ್ರಿಕೆಯಲ್ಲಿ ನೋಡಿದ ರಾಜು, ಅಭಿಜೀತ್, ಪ್ರಶಾಂತ್ ಎಂಬು ಯುವಕರು ಈ ಸಮಸ್ಯೆ ಬಗೆಹರಿಸಲು ಮಾನವ ಹಕ್ಕುಗಳ ಹೋರಾಟಗಾರ್ತಿ ಟೀಸ್ಟಾ ಸೆಟಲ್ ವಾಡ್‌ರವರನ್ನು ಭೇಟಿಯಾಗಿ ತಮಗೆ ನ್ಯಾಯ ದೊರಕಿಸಿಕೊಡಲು ಕೇಳಿಕೊಂಡಿದ್ದಾರೆ. ಈಗ ಮೊಕದ್ದಮೆ ಮುಂಬೈ ಉಚ್ಛ ನ್ಯಾಯಾಲಯದಲ್ಲಿದೆ. ನ್ಯಾಯಾಲಯದ ಆದೇಶದ ಮೇರೆಗೆ ನಡೆದ ಪೊಲೀಸ್ ವಿಚಾರಣೆಯ ಸಮಯದಲ್ಲಿ ಬಾಬು ಭಾಯಿಯಿಂದ ತಪ್ಪಿಸಿಕೊಂಡಿದ್ದ ಇಬ್ಬರು ಯುವತಿಯರು, ಬಾಬು ಭಾಯಿ ತಮಗೆ ಚಿತ್ರಹಿಂಸೆ ನೀಡಿದ್ದನ್ನು, ಬಲವಂತವಾಗಿ ವಿವಾಹ ವಿಚ್ಛೇದನಕ್ಕೆ ಸಹಿ ಹಾಕಿಸಿಕೊಂಡದ್ದನ್ನೂ, ಅವರಲ್ಲೊಬ್ಬಳಾದ ರೀಮಾ ಎಂಬುವಳನ್ನು ಬಲವಂತವಾಗಿ ಆಸ್ಪತ್ರೆಗೆ ಕರೆದುಕೊಂಡುಹೋಗಿ ಗರ್ಭಪಾತ ಮಾಡಿಸಿದ್ದನ್ನೂ, ಇನ್ನೊಬ್ಬ ಭಾರತಿ ಎಂಬವಳನ್ನು, ಬಾಬುಭಾಯಿ ಮನೆಯಲ್ಲಿ ಗೀತಾ ಮತ್ತು ನವಿಲ್‌ರ ಜೊತೆಯಲ್ಲಿ ಕೋಣೆಯಲ್ಲಿ ಬಂಧಿಸಿ, ಚಿತ್ರಹಿಂಸೆ ಕೊಟ್ಟದ್ದನ್ನೂ ವಿವರವಾಗಿ ತಿಳಿಸಿದ್ದಾರೆ. ಭಾರತಿಯ ಪತಿ ಈಗಲೂ ಜೀವಭಯದಿಂದ ನೌಕರಿಗೆ ಹೋಗಲು ಹಿಂಜರಿಯುತ್ತಿದ್ದಾರೆ, ರೀಮಾ ಮತ್ತು ಅವಳ ಪತಿ ಗುಜರಾತಿನಲ್ಲಿ ಬಹುತೇಕ ಭೂಗತ ಜೀವನ ನಡೆಸುತ್ತಿದ್ದಾರೆ.

ಈ ರೀತಿಯಲ್ಲಿ ನೂರಾರು ಹುಡುಗಿಯರು ಬಾಬು ಭಾಯಿಯ ಬಳಿ ಬಂಧಿತರಾಗಿದ್ದಾರೆ. ಸಂಪ್ರದಾಯ ಮತ್ತು ಧರ್ಮ ರಕ್ಷಣೆಯ ಹೆಸರಿನಲ್ಲಿ ಅಪಹರಣಗಳು ನಡೆಯುತ್ತಲ್ಲೇ ಇವೆ. ಗೀತಾ, ರೀಮಾಗಳು ಯಾತನೆ ಅನುಭವಿಸುತ್ತಲೇ ಇದ್ದಾರೆ. ಈ ನಡುವೆ ಬಾಬು ಬಾಯಿ ಭಜರಂಗಿ ಸ್ವೇಚ್ಛೆಯಿಂದ ತಿರುಗಾಡುತ್ತಿದ್ದಾನೆ.

(ಮೂಲ" **A Serial Kidnapper and his mission by Dionne Bunsha Frontline Dec 29-06)**

ಅನು: ನಾ. ದಿವಾಕರ

ಕಳೆದು ಹೋಗಲಿದೆ ಕಾವೇರಿ

(೧೦ನೇ ಪುಟದಿಂದ)

ಉಳಿಯುವ ನೀರು 380 Tmc ಮಾತ್ರ ಕರ್ನಾಟಕದ ಕೊರತೆ 48 Tmc. ಈ ಕೊರತೆ ಜಾಸ್ತಿಯಾಗುವ ಭೀತಿಯೂ ಇದೆ. Assessors ತಮಿಳುನಾಡಿನ ಕುಡಿಯುವ ನೀರಿನ ಅವಶ್ಯಕತೆಯನ್ನು ಪರಿಗಣಿಸಿಲ್ಲ. ಆದರೆ ನ್ಯಾಯಾಧಿಕರಣ ಈ ಅವಶ್ಯಕತೆಯನ್ನು ಪರಿಗಣಿಸಬಹುದು. ಕರ್ನಾಟಕದ ನೀರು 380 Tmc ಯಲ್ಲಿ 20 Tmc ಯನ್ನು ತಮಿಳುನಾಡಿನ ಕುಡಿಯುವ ನೀರಿಗಾಗಿ ಹಂಚಬಹುದು. ಅಲ್ಲಿಗೆ ಕರ್ನಾಟಕಕ್ಕೆ 360 Tmc ಮಾತ್ರ ಉಳಿದು 68 Tmc ಕೊರತೆ ಉಂಟಾಗಬಹುದು.

ನ್ಯಾಯ ಸಮ್ಮತವಲ್ಲದ ತಮಿಳುನಾಡಿನ ಕೆಲವು ಅಗತ್ಯಗಳನ್ನು Assessors ಗಣನೆಗೆ ತೆಗೆದುಕೊಂಡಿರುವುದು ಸರಿಯಲ್ಲ. ಒಂದೇ ಬೆಳೆಗೆ ಕರ್ನಾಟಕ ನೀರಿನ ಕೊರತೆ ಅನುಭವಿಸುತ್ತಿರುವಾಗ ತಮಿಳುನಾಡಿನ Cropped area ಗಣನೆಗೆ ತೆಗೆದುಕೊಂಡು ಎರಡನೆ ಬೆಳೆಗೂ ಅನುವ ಮಾಡಿಕೊಟ್ಟಿದ್ದಾರೆ. ಅವರು ಒಪ್ಪಿರುವ 21.32 ಲಕ್ಷ ಎಕರೆಯಲ್ಲಿ ಕೆಲ ಲಕ್ಷಗಳ ಎಕರೆಯಲ್ಲಿನ ಎರಡನೆ ಬೆಳೆಯೂ ಸೇರಿದೆ. ಮತ್ತು Merit and Equity Cata garm ಹೆಸರಿನಲ್ಲಿ 3.32 ಲಕ್ಷ ಎಕರೆಯಲ್ಲಿ ಬತ್ತದ ಬೆಳೆಗೆ ಅನುವು ಮಾಡಿಕೊಟ್ಟಿದ್ದಾರೆ. ಇದಕ್ಕೆ ಬೇಕಾಗುವ ನೀರು ಸುಮಾರು 60 Tmc ಆದರೆ ಇದೇ Cata garm ಯಲ್ಲಿ ಕರ್ನಾಟಕಕ್ಕೆ Semidry crop ಮಾತ್ರ ಅನುವು ಮಾಡಿದ್ದಾರೆ ಈ ಭೇದ ಭಾವ ಯಾಕೆ ಎಂಬುದು ತಿಳಿದಿಲ್ಲ. ತಮಿಳುನಾಡಿನ 3.32 ಲಕ್ಷ ಎಕರೆಯಲ್ಲೂ ಕರ್ನಾಟಕದಂತೆ Semidry crop ಅನುವು ಮಾಡಿದ್ದರೆ ಸುಮಾರು 30 Tmc ನೀರು ಉಳಿಯುತ್ತಿತ್ತು ಮತ್ತು ಆ ಮಟ್ಟಿಗೆ ಕರ್ನಾಟಕಕ್ಕೆ ಹೊರೆ ಕಮ್ಮಿಯಾಗುತ್ತಿತ್ತು.

ನ್ಯಾಯಾಧಿಕರಣ Assessors Report ಎಲ್ಲಾ ಅಂಶಗಳನ್ನು ಪರಿಗಣಿಸುವುದಿಲ್ಲ. ತನ್ನದೇ ಆದ ತೀರ್ಮಾನವನ್ನು ರಾಜ್ಯಗಳ ವಾದಗಳನ್ನು ಗಣನೆಗೆ ತೆಗೆದು ಕೊಂಡು ಪ್ರಕಟಿಸುತ್ತದೆ. ನನ್ನ ಅನಿಸಿಕೆಯಂತೆ ಈ ವಿವಾದ ನ್ಯಾಯಾಧಿಕರಣ ಬರುವ ೫ನೇ ತಾರೀಖಿನಂದು ಕೊಡುವ ತೀರ್ಮಾನದಿಂದ ಮುಗಿಯುವುದಿಲ್ಲ. ತೀರ್ಮಾನ ಒಂದು ರಾಜ್ಯಕ್ಕೆ ಸಿಹಿಯಾಗಬಹುದು ಮತ್ತೊಂದು ರಾಜ್ಯಕ್ಕೆ ಕಹಿಯಾಗಬಹುದು. ಅಥವಾ ಎರಡೂ ರಾಜ್ಯಗಳಿಗೆ ಕಹಿಯೇ ಆಗಬಹುದು. ಎರಡೂ ರಾಜ್ಯಗಳಿಗೆ ಸಿಹಿಯಾಗುವುದಂತು ಸಾಧ್ಯವಾಗುವುದಿಲ್ಲ.

ಅಂದರೆ ಯಾವುದಾದರೊಂದು ರಾಜ್ಯ ನ್ಯಾಯಾಧಿಕರಣದ ಮುಂದೆ Review Prtition ಹಾಕಬಹುದು, ಹಾಗೂ ಬಗೆಹರಿಯದಿದ್ದರೆ supreme ಕೋರ್ಟ್‌ಗೆ ಹೋಗಬಹುದು. ಸದ್ಯಕ್ಕಂತೂ ಇದು ಮುಗಿಯದ ಕತೆ. ಮುಗಿಯಲೇಬೇಕಾದರೆ ರಾಜ್ಯಗಳೇ Negotiated Settlement ಗೆ ಬರಬೇಕು. ಈ ಮಧ್ಯೆ ಎರಡೂ ರಾಜ್ಯಗಳ ಜನರು ಶಾಂತಿ ಕಾಪಾಡಿಕೊಳ್ಳುವುದು ಬಹುಮುಖ್ಯ. □

ಫ್ಯಾಸಿಸ್ಟ್ ಪ್ರತಿಭಟನೆ ಅಥವಾ ಪೊಲೀಸ್ ಎನ್‌ಕೌಂಟರ್:

ಕಡಲ ತಡಿಯ ತಾತ್ವಿಕ ಹಳವಂಡಗಳು

ಹಿಂದುತ್ವದ ಮಾರುಕಟ್ಟೆಯಲ್ಲಿ 'ಆಯ್ಕೆ'ಗೆ ಅವಕಾಶ ಇದೆ. ನಿಮಗೆ ಬೇಕಾದಂತೆ ವಿವಿಧ ಅವೃತ್ತಿಯ ಸಂಸ್ಥೆಗಳು ಇಲ್ಲಿವೆ: ಕಾಲೇಜು ಪೂರ್ವ ಮಕ್ಕಳಿಗಾಗಿ ಆರ್‌ಎಸ್‌ಎಸ್ ಇದೆ; ಕಾಲೇಜು ವಿದ್ಯಾರ್ಥಿಗಳಿಗೆ ಎಬಿವಿಪಿ ಇದೆ. ಇಪ್ಪತ್ತರಿಂದ ಮೂವತ್ತೈದು ವಯಸ್ಸಿನವರಿಗೆ ಬಜರಂಗದಳವಿದೆ. ಅಥವಾ ನಿಮ್ಮ ಹಿತಾಸಕ್ತಿಗೇನಾದರೂ ತೊಂದರೆಯಾದರೆ ಶ್ರೀ ರಾಮ ಸೇನೆಯನ್ನು ಸೇರಿಕೊಳ್ಳಬಹುದು. ಸಾಮಾನ್ಯವಾಗಿ ಮೂವತ್ತಾರರಿಂದ ಅರವತ್ತರವರೆಗಿನವರಿಗೆ ಬಿಜೆಪಿ, ಶಿವಸೇನೆಗಳಿವೆ. ನಿವೃತ್ತಿಯ ನಂತರ ಎಪ್ಪತ್ತರವರೆಗಿನ 'ಗೃಹಸ್ಥ'ರಿಗೆ ವಿಶ್ವಹಿಂದೂ ಪರಿಷತ್ ಇದೆ. ೭೦+ಗಳಿಗೆ ಧರ್ಮ ಸಂಸತ್‌ಗಳಿವೆ. ಮಹಿಳೆಯರಿಗೆ ಪ್ರತ್ಯೇಕವಾಗಿ ಮಹಿಳಾ ಮೋರ್ಚಾಗಳೂ ಇವೆ. ಇವತ್ತು ಇಡೀ ಕರಾವಳಿಯನ್ನು ಕೇಸರಿ ಅಲೆ ಆವರಿಸಿಕೊಂಡಿದೆ ಎಂದರೆ ಅದರ ಹಿಂದಿನ, ಸಮಾಜದ ಎಲ್ಲ ವಯಸ್ಸಿನವರನ್ನು trap ಮಾಡುವ ಈ ಸಂಸ್ಥೆಗಳ 'ಶ್ರಮ' ಅರ್ಥವಾದೀತು.

ಶ್ರೀಶ ಉಡುಪ

ಮೊದಲಿಗೆ ಮೂಲ ಪಮೇಯವನ್ನು ಮಂಡಿಸಿ ಚರ್ಚೆಯ ಚೌಕಟ್ಟನ್ನು ಪ್ರಸ್ತಾಪಿಸುತ್ತೇನೆ. ಉಳಿದ ಮಾತುಗಳು ಇವಕ್ಕೆ ಹೊಂದಿಕೊಂಡಂತೆ ಬಂದಿವೆ.

ಹಿಂದೂ ಕೋಮುವಾದವೆಂದು ಗುರುತಿಸಲ್ಪಡುತ್ತಿರುವ ಬೆಳವಣಿಗೆಗಳು ತಾತ್ತ್ವಿಕವಾಗಿ ಫ್ಯಾಸಿಸ್ಟ್ ಸ್ವರೂಪದವುಗಳು. ಗುಜರಾತ್ ಮತ್ತು ಮಂಗಳೂರಿನ ವಿದ್ಯಮಾನಗಳು ಕೋಮು ಗಲಭೆಗಳ ಬದಲಾಗಿ ಫ್ಯಾಸಿಸ್ಟ್ ಹತ್ಯಾಕಾಂಡಗಳು. ಪರಿಭಾಷೆಗಳು ಆಲೋಚನಾಕ್ರಮಗಳನ್ನು ನಿಯಂತ್ರಿಸುವುದರಿಂದ ಮೊದಲು ಈ ಬಗ್ಗೆ ಸ್ಪಷ್ಟತೆಯಿಂದ ಇರಬೇಕಾದ ಅಗತ್ಯ ಇದೆ.

ರಾಜ್ಯ ವ್ಯಾಪಿಯಾಗಿ ಬಿಟ್ಟ ಹಿಂದೂ ಸಮಾಜೋತ್ಸವ- ಶಿವಮೊಗ್ಗದಲ್ಲಿ ಗೌರಿ ಲಂಕೇಶ್ ಮತ್ತು ವಿಠ್ಠಲ ಹೆಗಡೆಯವರ ವಿರುದ್ಧ ನಡೆದ ಪ್ರತಿಭಟನೆ ಮತ್ತು ಇತ್ತೀಚೆಗೆ ತೀರ ಸಹಜವಾಗುತ್ತಿರುವ ಪೊಲೀಸ್ ಎನ್‌ಕೌಂಟರ್ ಈ ಮೂರು ವಿದ್ಯಮಾನಗಳ ತ್ರಿಕೋನ, ರೂಪರಾತ್ಮಕ ಚೌಕಟ್ಟಾಗಿರುತ್ತದೆ.

ಫ್ಯಾಸಿಸ್ಟ್ ಪರಿಭಾಷೆ:

ಕಳೆದ ಶತಮಾನದ ಬಹುಪಾಲು ರಾಜಕೀಯ ತತ್ವ ಪ್ರಣಾಳಿಗಳಂತೆ 'ಹಿಂದುತ್ವ' ಕೂಡ ಯೂರೋ-ಕೇಂದ್ರಿತ ಮಾದರಿಯಲ್ಲಿ ರಚನೆಯಾಗಿರುವಂಥ ಕಥನ. ಹಿಟ್ಲರನ ನಾಜಿವಾದ ಹಿಂದುತ್ವಕ್ಕೆ ಹೇಗೆ ಮೇಲ್ಪಂಕ್ತಿಯಾಗಿತ್ತು ಎಂಬುದು Bunch of Thoughts ನೋಡಿದರೆ ತಿಳಿಯುತ್ತದೆ (ಈ ಕುರಿತ ಚರ್ಚೆಗಾಗಿ ಓರಿಯಂಟಲ್ ಲಾಂಗ್‌ಮನ್ ಪ್ರಕಟಿಸಿರುವ Khaki shorts-saffronflags ಅನ್ನು ಗಮನಿಸಬಹುದು) ಸಮಕಾಲೀನವಾಗಿ ಬಳಕೆಯಾಗುತ್ತಿರುವ ಪರಿಭಾಷೆಯನ್ನೇ ಗಮನಿಸೋಣ:

೧. ೨೦೦೩ ರ ಹಿಂದೂ ಸಮಾಜೋತ್ಸವದ ಸಂದರ್ಭದಲ್ಲಿ ಹಿಂದೂ ಸಮಾಜೋತ್ಸವ ಸಮಿತಿ, ಉಡುಪಿಯವರು ಹೊರತಂದ ಕರಪತ್ರದ ಆಯ್ದಭಾಗಗಳು;

'ಅಖಂಡ ಹಿಂದೂ ಸಮಾಜದ ಸಂಘಟನೆಯ ಅಭೂತ ಪೂರ್ವ ಕಾರ್ಯಕ್ಕೆ ಸಿದ್ಧರಾಗಲೇಬೇಕಾದ ಅನಿವಾರ್ಯ ಕಾಲಘಟ್ಟ ದಲ್ಲಿ ಇಂದು ನಾವಿದ್ದೇವೆ. ಸಹಸ್ರ ಸಹಸ್ರ ಸಂವತ್ಸರಗಳಿಂದ ಸಾಗಿ ಬಂದ ನಮ್ಮ ಸನಾತನ ಧರ್ಮದ ಸಂರಕ್ಷಣೆಗೆ ಪ್ರತಿಯೋರ್ವ ಹಿಂದುವೂ ಮುಂದಾಗಲೇಬೇಕಾದ ಅನಿವಾರ್ಯತೆ ನಮಗಿಂದು ಎದುರಾಗಿದೆ. ಸರ್ವಧರ್ಮ ಸಮಭಾವ, ಪರಸ್ಪರ ಆದರ-ವಿಶ್ವಾಸದ ಸಮರಸ ಜೀವನಕ್ಕೆ ಹಿಂದೂ ಮನೆ-ಮನ ಎಂದೆಂದೂ ತೆರೆದೇ ಇದೆ. ಆದರೆ ತುಷ್ಟೀಕರಣದ ರಾಜಕೀಯದ ಹುಚ್ಚು ಹೊಳೆಯಲ್ಲಿ ನಮ್ಮ ಆತ್ಮಗೌರವ, ಮೌಲ್ಯಗಳೆಲ್ಲವೂ ಕೊಚ್ಚಿ ಹೋಗುವ ದುರಂತ ನಮ್ಮ ಹಿಂದೂ ಸಮುದಾಯದ ಪಾಲಿಗೆ ಒದಗಿ ಬಂದಿದೆ... ಶತಮಾನಗಳ ಗತ ಇತಿಹಾಸದ ಜಡತೆ, ಸೋಲು, ಅಪಮಾನಗಳ ಕೊಳೆ ಕಳೆದು ಹಿಂದೂ ಸಮುದಾಯವನ್ನು ಜಾಗೃತ. ಸುಸಂಸ್ಕೃತ ಜನಾಂಗವನ್ನಾಗಿಸಲು ಮುಂದಾಗೋಣ?

೨. ೨೦೦೩ ರ ಬಾಬಾ ಬುಡನ್‌ಗಿರಿ ವಿವಾದದ ಸಮಯದಲ್ಲಿ ಮಂಗಳೂರು ವಿಭಾಗದ ವಿಶ್ವ ಹಿಂಧೂ ಪರಿಷತ್ ಮತ್ತು ಬಜರಂಗದಳಗಳ 'ದತ್ತ ಪೀಠ ಚಲೋ'ದ ಕರಪತ್ರದ ರಚನೆ ಈ ಸ್ವರೂಪದಲ್ಲಿತ್ತು. (ದತ್ತ ಪೀಠದ) ಪೌರಾಣಿಕ ಐತಿಹಾಸಿಕ ಹಿನ್ನೆಲೆ-ದತ್ತಪೀಠವನ್ನು ಬಾಬಾಬುಡನ್ ಗಿರಿ ಮಾಡಿದ ಸಂಚು-ಇಂದಿನ ದುಸ್ಥಿತಿ-ಇಟ್ಟ ಹೆಜ್ಜೆ ದಿಟ್ಟ ಹೋರಾಟ

೩. ೨೦೦೭ ರ ಹಿಂದೂ ಸಮಾಜೋತ್ಸವದ ಸಂದರ್ಭದ ಕಾರ್ಕಳ ಶಾಸಕರ ಮಾತುಗಳು: 'ಹಿಂದೂ ಸಮುದಾಯದ ಯಾತನೆಯ ಪೂರ್ವವೊಂದಕ್ಕೆ ಅಂತ್ಯ ಹಾಡಬೇಕಾಗಿದೆ. ಸ್ವಾತಂತ್ರ್ಯೋತ್ತರ ಇತಿಹಾಸ, ಸರಕಾರಗಳ ದುರಾಡಳಿತ, ಅಲ್ಪಸಂಖ್ಯಾತರ ತುಷ್ಟೀಕರಣಗಳಂತಹ ಪಿಡುಗುಗಳಿಂದ, ಜಾತೀಯತೆ, ಸಾಮಾಜಿಕ ಅಸಮಾನತೆಗಳ ಕ್ಲೈಬ್ಬಗಳಿಂದ ಹೊರಬರಬೇಕಾಗಿದೆ. ಭ್ರಷ್ಟಾಚಾರ, ಶ್ರೀಮಂತಿಕೆಯ ದರ್ಪಗಳಿಂದ ಬಿಡುಗಡೆ ಪಡೆಯಬೇಕಾಗಿದೆ. ರಾಜಕೀಯವಾಗಿ ಸಾಂಸ್ಕೃತಿಕವಾಗಿ, ಬೌದ್ಧಿಕವಾಗಿ ಮತ್ತೆ ಭಾರತ ಪರಮ ವೈಭವದ ಸ್ಥಿತಿಯನ್ನು ನೋಡಬೇಕಾಗಿದೆ. ಹಿಂದೂ ಸಮಾಜೋತ್ಸವ ಇದಕ್ಕೆ ಹೊಸ ದಿಕ್ಕು ತೋರಿಸುವಂತಾಗಲಿ'

ಈಗ ಕಳೆದ ಶತಮಾನದ ಮೂರು ನಾಲ್ಕನೇ ದಶಕಗಳಲ್ಲಿ ಯುರೋಪಿನಲ್ಲಿ ಚಾಲ್ತಿಯಲ್ಲಿದ್ದ ಫ್ಯಾಸಿಸ್ಟ್ ಕಥನದ ಪ್ರಾತಿನಿಧಿಕ ಮಾದರಿಯನ್ನು ಗಮನಿಸೋಣ: 'ಪ್ರಜಾಪ್ರಭುತ್ವ ಹಾಗೂ ಸಮಾಜವಾದಗಳು ಅಪಾತ್ರರ ಕೈಗೆ ಅಧಿಕಾರ ಕೊಡುವ ಮೂಲಕ ಸಮಾಜದಲ್ಲಿ ಅದಕ್ಷತೆ, ಅತಂತ್ರ, ಅರಾಜಕ ವಾತಾವರಣವನ್ನು ಉಂಟುಮಾಡುತ್ತವೆ. ಈ ವಿಚಾರಗಳನ್ನು ಬೇರು ಸಹಿತ ಕಿತ್ತು ಹಾಕಿ ಸಮಾಜದಲ್ಲಿ ಸುವ್ಯವಸ್ಥೆ ನೆಲೆಸುವಂತೆ ಮಾಡಲು ಒಂದು ಸರ್ವಶಕ್ತ, ಸರ್ವಾಧಿಕಾರಿ ಪ್ರಭುತ್ವವನ್ನು, ಗತವೈಭವ ಮತ್ತು ಕ್ರಿಶ್ಚಿಯಾನಿಟಿಯ ಶ್ರೇಷ್ಠ ಮೌಲ್ಯಗಳ ಆಧಾರದಲ್ಲಿ ಕಟ್ಟಬೇಕು. ಈ ನಮೂನೆಯ ಪ್ರಭುತ್ವ ನಿರೂಪಿಸುವ ಸಮಾಜ, ಸಂಸ್ಕೃತಿ, ನೈತಿಕತೆಗಳಿಗೆ ಸಮಾಜದ ಎಲ್ಲ ಪ್ರಜೆಗಳು ತಲೆಬಾಗಬೇಕು. ಇಂಥ ಸರ್ವವ್ಯಾಪಿ ಪ್ರಭುತ್ವವನ್ನು ಕಟ್ಟಲು ಒಬ್ಬ ದೈವಿ ಶಕ್ತಿಯುಳ್ಳ ನಾಯಕ ಮತ್ತು ಅವನ ಆಜ್ಞೆಯನ್ನು ವಿಧೇಯವಾಗಿ ಜಾರಿಗೊಳಿಸುವ 'ರಾಷ್ಟ್ರಪ್ರೇಮಿ' ಸಂಘಟನೆಗಳು ತೀರ ಅವಶ್ಯಕ'. ಫ್ಯಾಸಿಸಂ ಕುರಿತ ಗ್ರಾಮ್ಷಿಯ ವಿಚಾರಗಳು: ಆಂಟೋನಿಯೋ ಗ್ರಾಮ್ಷಿ; ಕೆ. ಫಣಿರಾಜ್).

ಇಂದಿನ ಮಧ್ಯಮ ವರ್ಗದ ಮೌಲ್ಯವ್ಯವಸ್ಥೆ ಮುಖ್ಯಮಂತ್ರಿ ಅಥವಾ ಪ್ರಧಾನಮಂತ್ರಿ ಇರುವ ಜಾಗದಲ್ಲಿ ಇನ್ಫೋಸಿಸ್‌ನ ಸಿಇಒ ಇರುವುದನ್ನು ಬಯಸುತ್ತದೆ. ಸರಕಾರ 'ದಕ್ಷ'ವಾಗಿದ್ದರೆ ಸಾಕು; ಬದ್ಧತೆ ಬೇಕಾಗಿಲ್ಲ. ಆಂತರಿಕವಾಗಿ ಇಲ್ಲಿ ಏನಿದ್ದರೂ 'ಮುಕ್ತ ಅವಕಾಶ'. ಸರಕಾರ ಏನಿದ್ದರೂ ಕಾನೂನು ಸುವ್ಯವಸ್ಥೆ ನೋಡಿಕೊಳ್ಳುವುದಕ್ಕಷ್ಟೆ. ಈ ಲೋಕದೃಷ್ಟಿ ದೈನಂದಿನ ವ್ಯವಹಾರಗಳಿಂದ ಸರ್ಕಾರವನ್ನು ಆದಷ್ಟು ಹೊರಗಿಡಲು ಬಯಸುತ್ತದೆ. ಸರಕಾರ ಬೇಕಾಗಿರುವುದು ಈ ವ್ಯವಹಾರಗಳ ನಿಯಂತ್ರಕವಾಗಿ ಅಲ್ಲ. ಇವುಗಳ ರಕ್ಷಣೆಗಾಗಿ.

ಈ ಸಾಮಾಗ್ರಿಗಳಿಂದ Facist ಪ್ರಮೇಯದ ಸ್ವರೂಪವನ್ನು ಗುರುತಿಸಲು ಪ್ರಯತ್ನಿಸಬಹುದು: ಮುಖ್ಯವಾಗಿ ಮೂರು ಹಂತಗಳಲ್ಲಿ ಈ ಪ್ರಮೇಯವನ್ನು ಕಟ್ಟಲಾಗುತ್ತದೆ: ಮೊದಲಿಗೆ ಕ್ಷುದ್ರೀಕರಣ- ತನ್ನ ಸ್ಥಿತಿಯನ್ನು ಕ್ಷುದ್ರೀಕರಿಸಿಕೊಂಡು (ಇದು ಸಿಂಪಥೆಟಿಕ್ ಕ್ಷುದ್ರೀಕರಣ) ಏನೋ ಮಹಾ ಆಪತ್ತು ಬಂದೊದಗಿದೆ ಎಂಬಂತೆ ಬಿಂಬಿಸುವುದು. ಮಧ್ಯಮ ವರ್ಗದ ಮೌಲ್ಯ ಜಗತ್ತಿನಲ್ಲಿ ಸಿಂಪತಿಯಷ್ಟೇ Sensual ಹಂತದಲ್ಲಿ ವಿಸ್ತೃತ ಜನ ಬೆಂಬಲ ದೊರಕಿಸಿಕೊಳ್ಳುತ್ತದೆ ಎಂಬ ಕಾರಣದಿಂದಲೇ ಈ ಆಪತ್ತನ್ನು ಆರೋಪಿಸಿಕೊಳ್ಳಲಾಗುತ್ತದೆ ಎರಡನೆಯ ಹಂತವನ್ನು ಡೆಮನೀಕರಣ ಅಥವಾ ರಾಕ್ಷಸೀಕರಣ ಎನ್ನುತ್ತೇನೆ. ತನ್ನ ಕಲ್ಪನೆಗೆ ಎಟಕುವ ಎಲ್ಲ ಕ್ರೂರತನವನ್ನು ಎದುರಾಳಿಯ ಮೇಲೆ ಆರೋಪಿಸಲಾಗುತ್ತದೆ. ಯಾವುದೋ ಘಟನೆ ಒಂದು ನಿರ್ದಿಷ್ಟ ಸಮುದಾಯದ ಕೃತ್ಯ ಎಂಬಂತೆ ಬಿಂಬಿತವಾಗುತ್ತದೆ ಎಲ್ಲ ಈ ವಿಲ್‌ಗಳಿಗೆ ಈ ವೈರಿ ಸಮುದಾಯವೇ ಕಾರಣ ಎಂಬ ಅಂಶವನ್ನು ಅವಕಾಶ ಸಿಕ್ಕಾಗೆಲ್ಲ ವ್ಯಾಪಕವಾಗಿ ಹೇಳಲಾಗುತ್ತಿದೆ. ಈ ರೀತಿಯ ಡೆಮನೀಕರಣ ಅನಂತರದ ನಾಶದ ಕೃತ್ಯಕ್ಕೆ ನ್ಯಾಯಬದ್ಧತೆಯನ್ನು ಒದಗಿಸುವ ಸಲುವಾಗಿ ಫ್ಯಾಸಿಸ್ಟ್ ಶಕ್ತಿಗಳು ಅನುಸರಿಸುವ ಒಂದು Strategy.

ಇದನ್ನು ಇನ್ನಷ್ಟು ವಿವರಿಸಬೇಕೆಂದರೆ: 'ಬಲಿ'ಯ (Scapegoat) ನ ಕಲ್ಪನೆಯನ್ನು ಇದರ ಜೊತೆಗಿಟ್ಟು ನೋಡಬಹುದು. ಬಹುಶಃ ಎಲ್ಲ ಸಾಂಪ್ರದಾಯಿಕ ನಂಬಿಕೆಗಳ ವ್ಯವಸ್ಥೆಯಲ್ಲಿ ಕಂಡುಬರುವ ಕಲ್ಪನೆ ಇದು. ಗ್ರೀಕರಲ್ಲಿ ಯುದ್ಧದಲ್ಲಿ ಸೋತ ಜನರನ್ನು ಈ ರೀತಿ Scapegoat ಆಗಿ ಸಾಕುವ ಪದ್ಧತಿಯಿತ್ತು. ಅಚಿಬೆಯ Things fall Apart ನಲ್ಲಿರುವ ಇಕೆಮ್‌ಫೂನಾ ಕೂಡಾ ಇಂತಹದೇ norm ಗಳಿಂದ ರೂಪುಗೊಂಡ 'ಬಲಿ'. ಇದರ ಬಗೆಗಿನ ಇಂಡಿಯಾದ ಕಲ್ಪನೆಯನ್ನು ಹೇಳುವ ಅಗತ್ಯ ಇಲ್ಲ. ಇಲ್ಲೆಲ್ಲಾ ಸಾಮಾನ್ಯವಾಗಿರುವುದೆಂದರೆ ಎಲ್ಲಾ ಕೇಡುಗಳನ್ನು Scapegoat ನ ಮೇಲೆ ಆರೋಪಿಸಿ, ನಂತರ ಅದರ ನಾಶವನ್ನೇ ಕೇಡಿನ ನಾಶವೆಂದು ತಿಳಿದು ಸಂಭ್ರಮಿಸಲಾಗುತ್ತದೆ. ಈ ರೀತಿಯಾಗಿ ಕೇಡಿನ ಮೇಲೆ ಭ್ರಮಕ ವಿಜಯ ಸಾಧಿಸುವ ಕಲ್ಪನೆಯನ್ನೇ ಆಧುನಿಕ ಫ್ಯಾಸಿಸ್ಟ್ ತನ್ನ ರಾಜಕೀಯ ಹಿತಾಸಕ್ತಿಗಾಗಿ ಮಾರ್ಪಡಿಸಿಕೊಂಡಾಗ ಅದು Demonisation (ರಾಕ್ಷಸೀಕರಣ) ಆಗುತ್ತದೆ.

ಮುಂದಿನದು ಉನ್ನತೀಕರಣ ಅಥವಾ ದಿಗ್ವಿಜಯದ ಕಥನ. ಇಲ್ಲಿ ಹಿಂದಿನ ಯುದ್ಧತಂತ್ರದ ಎರಡಲುಗಿನ ಕಾರ್ಯವನ್ನು ಪ್ರಸ್ತಾಪಿಸಬಹುದು. ರಾಕ್ಷಸೀಕರಣ ಗುರಿ ನಿರ್ದೇಶನ ಮಾಡುತ್ತಿರುವ ಹೊತ್ತಿನಲ್ಲೇ ಶಸ್ತ್ರ-ದ್ವೇಷ ಸಂಚಯನಗಳನ್ನು ಕೂಡ ಮಾಡುತ್ತಿರುತ್ತದೆ. ಈ ರೀತಿಯಾಗಿ ವ್ಯವಸ್ಥಿತವಾಗಿ ಸಂಚಯನಗೊಂಡ ಶಕ್ತಿ ಮತ್ತು ಸ್ಪಷ್ಟಗುರಿಗಳು ಹಠಾತ್ ಕ್ರಿಯಾಶೀಲಗೊಂಡು ಹಿಂಸೆ ಸ್ಫೋಟಗೊಂಡು ಬಿಡುತ್ತದೆ. ಮಂಗಳೂರಿನ ಹಿಂಸೆಯ ಸ್ವರೂಪ ಇದು. ನೆತ್ತರಿನ ಚೆಲ್ಲಾಟಕ್ಕೆ ಯಾವ ಮುಲಾಜಿಲ್ಲದೆ ನ್ಯಾಯಬದ್ಧತೆ ಪ್ರಾಪ್ತವಾಗಿಬಿಡುತ್ತದೆ. ಕೇಡನ್ನು ಆತ್ಯಂತಿಕವಾಗಿ ಕಲ್ಪಿಸಿಕೊಂಡು ಜೊತೆಗೆ ಇದಕ್ಕೆ ಪೂರಕವಾದ ಮೌಲ್ಯವ್ಯವಸ್ಥೆಯನ್ನು ಬೆನ್ನಿಗಿಟ್ಟುಕೊಂಡಾಗ ಉಂಟಾಗುವ ಆತ್ಮವಿಶ್ವಾಸ ಇದು. ಆದರೆ ದಿಗ್ವಿಜಯದ ಕಥನದಲ್ಲಿರುವುದು ದಿಗ್ವಿಜಯೀ ಪ್ರಕ್ರಿಯೆಯ ಕಥನವಲ್ಲ; ದಿಗ್ವಿಜಯಾನಂತರದ ಕಲ್ಪನೆಯ ಕಥನ. ಕುತೂಹಲವೆಂದರೆ ಇಲ್ಲಿ ಮತ್ತೆ ಭೂತನಕ್ಕೆ ಮರಳುವುದು. ಈಗ ಮತ್ತೆ ಒಗ್ಗಟ್ಟಿನ ಪರಂಪರೆ ನೆನಪಾಗುತ್ತದೆ. ಇತಿಹಾಸದ ಉನ್ನತೀಕೃತ ಚಿತ್ರಗಳು ಮರುಕಳಿಸುತ್ತವೆ. ಇದರ ಹಿಂದಿನ ತಂತ್ರ ಇಷ್ಟೇ: ಇದು ದಿಗ್ವಿಜಯದ ಕಥನವನ್ನು ನಿರಂತರಗೊಳಿಸುತ್ತದೆ. ಮುಂದೆ ಚರ್ಚಿಸುವಂತೆ ಚರಿತ್ರೆಯನ್ನು ನಿರಂತರ ವರ್ತಮಾನವನ್ನಾಗಿ ಸಾಂದ್ರೀಕರಿಸಲಾಗುತ್ತದೆ. There will be a condensation of history into an eternl present.

ವಿಷಯ ರತಿಯ ನಂತರ ಮೊದಲ ನೋಟದ ನೆನಪು ಮಾಡಿಕೊಳ್ಳುವುದು ಮುಂದಿನ ಸಿದ್ಧತೆ!

* * *

ಕ್ರೀಡೆಯ ಪರಿಭಾಷೆಯಲ್ಲಿ ಚರಿತ್ರೆಯನ್ನು ಕಟ್ಟುವ ರೂಢಿಯಿದೆ. ಹಾಗೆಯೇ ಕಾಮದ ಪರಿಭಾಷೆಯಲ್ಲಿ ಹಿಂಸೆಯ ಕಥನ ಸಾಧ್ಯ- ಅದನ್ನು ಲಿಬಿಡಿನಲ್ ನೆಲೆಯಲ್ಲಿ ಗ್ರಹಿಸಿಕೊಂಡಾಗ.

-೨-

ಗ್ರಾಮ್ಷಿ ನಾಗರಿಕ ಸಮಾಜ ಮತ್ತು ರಾಜಕೀಯ ಸಮಾಜಗಳ ನಡುವೆ ಇರುವ ಭಿನ್ನತೆಯನ್ನು ಹೇಳುತ್ತಾ ನಾಗರಿಕ ಸಮಾಜವು ಐಚ್ಛಿಕ, ಅನಿರ್ಬಂಧಿತ (non coercine) ಮತ್ತು least National ಸಂಯೋಜನೆಗಳಾದ ಶಾಲೆ, ಕುಟುಂಬ ಇತ್ಯಾದಿ ಒಕ್ಕೂಟಗಳಿಂದ ರೂಪುಗೊಂಡಿದ್ದರೆ ರಾಜಕೀಯ ಸಮಾಜವು ರಾಜಕೀಯದಲ್ಲಿ ನೇರ ಪ್ರಭಾವವಿರುವ ರಾಜ್ಯ ಸಂಸ್ಥೆಗಳಾದ ಸೈನ್ಯ, ಪೊಲೀಸ್ ಮತ್ತು ಆಡಳಿತಾಶಾಹಿಗಳಿಂದ ರೂಪುಗೊಂಡಿರುತ್ತದೆ (Orientalism: Edword Said 6-7) ಎನ್ನುತ್ತಾನೆ. ನಾಗರಿಕ ಸಮಾಜದ ದೈನಂದಿನ ವ್ಯವಹಾರಕ್ಕೆ ರಾಜಕೀಯ ಸಂಸ್ಥೆಗಳು ಅಷ್ಟಾಗಿ ಅವಶ್ಯಕವಲ್ಲ. ಒಂದು ವೇಳೆ ಅವಶ್ಯಕತೆ ಕಂಡುಬರುತ್ತಿದೆಯೆಂದರೆ ಅದು ಸಮುದಾಯ ಪ್ರಜ್ಞೆಯನ್ನು ಕಳೆದುಕೊಂಡು ಆಧುನಿಕ ನೇಶನ್ ಸ್ಟೇಟ್ ಸ್ವರೂಪ ಪಡೆದುಕೊಳ್ಳುತ್ತಿದೆಯೆಂದು ಅರ್ಥ. ಇಲ್ಲಿ ಆಧುನಿಕ ರಾಜ್ಯವ್ಯವಸ್ಥೆ ತನ್ನೆಲ್ಲ ನಿರ್ಬಂಧಕ-ನಿಯಂತ್ರಕಗಳೊಡನೆ ಜೀವನವನ್ನು ಆವರಿಸಿಕೊಳ್ಳುತ್ತಾ ಹೋಗುತ್ತದೆ.

ಸರಕಾರ ಒಂದು ಸಾಮಾಜಿಕ ಒಪ್ಪಂದವಾಗಿರುವ ಪ್ರಜಾಪ್ರಭುತ್ವದಲ್ಲಿ co-icion ಜೊತೆಗೆ constitution ಕೂಡ ಸಕ್ರಿಯವಾಗಿದ್ದು ವ್ಯವಸ್ಥೆಯನ್ನು ಒಂದು ಹದದಲ್ಲಿಟ್ಟಿರುತ್ತದೆ. ಸಂಕ್ಷಿಪ್ತವಾಗಿ, ನಾವು ಸವಾರಿ ಮಾಡುತ್ತಿರುವ ಗೂಳಿಗೆ ಮೂಗುದಾರ ಕೂಡ ಇದೆ. ಇದು ಚರ್ಚೆಯ ಒಂದು ಎಳೆ.

ಎರಡನೆಯ ಅಂಶ ರಾಜಕಾರಣ ಮತ್ತು ಮಾರ್ಕೆಟ್‌ಗಳು ಕಲಸಿಕೊಂಡು administration ನ ಕಲ್ಪನೆ management ಜತೆ ಅದಲು ಬದಲಾಗಿರುವುದು. ರಾಜಕೀಯ ಭ್ರಷ್ಟತೆಯ ಬಗ್ಗೆ ಸಿನಿಕತೆ ಬೆಳೆಯಲು ಕಾರಣ ಮ್ಯಾನೇಜ್‌ಮೆಂಟ್‌ನ ಆಕರ್ಷಣೆ ಕೂಡ. ಇಂದಿನ ಮಧ್ಯಮ ವರ್ಗದ ಮೌಲ್ಯವ್ಯವಸ್ಥೆ ಮುಖ್ಯಮಂತ್ರಿ ಅಥವಾ ಪ್ರಧಾನಮಂತ್ರಿ ಇರುವ ಜಾಗದಲ್ಲಿ ಇನ್ಫೋಸಿಸ್‌ನ ಸಿಇಒ ಇರುವುದನ್ನು ಬಯಸುತ್ತದೆ. ಸರಕಾರ 'ದಕ್ಷ'ವಾಗಿದ್ದರೆ ಸಾಕು; ಬದ್ಧತೆ ಬೇಕಾಗಿಲ್ಲ. ಆಂತರಿಕವಾಗಿ ಇಲ್ಲಿ ಏನಿದ್ದರೂ 'ಮುಕ್ತ ಅವಕಾಶ'. ಸರಕಾರ ಏನಿದ್ದರೂ ಕಾನೂನು ಸುವ್ಯವಸ್ಥೆ ನೋಡಿಕೊಳ್ಳುವ ಮಂತ್ರಿ, ಅಷ್ಟೇ ಸ್ಪಷ್ಟವಾಗಿಯೇ ರಾಜಕೀಯದ ಬಗೆಗಿನ ಮಧ್ಯಮವರ್ಗದ ಎಲ್ಲಾ ಟೀಕೆಗಳೂ ಆಡಳಿತ ನಿರ್ವಹಣೆಯನ್ನು ಅದೆಂದು ತಪ್ಪಾಗಿ ಗ್ರಹಿಸಿದ್ದರಿಂದ ಬರುತ್ತಿದೆ. ಈ ಪ್ರಧಾನ ಲೋಕದೃಷ್ಟಿ ದೈನಂದಿನ ವ್ಯವಹಾರಗಳಿಂದ ಸರ್ಕಾರವನ್ನು ಆದಷ್ಟು ಹೊರಗಿಡಲು ಬಯಸುತ್ತದೆ. ಸರಕಾರ ಬೇಕಾಗಿರುವುದು ಈ ವ್ಯವಹಾರಗಳ ನಿಯಂತ್ರಕವಾಗಿ ಅಲ್ಲ. ಇವುಗಳ ರಕ್ಷಣೆಗಾಗಿ-ಆದರೆ ಬಾಹ್ಯಶಕ್ತಿಗಳ ನಿರ್ಬಂಧಕವಾಗಿ. ಸಂಕ್ಷಿಪ್ತವಾಗಿ, ಕೆಂಪು ಕಂಡರೆ ರೋಷಗೊಳ್ಳುವ ಮೊನಚು ಕೊಂಬಿನ ಗೂಳಿ ಅಷ್ಟೆ, ಸರಕಾರ.

ಸಮಕಾಲೀನ ಸನ್ನಿವೇಶದಲ್ಲಿ ಈ ಎರಡು ಎಳೆಗಳು ಕೂಡ ಕೂಡಿಕೊಳ್ಳುತ್ತವೆ. ಇಲ್ಲಿರುವ Hegewonic ಲೋಕದೃಷ್ಟಿಯೇ ಹಾಗೆ. ಮಾರ್ಕೆಟ್‌ನ ಸುತ್ತ ಕೋಟೆಯಾಗಿ, co-ercine ಪವರ್ ಆಗಿ ಸ್ಟೇಟ್ ಉಳಿದುಕೊಳ್ಳುತ್ತದೆ. ಪ್ರಧಾನ ಲೋಕದೃಷ್ಟಿಯ ನ್ಯಾಯವ್ಯವಸ್ಥೆಯು ಹೊರತಾಗಿ ಯಾವ ನ್ಯೂಟ್ರಲ್ ನೆಲೆಗಳೂ ಇರುವುದಿಲ್ಲ. ಸಹಜವಾಗಿಯೇ ಇದಕ್ಕೆ ಪೂರಕವಾಗಿರದ ಹಕ್ಕುಗಳು ಕಳೆದುಹೋಗುತ್ತವೆ. ಸ್ಟೇಟ್ ಸರ್ವಶಕ್ತವಾಗುತ್ತದೆ; ಒಂದು ಸರ್ವಾಧಿಕಾರಿ ರಚನೆಯಾಗುತ್ತದೆ; ಎಲ್ಲ ವಂಚನೆಗಳಿಗೆ ಅತೀತವಾಗುತ್ತದೆ. ಸ್ವತ: 'ದೇವರಾ'ಗಿಬಿಡುತ್ತದೆ. ಈ ಹಂತದಿಂದ ಸರ್ವಾಧಿಕಾರಿ ವ್ಯವಸ್ಥೆಗೆ ಸಹಜವಾಗಿರುವಂತೆ ನ್ಯಾಯವ್ಯವಸ್ಥೆ ಆಕ್ರಮಣಕಾರಿಯಾಗಿಬಿಡುತ್ತದೆ. ಅಚರಾಧ-ಶಿಕ್ಷೆಗಳ ನೇರ ಸಮೀಕರಣದಲ್ಲಿ ವಿಚಾರಣೆಗೆ ಅವಕಾಶ ವಿಲ್ಲ. ಪೋಲೀಸ್ ಎನ್‌ಕೌಂಟರ್‌ಗಳು ಸಹಜವಾಗಿ ಬಿಡುವುದು, ನಿತ್ಯವೆನಿಸುವುದು ಈ ಸನ್ನಿವೇಶದಲ್ಲಿ. ಇದು ರಕ್ಷಣಾತ್ಮಕತೆಯಲ್ಲಿ ಹುಟ್ಟುವ ಅನಾಗರಿಕ ಕ್ರೌರ್ಯ. **ಪ್ರಭುತ್ವದ ಹೊರಗಿರುವುದನ್ನು ಫ್ಯಾಸಿಸಂ ಕಲಿಸುವುದಿಲ್ಲ.**

* * *

ಹಿಂದುತ್ವದ ಮಾರುಕಟ್ಟೆಯಲ್ಲಿ 'ಆಯ್ಕೆ'ಗೆ ಅವಕಾಶ ಇದೆ. ನಿಮಗೆ ಬೇಕಾದಂತೆ ವಿವಿಧ ಆವೃತ್ತಿಯ ಸಂಸ್ಥೆಗಳು ಇಲ್ಲಿವೆ: ಕಾಲೇಜು ಪೂರ್ವ ಮಕ್ಕಳನ್ನು ಸಂಘಟಿಸಲು ಆರ್‌ಎಸ್‌ಎಸ್ ಇದೆ; ಕಾಲೇಜು ವಿದ್ಯಾರ್ಥಿಗಳಿಗೆ ಎಬಿವಿಪಿ ಇದೆ. ಇಪ್ಪತ್ತರಿಂದ ಮೂವತ್ತೈದು ವಯಸ್ಸಿನವರಿಗೆ ಬಜರಂಗದಳವಿದೆ. ಅಥವಾ ನಿಮ್ಮ ಹಿತಾಸಕ್ತಿಗೇನಾದರೂ ತೊಂದರೆಯಾದರೆ ಶ್ರೀ ರಾಮ ಸೇನೆಯನ್ನು ಸೇರಿಕೊಳ್ಳಬಹುದು. ಸಾಮಾನ್ಯವಾಗಿ ಮೂವತ್ತಾರಿಂದ ಅರವತ್ತರವರೆಗಿನವರಿಗೆ ಬಿಜೆಪಿ, ಶಿವಸೇನೆಗಳಿವೆ. ನಿವೃತ್ತಿಯ ನಂತರ ಎಪ್ಪತ್ತರವರೆಗಿನ 'ಗೃಹಸ್ಥ'ರಿಗೆ ವಿಶ್ವಹಿಂದೂ ಪರಿಷತ್ ಇದೆ. ೭೦+ಗಳಿಗೆ ಧರ್ಮಸಂಸತ್‌ಗಳಿವೆ. ಮಹಿಳೆಯರಿಗೆ ಪ್ರತ್ಯೇಕವಾಗಿ ಮಹಿಳಾ ಮೋರ್ಚಾಗಳೂ ಇವೆ. ಇವತ್ತು ಇಡೀಕರಾವಳಿಯನ್ನು ಕೇಸರಿ ಅಲೆ ಆವರಿಸಿಕೊಂಡಿದೆ ಎಂದರೆ ಅದರ ಹಿಂದಿನ, ಸಮಾಜದ ಎಲ್ಲ ವಯಸ್ಸಿನವರನ್ನು trap ಮಾಡುವ ಈ ಸಂಸ್ಥೆಗಳ 'ಶ್ರಮ' ಅರ್ಥವಾದೀತು.

ಎಪ್ಪತ್ತರ ದಶಕದಿಂದೀಚೆಗಷ್ಟೇ ಮಹಿಳೆಯನ್ನು ಸಮಾನ ನೆಲೆಯಲ್ಲಿ ಸಮಾಜ ನೋಡಲು ಶುರು ಮಾಡಿದ್ದು ಎನ್ನಬಹುದು. ವಿದ್ಯಾಭ್ಯಾಸ, ಸಮೂಹ ಮಾಧ್ಯಮಗಳಿಂದಾಗಿ ಹೊರ ಜಗತ್ತಿಗೆ ಮಹಿಳೆ ಹೆಚ್ಚು ಹೆಚ್ಚು ತೆರೆದುಕೊಳ್ಳತ್ತಾ ಹೋದ ಹಾಗೆ ಮೌಲ್ಯ ಪದ್ಧತಿಯಲ್ಲಿ ಮೂಡಿದ ಪಲ್ಲಟಗಳನ್ನು, ಉದಯಿಸಿದ ಹಲವಾರು ಹೊಸ ನಿರ್ಬಂಧಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು.

ಪ್ರಜ್ಞೆ ಮೂಡಿದ ಹೊತ್ತು...

ಎಪ್ಪತ್ತರ ದಶಕದಿಂದೀಚೆಗಷ್ಟೇ ಮಹಿಳೆಯನ್ನು ಸಮಾನ ನೆಲೆಯಲ್ಲಿ ಸಮಾಜ ನೋಡಲು ಶುರು ಮಾಡಿದ್ದು ಎನ್ನಬಹುದು. ವಿದ್ಯಾಭ್ಯಾಸ, ಸಮೂಹ ಮಾಧ್ಯಮಗಳಿಂದಾಗಿ ಹೊರ ಜಗತ್ತಿಗೆ ಮಹಿಳೆ ಹೆಚ್ಚು ಹೆಚ್ಚು ತೆರೆದುಕೊಳ್ಳುತ್ತಾ ಹೋದ ಹಾಗೆ ಮೌಲ್ಯ ಪದ್ಧತಿಯಲ್ಲಿ ಮೂಡಿದ ಪಲ್ಲಟಗಳನ್ನು, ಉದಯಿಸಿದ ಹಲವಾರು ಹೊಸ ನಿರ್ಬಂಧಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ವಸ್ತ್ರ ಸಂಹಿತೆಯ ರೂಪಕದ ಮೂಲಕ ಇದನ್ನು ವಿವರಿಸಲು ಯತ್ನಿಸುತ್ತೇನೆ. ಈಗ ಸ್ವಲ್ಪ ತಣ್ಣಗಾದಂತೆ ಕಾಣುವ (ಯಾಕೆಂದರೆ ಅದರಿಂದ ಮುಚ್ಚಬೇಕಾದ ಗುರಿ ಮುಚ್ಚಿ ಆಗಿದೆ) ವಸ್ತ್ರಸಂಹಿತೆಯ ವಿಚಾರ ಜನರ ನಡುವೆ ದೊಡ್ಡ ಮಟ್ಟದ ಚರ್ಚೆ ವಸ್ತುವಾಗಿದ್ದು ತೊಂಭತ್ತರ ದಶಕದ ಈಚೆಗೆ, ಪ್ರಜ್ಞೆ ಮೂಡುವ ಹೊತ್ತಿಗೆ ಎದುರಿಗಿಟ್ಟಿದ್ದು ಇಂತಹ ವಿಚಾರಗಳನ್ನು. ಸಾಂಪ್ರದಾಯಿಕ ಸಮಾಜಗಳಲ್ಲಿ ಮೌಲ್ಯದ ಮುಸುಕಿನಲ್ಲಿ ನಡೆಯುವ ಲೈಂಗಿಕತೆಯ ವಿಚಾರದ ಚರ್ಚೆಗೆ ಆಕರ್ಷಣೆ ಹೆಚ್ಚು. ಕಿರಿಯ ತಲೆಮಾರಿನ ಮೇಲೆ Impose ಮಾಡುವ ಮಡಿವಂತಿಕೆ ಹಿರಿಯ ತಲೆಮಾರಿನ ಕನ್ಸೆಂಟ್ ಅನ್ನು, ಸಮ್ಮತಿಯನ್ನು ಸುಲಭದಲ್ಲಿ ಪಡೆದುಕೊಳ್ಳುವ ತಂತ್ರ ಕೂಡ. ಸುಮಾರಾಗಿ ಒಂದೇ ಹೊತ್ತಿಗೆ ಕಾಶ್ಮೀರದಲ್ಲಿ ಇಸ್ಲಾಮಿಕ್ ಜಿಹಾದಿಗಳು ಉತ್ತರ ಕರಾವಳಿಯಲ್ಲಿ ಹಿಂದುತ್ವದ ಪ್ರತಿಪಾದಕರು ವಸ್ತ್ರಸಂಹಿತೆಯನ್ನು ಕುರಿತು ಉಗ್ರ ಮಡಿವಂತಿಕೆಯನ್ನು ಕಳೆದದ್ದು ನೆನಪಿಗೆ ಬರುತ್ತದೆ. ಹಿಟ್ಲರನ ಮಾತುಗಳು ಈ ತಂತ್ರವನ್ನು ಕೊಂಚ ಬಚ್ಚಿಡುತ್ತದೆ. It is really lamentable to see how our young people have fallen victims to a fashion mania which ferverts the meaning of the old adage that clothes make the man... The young girl must become acquainted with her sweetheart. If the beauty of the body were not completely forced into the background to-day through our stupid manner of dressing. it would not be possible for thousands of our girls to beled astray by Jewish mongrels, with their repulsive crooked wiaddle. (mein kewf; 374)

ಲೈಂಗಿಕ ಸ್ಪರ್ಶ ಪಡೆದ ಇಂತಹ ಮೌಲ್ಯಗಳು ಮುಚ್ಚಿದ ಸಮಾಜಗಳಲ್ಲಿ (closed society) mass appealing ಆಗಿರುತ್ತವೆ. ಬಹುತೇಕ ಮಧ್ಯಮವರ್ಗದ ತಾಯಂದಿರು ಈಗ ಒಮ್ಮೆಗೇ ಹಿಂದುತ್ವದ ತೆಕ್ಕೆಗೆ ಬಂದು ಬಿಟ್ಟಿದ್ದರು.

ಆಂತರ್ಯದ ಕೊಳಕಿನ, ಲೈಂಗಿಕ ಅತೃಪ್ತಿಯ ಘನೀಕೃತ ಅಭಿವ್ಯಕ್ತಿಯೆ, ಈ 'ಸಭ್ಯತೆ'.?

* * *

ಕರಾವಳಿಯ ಸಂಘಪರಿವಾರ ಮತ್ತು ಮಾಧ್ಯಮಗಳ ಬದಲಿ ಸಮ್ಮಿಶ್ರ ಸರಕಾರದ ಅಸ್ತಿತ್ವದ ಬಗ್ಗೆ ಪಟ್ಟಾಭಿರಾಮ ಸೋಮಯಾಜಿಯವರು ಪ್ರಸ್ತಾಪಿಸಿದ್ದಾರೆ (ಅನಂತಮೂರ್ತಿಯವರ 'ವಾಲ್ಮೀಕಿಯ ನೆವದಲ್ಲಿ': ಮಾತಿಗೆ ಮಾತು) ಭಜರಂಗದಳ-ಶ್ರೀರಾಮ ಸೇನೆಗಳು ಬೀದಿ ನ್ಯಾಯ, ಅಪಪ್ರಚಾರ ಮತ್ತು ಸಮರ್ಥನೆಗಳ ಮೂಲಕ ಮಾಧ್ಯಮಗಳು ನೀಡುವ ಅಂತಿಮ ತೀರ್ಪುಗಳನ್ನು ಕುರಿತು ಹೇಳಿದ್ದಾರೆ. ಪ್ರಜಾಪಭುತ್ವದ ಮೌಲ್ಯಗಳು ವಿಕೃತಗೊಂಡು ಹೇಗೆ ಫ್ಯಾಸಿಸ್ಟ್ ಮೌಲ್ಯಗಳಾಗುತ್ತವೆ ಎಂಬುದನ್ನು ಕೂಡ ಇವು ಸೂಚಿಸುತ್ತವೆ. ಜನರಲ್ಲಿ ಜಾಗೃತಿ, ಪ್ರಜ್ಞೆ ಮೂಡಿರುವುದು ಪ್ರಜಾಪ್ರಭುತ್ವದ ಮೌಲ್ಯ. ಆದರೆ ಅದೇ ಜಾಗೃತಿ ತನ್ನೊಂದಿಗೆ ಪ್ರತೇಕ ಮೌಲ್ಯ ವ್ಯವಸ್ಥೆ, ನ್ಯಾಯಪದ್ಧತಿ ಮತ್ತು ಶಿಕ್ಷಾ ವ್ಯವಸ್ಥೆಗಳ co-ersive system ಅನ್ನು ಮೈಗೂಡಿಸಿಕೊಂಡಿರುವುದು ಕರಾವಳಿಯ ಸಮಾಜೋ ರಾಜಕೀಯ ವಾಸ್ತವ.

ಪಿ. ಸಾಯಿನಾಥ್ ಕಳೆದ ಶತಮಾನದ ಉತ್ಪನ್ನಗಳೆಂದು ಪ್ರಜಾಪ್ರಭುತ್ವ ಕಾರ್ಪೋರೇಟ್ ಜಗತ್ತು ಮತ್ತು ಕಾರ್ಪೋರೇಟ್ ಪ್ರಚಾರಗಳನ್ನು ಹೆಸರಿಸುತ್ತಾರೆ. ಫ್ಯಾಸಿಸಂನ ಬೀಜ ಕೃತಕ ದೇಶೀ-ದರ್ಶಿನ ಭೂಮಿಯಲ್ಲಿ ಮೊಳಕೆಯೊಡೆಯುತ್ತದೆ. ಕಳೆದ ಶತಮಾನದ ೨-೩ರ ದಶಕದಲ್ಲಿ ರಾಷ್ಟ್ರೀಯವಾದಿ ಮಾಧ್ಯಮಗಳು ಫ್ಯಾಸಿಸ್ಟ್ ಮಾಧ್ಯಮಗಳಾಗಿ ಯುರೋಪಿನಲ್ಲಿ ಪರಿವರ್ತನೆಗೊಂಡು ಹಿಟ್ಲರನ ರೀಚ್ (ಸಾಮ್ರಾಜ್ಯ)ದಲ್ಲಿ ಅಂತ್ಯವಾದವು. ಕಳೆದ ಶತಮಾನದ ಕೊನೆಯ ಹೊತ್ತಿಗೆ ಮುಕ್ತ ಮಾರುಕಟ್ಟೆಯ ಸಾಮ್ರಾಜ್ಯವನ್ನು ಕಟ್ಟುವ ಕನಸಿನ ಕಾರ್ಪೋರೇಟ್ ಮಾಧ್ಯಮಗಳು ರೂಪುತಳೆದು ಈಗ ಫ್ಯಾಸಿಸ್ಟ್ ರಚನೆಗಳಾಗಲಾರಂಭಿಸಿವೆ. ಕಾರ್ಪೋರೇಟ್ ಜಗತ್ತು, ಕಾರ್ಪೋರೇಟ್ ಪ್ರಚಾರ ಮತ್ತು ಅಮೆರಿಕ ಪ್ರೇರಿತ ಪ್ರಜಾಪ್ರಭುತ್ವ ಈ ಮೂರನ್ನು ಫ್ಯಾಸಿಸ್ಟ್ ತಾತ್ವಿಕತೆಯ ಅಡಿಯಲ್ಲಿ ವ್ಯಾಖ್ಯಾನಿಸಲು ಸಾಧ್ಯವಿದೆ. ಅದರ ಅರ್ಥ ಕಳೆದ ಶತಮಾನದ ಉತ್ಪನ್ನ ಫ್ಯಾಸಿಸಂ ಎಂದ?

ಫ್ಯಾಸಿಸ್ಟ್ ಯಾಜಮಾನ್ಯ ಎರಡು ನಮೂನೆಯ ಅಧಿಕಾರಗಳ ಮೇಳೈಸುವಿಕೆಯಿಂದ ಅಸ್ತಿತ್ವಕ್ಕೆ ಬರುತ್ತದೆ ಎಂದು ಗ್ರಾಮ್ಷಿ ಗುರುತಿಸುತ್ತಾನೆ. ಮೊದಲನೆಯದು ತೋಳ್ಬಲದ ಆಳ್ವಿಕೆ-rule by forcl; ಎರಡನೆಯದು ಸಮ್ಮತಿಯ ಆಳ್ವಿಕೆ-rule by consent. ಮೌಲ್ಯವ್ಯವಸ್ಥೆ ಮತ್ತು ಮಾಧ್ಯಮಗಳು ಸಮ್ಮಿತಿಯನ್ನು ಗಳಿಸಿಕೊಳ್ಳುವ ತಂತ್ರವಾಗಿ ಬಂದರೆ ಸಂಘಪರಿವಾರದ ಪಾಳೇಗಾರಿಕೆ

(ಮತ್ತು ಹಿಂದುತ್ವದ ನ್ಯಾಯ ವ್ಯವಸ್ಥೆಯಲ್ಲಿ ಮಾಧ್ಯಮಗಳ ಏಕಾಲತ್ತು) ನೇರ ಅಧಿಕಾರ ಕ್ರೋಢೀಕರಣವೇ ಆಗಿದೆ.

–೩–

ತಟ್ಟೆ ಮತ್ತು ಕಾಟೆಂಟ್‌ನ ರೂಪಕ:

`I we National Socialists, who are fighting for a new weltan schauung',... must make a clear aut distinction between the vessel and its cantents. The state is only the vessel and the race is what it contains.' ಮೂರನೆಯ ರೀಚ್ ಕಟ್ಟುವ ಮೊದಲು ಜೈಲಿನಲ್ಲಿದ್ದಾಗ ಹಿಟ್ಲರ್ ಟಿಪ್ಪಣಿಸಿದ್ದ ಮಾತುಗಳು ಇವು. ಹಿಂದುತ್ವದ ಪ್ರಾಜೆಕ್ಟ್‌ನಲ್ಲಿ ಇವು ಹೇಗೆ ಕ್ರಿಯಾಶೀಲವಾಗುತ್ತವೆ ಮತ್ತು ಈ ರೂಪಕಗಳು ಹೇಗೆ ಹಿಂದುತ್ವದ ತಾತ್ತ್ವಿಕತೆಯನ್ನು ಧಾರಣ ಮಾಡಿಕೊಳ್ಳುತ್ತವೆ ಎಂದು ನೋಡಬೇಕು.

ಹಿಂದುತ್ವದ intentionಗಳನ್ನು ಚರ್ಚೆಗಳನ್ನು ಸಾಧ್ಯ ತೆಗಾಗಿ ಏಕಕಾಲಿಕ ಮತ್ತು ಅಂತರ್ ಸಂಬಂಧಿತ ಮೂರು ಗುರಿಗಳಾಗಿ ಗುರುತಿಸೋಣ: ಹಿಂದೂ ರಾಷ್ಟ್ರ, ಹಿಂದೂ ಅಸ್ಮಿತೆ ಮತ್ತು ಬೋಧನಾತ್ಮಕ ಹಿಂಸೆ. ಈ ಚರ್ಚೆ ಫ್ಯಾಸಿಸ್ಟ್ ಕಥನದ ಸ್ವರೂಪವನ್ನು ಕೂಡ ಪ್ರಶ್ನೆಯಲ್ಲಿಟ್ಟುಕೊಂಡಿರುತ್ತದೆ.

ಅ) ಯಾಜಮಾನ್ಯ ಅಥವಾ ಹಿಂದೂ ರಾಷ್ಟ್ರ:

ಈ ಯಾಜಮಾನ್ಯ ಮೂಲಭೂತವಾಗಿ ರಾಜಕೀಯ ಸ್ವರೂಪದ್ದು ಮತ್ತು ಸಾಮಾಜಿಕ ಸಂದರ್ಭದ ಸಂಸ್ಕೃತಿ ವೇಗವರ್ಧಕದಂತೆ, ಕ್ಯಾಟಲೈಸರ್‌ನಂತೆ ಕೆಲಸ ಮಾಡುತ್ತದೆ. ರಾಜಕೀಯ ಕ್ಷೇತ್ರಗಳ, constituee ncyಗಳ ನಿರ್ಮಾಣ ಈ ಯೋಜನೆಯ ಮೊದಲ ಉದ್ದೇಶವಾಗಿರುತ್ತದೆ. ಅಡ್ವಾನಿಯ ಅಯೋಧ್ಯಾ ಯಾತ್ರೆ, ಭಾರತ್ ನಿರ್ಮಾಣ್ ಯಾತ್ರೆ, ಕರ್ನಾಟಕದ ದತ್ತಯಾತ್ರೆಗಳಂತಹ ರಥಯಾತ್ರೆಗಳು, ಶಿಬಿರಗಳು, ಉತ್ಸವಗಳು, ಗಲಭೆಗಳ ಮೂಲಕ ಕ್ಷೇತ್ರ ನಿರ್ಮಾಣ ಕಾರ್ಯ ನಡೆಯುತ್ತದೆ. ವಿಸ್ತೃತ ಬೀಸಿನ ರಥಯಾತ್ರೆ, ಉತ್ಸವಯೂ ಗಲಭೆಗಳ ನಂತರ ಶಿಬಿರಗಳ ಮೂಲಕ ರಾಜಕೀಯ ಸಂಸ್ಥೆಗಳ ಜಾಲದ ನಿರ್ಮಾಣ ಕಾರ್ಯ ನಡೆಯುತ್ತದೆ. ಈ ಜಾಲದೊಳಗೆ ತೀರ ದಕ್ಷ ಸಂವಾಹನ ವ್ಯವಸ್ಥೆ ಏರ್ಪಟ್ಟಿರುತ್ತದೆ. ವಿಚಾರಗಳನ್ನು ಪಸರಿಸಲು ಬೌದ್ಧಿಕನಂತಹವುಗಳು ಜರುಗುತ್ತವೆ. (ಇತ್ತೀಚೆಗೆ ಮಂಗಳೂರು, ಮೈಸೂರು, ಬೆಂಗಳೂರು ವಿ.ವಿ.ಗಳಲ್ಲಿ ಈ ಶಕ್ತಿಗಳು ಆಯೋಜಿಸಿದ್ದ ವಿಚಾರ ಸಂಕಿರಣಗಳು ಕೂಡ ನಡೆದಿದ್ದವು. ಕರಾವಳಿಯ ಕಾಲೇಜುಗಳಲ್ಲಿ ಇರುವ ಹಿಂದುತ್ವದ ಪ್ರಭಾವವನ್ನು ವಿವರಿಸಬೇಕಾಗಿಲ್ಲ. ಆದರೆ ಇವು ಇತರೆಡೆಗೂ ವಿಸ್ತರಿಸಿಕೊಳ್ಳಲು ಮತ್ತು ಈ ವಿಚಾರ ಸರಣಿಗೆ ಒಂದು ಬಗೆಯ ಅಧಿಕೃತತೆಯನ್ನು, authentieoty ಯನ್ನ ಒದಗಿಸಿಕೊಡಲು ಇಂಥ ವಿವಿಗಳ ಗೋಷ್ಠಿಗಳು ನೆರವಾಗುತ್ತದೆ ಎನ್ನುವುದನ್ನು ಗಮನಿಸಬೇಕು. ಇದರಲ್ಲಿ ಭಾಗವಹಿಸಿದವರು ಸಂವಾದದ ಕಾರಣ ನೀಡಿ ಸಮರ್ಥಿಸಿಕೊಂಡರೂ ಕೂಡ ಈ ರೀತಿಯ ಆಯೋಜನೆಯ ಮತ್ತು ಪ್ರಯೋಜನೆಯ ಹಿಂದಿನ ರಾಜಕೀಯ ಉದ್ದೇಶವನ್ನು ನಿರಾಕರಿಸಲು ಬರುವುದಿಲ್ಲ.)

ಈ ಜಾಲದ ಕಮಾಂಡಿಂಗ್ ಯುನಿಟ್ ಹಿಂದುತ್ವದ ಮತ್ತು ಹಿಂದೂ ರಾಷ್ಟ್ರದ ವ್ಯಾಖ್ಯಾವನ್ನು ನಿರ್ಮಿಸಿಕೊಳ್ಳುತ್ತದೆ; ಭೌಗೋಳಿಕವಾಗಿ, ರಾಜಕೀಯವಾಗಿ ಸ್ಥಿರವಾದ ಬಲಿಷ್ಠ ಹಿಂದೂ ರಾಷ್ಟ್ರದ ಚಿತ್ರಣವನ್ನು ಕೊಡುತ್ತದೆ. ಜಾಗತಿಕ ಬಂಡವಾಳವನ್ನು ತನ್ನ ಹಿತಾಸಕ್ತಿಗಳಿಗೆ ಅನುಸಾರವಾಗಿ ಕೆಲವು ಶರತ್ತುಗಳಿಗೆ ಒಳಪಡಿಸುತ್ತದೆ. ಎನ್.ಡಿ.ಎ ಆಳ್ವಿಕೆಯ ಆರ್ಥಿಕ ನೀತಿಯನ್ನು ಅವಲೋಕಿಸಿದರೆ ಈ ಅಂಶ ಸ್ಪಷ್ಟವಾದೀತು.

ಆ) ಸಮರೂಪತೆ ಅಥವಾ ಹಿಂದೂ ಅಸ್ಮಿತೆ Identity):

ಹಿಂದೂ ರಾಷ್ಟ್ರಕ್ಕೆ ಅನುರೂಪವಾದ ಹಿಂದೂ ಐಡೆಂಟಿಟಿಯನ್ನು ನಿರ್ಮಿಸುವ ಅನಿವಾರ್ಯತೆ ಸಮರೂಪತೆಯ ಚರ್ಚೆಗೆ ದಾರಿ ಮಾಡಿಕೊಡುತ್ತದೆ. ಈ ಅಸ್ಮಿತೆಯ ರೂಪಣೆ ರಾಜಕೀಯ ಅಸ್ತಿತ್ವಕ್ಕೆ ಅನಿವಾರ್ಯ ಅಸ್ಮಿತೆಯ ನಿಯಮಗಳೇ ಅಸ್ತಿತ್ವದ ಮೌಲ್ಯ ತಂದುಕೊಡುವ ಬಗೆ ಇದು. ಸಸ್ಸೂರ್ ಬೇರೊಂದು ಸಂದರ್ಭದಲ್ಲಿ ಬಳಸಿದ ಚೆಸ್‌ನ ಉದಾಹರಣೆಯನ್ನು ಇಲ್ಲಿ ತೆಗೆದುಕೊಳ್ಳಬಹುದು. ಅದರಲ್ಲಿರುವ ಕುದುರೆಯನ್ನು (Knight) ಹಾಗೆ ಗುರುತಿಸಲು ಕಾರಣ ಏನು? ಆಪೀಸ್ ಕುದುರೆಯ ಹಾಗಿರುವುದರಿಂದಲೇ? ಅಲ್ಲ ಕುದುರೆಯಂತಿರುವ ಪೀಸ್ ಕಳೆದು ಹೋದರೆ ಬೇರೆ ಏನನ್ನಾದರೂ ಕುದುರೆ ಎಂದು ಒಪ್ಪಿಕೊಳ್ಳುತ್ತೇವೆ. ಅಥವಾ ಪಾಸ್ ಪ್ರಮೋಶನ್ ನಿಯಮದ ಪ್ರಕಾರ ಪಾಸ್ ಬೇಕಾದರೂ ಕುದುರೆ ಎಂದು ಒಪ್ಪಿಕೊಳ್ಳುತ್ತೇವೆ. ಅಥವಾ ಪಾಸ್ ಪ್ರಮೋಶನ್ ನಿಯಮದ ಪ್ರಕಾರ ಪಾಸ್ ಬೇಕಾದರೂ ಕುದುರೆಯ ಮೌಲ್ಯ ಪಡೆಯುತ್ತದೆ. ಅಂದರೆ ಒಂದು ಪೀಸ್ ಕುದುರೆಯ ಹಾಗಿರುವುದರಿಂದ ಕುದುರೆಯಾಗುವುದಿಲ್ಲ. ಚೆಸ್ ಬೋರ್ಡ್‌ನಲ್ಲಿ ಅದರ ಸ್ಥಾನ ಹಾಗೂ ಚಲನೆಯ ನಿಯಮದ ಮೂಲಕ ಅದಕ್ಕೆ ಕುದುರೆಯ ಐಡೆಂಟಿಟಿ ಸಿಗುತ್ತದೆ.

ಹಿಂದುತ್ವದ ಐಡೆಂಟಿಟಿಯ ನಿರೂಪಣೆ ಸರ್ವಭಕ್ಷಕ ಆಂತರಿಕ ಸಮರೂಪತೆ ಮತ್ತು ಎದುರಾಳಿಯ ಭಿನ್ನತೆಗಳ ವಿಕೃತ ಕಥನಗಳ ಮೂಲಕ ಸಾಗುತ್ತದೆ ಇದಕ್ಕೆ 'ಭಾರತೀಯ ಪರಂಪರೆ'ಯನ್ನು ರೂಪಿಸಿದಾಗ ಭಿನ್ನ ಧ್ವನಿಗಳನ್ನು ಮತ್ತು ವಿಮರ್ಶೆಗಳನ್ನು ನುಂಗಿ ಹಾಕಿದ ಬ್ರಾಹ್ಮಣೀಕರಣದ ನೆನಪು ಇದೆ. ರಾಷ್ಟ್ರೀಯ ಪ್ರಜ್ಞೆ ಎನ್ನುವುದು

ಹಿಂದೂ ರಾಷ್ಟ್ರಕ್ಕೆ ಅನುರೂಪವಾದ ಹಿಂದೂ ಐಡೆಂಟಿಟಿಯನ್ನು ನಿರ್ಮಿಸುವ ಅನಿವಾರ್ಯತೆ ಸಮರೂಪತೆಯ ಚರ್ಚೆಗೆ ದಾರಿ ಮಾಡಿಕೊಡುತ್ತದೆ. ಈ ಅಸ್ಮಿತೆಯ ರೂಪಣೆ ರಾಜಕೀಯ ಅಸ್ತಿತ್ವಕ್ಕೆ ಅನಿವಾರ್ಯ ಅಸ್ಮಿತೆಯ ನಿಯಮಗಳೇ ಅಸ್ತಿತ್ವದ ಮೌಲ್ಯ ತಂದುಕೊಡುವ ಬಗೆ ಇದು. ಸಸ್ಸೂರ್ ಬೇರೊಂದು ಸಂದರ್ಭದಲ್ಲಿ ಬಳಸಿದ ಚೆಸ್‌ನ ಉದಾಹರಣೆಯನ್ನು ಇಲ್ಲಿ ತೆಗೆದುಕೊಳ್ಳಬಹುದು. ಅದರಲ್ಲಿರುವ ಕುದುರೆಯನ್ನು (Knight) ಹಾಗೆ ಗುರುತಿಸಲು ಕಾರಣ ಏನು? ಆ ಪೀಸ್ ಕುದುರೆಯ ಹಾಗಿರುವುದರಿಂದಲೇ? ಅಲ್ಲ ಕುದುರೆಯಂತಿರುವ ಪೀಸ್ ಕಳೆದು ಹೋದರೆ ಬೇರೆ ಏನನ್ನಾದರೂ ಕುದುರೆ ಎಂದು ಒಪ್ಪಿಕೊಳ್ಳುತ್ತೇವೆ.

ಸಮರೂಪದ ಹಿಂದೂ ಅಸ್ಮಿತೆಯ ಮೇಲೆ ರೂಪಿತವಾಗುತ್ತದೆ. ಇದರ ನೈತಿಕ ನೆಲೆ ಸನಾತನ ಧರ್ಮದಲ್ಲಿದೆ.

ಭ್ರಾಮಕ ಸಮುದಯದ ಕಲ್ಪನೆ:

'ದ್ವಿತ್ರಿವನ ವಿವರಣೆ' ಎಂದು ಪ್ರಸಿದ್ಧವಾಗಿರುವ ಮೂರನೆಯ ಇಂಟರ್‌ನ್ಯಾಷಿನಲ್ ಪ್ರತಿಪಾದಿಸಿದ ಫ್ಯಾಸಿಸಂನ ವ್ಯಾಖ್ಯಾನದ ಪ್ರಕಾರ ಫ್ಯಾಸಿಸಂ, ಬಂಡವಾಳಶಾಹಿ ವ್ಯವಸ್ಥೆ ತನ್ನ ತಾರ್ಕಿಕ ಬಿಕ್ಕಟ್ಟನ್ನು ಜೀರ್ಣಿಸಿಕೊಳ್ಳಲಾಗಿದೆ. ಅಧಿಕಾರದಲ್ಲಿ ಉಳಿಯಲು ಬಳಸುವ ಕಟ್ಟಕಡೆಯ, ಅಷ್ಟೇ ಹಿಂಸಾತ್ಮಕವಾದ ತಂತ್ರ. ಬಂಡವಾಳಶಾಹಿ ಉತ್ಪಾದನಾ ವಿಧಾನದಲ್ಲಿ ವ್ಯಕ್ತಿ ಎಲ್ಲ ರೀತಿಯಿಂದಲೂ–ಮೊದಲಿಗೆ ಉತ್ಪಾದನಾ ವ್ಯವಸ್ಥೆಯಿಂದ, ನಂತರ ತನ್ನ ಸಮುದಾಯದಿಂದ ಮತ್ತು ಕೊನೆಗೆ ಆಂತರಿಕವಾಗಿ–ಪರಕೀಯನಾಗಿರುತ್ತಾನೆ. ಇದರ ಪರಿಣಾಮವಾಗಿ ಆತ ತನ್ನ ಶ್ರಮ ಸಾಮಾಜಿಕವಾಗಿ ಹೇಗೆ ಉಪಯುಕ್ತ ಎಂದು ಯೋಚಿಸದೇ ಸ್ವಹಿತಕ್ಕಾಗಿ ಮಾತ್ರ ದುಡಿಯ ತೊಡಗಿದ.

ಇದರ ಮೊದಲು ಶ್ರಮದ ಉತ್ಪಾದನೆಯಲ್ಲಿ ಬಹುಪಾಲು ಆಸ್ತಿವಂತ ವರ್ಗಕ್ಕೆ ಸಲ್ಲುತ್ತಿತ್ತು. ಈಗ ಏಕಾಂಗಿತನ ಶ್ರಮದ ಉತ್ಸಾಹವನ್ನು ಕಡಿಮೆಗೊಳಿಸಿ, ಸಾಮಾಜಿಕ ಉತ್ಪಾದನೆ, ಹಾಗೆಯೇ ಆಸ್ತಿವಂತ ವರ್ಗಕ್ಕೆ ಲಭಿಸುವ ಲಾಭಗಳಿಗೆ ಕೂಡ ಸಂಚಕಾರ ತರುತ್ತದೆ. ಈ ಹಂತದಲ್ಲಿ ಉತ್ಪಾದನೆಯ ಪ್ರಮಾಣ ಹೆಚ್ಚಿಸಲು ಸಾಮುದಾಯಿಕ ಭಾವನೆಯ ಮರು ಹೂಡಿಕೆಯ ಅವಶ್ಯಕತೆ ಇದೆ. ವಾಸ್ತವ ಸಾಮಾಜಿಕ ಪ್ರಜ್ಞೆ ಶ್ರಮದ ಕೊಳ್ಳೆಯನ್ನು ಶ್ರಮಿಕನ ಅರಿವಿಗೆ ತರುವುದರಿಂದ ಆಸ್ತಿವಂತರ ಹಿತಾಸಕ್ತಿಗಳಿಗೆ ಅಪಾಯ ಉಂಟಾಗುತ್ತದೆ ಈ ವಾತಾವರಣದಲ್ಲಿ ಸಮಾಜದ ಪ್ರತಿಯೊಬ್ಬ ವ್ಯಕ್ತಿಯನ್ನು ಇತರರ ಜೊತೆ ಬೆಸೆಯುವ, ಪ್ರತಿಯೊಬ್ಬನೂ ತನ್ನ ಶ್ರಮವನ್ನು ಸಾಮಾಜಿಕ ಉಪಯುಕ್ತತೆಯ ದೃಷ್ಟಿಯಿಂದ ಎಂದು ಭಾವಿಸಲು ಅನುಕೂಲಕರವಾಗಿರುವ ರಚನೆಯೊಂದರ ಅಗತ್ಯತೆ ಉಂಟಾಗುತ್ತದೆ. ಈ ರಚನೆ ವಾಸ್ತವದಲ್ಲಿ ಇರುವ ಅಸಮಾನತೆಯನ್ನು–ಸಮುದಾಯದಿಂದ ಪರಕೀಯವಾಗಿರುವ ವ್ಯಕ್ತಿಯ ಸ್ಥಿತಿಯನ್ನು–ಭದ್ರವಾಗಿ ಕಾಯ್ದುಕೊಳ್ಳಬೇಕು; ಆದರೆ ವ್ಯಕ್ತಿ ತಾನು ಎಲ್ಲರೂ ಸಮಾನವಾಗಿರುವ ಸಮುದಾಯದ ಭಾಗವಾಗಿದ್ದೇನೆ ಎಂದು ಭಾವಿಸುವಂತೆ ಮಾಡಬೇಕು. ಅಂದರೆ ಈ ರಚನೆ ಒಂದು 'ಭ್ರಾಮಕ ಸಮುದಾಯ'ವಾಗಿರಬೇಕು. ವರ್ತಮಾನದ ಆತಂಕ, ಅನಿರ್ದಿಷ್ಟತೆ, ಗೊಂದಲಗಳಿಗೆ ಪರಿಹಾರವಾಗಿ ಭದ್ರತೆ, ನಂಬಿಕೆ ಮತ್ತು ಚಾರಿತ್ರಿಕವಾಗಿ ಉಳಿದುಕೊಂಡು ಬಂದ ಐಕ್ಯತೆಯ ಭ್ರಾಮಕ ಅಸ್ಮಿತೆಯನ್ನು ಹಿಂದುತ್ವ ನಿರೂಪಿಸುತ್ತದೆ. ಹಳೆಯ ಹಿಂದೂ ಮಹಾಸಭೆಯ ತಂತ್ರ ಕೂಡ ಇದೇ ಆಗಿತ್ತು.

ಅಂಬೇಡ್ಕರ್ ಇದನ್ನು ಗುರುತಿಸಿದ್ದರು: '(ಹಿಂದೂ ಮಹಾಸಭೆ) ಒಂದು ತೀವ್ರಗಾಮಿ ಹಿಂದೂ ಸಂಸ್ಥೆ. ಇದು ಹಿಂದೂ ಧರ್ಮದ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಶಯಗಳನ್ನೊಳಗೊಂಡು ಎಲ್ಲ ವಿಧಾನಗಳಿಂದ ಹಿಂದೂ ಧರ್ಮದ ಪ್ರತಿಯೊಂದು ಅಂಶಗಳನ್ನು ಸಂರಕ್ಷಿಸುವ ಸಂಸ್ಥೆ ಇದು ಸಾಮಾಜಿಕ ಸುಧಾರಣಾ ಸಂಸ್ಥೆಯಲ್ಲ; ಅದು ಕೇವಲ ರಾಜಕೀಯ ಸಂಘಟನೆಯಾಗಿದ್ದು ಭಾರತದ ರಾಜಕೀಯದಲ್ಲಿ ಮುಸಲ್ಮಾನರ ಪ್ರಾಬಲ್ಯವನ್ನು ನಿಗ್ರಹಿಸುವುದೇ ಅದರ ಮೂಲ ಉದ್ದೇಶವಾಗಿದೆ. ತನ್ನ ರಾಜಕೀಯ ಪ್ರಾಬಲ್ಯವನ್ನು ಸಂರಕ್ಷಿಸಿಕೊಳ್ಳಲು ಅದು ತನ್ನ ಸಾಮಾಜಿಕ ಒಗ್ಗಟ್ಟನ್ನು ಸಾಧಿಸಿಕೊಳ್ಳ ಬಯಸುತ್ತದೆ. ಜಾತಿ ಅಥವಾ ಅಸ್ಪೃಶ್ಯತೆಯ ಬಗ್ಗೆ ಮಾತನಾಡದಿರುವುದೇ

ಸಾಮಾಜಿಕ ಒಗ್ಗಟ್ಟನ್ನು ಸಾಧಿಸುವ ವಿಧನವಾಗಿದೆ.' (Dr. Ambedkar: volume 9)

ಹಿಂದೂ ಅಸ್ಮಿತೆಯ ನಿರೂಪಣೆ ಎರಡು ಆವರಣಗಳನ್ನು ಹೊಂದಿದೆ: ಮೊದಲನೆಯದಾಗಿ ಸಮಕಾಲೀನ ಆತಂಕ. ಅನಿರ್ದಿಷ್ಟತೆಗಳು ಜಾಗತಿಕ ಅವ್ಯವಸ್ಥೆಯ ಸ್ಥಾನೀಯ ಪ್ರಕಟಣಗಳಲ್ಲ; ಬದಲಾಗಿ ಆಂತರಿಕ ವೈರಿಯ ಸಂಚುಗಳು ಇವು ಎಂದು ಕಥಿಸುತ್ತದೆ. ಎರಡನೆಯದಾಗಿ ಗೊಂದಲವನ್ನು ಸೃಷ್ಟಿಸುವ ಶಕ್ತಿಗಳು ಈಚಿನವಲ್ಲ, ಶತಮಾನಗಳಷ್ಟು ಹಳೆಯವು ಮತ್ತು ಅದರ ವಿರುದ್ಧ ಬಹಳಷ್ಟು ಹಿಂದೂ ವೀರರು (ಶಿವಾಜಿ ಇ.) ಶೌರ್ಯದಿಂದ ಹೋರಾಡಿದ್ದಾನೆ ಎನ್ನಲಾಗುತ್ತದೆ.

ಆರ್ಯನ್ ಅಸ್ಮಿತೆಯನ್ನು ಕಟ್ಟಿದ ಹಿಟ್ಲರ್ ಮಾನವಕುಲವನ್ನು founders of calture, bearers of culture ಮತ್ತು destroyers of calture ಎಂದು ವಿಭಾಗಿಸುತ್ತೇನೆ (೨೬) ಈ ಮಾತುಗಳು ಸಂಘಪರಿವಾರದ ಅಸ್ಮಿತೆಯ ರೂಪಣೆಗೆ ತೀರ ಸಮಾನಾಂತರವಾಗಿದೆ. ಪರಂಪರೆಯ ವೀರರು, ಸಜ್ಜನರು ಸಂಸ್ಕೃತಿ ಕರ್ತರು; ಸಮಕಾಲೀನ ಹಿಂದೂಗಳು ಸಂಸ್ಕೃತಿ ದೂತರು ಮತ್ತು ಕ್ರಿಸ್ಚಿಯನ್, ಮುಸ್ಲಿಂ ಮತ್ತು ಕಮ್ಯುನಿಸ್ಟರ್ ಸಂಸ್ಕೃತಿ ಭಂಜಕರು ಎಂದು ಅದು ವಿವರಿಸಿಕೊಳ್ಳುತ್ತದೆ ಇವಿಷ್ಟು ವ್ಯಾಖ್ಯಾನ ಗಳಿಗೆ ' ಪುನರ್ ರೂಪಿತ ಚರಿತ್ರೆ ಅಧಿಕೃತತೆಯನ್ನು ಕೊಡು ತ್ತದೆ.

ಹಿಂದೂ ಅಸ್ಮಿತೆಯ ರಾಜಕಾರಣ ಚರಿತ್ರೆಯನ್ನು ನಿರಂತರ ವರ್ತಮಾನವನ್ನಾಗಿ (eternal present) ಸಾಂದ್ರೀಕರಿಸಿಕೊಳ್ಳುತ್ತಾರೆ. ಅಯೋಧ್ಯೆ, ಬಾಬಾ ಬುಡನ್ ಗಿರಿ ವಿವಾದಗಳಲ್ಲಿ ಚರಿತ್ರೆ ವಿವರಿಹಿಸಿದ ತಾತ್ರಿ ಈ ಮಾತನ್ನು ಸ್ಪಷ್ಟಪಡಿಸುತ್ತದೆ. ಆದರೆ ಈ ಚರಿತ್ರೆ ತೀರಾ ಆಯಲ್ಪಟ್ಟ ಕಥನವಾಗಿರುತ್ತದೆ ಎಂಬುದನ್ನು ಗಮನಿಸಿಕೊಳ್ಳಬೇಕು. ಗತಕಾಲದ ಭವ್ಯ ಪರಂಪರೆಯ ಕಥನವಾಗುವ ಚರಿತ್ರೆ ಜನರ ಕಥನವಾಗಿರುವುದಿಲ್ಲ; ರಾಜರ ಕಥನವಾಗಿರುತ್ತದೆ. ರಾಜರಲ್ಲಿ ಕೂಡ dewonised ರಾಜರನ್ನೇ ಪ್ರತ್ಯೇಕಿಸಿಕೊಂಡು ಕಥಿಸಲಾಗುತ್ತದೆ. ಇಲ್ಲಿ ಕೂಡ ಈ ರಾಕ್ಷಸೀಕೃತ ಕಾಜನಲ್ಲಿ ಎರಡೂ ಆಯಾಮಗಳಿದ್ದರೆ ಅದು ತನಗೆ ಬೇಕಾದುದನ್ನು ಮಾತ್ರ ಆಯ್ದುಕೊಳ್ಳುತ್ತದೆ. ಹಾಗೇ. ವೀರ ಪರಂಪರೆಯ ಕಥನದಲ್ಲಿ ಕೂಡ. ಟಿಪ್ಪುವನ್ನು ರಾಕ್ಷಸೀಕರಿಸಿ ಕಥಿಸುವ ಈ ಚರಿತ್ರೆಗೆ ಬ್ರಿಟಿಷರ ವಿರುದ್ಧ ಟಿಪ್ಪು ಮಾಡಿದ ಹೋರಾಟ ಮುಖ್ಯವಾಗುವುದಿಲ್ಲ; ಕೊಡಗಿನಲ್ಲಿ ನಡೆದ ಮತಾಂತರ ಪ್ರಕರಣಗಳು ಮಾತ್ರ ಗಣನೆಗೆ ಬರುತ್ತವೆ. ಹಾಗೇ ವಿ.ಡಿ. ಸಾವರ್ಕರ್ ಕಥನದಲ್ಲಿ ಆತನನ್ನು ಅಸಾಮಾನ್ಯ ವೀರ ದೇಶಿ ಪ್ರೇಮಿಯನ್ನಾಗಿ ಚಿತ್ರಿಸುವ ಈ ಚರಿತ್ರೆ ಸಾವರ್ಕರ್ ಬ್ರಿಟಿಷ್‌ರಿಂದ ಕ್ಷಮೆ ಕೋರಿ ಪತ್ರ ಬರೆದು ಜೈಲಿನಿಂದ ಹೊರಬಂದಿರುವುದನ್ನು ನೆನಪು ಮಾಡಿಕೊಳ್ಳುವುದಿಲ್ಲ.

ಚರಿತ್ರೆಯ ಸರಳರೇಖಾತ್ಮಕ ನಿರಂತರತೆಯನ್ನು ಕಥಿಸುತ್ತಲೇ ಹಿಂದುತ್ವ ಹಿಂದೂ ರಾಷ್ಟ್ರದ ಚಾರಿತ್ರಿಕ ಸಹನೆಯ ನಿರೂಪಣೆಯನ್ನು ಕೂಡ ಮಾಡುತ್ತದೆ. ಇಲ್ಲಿ ಚರಿತ್ರೆಯ ಸಹನೆಯ ಚಿತ್ರಣಕ್ಕೊಂದು ರಣಾಂಗಣದ ಪ್ರಭೆ (aura) ಪ್ರಾಪ್ತವಾಗುತ್ತದೆ. ಆಕ್ರಮಣಕಾರಿ ಮತ್ತು ದುಸ್ಸಹ ವೈರಿಯಿಂದ ಈ ಸಹನೆಯ ಪರಂಪರೆಯನ್ನು ರಕ್ಷಿಸಿ ಉಳಿಸಿಕೊಳ್ಳಲು ಚರಿತ್ರೆಯಲ್ಲಿ ನಿರಂತರ ಹೋರಾಟ ನಡೆದಿದೆ ಎಂದು ಅದು ವಾದಿಸುತ್ತದೆ. (Hinclutva: Jayanth hele)

ಅಡ್ವಾನಿ, ಠಾಕ್ರೆಗಳು ರಾಮ, ಶಿವಾಜಿಗಳ ಅಂಗಿ ತೊಟ್ಟುಕೊಳ್ಳುತ್ತಾರೆ ಇದು ಕರಾವಳಿಯ ಸಂಘಪರಿವಾರದ ಫ್ಯೂಡಲ್ ಹೆಜ ಮನಿಯಲ್ಲಿ, ಪ್ರೊ-ಆ್ಯಕ್ಟಿವ್ ಬೀದಿನಾಯಿಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ. ಗೋವಿನ ವಿಷಯ ಬಿಡಿ; ತೀರಾ ಸಾಮಾನ್ಯವೆನಿಸುವಂಥ. ಒಬ್ಬ ಹುಡುಗ ಹುಡು ಯ ಜೊತೆ ಅಥವಾ ಹಿಂದೂ ಹುಡುಗಿ 'ಅನ್ಯಕೋಮಿ'ನ (ಮಾಧ್ಯಮಗಳೇ ರೂಪಿಸಿದ ಭಾಷೆ ಇದು.) ಹುಡುಗನ ಜೊತೆ ಮಾತನಾಡುವುದು ಈ ಸಾಂಸ್ಕೃತಿಕ ಪೊಲೀಸರ ದೃಷ್ಟಿಯಲ್ಲಿ ಅಪರಾಧ.

ಇ) ದುಷ್ಟ ಶಿಕ್ಷಣ ಅಥವಾ ಬೋಧನಾತ್ಮಕ ಹಿಂಸೆ:

Pedagogie violence ಅಥವಾ ಬೋಧನಾತ್ಮಕ ಹಿಂಸೆ ಚರಿತ್ರೆಗೆ ಸನಾತನತೆಯನ್ನು ತಂದುಕೊಡುವ ಪ್ರಕ್ರಿಯೆಯ ತಾರ್ಕಿಕ ಮುಂದುವರಿಕೆ ಇತಿಹಾಸದಿಂದ ಕೆಲವು ವೀರಗಾಥೆಗಳನ್ನು, ಸಂಕೇತಗಳನ್ನು, ಘಟನೆಗಳನ್ನು, ಆಯ್ದುಕೊಂಡು ಅವುಗಳನ್ನು ಮತ್ತು ಎದುರಾಗಿ ವೈರಿಗಳ ಜೊತೆಗಿನ ಯುದ್ಧಗಳ ಘನೀಕೃತ ಮತ್ತು ಸರಳರೇಖಾತ್ಮಕ ಕಥನಗಳನ್ನು ಒಂದು ವೈಭವೀಕೃತ ಚೌಕಟ್ಟಿನಲ್ಲಿ ನಿರೂಪಿಸಲಾಗುತ್ತದೆ. ಜೊತೆಗೆ ವರ್ತಮಾನವನ್ನು ಪರಿವರ್ತನಾತ್ಮಕ ಘಳಿಗೆ ಎಂದು ವ್ಯಾಖ್ಯಾನಿಸಿ ಸಮಕಾಲೀನ ಆರ್ಥಿಕ-ಸಾಮಾಜಿಕ ಅಸಮಾನತೆಗಳನ್ನು, ಅವುಗಳೊಂದಿಗೆ ಸಾಮಾನ್ಯವಾಗುತ್ತಿರುವ ಹಿಂಸೆಯನ್ನು ಸಮರ್ಥಿಸಿಕೊಳ್ಳಲಾಗುತ್ತದೆ. ಇದು ಕಟ್ಟಿಕೊಡುವ ಲೋಕದೃಷ್ಟಿ ಎರಡು ಪ್ರಮೇಯಗಳನ್ನು ಆಧರಿಸಿದೆ: ಮೊದಲನೆಯದಾಗಿ, ವರ್ತಮಾನದ ದುಃಖ ಕೇವಲ ಪರಿವರ್ತನಾತ್ಮಕ ಹಾಗೂ ದೇಶದ್ರೋಹಿ, ಧರ್ಮಲಂಡರು, ಅಲ್ಪಸಂಖ್ಯಾತರನ್ನು, ಪಾತಕಿಗಳನ್ನು ಓಲೈಸುವ ರಾಜಕಾರಣ ಮತ್ತು ಅದರ ಆರ್ಥಿಕ ಭ್ರಷ್ಟತೆ ಈ ಸಫರಿಂಗ್‌ಗೆ ಕಾರಣ ಎಂದು ಮಂಡಿಸಲಾಗುತ್ತದೆ.

ಎರಡನೆಯ ಪ್ರಮೇಯ ಇದರ ಮುಂದುವರಿದ ಭಾಗ. ತಮ್ಮ ಹಿಂದೂ ಚಾರಿತ್ರಿಕ ನಾಯಕರ ಸಮೃದ್ಧ ರಾಜ್ಯಗಳನ್ನು ವೈಭವದ ಪರಂಪರೆಯನ್ನು ನೆನೆಪಿಸಿಕೊಂಡು ತಾವು ಕಟ್ಟುವ ಬಲಿಷ್ಠ ಹಿಂದೂ ರಾಷ್ಟ್ರದಲ್ಲಿ ನ್ಯಾಯಯುತ ಸಮಾಜ ವ್ಯವಸ್ಥೆಯನ್ನು ಸ್ಥಾಪಿಸುವ ಭರವಸೆ ವ್ಯಕ್ತಪಡಿಸಲಾಗುತ್ತದೆ ವಾಸ್ತವವಾಗಿ ಇದೇ ತರ್ಕದ ಪ್ರಕಾರ ಆತ್ಯಂತಿಕವಾಗಿ ಅಡ್ವಾನಿ, ಠಾಕ್ರೆಗಳು ರಾಮ, ಶಿವಾಜಿಗಳ ಅಂಗಿ ತೊಟ್ಟುಕೊಳ್ಳುತ್ತಾರೆ ಇದು ಕರಾವಳಿಯ ಸಂಘಪರಿವಾರದ ಫ್ಯೂಡಲ್ ಹೆಜಮನಿಯಲ್ಲಿ, ಪ್ರೊ-ಆ್ಯಕ್ಟಿವ್ ಬೀದಿನಾಯಿಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ. ಗೋವಿನ ವಿಷಯ ಬಿಡಿ; ತೀರಾ ಸಾಮಾನ್ಯವೆನಿಸುವಂಥ. ಒಬ್ಬ ಹುಡುಗ ಹುಡುಗಿಯ ಜೊತೆ ಅಥವಾ ಹಿಂದೂ ಹುಡುಗಿ 'ಅನ್ಯಕೊಮಿ'ನ (ಮಾಧ್ಯಮಗಳೇ ರೂಪಿಸಿದ ಭಾಷೆ ಇದು.) ಹುಡುಗನ ಜೊತೆ ಮಾತನಾಡುವುದು ಈ ಸಾಂಸ್ಕೃತಿಕ ಪೊಲೀಸರ ದೃಷ್ಟಿಯಲ್ಲಿ ಅಪರಾಧ. ಈ ಘಟನೆಗಳಲ್ಲಿ ಹುಡುಗಿಯನ್ನು 'ಎಚ್ಚರಿಕೆ' ಕೊಟ್ಟು ಮನೆಗೆ ಕಳುಹಿಸಿದರೆ ಹುಡಗನನ್ನು ಪೊಲೀಸ್ ಸ್ಟೇಶನ್‌ಗೆ ಒಯ್ಯ ಲಾಗುತ್ತದೆ. ಹಿಂದುತ್ವವಾದಿಗಳ ಗೂಂಡಾ ತಡೆ ಆತನನ್ನು 'ವಿಚಾರಿಸಿಕೊಳ್ಳುತ್ತದೆ! ಇವು ದಿನನಿತ್ಯವೆಂಬಂತೆ ನಡೆಯುತ್ತಿವೆ. ಮುಸ್ಲಿಂ ಹುಡುಗನ ಜತೆ ಮಾತಾಡಿದಕ್ಕೆ ಭಜರಂಗದಳದಿಂದ ಅವಮಾನಕ್ಕೆ ಗುರಿಯಾಗಿ ಆತ್ಮಹತ್ಯೆ ಮಾಡಿಕೊಂಡ ಹೆಜಮಾಡಿಯ ವನಿತಾರಂತಹವರು ಈ 'ಪಾಠ ಕಲಿಸುವವರ ಉಮೇದಿಗೆ' ಬಲಿಯಾಗುತ್ತಾರೆ. ಶಿವಮೊಗ್ಗದ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ನಡೆದ ದಾಂಧಲೆಯನ್ನು ಕೂಡ ಈ ಚೌಕಟ್ಟಿನಲ್ಲೇ ಇಟ್ಟು ನೋಡಬೇಕಾಗಿದೆ.

ಓರಿಯಂಟಲಿಸ್ಟ್ ಕಥನಗಳು ಭಾರತೀಯ ಪರಂಪರೆಯ ಬಗ್ಗೆ ರೂಪಿಸಿದ ದುಂಡು ಪರಿಕಲ್ಪನೆಗಳಲ್ಲಿ ಅದರ ವಾತಾಪಿ ಮಾದರಿ-ಎಲ್ಲ ಭಿನ್ನತೆಯನ್ನು ಒಳಗೊಳಿಸಿಕೊಳ್ಳುವ ಮಾದರಿ-ಯಾವ ಒಂದು ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಉದ್ಭವಿಸಿದ ಐಕ್ಯತೆಯ ಅಗತ್ಯದಿಂದಾಗಿ ಇದಕ್ಕೆ ರಾಷ್ಟ್ರೀಯವಾದಿಗಳ ಸಮರ್ಥನೆ ಕೂಡ ದೊರಕಿಬಿಟ್ಟಿತು. ಅಖಂಡ ಭಾರತದ ಪ್ರತಿನಿಧಿಯಾಗುವ ಹಂಬಲದಲ್ಲಿದ್ದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಸೆಕ್ಯುಲರ್ ಡಿಸ್‌ಕೋರ್ಸ್ ಕೂಡ ಇದನ್ನು ಆಧರಿಸಿಯೇ ರಚಿಸಲ್ಪಟ್ಟಿತು ಮತ್ತು ಸಮಕಾಲೀನ ಸೆಕ್ಯುಲರ್ ಡಿಸ್‌ಕೋರ್ಸ್‌ಗಳ ನಡುವೆ ಕೂಡ ಈ ಧರ್ಮ ನಿರಪೇಕ್ಷತೆಯ ಸಂಕಥನವೇ ಇತರ ಜಾತ್ಯತೀತ ಸಂಕಥನಗಳ ಮೇಲೆ ಹೆಜಮಾನಿಯನ್ನು ಸಾಧಿಸಿದೆ ಆದರೆ ಯುರೋ ಕೇಂದ್ರಿತ ವಸಾಹತುವಾದಿ ರಚನೆಗಳು ಈ ಸಾಮರಸ್ಯದ ಮಾದರಿಯನ್ನು ದ್ವಂದ್ವಗಳಿಂದ ತುಂಬಿರುವ ಕಾರಣ-ಪರಿಣಾಮಗಳ ತರ್ಕವನ್ನು ನಿರ್ಲಕ್ಷಿಸುವ ಮತ್ತು ಹೆಚ್ಚು ವಿಮರ್ಶೆಗೆ ಹೋಗದೆ ವಿಚಾರಗಳನ್ನು ವರ್ಗೀಕರಿಸುವ ಭಾರತೀಯ ಮನಸ್ಸಿನ ರೇಖಾತ್ಮಕ ಚಿತ್ರಣವೆಂಬಂತೆ ಕಂಡವು. ಪ್ರಾಸ್ಪೆರೋನ 'ಮ್ಯೋನೀಖಿಯನ್' ಭಾಷೆಗೆ ಈಗ ಕ್ಯಾಲಿಬನ್ ವಿಸ್ತರಿಸಲು ಶುರುಮಾಡಿದ. ರಾಷ್ಟ್ರೀಯವಾದಿ ಚರಿತ್ರೆಯ ನಿರೂಪಣೆಯಲ್ಲಿ ಕಂಡು ಒಂದು ಹಠಾತ್ ಬದಲಾವಣೆಯನ್ನು ಈ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕು.

ವಾರ್ತಾ ಮಾದರಿ ಏನೆಲ್ಲವನ್ನು ಒಳಗೊಂಡರೂ, ಎಷ್ಟೇ compromise ಮಾಡಿಕೊಂಡರೂ ತನ್ನ ಸತ್ವವನ್ನು, core ಅನ್ನು ಉಳಿಸಿಕೊಂಡೆ ಇರುತ್ತದೆ ಎಂಬ ಸ್ವಂತಿಕೆಯ ಅಸ್ಮಿತೆಯ ಕಲ್ಪನೆ ಚಾಲ್ತಿಗೆ ಬಂತು. ವಸಾಹತುಕಾರ ಯಾವದನ್ನು ಅವಗುಣವೆಂದು ಗುರುತಿಸುತ್ತಾನೋ ಅದನ್ನೇ ಕೇಂದ್ರವಾಗಿಸಿಕೊಂಡು ತನ್ನ ಇತರ ಶಕ್ತಿ ಸಂಚಯಗಳನ್ನು ಅಲ್ಲಿಗೆ ವರ್ಗಾಯಿಸಿ ತಿರುಗಿ ಬೀಳುವ, ವಸಾಹತಿಗೊಳಪಟ್ಟ ಸಾಂಪ್ರದಾಯಿಕ ಸಮಾಜಗಳ ಸಾಮಾನ್ಯ ಪಟ್ಟು ಇದು. ಸುಮಾರಾಗಿ ಈ ರೀತಿಯ ಅಸ್ಮಿತೆ ನಿರ್ಮಾಣವಾಗುವ ಹೊತ್ತಿಗಪ್ಪೇ ಅಸ್ತಿತ್ವಕ್ಕೆ ಬರುತ್ತಿದ್ದ ಹಿಂದುತ್ವದ ಶಕ್ತಿಗಳಿಗೆ, 'ಅಸ್ಪೃಶ್ಯತೆಯ ಪ್ರಶ್ನೆ ಪ್ರಮುಖವಾಗಿ ಹಿಂದೂ ಸಮಾಜಕ್ಕೆ ಸಂಬಂಧಿಸಿರುವುದರಿಂದ ಸಮಿತಿಯು ಈ ವಿಷಯವನ್ನು ಅಖಿಲ ಭಾರತ ಹಿಂದೂ ಮಹಾಸಭೆಯು ತನ್ನ ಕೈಗೆತ್ತಿಗೊಳ್ಳಬೇಕೆಂದು ಮತ್ತು ಹಿಂದೂ ಸಮಾಜದಿಂದ ಈ ಅನಿಷ್ಟವನ್ನು ಕಿತ್ತೊಗೆಯಲು ಸರ್ವಪ್ರಯತ್ನ ಮಾಡಬೇಕೆಂದು ಕೋರಲು ನಿರ್ಣಯಿಸುತ್ತದೆ. ಎಂಬ ಮೇ ೧೯೨೯ರ ಮುಂಬಯಿಯ ಕಾಂಗ್ರೆಸ್ ನಿರ್ಣಯ ರಾಜಕೀಯದ ಮುಖ್ಯ ವಾಹಿನಿಯಲ್ಲಿ ಪ್ರಾಮುಖ್ಯತೆ ದೊರೆಯುವಂತೆ ಮಾಡಿತು. (Dr. Ambedkar: volume 9) ಭಾರತೀಯ ಪರಂಪರೆಯ ಬ್ರಾಹ್ಮಣೀಕೃತ

ಆವೃತ್ತಿಯು core ರೂಪದಲ್ಲಿ ಸ್ಥಾಪಿತವಾಗಿ ಬೌದ್ಧ, ಜೈನ ಮತ್ತು ಸಿಖ್ ಮುಂತಾದ ದೇಶೀಯ ದರ್ಶನಗಳನ್ನು ಸಾಧ್ಯ–ಮಿತ್ರರನ್ನಾಗಿ (possible allres) ಕಾಣಲಾ ಯಿತು (ಸಾವರ್‌ಕರ್: ಹಿಂದುತ್ವ: ೧೧೨–೧೧೬) ಸ್ವಲ್ಪದರಲ್ಲಿ ಹೇಳಬೇಕೆಂದರೆ ಹಿಂದುತ್ವವಾದ ಈ ಸಾಮರಸ್ಯ ಮಾದರಿಯನ್ನೇ ಹಿಂದೂ ಧರ್ಮದ ವಿಶಿಷ್ಟ ಮೇಲ್ಮೆಯೆಂದು ವಿವರಿಸಿಕೊಂಡಿತು ಹಾಗೂ ಈ ಕಾರಣದಿಂದ ಹಿಂದೂ ರಾಷ್ಟ್ರವಾದುದರಿಂದ ಇಂಡಿಯಾ ಸೆಕ್ಯುಲರ್ ರಾಷ್ಟ್ರ ಎಂದು ನಿರೂಪಿಸಿತು ಹಾಗೂ ನಿರೂಪಿಸುತ್ತಿದೆ.

ಭಾರತೀಯ ಪರಂಪರೆಯ ಈ ರೇಖಾತ್ಮಕ ಕಥನ ವಾತಾಪಿ ಮಾದರಿಯಲ್ಲಿ ಪ್ರಗತಿಶೀತರೂ ಪುನರುತ್ಥಾನ ವಾದಿಗಳೂ ಸಂಧಿಸುವಂತೆ ಮಾಡಿ 'ಬೋಧನಾತ್ಮಕ ಹಿಂಸೆಯ ನಿರ್ಮಾಣದಲ್ಲಿ ಇಬ್ಬರನ್ನು ಸಮಾನ ಸಂಚುಗಾರರನ್ನಾಗಿಸುತ್ತದೆ. ಇಬ್ಬರು ಕೂಡ ಜನರನ್ನು ತಮ್ಮ ಚರಿತ್ರೆಯ ಬಗ್ಗೆ, ತಮ್ಮ ಪ್ರತಿರೋಧ–ಸಂತಸಗಳ ಸಾಮರ್ಥ್ಯದ ಬಗ್ಗೆ ಪ್ರಜ್ಞಾವಂತರನ್ನಾಗಿಸಲು ಉತ್ಸಾಹಕರಾಗಿದ್ದಾರೆ. ಇದೇ ಶಿಕ್ಷಣದ ಮಾದರಿಯಲ್ಲಿ ಮುಂದುವರಿಯುವ ಹಿಂದೂತ್ವವಾದಿಗಳು ಪರಂಪರೆ ತಮಗೊದಗಿಸಿದ ಜವಾಬ್ದಾರಿಯ ಬಗ್ಗೆ ಜನರಲ್ಲಿ ಅರಿವು ಮೂಡಿಸಲು, ಸಾಂಸ್ಕೃತಿಯ ವರ್ಗಾವಣೆಯನ್ನು (cultural transmission) ಜ್ಞಾನದ ವರ್ಗವಣೆ (knowledge transmission) ಯ ನೆಲೆಯಲ್ಲಿ ಗ್ರಹಿಸಿಕೊಂಡು ತಪ್ಪಿದಾಗ ಶಿಕ್ಷೆ ನೀಡಿ ಸರಿಪಡಿಸಲು ಹೋಗುತ್ತಾರೆ. ಹಿಂದೂ ಹುಡುಗಿ ಮುಸ್ಲಿಂ ಹುಡುಗನ ಜೊತೆ ಸೇರುವುದು ಈ cultural transmissionಗೆ ಇದರ (ಹಿಂದಿನ ಕಾಮುಕ ಪೋಲೀತನ ಏನೇ ಇರಲಿ) ತಡೆಯಾಗಿ ಕಾಣುತ್ತದೆ. ಹಿಂದೂ ಸಂಸ್ಕೃತಿಯನ್ನು ಹಿಂದೂ ಹುಡುಗಿಯನ್ನು 'ಹುಳು' ಮಾಡಿದ ಮುಸ್ಲಿಂ ಹುಡುಗನಿಗೆ 'ಪೌರ ಕಲಿಸಲು' ಹೋಗುತ್ತಾರೆ. ಬೋಧನಾತ್ಮಕ ಹಿಂಸೆ ಸಹಜವೆಂಬಂತೆ ಉದ್ಭವಿಸಿ ಬಿಡುತ್ತದೆ. ಯಾವುದೇ ಸರ್ವಾಧಿಕಾರಿ ರಚನೆಗಳಲ್ಲಿ ಹಿಂಸೆಗೆ ಒದಗುವ ಶೈಕ್ಷಣಿಕ ಮೌಲ್ಯದ ಹಿನ್ನೆಲೆಯಲ್ಲಿ ಇದನ್ನು ಅರ್ಥ ಮಾಡಿಕೊಳ್ಳಬೇಕು.

ಬೋಧನಾತ್ಮಕ ಹಿಂಸೆಯನ್ನು ನಿರೂಪಿಸುವಲ್ಲಿ ಫ್ಯಾಸಿಸ್ಟ್ ಮಾಧ್ಯಮಗಳು ಕೂಡ ಸಕ್ರಿಯವಾಗಿರುತ್ತವೆ. ಈ ಹಂತದಲ್ಲಿ ಬೋಧನಾತ್ಮಕ ಹಿಂಸೆಯ ಪರಧಿಯೊಳಗೆ ಸಂಘ ಪರಿವಾರದ ಫ್ಯೂಡಲ್ ಸ್ವರೂಪದ ಹಿಂಸೆಯ ಜೊತೆಗೆ ಪ್ರಭುತ್ವದ ಹಿಂಸೆ ಕೂಡ ಸೇರಿಕೊಳ್ಳುತ್ತದೆ. ಪರ್ಯಾಯ ನ್ಯಾಯಾಂಗದ ಅಂತಿಮ ತೀರ್ಪುಗಳು ಇಲ್ಲಿ ರೂಪುಗೊಳ್ಳುತ್ತವೆ. ಸ್ವಲ್ಪ ವಿಸ್ತೃತವೆನಿಸಿದರೂ ಕೆಲವು ಉದಾಹರಣೆಗಳನ್ನು ನೀಡಿದ್ದೇನೆ.

ಅ) 'ದುರ್ಜನರ ನಾಶಕ್ಕಾಗಿ' ಎಂದು ಘೋಷಿಸಿಕೊಂಡಿರುವ 'ಸನಾತನ ಪ್ರಭಾತ' ಎಂಬ ಸಾಪ್ತಾಹಿಕದ ಮಂಗಳೂರು ಗಲಭೆಯ (ಅ–೪ ರಿಂದ) ನಿಕಟಪೂರ್ವ ಸಂಚಿಕೆಯಿಂದ (ಸೆ–೨೮ರಿಂದ ಅಕ್ಟೋಬರ್ ೪–೨೦೦೬):

i) **ಲೀಡ್‌ನ ಹೆಡ್‌ಲೈನ್:**– 'ಧರ್ಮ ದ್ರೋಹಿಗಳನ್ನು ಗುರುತಿಸಿ ಅವರ ಮೇಲೆ ಆಘಾತ ಮಾಡುವ ಆಕ್ರಮಣಕಾರೀ ವೃತ್ತಿಯನ್ನು ನಮ್ಮಲ್ಲಿ ತರುವುದೇ ನಿಜವಾದ ಕ್ಷತ್ರಿಯ ವೃತ್ತಿ!'

ವಿವರಣೆಯ ಆಯ್ದ ಭಾಗ :– ಅಧರ್ಮೀಯರಿಂದ ಧರ್ಮದ ಮೇಲಾಗುವ ಆಕ್ರಮಣಗಳನ್ನು ತಡೆಗಟ್ಟಲು, ದುರ್ಜನರಿಂದಾಗುವ ಅನ್ಯಾಯವನ್ನು ತಡೆಗಟ್ಟಲು ಆಕ್ರಮಣದ ಮಾರ್ಗವನ್ನು ಸ್ವೀಕರಿಸಲೇಬೇಕಾಗುತ್ತದೆ... ೨೦ ವರ್ಷಗಳ ಹಿಂದೆ ಕಾಶ್ಮೀರಕ್ಕಷ್ಟೇ ಸೀಮಿತವಾಗಿದ್ದ ಭಯೋತ್ಪಾದಕರ ಬಯವು ಇಂದು ಊರೂರುಗಳಿಗೆ ಬಂದು ಮುಟ್ಟಿದೆ ಮಾತ್ರವಲ್ಲದೆ' ನಮ್ಮ ದೇವಸ್ಥಾನಗಳಿಗೂ ಕಾಲಿಟ್ಟಿದೆ... ಶತ್ರುಗಳನ್ನು ಗುರುತಿಸಿರಿ ಮತ್ತು ಅವರಮೇಲೆ ಹಲ್ಲೆ ಮಾಡಿರಿ, ಈ ಹಲ್ಲೆಯೆಂದರೆ ಅವರ ಕುಂದು ಕೊರತೆಗಳ ಮೇಲೆ ಮಾಡುವ ಹಲ್ಲೆ, ಅವರ ಟೊಳ್ಳು ಶ್ರದ್ಧೆಗಳ ಮೇಲೆ ಮಾಡುವ ಹಲ್ಲೆ, ಅವರು ಯಾವುದನ್ನು ಪ್ರತಿನಿದಿಸುತ್ತಾರೆಯೋ ಅದರ ಬಗ್ಗೆ ಅವರು ನಿರ್ಮಿಸಿಕೊಂಡಿರುವ ಭ್ರಮೆಯ ಮೇಲೆ ಹಲ್ಲೆ ಮಾಡುವುದು... ಇದೆಲ್ಲವನ್ನು ಮಾಡುವ ನಿಶ್ಚಯವನ್ನು ಮಾಡಿ ವಿಜಯದಶಮಿ (ಅ.೨) ರಂದು ಕೃತಿಗೆ ಪ್ರಾರಂಭಿಸಿರಿ!'

ii) **ಒಳಪುಟದ ವಿವರಣೆಯ ಹೆಡ್‌ಲೈನ್:** 'ಹಿಂದೂಗಳೇ, ಈಗ ಇನ್ನೊಂದು ಗೋರಿ ತಲೆಯೆತ್ತಿ ನಿಂತಿದೆ! ಕೆಳಗೆ ೧೮–೦೮–೨೦೦೬ ರ ಹುಬ್ಬಳ್ಳಿ ಆವೃತ್ತಿಯ ಸಾ.ಕ.ದ ವರದಿಯೊಂದನ್ನು ನೀಡಿ ಅದಕ್ಕೆ ಸಂಪಾದಕರ ಈ ಟಿಪ್ಪಣಿಯನ್ನು ಸೇರಿಸಲಾಗಿದೆ. ಹಿಂದುಗಳೇ, ಈ ಘಟನೆಯ ಬಗ್ಗೆ ಉದಾಸೀನತೆ ತೋರಿಸಿರುವ ಬೇಜವಾಬ್ದಾರಿ ಅಧಿಕಾರಿಗಳು ಇನ್ನೊಂದು ಬಾಬಾ ಬುಡನ್‌ಗಿರಿಯನ್ನು ಹುಟ್ಟುಹಾಕುತ್ತಿದ್ದಾರೆಯೇ? ದತ್ತಪೀಠವು ಹಿಂದೂಗಳದ್ದಾಗಿದೆ ಎಂಬುದರ ಬಗ್ಗೆ ಸ್ಪಷ್ಟವಾದ ದಾಖಲೆಗಳಿದ್ದರೂ ಅದನ್ನು 'ವಿವಾದ' ಎಂದು ಹೇಳುವ ಈ ಜಾತ್ಯತೀತ ಸರಕಾರವು, ಮುಸಲ್ಮಾನರ ಈ ಕೃತಿಗೆ (ಸಂ.ಕ.ದ ಪ್ರಕಾರ ಗುಲ್ಬರ್ಗಾದ ನಾರಾಯಣಪುರ ಜಲಾಶಯದ ಮುಂಭಾಗದ ಅನಧಿಕೃತ ಗೋರಿಯೊಂದನ್ನು ಜಾಮಿಯೂ ಮಸೀದಿಯಾಗಿ ನಿರ್ಮಿಸುವ) ಏನೆಂದು ಹೆಸರಿಸುವುದು? ಹಿಂದೂಗಳೇ ಜಾತ್ಯತೀತ ಸರಕಾರದ ಈ ಮೌನವನ್ನು ಮುರಿಯಲು ನಾವು ಹಿಂದೂ ಸೇನೆಯಲ್ಲಿ ಸೇರಿಕೊಳ್ಳುವುದು ಅನಿವಾರ್ಯವಾಗಿದೆ.'

> **ಭಾರತೀಯ ಪರಂಪರೆಯ ಈ ರೇಖಾತ್ಮಕ ಕಥನ ವಾತಾಪಿ ಮಾದರಿಯಲ್ಲಿ ಪ್ರಗತಿಶೀಲರೂ ಪುನರುತ್ಥಾನವಾದಿಗಳೂ ಸಂಧಿಸುವಂತೆ ಮಾಡಿ 'ಬೋಧನಾತ್ಮಕ ಹಿಂಸೆಯ ನಿರ್ಮಾಣದಲ್ಲಿ ಇಬ್ಬರನ್ನು ಸಮಾನ ಸಂಚುಗಾರರನ್ನಾಗಿಸುತ್ತದೆ. ಇಬ್ಬರು ಕೂಡ ಜನರನ್ನು ತಮ್ಮ ಚರಿತ್ರೆಯ ಬಗ್ಗೆ, ತಮ್ಮ ಪ್ರತಿ ರೋಧ–ಸಂತಸಗಳ ಸಾಮರ್ಥ್ಯದ ಬಗ್ಗೆ ಪ್ರಜ್ಞಾವಂತರನ್ನಾಗಿಸಲು ಉತ್ಸಾಹಕರಾಗಿದ್ದಾರೆ. ಇದೇ ಶಿಕ್ಷಣದ ಮಾದರಿಯಲ್ಲಿ ಮುಂದುವರಿಯುವ ಹಿಂದೂತ್ವವಾದಿಗಳು ಪರಂಪರೆ ತಮಗೊದಗಿಸಿದ ಜವಾಬ್ದಾರಿಯ ಬಗ್ಗೆ ಜನರಲ್ಲಿ ಅರಿವು ಮೂಡಿಸಲು, ಸಾಂಸ್ಕೃತಿಯ ವರ್ಗಾವಣೆಯನ್ನು ಜ್ಞಾನದ ವರ್ಗವಣೆಯ ನೆಲೆಯಲ್ಲಿ ಗ್ರಹಿಸಿಕೊಂಡು ತಪ್ಪಿದಾಗ ಶಿಕ್ಷೆ ನೀಡಿ ಸರಿಪಡಿಸಲು ಹೋಗುತ್ತಾರೆ.**

iii) **ಒಂದು ಬಾಕ್ಸ್ ಟಿಪ್ಪಣಿ: ಹೆಡ್‌ಲೈನ್:** ದೇಶಪ್ರೇಮಿ ಮುಸಲ್ಮಾನರನ್ನು ಏನು ಮಾಡಬೇಕು? ವಿವರಣೆ: ಒಂದು ಸಲ ಕೇಸರಿ ಸಭಾಗೃಹದಲ್ಲಿ ನಡೆದ ಚರ್ಚೆಯಲ್ಲಿ ಸಾವರ್‌ಕರರಿಗೆ ಒಬ್ಬರು ಮುಂದಿನಂತೆ ಪ್ರಶ್ನಿಸಿದರು: 'ನೀವು ಎಲ್ಲ ಮುಸಲ್ಮಾನರ ವಿರುದ್ಧ ಮಾತನಾಡುತ್ತೀರಿ. ದೇಶಪ್ರೇಮಿ ಮುಸಲ್ಮಾನರು ಸ್ವಲ್ಪ ಪ್ರಮಾಣದಲ್ಲಿದ್ದಾರೆ, ನೀವು ಅವರನ್ನು ಒಪ್ಪುವುದಿಲ್ಲವೇನು? ಆಗ ಸಾವರ್‌ಕರ್ ಅವರಿಗೆ ಮರು ಪ್ರಶ್ನಿಸಿದರು: 'ಯಾವಾಗ ಚರ್ಚಿಲರು ಎಂಟು ಕೋಟಿ ಜರ್ಮನರ ವಿರುದ್ಧ ಯುದ್ಧವನ್ನು ಘೋಷಿಸಿದರು: ಆಗ ಎರಡು ಮೂರು ಲಕ್ಷ ಶಾಂತಿಪ್ರಿಯ ಜರ್ಮನರನ್ನು ಅವರಿಂದ ಪ್ರತ್ಯೇಕಿಸಿರಿ ಎಂದು ಅವರಿಗೆ ನೀವೇನಾದರೂ ಟೆಲಿಗ್ರಾಮ್ ಕಳಿಸಿದ್ದಿರೇನು? ಯುದ್ಧದ ಗಡಿಬಿಡಿಯಲ್ಲಿ ಇಂತಹ ಅಪವಾದಾತ್ಮಕ ಮತ್ತು ಕೆಲವು ಜನರನ್ನು ಎಣಿಸಲು ಸಮಯವಿರುವುದಿಲ್ಲ. ವಿಭೀಷಣನಂತಹ ನ್ಯಾಯಪ್ರಿಯರು ತಾವಾಗಿಯೇ ನಿಮ್ಮ ಪಕ್ಷಕ್ಕೆ ಬರುತ್ತಾರೆ'

ಆ) i) ಮಂಗಳೂರು ಗಲಭೆಯ ಸಂದರ್ಭದಲ್ಲಿ ಪ್ರಮುಖ ದಿನಪತ್ರಿಕೆಯೊಂದು ಜನರ ಗುಂಪಿನ ನಡುವೆ ಮೇಯರ್ ಇರುವ ಫೋಟೋವನ್ನು ಮೊದಲ ಪುಟದಲ್ಲಿ ಹಾಕಿ, ಮೇಯರ್ ಸುತ್ತಲೂ ಮಾರ್ಕ್ ಮಾಡಿ ಗಲಭೆ ಪ್ರಚೋಧಿಸುತ್ತಿರುವ ಮೇಯರ್ ಎಂಬರ್ಥದ ಅಡಿ ಟಿಪ್ಪಣಿಯನ್ನು ನೀಡಿತ್ತು.

ii) ಜನವರಿ ೧೪ ರಂದು ನಡೆದ ರಫೀಕ್ ಎಂಬ ಕೊಲೆ ಆರೋಪಿಯ ಎನ್‌ಕೌಂಟರ್ ಬಗ್ಗೆಗೆ ಪ್ರಮುಖ ದಿನಪತ್ರಿಕೆಯೊಂದರಲ್ಲಿ ಬಂದ ಸುದ್ದಿ–ಯೂ–ವಿವರಗಳು:

*** ಮೊದಲ ಪುಟದ ಬಾಕ್ಸ್ ಐಟಮ್ ಹೆಡ್‌ಲೈನ್:** ಅಪರಾಧ ಜಗತ್ತಿಗೆ ಪೊಲೀಸ್ ಎಚ್ಚರಿಕೆ! ವಿವರ: ಅಪರಾಧ ನಡೆಸಿ ಬೇರೆ ಬೇರೆ ಮಾರ್ಗದಿಂದ ಬಚಾವಾಗುತ್ತಿದ್ದ ಪಾತಕಿಗಳಿಗೆ ಕಾನೂನು ಸುವ್ಯವಸ್ಥೆಯ ಒಳಹೊರಗೆ ಗೊತ್ತಿತ್ತು. ಮುಂಬಯಿ, ದುಬಾಯಿಯ ಸಂಪರ್ಕವಿರಿಸಿಕೊಂಡು ಕರಾವಳಿ ಜಿಲ್ಲೆಯಲ್ಲಿ ಅಪರಾಧ ಚಟುವಟಿಕೆ ನಡೆಸುತ್ತಿದ್ದವರಿಗೆ, 'ಏನು ಆಗುವುದಿಲ್ಲ' ಎಂಬಂತಿದ್ದ ಪಾತಕಿಗಳಿಗೆ ಇದೇ ಮೊದಲ ಬಾರಿ ಪೊಲೀಸರು ಎನ್‌ಕೌಂಟರ್ ಉತ್ತರ ನೀಡುತ್ತಿದ್ದಾರೆಯೇ?

ಹೌದೆಂಬಂತಿದೆ ಜಿಲ್ಲೆಯಲ್ಲಿ ನಡೆದ ಎರಡು ಎನ್‌ಕೌಂಟರ್‌ಗಳು. ಇನ್ನು ಎಷ್ಟು ದಿನವೆಂದು ಅಪರಾಧಿಗಳನ್ನು ಸಹಿಸುವುದು ಎಂಬ ಅಸಹನೀಯ ಭಾವನೆ ಪೊಲೀಸ್ ಬಲದಲ್ಲಿ ಬಂದಿರಬಹುದೇ ಸುಖಾನಂದ ಶೆಟ್ಟಿ (ಮುಲ್ಕಿಯ ನಗರ ಪಂಚಾಯತ್ ಬಿಜೆಪಿ ಸದಸ್ಯಯವರ ಹತ್ಯೆ ಬಳಿಕ ನಡೆದ ಗೋಲಿಬಾರಿನಲ್ಲಿ ಇಬ್ಬರು ಸತ್ತಿದ್ದರು. ಈಗ ಆರೋಪಿಗಳಿಬ್ಬರು ಸತ್ತಿದ್ದಾರೆ. ಒಟ್ಟಾರೆಯಾಗಿ ಪೊಲೀಸರು ನಿಷ್ಪಕ್ಷ ಪಾತವಾಗಿ ವರ್ತಿಸಿದ್ದಾರೆಂಬ ಭಾವನೆಯೂ ಬರುತ್ತಿದೆ ಅಥವಾ ರಾಜ್ಯಾಡಳಿತ ದುಷ್ಟರನ್ನು ಮಟ್ಟ ಹಾಕಲು ಪೊಲೀಸರಿಗೆ ಮುಕ್ತ ಅಧಿಕಾರ ನೀಡಿದೆಯೇ ಎಂಬ ಅರ್ಥವೂ ಬರಲು ಸಾಧ್ಯವಿದೆ. ಇನ್ನು ಮುಂದೆ ಹಣಕ್ಕಾಗಿ ಸುಪಾರಿ ಕೊಲೆ ಮಾಡುವವರಿಗೆ ಪೊಲೀಸರು ಎಚ್ಚರಿಕೆ ನೀಡಿದಂತಾಗಿದೆ.

*** ಹೆಡ್‌ಲೈನ್: ಎಸ್.ಎಂ.ಎಸ್. ಸುರಿಮಳೆ!**

(ಪುತ್ತೂರು ವರದಿ) ವಿವರ: ಬಿಜೆಪಿಯ ನಾಯ

ಸುಖಾನಂದ ಶೆಟ್ಟಿ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ಮುಲ್ಕಿ ರಫೀಕ್‌ನನ್ನು ಪೊಲೀಸರು ಉಡುಪಿಯಲ್ಲಿ ಎನ್‌ಕೌಂಟರ್ ಮಾಡಿದ ಮಾಹಿತಿಯನ್ನು ಹಿಂದೂ ಸಂಘಟನೆಗಳ ಕಾರ್ಯಕರ್ತರು ಎಸ್.ಎಂ.ಎಸ್. ಸಂದೇಶದ ಮೂಲಕ ರವಾನಿಸುತ್ತಿದ್ದು, ಪೊಲೀಸ್ ಅಧಿಕಾರಿಗಳ ಕ್ರಮವನ್ನು ಸ್ವಾಗತಿಸುತ್ತಿದ್ದಾರೆ.

ಇಂದು ಬೆಳಗ್ಗೆಯಿಂದಲೇ ಈ ಕುರಿತು ಎಸ್.ಎಂ.ಎಸ್. ಸಂದೇಶಗಳು ನಿರಂತರವಾಗಿ ರವಾನೆಯಾಗುತ್ತಿದ್ದು, ಸಂಕ್ರಾತಿಯ ಶುಭಾಶಯದೊಂದಿಗೆ ಪೊಲೀಸರನ್ನು ಅಭಿನಂದಿಸುವ ವಾಕ್ಯಗಳು ಕೂಡ ಸಂದೇಶದಲ್ಲಿವೆ.

* ಒಟ್ಟು ಸುದ್ದಿಯ ಹೆಡ್‌ಲೈನ್: 'ಮುಲ್ಕಿ ರಫೀಕ್ ಮಟಾಶ್'

ಇವುಗಳನ್ನು ವಿವರವಾಗಿ ವಿಶ್ಲೇಷಿಸಲು ಹೋಗುವುದಿಲ್ಲ; ಬದಲಾಗಿ ಸಂಸ್ಕೃತಿಯ ವರ್ಗವಣೆಯು ಜ್ಞಾನದ ವರ್ಗಾವಣೆಯಾಗಿ ಪರಿವರ್ತಿತವಾಗುತ್ತಿರುವ ಪ್ರಕ್ರಿಯೆಗೆ ಸಮಾನಾಂತರವಾಗಿ ಮಾಹಿತಿಗಳು ಹೇಗೆ ಜ್ಞಾನವಾಗಿ ಪರಿವರ್ತಿತವಾಗುತ್ತವೆ ಎಂಬುದನ್ನು ಹೇಳಿಬಿಡುತ್ತೇನೆ. ಈ 'ಜ್ಞಾನ'ವನ್ನು ಅಧಿಕಾರ/ಜ್ಞಾನ (power/knowledge) ಎಂಬ ಫುಕೋನ ನೆಲೆಯಲ್ಲಿ ಗುರುತಿಸುತ್ತಿದ್ದೇನೆ ಜ್ಞಾನಕ್ಕೂ ಅಧಿಕಾರಕ್ಕೂ ನಡುವೆ ಇರುವ ನೇರ ಹಾಗೂ ಪೂರಕ ಸಂಬಂಧವನ್ನು ಗುರುತಿಸಿ 'ಜ್ಞಾನವೆಂದರೆ ಅಧಿಕಾರ' ಎಂದು ತೀರ್ಮಾನಿಸುವ ಫುಕೋ, 'ಅಧಿಕಾರ ಮತ್ತು ಜ್ಞಾನಗಳು ನೇರವಾಗಿ ಒಂದನ್ನೊಂದು ಒಳಗೊಳ್ಳುತ್ತವೆ. ಯಾವುದೇ ಅಧಿಕಾರಾಧಾರಿತ ಸಂಬಂಧವೂ ಅದಕ್ಕೆ ಪೂರಕವಾಗುವ ಜ್ಞಾನ ಸಮೂಹದ ರಚನೆಯಾಗದೆ ಅಸ್ತಿತ್ವಕ್ಕೆ ಬರುವುದಿಲ್ಲ. ಮತ್ತು ಅಧಿಕಾರಾಧಾರಿತ ಸಂಬಂಧಗಳನ್ನು ರೂಪಿಸದೇ ಯಾವ ಜ್ಞಾನಕ್ಷೇತ್ರ ಕೂಡ ಅಸ್ತಿತ್ವದಲ್ಲಿ ಇರುವುದಿಲ್ಲ' ಎನ್ನುತ್ತಾನೆ. ತಣ್ಣಗಿನ ಸಂಸ್ಕೃತಿಗಳು ಮತ್ತು ತಣ್ಣಗಿನ ಮಾಧ್ಯಮಗಳು Hot ಆಗುತ್ತಿರುವ ಚೌಕಟ್ಟಿನಲ್ಲಿಟ್ಟು ಇದನ್ನು ವಿವರಿಸಿಕೊಳ್ಳಬೇಕಾಗಿದೆ.

ಆಧುನಿಕ ಸಮಾಜಗಳಿಗೆ ಚರಿತ್ರೆಯ ಮೇಲಿರುವ ಅಗಾಧ ಅವಲಂಬನೆ ತಣ್ಣಗಿನ ಸಂಸ್ಕೃತಿಗಳಿಗೆ ಇಲ್ಲದಿರುವುದನ್ನು ಗುರುತಿಸುವ ಲೆವಿಸ್ಟ್ರಾಸ್ ಇವು ತಮ್ಮ ಸುತ್ತಣ ಪರಿಸರದೊಂದಿಗೆ ಮಾತ್ರ ಸಂಬಂಧ ಹೊಂದಿರುತ್ತವೆ ಎನ್ನುತ್ತಾನೆ. ಇತರ ಸಂಸ್ಕೃತಿಗಳ ಹಾಗೆ ಇವು ಕೊತಕೊತಗೆ ಕುದಿಯುವುದಿಲ್ಲ. ತಣ್ಣಗಿನ ಸಂಸ್ಕೃತಿಗೆ ಇರದ ತಾಂತ್ರಿಕತೆ ಮತ್ತು ರಾಜಕೀಯ ಬದಲಾವಣೆಗಳಿಗೆ ಒಳಗಾಗುವ ಒತ್ತಾಸೆ ಇತರ ಸಂಸ್ಕೃತಿಗಳಿಗೆ ಇರುತ್ತದೆ; ಮತ್ತು ಅವು ಸಾಕಾರಗೊಳ್ಳುವುದರಿಂದ ಇವು ಕುದಿಯುತ್ತಲೇ ಇರುತ್ತವೆ. ಸದಾ ಉದ್ವಿಗ್ನತೆಯಲ್ಲಿರುವ ಈ ಸಂಸ್ಕೃತಿಗಳು Hot ಮೀಡಿಯಾಗಳನ್ನು ರೂಪಿಸಿಕೊಂಡಿರುತ್ತವೆ ತಣ್ಣಗಿನ ಸಂಸ್ಕೃತಿಗಳಲ್ಲಿ ಈ Hot ಮಾಧ್ಯಮಗಳು ಬಳಕೆಯಾಗುವಾಗ ವ್ಯಕ್ತವಾಗುವ ಪರಿಣಾಮಗಳು ಹಿಂಸ್ರವಾಗಿರುತ್ತವೆ. (ಮಾಧ್ಯಮ ಗಳನ್ನು ಅರಿತುಕೊಳ್ಳುವಿಕೆ: ಮಾರ್ಷಲ್ ಮೆಕ್ ಲುಹಾಸ್) ಮಾಧ್ಯಮಗಳ ಬಿಸಿಯಾಗುವಿಕೆ (hotting up) ಆತ್ಯಂತಿಕವಾಗಿ ಭ್ರಾಮಕ ರಚನೆಗಳನ್ನು ನಿರ್ಮಿಸುವುದರಲ್ಲಿ ಅಂತ್ಯವಾಗುವುದನ್ನು ಗುರುತಿಸುವ ಮೆಕ್ ಲುಹಾಸ್ ಜನರ ಸ್ಪಂದನಾತ್ಮಕ ಒಳಗೊಳ್ಳುವಿಕೆಯ ನಿರಾಕರಣೆಯೇ ಹಾಟ್ ಮೀಡಿಯಗಳ ಮುಖ್ಯ ಲಕ್ಷಣ ಎಂದು ಹೇಳುತ್ತಾನೆ.

ಒಂದು ಕಾರ್ಟೂನ್ ತಣ್ಣಗಿನ ಮಾಧ್ಯಮವಾಗಿದ್ದರೆ ಕ್ಯಾಮರಾದ ಫೋಟೋ ಚಿತ್ರಿಕೆ ಹಾಟ್ ಮೀಡಿಯಾ ಆಗಿರುತ್ತದೆ. ಟೆಕ್ನಾಲಜಿಯ (ಟೆಕ್ನೆ=ವೇಗ) ಉದ್ವಿಗ್ನ ವೇಗದ ಸಂದರ್ಭದಲ್ಲಿ ಛಾಯ ಚಿತ್ರದ ಉತ್ತಮವಾಗಿ ವ್ಯಾಖ್ಯಾನಿಸಲ್ಪಟ್ಟ ಸ್ಥಿತಿಯೇ ಅದಕ್ಕೆ ಜ್ಞಾನದ ಮೌಲ್ಯವನ್ನು ಒದಗಿಸುತ್ತದೆ. ಜನರನ್ನು ಸದಾ ಓದುಗ/ಕೇಳುಗ/ನೋಡುಗನೆಂಬ ಸ್ವೀಕರಣದ ಕೊನೆಯಲ್ಲಿಯೇ ಇಟ್ಟು ನೋಡುವ ಈ ಸಮೀಕರಣ ಸುಲಭವಾಗಿ ಮಾಹಿತಿಯನ್ನು ಜ್ಞಾನವಾಗಿ ಪರಿವರ್ತಿಸಿ ಬಿಡುತ್ತಿದೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಮಾಹಿತಿ ವ್ಯವಸ್ಥೆಯ ಆಧುನಿಕೋತ್ತರ ಯುಗದಲ್ಲಿಯೇ ಮಾಹಿತಿ/ಜ್ಞಾನದ ಸಮಸ್ಯೆಯೆಂದರೆ ಪ್ರಸಾರಣವನ್ನು ತಡೆಗಟ್ಟುವ (rationing and hoarding) ಸಮಸ್ಯೆ ಯಲ್ಲ; ಬದಲಾಗಿ ಮಾಹಿತಿಯನ್ನು ಅರ್ಥೈಸುವ ಜನರ ಸಾಮರ್ಥ್ಯವನ್ನೇ ನಿಯಂತ್ರಿಸಲಾಗುತ್ತಿರುವ ಸಮಸ್ಯೆ. ಆದರ್ಶ ಸ್ಥಿತಿ ಮತ್ತು ಪ್ರಾಯೋಗಿಕ ವಾಸ್ತವಗಳ ನಡುವಿನ ಸಂಘರ್ಷಾತ್ಮಕ ಅನುಭವಗಳ ಹಿನ್ನೆಲೆಯಲ್ಲಿ ಮಾಹಿತಿಯನ್ನು ವಿಮರ್ಶಾತ್ಮಕವಾಗಿ ವಿವರಿಸಿಕೊಳ್ಳುವ ಸಾಮರ್ಥ್ಯವನ್ನು ಅಧಿಕಾರ-ಜ್ಞಾನಗಳ ಸಮೀಕರಣಗಳು ಮಾರ್ಪಡಿಸುತ್ತಿವೆ.

ಮಂಗಳೂರಿನ ಗಲಭೆಯಲ್ಲಿ ಮಾಧ್ಯಮಗಳು ತೀರ ನಿರ್ಣಾಯಕ ಪಾತ್ರ ವಹಿಸಿರುವುದು ಸ್ಪಷ್ಟವಾಗಿದೆ. ಕಾರ್ಪೊರೇಟ್ ಮಾಧ್ಯಮಗಳು ಫ್ಯಾಸಿಸ್ಟ್ ಜ್ಞಾನಕ್ಷೇತ್ರವನ್ನು ನಿರ್ಮಿಸುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಕಾಣುತ್ತದೆ.

ಸಂಸ್ಕೃತಿಯ ವರ್ಗವಣೆಯು ಜ್ಞಾನದ ವರ್ಗಾವಣೆಯಾಗಿ ಪರಿವರ್ತಿತವಾಗುತ್ತಿರುವ ಪ್ರಕ್ರಿಯೆಗೆ ಸಮಾನಾಂತರವಾಗಿ ಮಾಹಿತಿಗಳು ಹೇಗೆ ಜ್ಞಾನವಾಗಿ ಪರಿವರ್ತಿತವಾಗುತ್ತವೆ ಎಂಬುದನ್ನು ಹೇಳಿಬಿಡುತ್ತೇನೆ. ಈ 'ಜ್ಞಾನ'ವನ್ನು ಅಧಿಕಾರ/ಜ್ಞಾನ (power/knowledge) ಎಂಬ ಫುಕೋನ ನೆಲೆಯಲ್ಲಿ ಗುರುತಿಸುತ್ತಿದ್ದೇನೆ ಜ್ಞಾನಕ್ಕೂ ಅಧಿಕಾರಕ್ಕೂ ನಡುವೆ ಇರುವ ನೇರ ಹಾಗೂ ಪೂರಕ ಸಂಬಂಧವನ್ನು ಗುರುತಿಸಿ 'ಜ್ಞಾನವೆಂದರೆ ಅಧಿಕಾರ' ಎಂದು ತೀರ್ಮಾನಿಸುವ ಫುಕೋ, 'ಅಧಿಕಾರ ಮತ್ತು ಜ್ಞಾನಗಳು ನೇರವಾಗಿ ಒಂದನ್ನೊಂದು ಒಳಗೊಳ್ಳುತ್ತವೆ. ಯಾವುದೇ ಅಧಿಕಾರಾಧಾರಿತ ಸಂಬಂಧವೂ ಅದಕ್ಕೆ ಪೂರಕವಾಗುವ ಜ್ಞಾನ ಸಮೂಹದ ರಚನೆಯಾಗದೆ ಅಸ್ತಿತ್ವಕ್ಕೆ ಬರುವುದಿಲ್ಲ. ಮತ್ತು ಅಧಿಕಾರಾಧಾರಿತ ಸಂಬಂಧಗಳನ್ನು ರೂಪಿಸದೇ ಯಾವ ಜ್ಞಾನಕ್ಷೇತ್ರ ಕೂಡ ಅಸ್ತಿತ್ವದಲ್ಲಿ ಇರುವುದಿಲ್ಲ' ಎನ್ನುತ್ತಾನೆ.

* * *

ಕರಾವಳಿಯಲ್ಲಿ ಹಿಂದುತ್ವದ ಶಕ್ತಿಗಳು ಮೊಳೆತ ಸುಮಾರಿಗೆ ಕಂಡು ಬಂದ ಅಗ್ಗದ ಶ್ರಮದ ಒಳಹರಿವನ್ನು ಕೂಡ ಗಮನಿಸಬೇಕಿದೆ. 'ಘಟ್ಟದವರ'ನ್ನು ಕರಾವಳಿಯ 'ನಾಗರಿಕ' ಮನಸ್ಸು ದ್ವಿತೀಯ ದರ್ಜೆಯಲ್ಲಿಯೇ ಸ್ವೀಕರಿಸುತ್ತದೆ. ಹಿಂದುತ್ವವಾದಿಗಳಿಗೆ ಇವರು ತಮ್ಮ ಭವ್ಯ ಸಾಮ್ರಾಜ್ಯದ ನಿರ್ಮಿತಿಗೆ ಅಗತ್ಯವಾದ ಕಾಲಾಳುಗಳಾಗಿದ್ದರೆ. ಒರಟಾಗಿ ಹೇಳಬೇಕೆಂದರೆ ಇವರ ಶ್ರಮದ ಮಿಗುತಾಯ ಮೌಲ್ಯವೇ ಫ್ಯಾಸಿಸ್ಟ್ ಆಟಾಟೋಪದ ಆರ್ಥಿಕ ಬಂಡವಾಳವಾಗಿ ಪರಿವರ್ತಿತಗೊಂಡಿದೆ.

* * *

ಮತ್ತೆ ಮೂಲ ಪ್ರಮೇಯಕ್ಕೆ ಮರಳುವುದಾದರೆ: ಕರಾವಳಿಗೆ ಫ್ಯಾಸಿಸಂ ಎನ್ನುವುದು ದೂರದ 'ಗುಮ್ಮ'ವಾಗಿ ಉಳಿದಿಲ್ಲ; ಫ್ಯಾಸಿಸ್ಟ್ ನಂಟು ಇಲ್ಲಿ ನಿಜವಾಸ್ತವ.

ಫ್ಯಾಸಿಸ್ಟ್ ಕಥನದ ಕ್ಷುದ್ರೀಕರಣ ಡೆಮನೀಕರಣ-ಉನ್ನತೀಕರಣದ ಮಾದರಿಗೆ ಪ್ರತಿಯಾಗಿ ಬರುತ್ತಿರುವ ಪ್ರಗತಿಪರರ ಕಥನಗಳು ಈ ಮಾದರಿಯದೇ ತಿರುಗಾ-ಮುರುಗಾ ರೂಪದಂತೆ ಕಾಣುತ್ತದೆ. ಇಲ್ಲಿ ಚಾರಿತ್ರಿಕ ಸಾಮರಸ್ಯದ ಕಥನ-ಸಮಕಾಲೀನ ನಂಜು ಭರಿತ ಹಿಂಸೆ ವರ್ತಮಾನ ಮತ್ತು ಇದೇ ಗತಿಯ ಆತ್ಯಂತಿಕವೆನ್ನಬಹುದಾದ ಕುರೂಪಿ-ಭೀಕರ ಭವಿಷ್ಯದ ಮಾದರಿಯನ್ನು ನಿರ್ಮಿಸಲಾಗುತ್ತದೆ. ಪ್ರತಿಕ್ರಿಯಾತ್ಮಕ ಪ್ರತಿವಾದಗಳು ಇಟಾಲಿಯಲ್ಲಿ ಗ್ರಾಮ್ಸಿ ಹೇಳಿದ ಎಚ್ಚರಿಕೆಯನ್ನು ನೆನಪಿಸುತ್ತಿವೆ: 'ಆಳುವ ವರ್ಗಗಳ ರಾಜಕೀಯವನ್ನು ಎಂದಿಗೂ ನಗಲು ಮಾಡಬಾರದು; ಹಾಗೇನಾದರೂ ಮಾಡಿದರೆ ಆಳುವ ವರ್ಗದವರು ತೋಡಿದ ಹಳ್ಳಕ್ಕೆ ಅನಾಮತ್ತಾಗಿ ಬೀಳುತ್ತೇವೆ;

ಸದ್ಯದ ತುರ್ತು-ವಿಸ್ತೃತ ನೆಲೆಯ ಪರ್ಯಾಯದ ನಿರ್ಮಾಣ: ಈ ಕುರಿತ ಕ್ರಿಯಾಶೀಲತೆಯನ್ನು ಕುತೂಹಲದಿಂದ ಎದುರು ನೋಡುತ್ತಿದ್ದೇನೆ. ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವ ಸೀಮಿತ ಪ್ರಯತ್ನವಷ್ಟೇ ಈ ಟಿಪ್ಪಣಿಯಲ್ಲದೆ.

* * *

ಸಾಮರಸ್ಯ ಮಾದರಿಯ ಸೆಕ್ಯುಲರ್ ಮನಸ್ಸಿಗೆ ಇದು ಏಕಮುಖಿ ಕಥನದಂತೆ- ಕೇವಲ ಫ್ಯಾಸಿಸ್ಟ್ ಹಿಂದುತ್ವದ ನಿರೂಪಣೆಯಂತೆ, ನಿರೂಪಣೆಗೊಳ್ಳದ ಕಾರಣ ಇಸ್ಲಾಮಿಕ್ ಫ್ಯಾಸಿಸಂನ ನಿರಾಕರಣೆಯಂತೆ-ತೋರಬಹುದು. ಹಾಟ್ ಮೀಡಿಯಗಳು ನಿರ್ಮಿಸಿದ ದುಂಡು ಕಥನಗಳು ಉಂಟುಮಾಡುವ ಮುಜುಗರವನ್ನು ಮೀರಿ ಚಿಂತಿಸಬೇಕಾಗಿದೆ. ಇದು ಮೌನವನ್ನು ಅಭಾವದ ನೆಲೆಯಲ್ಲಿ ಗ್ರಹಿಸಿ ಅಸ್ತಿತ್ವವನ್ನು ನಿರಾಕರಿಸುವ ಆಧುನಿಕತೆಯ ವಿಕಾರ.

ಗಾಢ ಮೌನದಲ್ಲಿ ಇದ್ದುಕೊಂಡು ನೀವು ಮಾತನಾಡಿಸಿದರೆ ಮಾತ್ರ ನಿಮ್ಮದೇ ಭಾಷೆಯಲ್ಲಿ ಮಾತನಾಡುವ ಮರದ ಬಗ್ಗೆ ರಿಚರ್ಡ್ ಲೆನೋಯ್ ಬರೆಯುತ್ತಾನೆ ನಾಸ್ಟಾಲ್ಜಿರ್ ಮನಸ್ಸಿಗೆ ಇದು ಅಜ್ಜ ನೆಟ್ಟ ಆಲ ಕೂಡ ಆದೀತು. ಇಡೀ ಮರಕ್ಕೆ ಏನನ್ನೋ ಹೇಳುವ ಕಾತರತೆ ಇದೆ.

ಹಾವುಗಳೇ ಸುರಳಿಸುತ್ತಿ ಮರದ ಕಾಂಡವಾಗಿವೆ; ಸೂಜಿಯಂತಿರುವ ಅಲಗುಳ್ಳ ಎಲೆಗಳಿವೆ. ಕೊಂಬೆಗೆ ಫಲಬಂದು ಚಿಗುರಿರುವಂತೆ ಕುದುರೆ, ಹುಲಿ, ಆನೆ, ಹಸುಗಳ ಮುಖಗಳಿವೆ. ಹಣ್ಣಿಲ್ಲ. ಹಣ್ಣಿನ ಬದಲು ಏಳು ಬೆತ್ತಲೆ ಹೆಂಗಸರು ನೇತು ಬಿದ್ದಿದ್ದಾರೆ. □

○ ಕೋಳಾಲ ಸಿದ್ಧಬಸವಯ್ಯ



ರಾಜಯೋಗ

ಗಂಟು ಮೂರಾಕಿ ಮೂವತ್ತಮೂರಾಯ್ತು ನೆಮ್ಮದಿಯಿಲ್ಲ
ಮೂರುದಿನ ತನ್ನ ಕೃತಿರತ್ನ ಪರೀಕ್ಷಿಪಂಗೆಂಟೆದೆ ಬೇಕೆಂದ
ರನ್ನ ನಾನೇ ಗಂಡು ಗುಲಾಮನಲ್ಲೆಂದು ಪ್ರೂವ್ ಮಾಡು
ವವನಿದ್ದರೆ ಅವನ ಪಾದಗಳಿಗೆ ಕೋಟಿಕೋಟಿ ಉದ್ದಂಡ
ಹೆಂಡತಿಯ ಗುಲಾಮರು ತೊಂಭತ್ತೊಂಭತ್ತು ಮೀಸೆಮಿಂ
ಡರೆಲ್ಲ ನೂರನೆಯವನು ಇಂದಿದ್ದರೆ ಅವನು ಬ್ರಹ್ಮಚಾರಿ

ಹೆಣ್ಣು ಮಾಯೆ ಗಂಡು ನಾಯಿ ಅಮರಕೋಶದ ನಮ್ಮ
ನಿಂಗಜ್ಜಿ ಪಾಡದ್ದೇ ಪಾಡು ಇಪ್ಪತ್ತೆಂಟು ಗುಣ ದೇವಗಣ
ರಾಜಯೋಗ ಹೂವಿನ ರಥ ಸಂಸಾರ ಬಲು ಪ್ರಶಸ್ತವೀ
ಜಾತಕ ಬರೆದು ಕೊಟ್ಟ ಆ ಆರುವನೇನಾದರಿಂದು ಸಿಕ್ಕಿ
ದರೆ ಬನ್ನೂರು ಕುರಿಯಂತೆ ಬಲಿಕೊಟ್ಟು ನಾನೇ ಸರೆಂಡ
ರಾಗುತ್ತೇನೆ ಆಂತ್ಯವಾಗಲಿ ಇಲ್ಲಿಗಿವನ ಸುಳ್ಳು ಪಂಚಾಂಗ

ನಲ್ಲಿನೀರಿಲ್ಲ ಆದರೂ ನೀರಾಲು ಬೆಚ್ಚುವ ಬಿಲ್ಲು ಕರೆಂಟಿ
ಲ್ಲ ಸಕ್ಕರೆ ಬೆಲ್ಲ ತರಕಾರಿಯಿಲ್ಲ ಲೇಟಾಯ್ತು ಪಿಳ್ಳೆಗಳೆರ
ಡು ತಕತಕ ದಿಕ್ಕಿಲ್ಲದ ಬಾಡಿಗೆ ಈ ಪ್ಯಾಕೇಜಿನ ಮನೆಗೆ
ಬೇಡವೆಂದೆ ಓಚಯ್ಯನ ಕೊಡೆ ಇದ್ದಾಳಲ್ಲ ನಮ್ಮಮ್ಮಣ್ಣಿ
ಕೂನಿಸಿದಳೀಮನೆಗೆ ನಾನೇನು ಆಮಲೆ-ಜೋಮಲೆ ಕೇ
ಳಲಿಲ್ಲ ನೋಡಬೇಕು ನಮ್ಮಣ್ಣನಕ್ಕ ತಂಗಿಯರ ಸಂಸಾರ

ಕಳಿತ ಟೊಮ್ಯಾಟೆ ಮಣ್ಣಾಲುಗಡ್ಡೆ ಬರಿಬೇರು ಕ್ಯಾರೆಟ್ಟು
ಉಳುಕುಳುಕ ಮುಳ್ಗಾಯಿ ಎಲೆಕೋಸು ಸೀಡೆ ಕೊರೆಬ
ಲಿತ ಹುರುಳೀ ಕರಿಬೇವು ಕೊತ್ತಂಬರಿ ತರಕಾರಿ ಚೆನ್ನಾಗಿ
ನೋಡಿ ತನ್ನಿರೆಂದರೆ ಮಾರುವವಳ ಮುಖ ನೋಡುತ್ತ
ತಂದಿರುವೆ ನಿನ್ನ ಮೂತಿಗೆ ಮಣೆ ಹಾಕಿದಳವಳು ನೀನು
ಗಂಡಸು ಮೂರು ಕತ್ತೆಯ ವಯಸ್ಸಾಯ್ತು ನನ್ನ ಕರ್ಮಕ್ಕೆ

ಫುಟ್ಪಾತಿನಲಿ ಮಾರುವವರಿಗೆಷ್ಟು ಸೊಕ್ಕು ತರಕಾರಿ ಆ
ರಿಸಬೇಡ್ರಿ ಸೊಪ್ಪು ಇರುವುದಿಂಗೆ ಮಾರಿಗೆ ಮೂವತ್ತು
ಸೌತೆ ಬಲಿತಿದೆ ನಮ್ಮ ದುಡ್ಡಿಗೆ ಬೆಲೆಯಿಲ್ಲವಾ ನಾವೂ
ಸುರಿದು ತಂದಿಲ್ಲವಾ.. ಇವರ ಗೊಡವೇ ಬೇಡೆಂದು
ಮನೆಮುಂದೆ ಬಂದವರೋ ಕೇಜಿಗೆ ಅರ್ಧ ದಿಕ್ಕಿಲ್ಲದ
ರೇಟು ಹಳೆಯ ಹೊಸ ಮಿಕ್ಸು ಎಂದದ್ದು ಮರೆತಿರುವೆ

ಕೊರೆವ ಛಳಿಯಲಿ ಮಸುಕಿಗೆದ್ದು ತೊರೆದಡದ ಮಣ್ಣಿ
ನಲಿ ಗುದ್ದಲಿ ಆರೆಯಿಡಿದವಗೆ ಬೆವರಹನಿ ಬೊಬ್ಬೆಗಳು
ಹಳ್ಳದಿಂದೊತ್ತು ಗಡಿಗೆಯಲಿ ಉಯ್ಲು ನೀರುಯ್ದ ಬೆಳೆ
ದು ಸಂತೆಯಲಿ ಮಾರಿದನುಭವಿ ನಾನು ನಿನಗೆಲ್ಲಿ ಗೊ
ತ್ತು ಬದನೆ ಟೊಮ್ಯಾಟೊ ಫಾರಂನಾಟಿ ಹುರುಳಿ ಅಲ
ಸಂದಿ ಕೆಂಪುಬಿಳಿ ಮೂಲಂಗಿ ಅಣ್ಣೆ ಅನಗೊನೆ ಕಿರಿಸಾಲೆ
ಉಳುಬಸಲೆ ವ್ಯತ್ಯಾಸಗಳು ಬರೀ ಬಯ್ಯಾಲಜ್ಜಿ ನೀನು

ಬ್ರಾಹ್ಮಣ ಧರ್ಮ ಮತ್ತು ಅದರ ಕಾರ್ಯಾಚರಣೆಯನ್ನು ಅರ್ಥ ಮಾಡಿಕೊಳ್ಳಲು ಮೇಲಿನ ಅಂಶಗಳನ್ನು ಪರಿಗಣಿಸಲೇಬೇಕು. ನನ್ನ ಓದಿನ ತಿಳುವಳಿಕೆಯಲ್ಲಿ ಅತ್ಯಂತ ವಿನಯದಿಂದ ಮಂಡಿಸಬೇಕಾಗಿರುವ ವಿಚಾರವೆಂದರೆ ಇದುವರೆಗೂ ಬ್ರಾಹ್ಮಣ ಧರ್ಮದ ವಿರುದ್ಧ ಪ್ರಜ್ಞಾ ಪೂರ್ವಕವಾಗಿ ಮತ್ತು ಅಪ್ರಜ್ಞಾಪೂರ್ವಕವಾಗಿ ಪ್ರತಿಭಟಿಸಿದವರೆಲ್ಲರೂ ಮೇಲಿನ ಅಂಶಗಳನ್ನು ಖಚಿತವಾಗಿ ಗೆರೆ ಕೊರೆದಂತೆ ಹೇಳುವುದಿಲ್ಲ. ಇಂದು ಭಾರತದಲ್ಲಿ ನಡೆಯುತ್ತಿರುವ ಬ್ರಾಹ್ಮಣ ಧರ್ಮದ ಕಾರ್ಯ ಚಟುವಟಿಕೆಯನ್ನು ಬ್ರಾಹ್ಮಣ ಧರ್ಮದ ಅಜೆಂಡಾವೆಂದು ಗುರುತಿಸದೆ ಮಾರ್ಕ್ಸಿಸ್ಟ್ ಪಾರ್ಟಿಗಳು ಹಿಂದೂ ಮೂಲಭೂತವಾದಿಗಳು ಮತ್ತು ವೈದಿಕರು ಇತ್ಯಾದಿಯಾಗಿ ಗುರುತಿಸುವುದು ಅಚ್ಚರಿಯನ್ನು ಉಂಟು ಮಾಡುತ್ತದೆ. ಈ ಗೊಂದಲಗಳಿಗೆ ತೆರೆಹಾಕದೆ ಹೋದರೆ ಬ್ರಾಹ್ಮಣ ಧರ್ಮದ ಸರ್ವಾಧಿಕಾರಿ, ಕೋಮುವಾದಿ ಕಾರ್ಯಾಚರಣೆಯ ಸ್ವರೂಪವೂ ಎಂದಿಗೂ ಗ್ರಹಿಕೆಗೆ ಧಕ್ಕುವುದಿಲ್ಲ.

ಡಾ. ಲಕ್ಷ್ಮಿಪತಿ ಸಿ.ಜಿ

ಬ್ರಾಹ್ಮಿನ್ ಸೂಪರ್ ಮ್ಯಾನ್!

ಭಾರತಕ್ಕೊಂದು ಮನೋ-ಸಾಮಾಜಿಕ ಚರಿತ್ರೆಯನ್ನೇನಾದರೂ ಕಟ್ಟಿದರೆ ಅದು ಬ್ರಾಹ್ಮಣ ಧರ್ಮ ಭಾರತದ ಜನ ಮಾನಸದ ಮೇಲೆ ಆಡಿರುವ ಚದುರಂಗದಾಟದ್ದೇ ಆಗಿರುತ್ತದೆ. ಜರ್ಮನಿಯ ಓಸ್ವಾಲ್ಡ್ ಸ್ಪೆಂಗ್ಲರ್ ಮತ್ತು ಫ್ರೆಡ್ರಿಕ್ ನೀಶ್ಚೆ ೧೯ ನೇ ಶತಮಾನದಲ್ಲಿ ತಲುಪಿದ ತಾರ್ಕಿಕ ನಿರ್ಣಯಗಳನ್ನು, ತಾತ್ವಿಕ ನಿಯಮಗಳನ್ನು ಮನುಧರ್ಮ ಶಾಸ್ತ್ರ ಎಷ್ಟೋ ಶತಮಾನಗಳ ಹಿಂದೆಯೇ ತಲುಪಿತ್ತು. ಓಸ್ವಾಲ್ಡ್ ಸ್ಪೆಂಗ್ಲರ್ ಮತ್ತು ಫ್ರೆಡ್ರಿಕ್ ನೀಶ್ಚೆ ಯೂರೋಪಿನ ಆಧುನಿಕ ನಾಗರಿಕತೆಗೆ ತಮ್ಮ ಸಾಮಾಜಿಕ ಸಂದರ್ಭದಲ್ಲಿ ಮನುಧರ್ಮ ಶಾಸ್ತ್ರದ ತಾತ್ವಿಕತೆಗೆ ಸಮೀಪವಾದ ಹಾಗೂ ಅನೇಕ ರೀತಿಯಲ್ಲಿ ಅದಕ್ಕಿಂತಲು ಭಿನ್ನವಾದ ತತ್ವ ಪ್ರಣಾಳಿಯೊಂದನ್ನು ರೂಪಿಸಿದ್ದರು. ಅವರಿಬ್ಬರಲ್ಲಿ ಇದ್ದ ಸಾಮ್ಯ ಎಂದರೆ ಇಚ್ಛಾಶಕ್ತಿಯಿಂದಲೇ ತಮಗಿಂತಲೂ ದುರ್ಬಲರನ್ನು ಆಳುವುದು ಅಥವಾ ಆಳಲು ಅನುಕೂಲವಾಗುವಂತೆ ಇತರರನ್ನು ದುರ್ಬಲಗೊಳಿಸುವುದು.

ಓಸ್ವಾಲ್ಡ್ ಸ್ಪೆಂಗ್ಲರ್‌ನ ಪ್ರಕಾರ ಪ್ರಪಂಚದ ಚರಿತ್ರೆಯೆಂದರೆ ರಾಷ್ಟ್ರಗಳ ಚರಿತ್ರೆಯೇ ಆಗಿದೆ. ರಾಷ್ಟ್ರಗಳ ಚರಿತ್ರೆಯೆಂದರೆ ಯುದ್ಧಗಳ ಚರಿತ್ರೆಯೇ ಆಗಿದೆ. ಒಟ್ಟಾರೆಯಾಗಿ ಜಗತ್ತಿನ ಚರಿತ್ರೆಯು ಯುದ್ಧದ ಚರಿತ್ರೆ ಎಂದು ಸ್ಪೆಂಗ್ಲರ್ ಅಭಿಪ್ರಾಯ ಪಡುತ್ತಾನೆ. ಬ್ರಾಹ್ಮಣಧರ್ಮ ಭಾರತದಲ್ಲಿ ಇಂಥ ಯುದ್ಧ ಕೋರ ಚರಿತ್ರೆಗೆ ಪಾರಂಭದಿಂದಲೇ ನಾಂದಿ ಹಾಡಿತು. ಅದು ಭಾರತಕ್ಕೆ ಪ್ರವೇಶ ಪಡೆದದ್ದೇ ಯುದ್ಧ ಕೋರ ಧರ್ಮವಾಗಿ. ಅಂದಿನಿಂದಲೂ ಇಂದಿನವರೆಗೂ ಭಾರತದ ಜನಮಾನಸದ ಮೇಲೆ ಮಾನಸಿಕ, ಬೌದ್ಧಿಕ, ಧಾರ್ಮಿಕ ಮತ್ತು ಭೌತಿಕ ಯುದ್ಧವನ್ನು ನಡೆಸುತ್ತಲೇ ಬಂದಿದೆ. ಹಾಗೆ ನೋಡಿದರೆ ಹಿಟ್ಲರ್‌ನ ನಾಝಿವಾದ ಅತ್ಯಂತ ಒರಟಾದುದು. ಬ್ರಾಹಣ ಧರ್ಮದ ಯುದ್ಧ ತಂತ್ರಗಳಿಗೆ ಹೋಲಿಸಿದರೆ ದುರ್ಬಲವಾದುದು. ತನ್ನ ಇಮೇಜ್‌ಗೆ, ಅಸ್ತಿತ್ವಕ್ಕೆ ಕೊಂಚವೂ ಧಕ್ಕೆ ಬರದಂತೆ ಇಡೀ ಜನಸಮುದಾಯವನ್ನು ಜನಾಂಗೀಯ ಹತ್ಯೆಗಳಲ್ಲಿ ತೊಡಗಿಸಬಲ್ಲ ಸಾಮರ್ಥ್ಯ *ಬ್ರಾಹ್ಮಿನ್ ಸ್ಪಿರಿಟ್*‌ಗೆ ಇದೆ. ಬ್ರಾಹ್ಮಿನ್ ಸ್ಪಿರಿಟ್ ಚರಿತ್ರೆಯುದ್ದಕ್ಕೂ ತತ್ವ ಶಾಸ್ತ್ರಜ್ಞ ನೀಶ್ಚೆ ಹೇಳುವ ಸೂಪರ್ ಮ್ಯಾನ್ ಕಲ್ಪನೆಯನ್ನು ತತ್ವವಾಗಿ ಮತ್ತು ಬದುಕಿನ ಕ್ರಮವಾಗಿ ರೂಢಿಸಿಕೊಂಡಿದೆ. ಲೇಖನದ ಉದ್ದೇಶಕ್ಕಾಗಿ ಸೂಪರ್ ಮ್ಯಾನ್ ಪದವನ್ನು **ಅತಿಮಾನುಷ** ಎಂದು ಅನುವಾದಿಸಿಕೊಂಡಿದ್ದೇನೆ. ಅತಮಾನುಷ ಎಂದರೆ ಇತರರನ್ನು ಆಳಲು ಅರ್ಹವಾಗಿರುವವನು ಮತ್ತು ಆಳಬಲ್ಲವನು. ಆ ಇತರರು ಆಳಿಸಿಕೊಳ್ಳಲು ಅರ್ಹವಾಗಿರುವವರು. ಹಿಟ್ಲರ್‌ನ ಜರ್ಮನಿಯಲ್ಲಿ ನಾಝಿವಾದಕ್ಕೆ ನೀಶ್ಚೆಯ ಅತಿಮಾನುಷ ಕಲ್ಪನೆ ಬೆನ್ನೆಲುಬಾಯಿತು. ಅದನ್ನು ಬಳಸಿಕೊಂಡು ಜನಸಮುದಾಯದ ಮನಸ್ಸನ್ನು ಅಧೀನಗೊಳಿಸಿಕೊಳ್ಳಲು ಸುಲಭವಾಯಿತು. ಒಟ್ಟಾರೆಯಾಗಿ ಕೀಳು ಮಟ್ಟದ ಅಧ್ಯಾತ್ಮಿಕ ಧಾರ್ಮಿಕತೆ, ಅಸಾಧ್ಯ ಆದರ್ಶ ಪೌರಾಣಿಕತೆ, ವ್ಯಕ್ತಿ ಪೂಜೆ, ತಾನು ಎದುರಾಳಿಗಳೆಂದು ಭಾವಿಸಿದವರ ನಿಷ್ಕಾರಣ ನಾಶ, ಅತಿಮಾನುಷ ಅಮಾನವೀಯತೆ ಇದನ್ನೆಲ್ಲಾ ಸಾಧಿಸಲು ಕ್ರೌರ್ಯತುಂಬಿದ ವಿಕೃತ ಮನಸ್ಸುಳ್ಳ ಸ್ವಯಂ ಸೇವಕರ ಪಡೆ. ಈ ಬಗೆಯ ತಾತ್ವಿಕ ಪ್ರಣಾಳಿಯನ್ನು ರೂಪಿಸಲು ಯೂರೋಪಿನ ನಾಗರೀಕತೆಗೆ ಸಾವಿರದ ಎಂಟನೂರು ವರ್ಷಗಳು ಬೇಕಾದವು. ಆದರೆ, ಬ್ರಾಹ್ಮಣ ಧರ್ಮ ವೇದಗಳ ಕಾಳದಲ್ಲೇ ಇದನ್ನು ಸಾಧಿಸಿಬಿಟ್ಟಿತು. ಏಕ ಕಾಲದಲ್ಲಿ ಒಂದು ಧರ್ಮವೂ, ಸಿದ್ಧಾಂತವೂ ಹಾಗೂ ಅದನ್ನು ಜಾರಿಗೆ ತರಬಲ್ಲ ಕಾರ್ಯಾಚರಣಾ ಪಡೆಯೂ ಆಗಿ ಅಂದಿನಿಂದ ಇಂದಿನವರೆಗೆ ಭಾರತೀಯ ಜನಮಾನಸದ ಮೇಲೆ ನಿರಂತರ ಸಮರ ನಡೆಸಿತು, ನಡೆಸುತ್ತಿದೆ, ಮತ್ತು ಮುಂದೆಯೂ ನಡೆಸಲಿದೆ.

ಚರಿತ್ರೆಯನ್ನು ಭೂತದಲ್ಲಿ ಕಟ್ಟಿಕೊಳ್ಳಬೇಕೆಂಬುದು ಈಗ ಹಳಸಲು ಮಾತು. ಚರಿತ್ರೆ ಎಂದು ನಾವು ಯಾವುದನ್ನು ಪರಿಭಾವಿಸುತ್ತೇವೆಯೋ ಅದು ಭೂತ, ವರ್ತಮಾನ ಮತ್ತು ಭವಿಷ್ಯಗಳ ನಿರಂತರ ಜೈವಿಕ ಕೊಂಡಿಯಾಗಿ ಮಂಡಿಸಲಾಗುತ್ತಿರುತ್ತದೆ. ವರ್ತಮಾನವನ್ನು ಗ್ರಹಿಸುತ್ತಲೇ ಭುತವನ್ನು ಕಟ್ಟಬಹುದು. ಹಾಗೆಯೇ ಭವಿಷ್ಯದ ಸಾಧ್ಯತೆಗಳನ್ನು ಪತ್ತೆಹಚ್ಚಬಹುದು. ಬ್ರಾಹಣ ಧರ್ಮ ಈ ಗಳಿಗೆಯಲ್ಲಿ ಭಾರತೀಯ ಜನಮುದಾಯದ ಮಾನಸದ ಮೇಲೆ ಆಡುತ್ತಿರುವ ಪೈಶಾಚಿಕ ನೃತ್ಯವನ್ನು ಗ್ರಹಿಸುವ ಸಾಮರ್ಥ್ಯವಿರುವ ಪ್ರಮಾಣಿಕ ಸಾಮಾಜಿಕ ಚರಿತ್ರಾಕಾರನಿಗೆ ಇದನ್ನ ಅರ್ಥಮಾಡಿಕೊಳ್ಳಲು ಕಷ್ಟವೇನಿಲ್ಲ. ಕಷ್ಟವಿರುವುದು ಪರಿಕಲ್ಪನೆಗಳ ಅಸ್ಪಷ್ಟತೆಯಲ್ಲಿ. ಈ ಅಸ್ಪಷ್ಟತೆಗಳು ಯಾವುವು ಎಂಬುದನ್ನು ನೋಡುವ:

* ಬ್ರಾಹ್ಮಣ ಧರ್ಮವನ್ನು ಹಿಂದೂ ಎಂದು ಕರೆಯಲಾಗುತ್ತಿರುವ ಜನ ಸಮುದಾಯದಿಂದ ಸ್ಪಷ್ಟವಾಗಿ ಬೇರ್ಪಡಿಸದಿರುವುದು.

* ಬ್ರಾಹ್ಮಣ ಧರ್ಮ ಎಂದು ಕರೆಯಬೇಕಾದೆಡೆ ಬ್ರಾಹ್ಮಣ್ಯ, ವೈದಿಕ, ಸನಾತನಿ, ಹಿಂದೂ ಮೂಲಭೂತವಾದಿ ಎಂದು ಕರೆಯುತ್ತಾ ಪರಿಕಲ್ಪನಾತ್ಮಕ ಗೊಂದಲಕ್ಕೊಳಗಾಗಿರುವುದು.



* ಬ್ರಾಹ್ಮಣ ಧರ್ಮದ ವಿಶಿಷ್ಟ ಬಗೆಯ ಮತಾಂತರದ ಕ್ರಮವನ್ನು ಗ್ರಹಿಸಿಕೊಳ್ಳದೆ ಹಳೆಯ ಮತಾಂತರದ ವ್ಯಾಖ್ಯೆಗೆ ಜೋತುಬೀಳುವುದು. ಉದಾ: ಎಂ ಎನ್ ಶ್ರೀನಿವಾಸರ **ಸಂಸ್ಕೃತಾನುಕರಣ**ದಂಥ ಸುಪರ್ಫಿಶಿಯಲ್ ಕಲ್ಪನೆಯನ್ನು ಹಿಡುದು ಜಗ್ಗಾಡುವುದು ಮತ್ತು ಅದರ ಮೂಲಕ ತಳಸಮುದಾಯಗಳು ಆಧುನಿಕತೆಯ ಸೌಕರ್ಯಗಳನ್ನು ಪಡೆಯುವುದರಿಂದ ವಂಚಿಸುವುದು.

* ಬ್ರಾಹ್ಮಣ ಧರ್ಮದ ಅತ್ಯಂತ ಸುಧಾರಿತ ಸೂಕ್ಷ್ಮ ಮಾನಸಿಕ, ಬೌದ್ಧಿಕ ಯುದ್ಧ ತಂತ್ರ-ಕುತಂತ್ರವನ್ನು ಸರಿಗಟ್ಟಬಲ್ಲ ಸಮರ ತಂತ್ರಗಳನ್ನು ರೂಪಿಸಲು ಸೋತಿರುವುದು. ಗೆಲುವನ್ನು ಸೋಲೆಂದು, ಸೋಲನ್ನು ಗೆಲುವೆಂದು ಭಾವಿಸುತ್ತಲೇ ಸೋಲು ಗೆಲುವು ಎಂದು ತಿಳಿಯದೆ ವಿಸ್ಮೃತಿಗೆ ಒಳಗಾಗಿರುವುದು.

* ಬ್ರಾಹ್ಮಣ ಧರ್ಮಕ್ಕೆ ತಾತ್ವಿಕವಾಗಿ ಮತಾಂತರ ಹೊಂದಿದ ಬ್ರಾಹ್ಮಣೇತರರನ್ನು ಶೂದ್ರರೆಂದು ಭಾವಿಸುವುದು. ತಾತ್ವಿಕವಾಗಿ ಶೂದ್ರರಾಗಿ ಮತಾಂತರ ಹೊಂದಿದ ಬ್ರಾಹ್ಮಣರನ್ನು ಬ್ರಾಹ್ಮಣ ಧರ್ಮದ ಸದಸ್ಯರೆಂದು ಭಾವಿಸುವುದು.

* ಬ್ರಾಹ್ಮಣ ಧರ್ಮದ ಸದಸ್ಯರು ತಮ್ಮ ಸಾಮಾಜೀಕರಣದ ತರಬೇತಿಗೆ ಪಡೆದಿರುವ ಸಂಸ್ಕೃತ ಪರಂಪರೆಯ ಮಾಹಿತಿಯನ್ನು ಜ್ಞಾನವೆಂದು ತಪ್ಪಾಗಿ ಭಾವಿಸುವುದು. ಇತರ ಸಮುದಾಯಗಳ ನಿಜವಾದ ಜ್ಞಾನವನ್ನು ಮಾಹಿತಿಯ ಮಟ್ಟಕ್ಕೆ ಇಳಿಸಿಬಿಡುವುದು.

* ಕೊನೆಯದಾಗಿ ಬಿಜೆಪಿ, ಆರ್ ಎಸ್ ಎಸ್, ವಿಎಚ್‌ಪಿ, ರಾಮಕೃಷ್ಣ ಆಶ್ರಮ, ಆರ್ಟ್ ಆಫ್ ಲೀವಿಂಗ್ ಇಂಥ ನೂರಾರು ಬ್ರಾಹ್ಮಣ ಧರ್ಮದ ಶಾಖೆಗಳನ್ನು ಸಮಗ್ರವಾಗಿ ಗ್ರಹಿಸದೆ ಅವುಗಳನ್ನು ಬೇರೆ ಎಂದು ಭಾವಿಸುವುದು ಮತ್ತು ಬ್ರಾಹ್ಮಣ ಧರ್ಮ ಎಂದು ನೇರವಾಗಿ ಕರೆಯದೆ ಸಂಘ ಪರಿವಾರವೆಂದು ಮರೆಮಾಚಿದ ಮತ್ತು ಸುಲಭವಾಗಿ ದಾರಿತಪ್ಪುವ ಪದಗಳನ್ನು ಬಳಸುವುದು.

ಬ್ರಾಹ್ಮಣ ಧರ್ಮ ಮತ್ತು ಅದರ ಕಾರ್ಯಾಚರಣೆಯನ್ನು ಅರ್ಥ ಮಾಡಿಕೊಳ್ಳಲು ಮೇಲಿನ ಅಂಶಗಳನ್ನು ಪರಿಗಣಿಸಲೇ ಬೇಕು. ನನ್ನ ಓದಿನ ತಿಳುವಳಿಕೆಯಲ್ಲಿ ಅತ್ಯಂತ ವಿನಯದಿಂದ ಮಂಡಿಸಬೇಕಾಗಿರುವ ವಿಚಾರವೆಂದರೆ ಇದುವರೆಗೂ ಬ್ರಾಹ್ಮಣ ಧರ್ಮದ ವಿರುದ್ಧ ಪ್ರಜ್ಞಾಪೂರ್ವಕವಾಗಿ ಮತ್ತು ಅಪ್ರಜ್ಞಾಪೂರ್ವಕವಾಗಿ ಪ್ರತಿಭಟಿಸಿದವರೆಲ್ಲರೂ ಮೇಲಿನ ಅಂಶಗಳನ್ನು ಖಚಿತವಾಗಿ ಗೆರೆ ಕೊರೆದಂತೆ ಹೇಳುವುದಿಲ್ಲ. ಇಂದು ಭಾರತದಲ್ಲಿ ನಡೆಯುತ್ತಿರುವ ಬ್ರಾಹ್ಮಣ ಧರ್ಮದ ಕಾರ್ಯ ಚಟುವಟಿಕೆಯನ್ನು ಬ್ರಾಹ್ಮಣ ಧರ್ಮದ ಅಜೆಂಡಾವೆಂದು ಗುರುತಿಸದೆ ಮಾರ್ಕ್ಸಿಸ್ಟ್ ಪಾರ್ಟಿಗಳು ಹಿಂದೂ ಮೂಲಭೂತವಾದಿಗಳು ಮತ್ತು ವೈದಿಕರು ಇತ್ಯಾದಿಯಾಗಿ ಗುರುತಿಸುವುದು ಅಚ್ಚರಿಯನ್ನು ಉಂಟುಮಾಡುತ್ತದೆ. ಈ ಗೊಂದಲಗಳಿಗೆ ತೆರೆಹಾಕದೆ ಹೋದರೆ ಬ್ರಾಹ್ಮಣ ಧರ್ಮದ ಸರ್ವಾಧಿಕಾರಿ, ಕೋಮುವಾದಿ ಕಾರ್ಯಾಚರಣೆಯ ಸ್ವರೂಪವೂ ಎಂದಿಗೂ ಗ್ರಹಿಕೆಗೆ ದಕ್ಕುವುದಿಲ್ಲ. ಈ ಪರಿಕಲ್ಪನರಗಳ ಮಾಯಾಜಾಲದಲ್ಲಿ ಅದೃಶ್ಯನಂತೆ ಕಾರ್ಯ ನಿರ್ವಹಿಸುವ ಬ್ರಾಹ್ಮಣ ನೀತ್ಸೆ ಹೇಳುವ ಸೂಪರ್ ಮ್ಯಾನ್‌ಂತೆ ವಿಜೃಂಭಿಸತೊಡಗುತ್ತಾನೆ.

ಈ ಅತಿಮಾನುಷ ಶಕ್ತಿಯನ್ನು ಗಳಿಸಿದ, ಗಳಿಸುತ್ತಿರುವ, ಗಳಿಸಲಿರುವ ಬಗೆಯನ್ನು ಕೆಲವು ಉದಾಹರಣೆ ಸಮೇತ ವಿವರಿಸಿಕೊಳ್ಳುವ. ಡಾ. ಅಂಬೇಡ್ಕರವರು ವಿವರಿಸುವಂತೆ ಮೌರ್ಯರ ಕೊನೆ ದೊರೆ ಬೃಹದತ್ತ ಮೌರ್ಯನನ್ನು

ಕ್ಲಾಸ್ಟ್ ಕೆಮಿಸ್ಟ್ರಿ

೬

ಪುಷ್ಯಮಿತ್ರನ ಮೂಲಕ ಬ್ರಾಹ್ಮಣರು ಕೊಲ್ಲಿಸಿದರು. ತತ್ವಶಾಸ್ತ್ರಜ್ಞನೆಂದು ಕರೆಯಲ್ಪಡುತ್ತಿರುವ ಶಂಕರ ಹಮ್ಮಿಕೊಂಡ ಬೌದ್ಧಧರ್ಮದ ವಿರುದ್ಧದ ಕ್ರುಸೇಡ್‌ಗೆ ಸರಿಸಮಾನವಾದುದು ಮತ್ತೊಂದಿಲ್ಲ. ತಾತ್ವಿಕವಾಗಿ, ಮಾನಸಿಕವಾಗಿ, ಭೌತಿಕವಾಗಿ, ಬೌದ್ಧರನ್ನು ಸರ್ವನಾಶಗೈಯಲು ಪ್ರಯತ್ನಿಸಿದ ಶಂಕರ ಹಿಟ್ಲರ್‌ಗಿಂತಲೂ ಅಂದೇ ಸಾವಿರಾರು ಹೆಜ್ಜೆ ಮುಂದಿದ್ದ. ಇಂಥ ಶಂಕರ ರಚಿಸಿದ ಸೌಂದರ್ಯಲಹರಿ ಎಂಬ ಶೃಂಗಾರ ಗ್ರಂಥದ ಶ್ಲೋಕಗಳನ್ನು ಇದೇ ತಿಂಗಳು ಬ್ರಾಹ್ಮಣರು ಲಕ್ಷಾಂತರ ಸಂಖ್ಯೆಯಲ್ಲಿ ಹೆಂಗಸರು, ಮಕ್ಕಳು ಮೊದಲಾದವರನ್ನು ಸೇರಿಸಿ ಹಾಡಿಸಿ, ಪ್ರಪಂಚದ ಮೊದಲ ಹಿಟ್ಲರ್‌ನ ನೆನಪನ್ನು ಜೀವಂತಗೊಳಿಸಿದರು. ತಮಿಳಿನ ಸುಪ್ರಸಿದ್ಧ ಸಂತ ಕವಿ ತಿರುವಳ್ಳುವರ್‌ರನ್ನು ತಾತ್ವಿಕವಾಗಿ ಮತಾಂತರಿಸಲು ಬ್ರಾಹ್ಮಣ ಧರ್ಮಕ್ಕೆ ಸಾಧ್ಯವಾಗಲಿಲ್ಲ. ಅದು ಕೊನೇದಾಗಿ ಅತ್ಯಂತ ಹೀನ ತಂತ್ರವನ್ನು ಬಳಸಿತು. ತಿರುವಳ್ಳುವರ್ ಬ್ರಾಹ್ಮಣರಿಗೆ ಜನಿಸಿದರಿಂದ ಬುದ್ಧಿವಂತನಾಗಲು ಸಾಧ್ಯವಾಯಿತೆಂಬ ಕತೆಯನ್ನು ಹರಡಿತು. ಬ್ರಾಹ್ಮಣ ಧರ್ಮದ ವಿರುದ್ಧ ಸೆಡ್ಡುಹೊಡೆದು ನಿಂತ ಕರ್ನಾಟಕ ಶ್ರೇಷ್ಠ ಕವಿಯೊಬ್ಬರ ಬಗ್ಗೆಯೂ ಇದೇ ಬಗೆಯ ಕತೆಯನ್ನು ಬ್ರಾಹ್ಮಣರು ಹರಡಿದರೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಬ್ರಾಹ್ಮಣ ಧರ್ಮಕ್ಕೆ ತಾತ್ವಿಕವಾಗಿ ಮತಾಂತರ ಹೊಂದಿಯೂ ಅದರ ಬಂಡುಕೋರನಂತೆ ಕಾಣುತ್ತಿದ್ದ ಗಾಂಧಿಯನ್ನು ಗೂಡ್ಸೆ ಎಂಬ ಚಿತ್ಪವನ್ ಬ್ರಾಹ್ಮಣ ಕೊಂದುಹಾಕುವ ಮೂಲಕ ಸ್ವತಂತ್ರ ಭಾರತದಲ್ಲಿ ರಕ್ತ ಪಾತ ತುಂಬಿದ ಬ್ರಾಹ್ಮಣ ಭಯೋತ್ಪಾದನೆಯ ಚಟುವಟಿಕೆಯನ್ನು ಉದ್ಘಾಟಿಸಿದ. ಇವನ ಜೊತೆ ಸಾವರ್ಕರ್, ನಾರಾಯಣ ಹಪ್ಪೆ ಮೊದಲಾದ ಬ್ರಾಹ್ಮಣ ಭಯೋತ್ಪಾದಕ ಪಡೆಯೇ ಆರಂಭವಾಯಿತು.

ಹುಟ್ಟಿನಿಂದ ಕ್ರಿಶ್ಚಿಯನ್ ಬ್ರಾಹ್ಮಣನಾದ ಅಶೀಶ್ ನಂದಿ ತಾತ್ವಿಕವಾಗಿ ಬಂಡುಕೋರ ಬ್ರಾಹ್ಮಣನಾದ ಈತ ಗೋಡ್ಸೆಯ ಬಗ್ಗೆ ಎಷ್ಟು ಆಕರ್ಷಕವಾಗಿ ಬರೆದಿದ್ದಾನೆಂದರೆ ಹತ್ಯೆಗೊಳಗಾದ ಗಾಂಧಿಯ ಬಗ್ಗೆ ಅನುಕಂಪಕ್ಕಿಂತ ಗೋಡ್ಸೆಯ ಬಗ್ಗೆ ಪ್ರೀತಿ ಹುಟ್ಟುತ್ತದೆ. ಆತನ ಅಂತಿಮ ಮುಖಾಮುಖಿ ಗಾಂಧಿ ಹತ್ಯೆಯ ರಾಜಕೀಯ ಎಂಬ ಲೇಖನ ಬ್ರಾಹ್ಮಣ ಧರ್ಮವನ್ನು (ಈಗ ಮೇಲ್ನೋಟಕ್ಕೆ ಕಾಣುತ್ತಿರುವಂತೆ) ಉಚ್ರಾಯ ಸ್ಥಿತಿಗೆ ತಲುಪಿಸುತ್ತದೆ. ಬ್ರಾಹ್ಮಣ ಸಮಾವೇಶಗಳ ಭರಾಟೆಯಲ್ಲಿ ಪುನರುಜ್ಜೀವನ ಪಡೆಯುತ್ತಿರು ಈ ಸಂದರ್ಭದಲ್ಲಿ ಕನ್ನಡದ ವಾರ ಪತ್ರಿಕೆಯೊಂದರ ಸಂಪಾದಕ ಹುಟ್ಟಿನಿಂದ ಬ್ರಾಹ್ಮಣನಾಗಿರುವ ಈತ ಆ ಧರ್ಮದ ವಿರುದ್ಧ ಬಂಡುಕೋರನಂತೆ ನಟಿಸುವ ರವಿಬೆಳಗೆರೆ ತೀರ ಇತ್ತೀಚೆಗೆ ಗಾಂಧಿ ಹಂತಕನನ್ನು, ಆತನ ಕೃತ್ಯವನ್ನು ಸಮರ್ಥಿಸುವ ಲೇಖನ ಮಾಲೆಯನ್ನೇ ಪ್ರಕಟಿಸಿದ.

ಬೌದ್ಧರನ್ನು ಜೀವಂತವಾಗಿ ಸುಟ್ಟುಹಾಕುವಲ್ಲಿ, ಗುಜರಾತ್‌ನಲ್ಲಿ ಮುಸ್ಲಿಂರನ್ನು ಹತ್ಯೆಮಾಡುವಲ್ಲಿ ಬ್ರಾಹ್ಮಣ ಧರ್ಮದ ಯೋಜನೆ ಸ್ಪಷ್ಟವಾಗಿಯೇ ಇದೆ. ಆದರೆ ಅದನ್ನು ಗುರುತಿಸಿ ಹೇಳುವ ಧೈರ್ಯ ತೋರುವುದಿಲ್ಲ. ಅದಕ್ಕೆ ನೀವು ಸಾಕ್ಷಿ ಪುರಾವೆಗಳನ್ನು ಖಚಿತವಾಗಿ ತೋರಿಸಲಾರಿರಿ. ಅಂಥ ಸಂದರ್ಭದಲ್ಲಿ ಬ್ರಾಹ್ಮಣ ಧರ್ಮ ಇದೆ ಅಥವಾ ಇಲ್ಲ. ಅದೃಶ್ಯ ಶಕ್ತಿಯ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಅದಕ್ಕೆ ಪೂರಕವಾದ ಮಾಹಿತಿಯನ್ನು ಮತ್ತು ಸತ್ಯವನ್ನು ತಯಾರಿಸುತ್ತದೆ. ಕೊಲೆಯನ್ನು ಅದ್ಭುತವಾಗಿ ಸಮರ್ಥಿಸುತ್ತದೆ. ಆ ಸಮುದಾಯದ ಮಧ್ಯೆ ನೈತಿಕ ಪ್ರತಿನಿಧಿಯಂತೆ ತನ್ನ ಮುದ್ರ ಲಾಂಛನಗಳೊಡನೆ ಯಾವುದೇ ಅಳುಕಿಲ್ಲದೆ ನಿರ್ಭಿಡೆಯಿಂದ ಮೆರೆಯುತ್ತದೆ. ಪ್ರೀತಿಸುತ್ತಲೇ ದ್ವೇಷಿಸಿದಂತೆ ಕಾಣುತ್ತಾ, ದ್ವೇಷಿಸುತ್ತಲೇ ಪ್ರೀತಿಸಿದಂತೆ ಕಾಣುತ್ತದೆ. ವೈಯಕ್ತಿಕವಾಗಿ ಆಪ್ತಗೆಳೆಯನಂತಿರುತ್ತಾ, ಸಾರ್ವಜನಿಕವಾಗಿ, ಸೈದ್ಧಾಂತಿಕವಾಗಿ ಭಾರತದ ಕುಲ ಸಮುದಾಯಗಳಿಗೆ ಕಿಚ್ಚು ಹಚ್ಚುತ್ತದೆ. ಇಂಥ ಗುಣಗಳು **ಬ್ರಾಹ್ಮಿನ್ ಸೂಪರ್ ಮ್ಯಾನ್**‌ಗಿಂತ ಮತ್ಯಾರಿಗೆ ಇರಲು ಸಾಧ್ಯ!

(ಮುಂದುವರೆಯುವುದು)

ಹುಟ್ಟಿನಿಂದ ಕ್ರಿಶ್ಚಿಯನ್ ಬ್ರಾಹ್ಮಣನಾದ ಅಶೀಶ್ ನಂದಿ ತಾತ್ವಿಕವಾಗಿ ಬಂಡುಕೋರ ಬ್ರಾಹ್ಮಣನಾದ ಈತ ಗೋಡ್ಸೆಯ ಬಗ್ಗೆ ಎಷ್ಟು ಆಕರ್ಷಕವಾಗಿ ಬರೆದಿದ್ದಾನೆಂದರೆ ಹತ್ಯೆಗೊಳಗಾದ ಗಾಂಧಿಯ ಬಗ್ಗೆ ಅನುಕಂಪಕ್ಕಿಂತ ಗೋಡ್ಸೆಯ ಬಗ್ಗೆ ಪ್ರೀತಿ ಹುಟ್ಟುತ್ತದೆ. ಆತನ ಅಂತಿಮ ಮುಖಾಮುಖಿ ಗಾಂಧಿ ಹತ್ಯೆಯ ರಾಜಕೀಯ ಎಂಬ ಲೇಖನ ಬ್ರಾಹ್ಮಣ ಧರ್ಮವನ್ನು (ಈಗ ಮೇಲ್ನೋಟಕ್ಕೆ ಕಾಣುತ್ತಿರುವಂತೆ) ಉಚ್ರಾಯ ಸ್ಥಿತಿಗೆ ತಲುಪಿಸುತ್ತದೆ. ಬ್ರಾಹ್ಮಣ ಸಮಾವೇಶಗಳ ಭರಾಟೆಯಲ್ಲಿ ಪುನರುಜ್ಜೀವನ ಪಡೆಯುತ್ತಿರು ಈ ಸಂದರ್ಭದಲ್ಲಿ ಕನ್ನಡದ ವಾರ ಪತ್ರಿಕೆಯೊಂದರ ಸಂಪಾದಕ ಹುಟ್ಟಿನಿಂದ ಬ್ರಾಹ್ಮಣನಾಗಿರುವ ಈತ ಆ ಧರ್ಮದ ವಿರುದ್ಧ ಬಂಡುಕೋರನಂತೆ ನಟಿಸುವ ರವಿಬೆಳಗೆರೆ ತೀರ ಇತ್ತೀಚೆಗೆ ಗಾಂಧಿ ಹಂತಕನನ್ನು, ಆತನ ಕೃತ್ಯವನ್ನು ಸಮರ್ಥಿಸುವ ಲೇಖನ ಮಾಲೆಯನ್ನೇ ಪ್ರಕಟಿಸಿದ. ಬೌದ್ಧರನ್ನು ಜೀವಂತವಾಗಿ ಸುಟ್ಟುಹಾಕುವಲ್ಲಿ, ಗುಜರಾತ್‌ನಲ್ಲಿ ಮುಸ್ಲಿಂರನ್ನು ಹತ್ಯೆ ಮಾಡುವಲ್ಲಿ ಬ್ರಾಹ್ಮಣ ಧರ್ಮದ ಯೋಜನೆ ಸ್ಪಷ್ಟವಾಗಿಯೇ ಇದೆ. ಆದರೆ ಅದನ್ನು ಗುರುತಿಸಿ ಹೇಳುವ ಧೈರ್ಯ ತೋರುವುದಿಲ್ಲ.

ಸುವರ್ಣ ಕರ್ನಾಟಕ
ಮರೆತ ಕಾರ್ಮಿಕ ಹಿರಿಮೆ

ಬೆಂಗಳೂರು ಕೇಂದ್ರಿತ ಕೈಗಾರೀಕರಣ ಪ್ರಕ್ರಿಯೆ ನಾಡಿನ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಎಷ್ಟೇ ನೇತ್ಯಾತ್ಮಕವಾದರೂ, ಈ ಸಾರ್ವಜನಿಕ ಉದ್ದಿಮೆಗಳ ಕೊಡುಗೆಯನ್ನು ಅಲ್ಲಗಳೆಯಲಾಗುವುದಿಲ್ಲ. ಸ್ವಾತಂತ್ರ ಪೂರ್ವದಿಂದಲೇ ಕಾರ್ಮಿಕ ವರ್ಗವನ್ನು ಚಳುವಳಿಗಳಲ್ಲಿ ತೊಡಗಿಸಿದ ಎಡ ಪಕ್ಷಗಳು, ನಂತರದಲ್ಲೂ ತಮ್ಮ ಸಂಘಟನಾ ಸಾಮರ್ಥ್ಯದಲ್ಲಿ ಹಿನ್ನಡೆ ಕಾಣಲಿಲ್ಲ ಎಂದರೆ ತಪ್ಪಲ್ಲ. ಎಪ್ಪತ್ತರ ದಶಕದಲ್ಲಿ ಆರಂಭಗೊಂಡ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಜಂಟಿ ಹೋರಾಟ ಸಮಿತಿ ತನ್ನ ಹೋರಾಟಗಳಿಂದ ಕಾರ್ಮಿಕರಿಗೆ ಅನೇಕ ಸವಲತ್ತುಗಳನ್ನು ಒದಗಿಸಿಕೊಟ್ಟಿದೆ. ಇಂದು ಬೆಂಗಳೂರಿನಲ್ಲಿ ಕನ್ನಡ ಪರ ಸಂಘಟನೆಗಳ ಒಂದು ಮಹಾಪೂರವನ್ನೇ ಕಾಣುವುದಾದರೆ, ಅದಕ್ಕೆ ಈ ಉದ್ದಿಮೆಗಳ ಕಾರ್ಮಿಕರೇ ಕಾರಣ ಎಂದು ನಿಸ್ಸಂಶಯವಾಗಿ ಹೇಳಬಹುದು.

ನಾ. ದಿವಾಕರ.

ಏಕೀಕೃತ ಕರ್ನಾಟಕದ ಐವತ್ತು ವರ್ಷಗಳ ಇತಿಹಾಸ ಜಾಗತಿಕ ಮಟ್ಟದಲ್ಲಿ ಒಂದು ಬೆಳ್ಳಿ ಚುಕ್ಕೆಯಂತೆ ಕಂಗೊಳಿಸುತ್ತಿದ್ದರೆ, ಆ ಬೆಳ್ಳಿ ಗೆರೆಗಳ ಹಿಂದೆ ಕರ್ನಾಟಕದ ಲಕ್ಷಾಂತರ ಕಾರ್ಮಿಕರ ಪರಿಶ್ರಮವನ್ನು, ಈ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ನೆನೆಯುವುದು ಅವಶ್ಯವಾಗಿದೆ. ಕಳೆದ ಐದು ದಶಕಗಳಲ್ಲಿ ರಾಜ್ಯವು ಮೂರು ಹಂತಗಳಲ್ಲಿ ಕೈಗಾರೀಕರಣವನ್ನು ಕಂಡಿದೆ. ಸ್ವಾತಂತ್ರ್ಯೋತ್ತರ ಅವಧಿಯ ಕೈಗಾರೀಕರಣ, ನಂತರದಲ್ಲಿ ಬಂದ ಬೃಹತ್ ಉದ್ದಿಮೆಗಳು ಮತ್ತು ಕಳೆದ ಎರಡು ದಶಕಗಳಲ್ಲಿ ಉತ್ತುಂಗಕ್ಕೇರಿರುವ ಮಾಹಿತಿ ತಂತ್ರಜ್ಞಾನದ ಬೆಳವಣಿಗೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ದೇಶದ ಒಟ್ಟು ವಹಿವಾಟಿನಲ್ಲಿ ಕರ್ನಾಟಕದ ಕಾಣಿಕೆ ಶೇ ೨೦ ರಷ್ಟಿದೆ. ಮಷ್ಪೋದ್ಯಮದಲ್ಲಿ ಶೇ. ೭೫ ರಷ್ಟು ರಫ್ತು ರಾಜ್ಯದಿಂದಲೇ ಆಗುತ್ತಿದೆ. ಇದೀಗ ರಾಜ್ಯದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಐಟಿ-ಬಿಟಿ ಕಂಪನಿಗಳು ಕಾರ್ಯ ನಿರ್ವಹಿಸುತ್ತಿವೆ. ಪ್ರವಾಸೋದ್ಯಮ ಹಾಗೂ ಮೋಟಾರು ವಾಹನ ಉದ್ಯಮಗಳಲ್ಲಿ ರಾಜ್ಯ ದೇಶದಲ್ಲಿ ಮುಂಚೂಣಿಯಲ್ಲಿದೆ. ಸ್ವಾತಂತ್ರ ಪೂರ್ವದಲ್ಲಿಯೇ ರಾಜ್ಯದಲ್ಲಿ ಕೈಗಾರೀಕರಣ ಪ್ರಕ್ರಿಯೆಗೆ ನಾಂದಿ ಹಾಡಿದ ಸರ್.ಎಂ. ವಿಶ್ವೇಶ್ವರಯ್ಯನವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದ ಕರ್ನಾಟಕ ಇಂದು, ದೇಶದ ಪ್ರಮುಖ ಕೈಗಾರಿಕಾ ಕೇಂದ್ರವಾಗಿ ಬೆಳೆದಿರುವುದು, ನಾಡಿನ ಕಾರ್ಮಿಕರಿಗೆ ಹೆಮ್ಮೆಯ ವಿಷಯವಾಗಿದೆ.

ಸ್ವಾತಂತ್ರಾನಂತರದಲ್ಲಿ ನೆಹರೂರವರ ಮಿಶ್ರ ಆರ್ಥಿಕ ನೀತಿಗನುಗುಣವಾಗಿ ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟ ಸಾರ್ವಜನಿಕ ಉದ್ದಿಮೆಗಳು ಕರ್ನಾಟಕದ ಹೆಮ್ಮೆಯ ರತ್ನಗಳಾಗಿದ್ದವು. ಎಚ್.ಎಂ.ಟಿ, ಐ.ಟಿ.ಐ, ಎಚ್.ಎ.ಎಲ್, ಬಿ.ಇ.ಎಂ.ಎಲ್, ಬಿ.ಎಚ್.ಇ.ಎಲ್, ಬಿ.ಇ.ಎಲ್, ಬಿ.ಇ.ಎಲ್, ಎನ್.ಎ.ಎಲ್, ಮುಂತಾದ ಆಧುನಿಕ ಭಾರತದ ದೇವಾಲಯಗಳು ರಾಜ್ಯದ ಏಳಿಗೆಗೆ ಬಹಳಷ್ಟು ಕೊಡುಗೆ ನೀಡಿವೆ. ೧೯ನೆಯ ಶತಮಾನದಲ್ಲೇ ಸ್ಥಾಪಿತವಾದ ಕೋಲಾರ ಚಿನ್ನದ ಗಣಿಗಳು ಎರಡು ಸಾವಿರ ಟನ್‌ಗಳಷ್ಟು ಚಿನ್ನವನ್ನು ದೇಶಕ್ಕೆ ನೀಡಿದೆ. ಇವಲ್ಲದೆ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಬೆಂಗಳೂರಿನ ಕರ್ನಾಟಕ ವಿದ್ಯುತ್ ಕಾರ್ಖಾನೆ, ಎನ್.ಜಿ.ಇ.ಎಫ್, ಕೆ.ಎಸ್.ಡಿ.ಎಲ್, ಕಿರ್ಲೋಸ್ಕರ್, ಮೈಕೋ, ದಾವಣಗೆರೆಯ ಜವಳಿ ಗಿರಣಿಗಳು, ಮೈಸೂರು ಲ್ಯಾಂಪ್ಸ್, ಒಂದು ಕಾಲದಲ್ಲಿ ರಾಷ್ಟ್ರ ಮಟ್ಟದಲ್ಲಿ ಖ್ಯಾತಿ ಹೊಂದಿದ್ದ ಐಡಿಯಲ್ ಜಾವಾ ಕಾರ್ಖಾನೆ, ಬಿನ್ನಿ ಮಿಲ್ಸ್, ರಾಜಾ ಮಿಲ್ಸ್, ಮಿನರ್ವ ಮಿಲ್ಸ್, ಹೀಗೆ ಕರ್ನಾಟಕದ ಕೈಗಾರಿಕೋದ್ಯಮಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಸರ್ಕಾರದ ಅವೈಜ್ಞಾನಿಕ ನೀತಿಗಳಿಂದಾಗಿ ಮೇಲೆ ಹೇಳಿರುವ ಅನೇಕ ಕಾರ್ಖಾನೆಗಳು ಇಂದು ಅವಸಾನ ಹೊಂದಿವೆ. ಇನ್ನು ಕೆಲವು ಉದ್ದಿಮೆಗಳು ಖಾಸಗಿಯವರ ಕೈವಶವಾಗಿವೆ. ಆದರೆ ಈ ಕಾರ್ಖಾನೆಗಳಲ್ಲಿ ದುಡಿದು, ದೇಶದ ಸಂಪತ್ತಿನ ಅಭಿವೃದ್ಧಿಗೆ ಶ್ರಮಿಸಿದ ಕಾರ್ಮಿಕರ ಒಂದು ಪೀಳಿಗೆ ಇಂದಿಗೂ ಜೀವಂತವಾಗಿದೆ. ಇನ್ನೊಂದೆಡೆ ಕನ್ನಡ ನೆಲದ ಬ್ಯಾಂಕುಗಳಾದ ಕೆನರಾ ಬ್ಯಾಂಕ್, ಕಾರ್ಪೋರೇಷನ್ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ವಿಜಯಾ ಬ್ಯಾಂಕ್ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಈ ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳು ರಾಜ್ಯದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆಯನ್ನು ಸಲ್ಲಿಸಿವೆ. ಈ ಎಲ್ಲಾ ಬ್ಯಾಂಕುಗಳೂ ಒಟ್ಟಾರೆ ನಾಲ್ಕು ಸಾವಿರಕ್ಕೂ ಹೆಚ್ಚು ಶಾಖೆಗಳನ್ನು ಹೊಂದಿದ್ದು, ಇಂದು ವಿದೇಶಗಳಲ್ಲಿ ಶಾಖೆಗಳನ್ನು ಹೊಂದಿದ್ದು, ವಿದೇಶಿ ಬ್ಯಾಂಕುಗಳೊಡನೆ ಪೈಪೋಟಿ ನಡೆಸುವಷ್ಟು ಸಮರ್ಥವಾಗಿವೆ. ಈ ಎಲ್ಲಾ ಸಂಸ್ಥೆಗಳ ಅಭ್ಯುದಯಕ್ಕೆ ಮತ್ತು ನಾಡಿನ ಅಭಿವೃದ್ಧಿಗೆ ಕರ್ನಾಕಟದ ಕಾರ್ಮಿಕರ ವರ್ಗದ ಕೊಡುಗೆಯನ್ನು ನೆನೆಯುವುದು ಈ ಸುವರ್ಣ ಕರ್ನಾಟಕದ ಸಂದರ್ಭದಲ್ಲಿ ಅತ್ಯವಶ್ಯವಾಗಿದೆ.

ಕರ್ನಾಟಕದಲ್ಲಿ ಕಾರ್ಮಿಕ ಚಳುವಳಿ ಅಥವಾ ಇತಿಹಾಸ



ವೆಂದರೆ, ಕಮ್ಯುನಿಸ್ಟ್ ಪಕ್ಷಗಳ ಇತಿಹಾಸವೆಂದೇ ಪರಿಗಣಿಸಬೇಕಾಗುತ್ತದೆ. ಸ್ವಾತಂತ್ರ ಪೂರ್ವದಲ್ಲಿ, ೨೦ರ ದಶಕದಲ್ಲಿ ಆರಂಭಗೊಂಡ ಎಡಪಂಥೀಯ ಚಳುವಳಿ ಕರ್ನಾಟಕದಲ್ಲೂ ಇದೇ ಅವಧಿಯಲ್ಲೇ ಪ್ರಾರಂಭಗೊಂಡಿತೆಂದು ಹೇಳಬಹುದು. ಕಾರ್ಮಿಕರನ್ನು ಸಂಘಟಿಸುವುದರ ಮೂಲಕವೇ ಸ್ವಾತಂತ್ರ ಸಂಗ್ರಾಮದಲ್ಲಿ ಪಾಲ್ಗೊಂಡ ಎನ್.ಡಿ. ಶಂಕರ್, ಸಿ.ಬಿ. ಮೋಣಯ್ಯ ಮತ್ತು ಎನ್.ಎಸ್. ರಾಮರವ್ ಮುಂತಾದವರ ನಾಯಕತ್ವದಲ್ಲಿ ರಾಜ್ಯದಲ್ಲಿ ಕಮ್ಯುನಿಸ್ಟ್ ಚಳುವಳಿ ತನ್ನ ನೆಲೆ ಕಂಡುಕೊಂಡಿತ್ತು. ೧೯೩೫ರ ಮಿನರ್ವ ಮಿಲ್ಸ್ ಮತ್ತು ರಾಜಾ ಮಿಲ್ಸ್ ಮುಷ್ಕರ, ೧೯೩೭ರ ಟಿ.ಆರ್. ಮಿಲ್ಸ್ ಮುಷ್ಕರ, ೧೯೪೧ರ ಬಿನ್ನಿ ಮಿಲ್ಸ್ ಹೋರಾಟ, ೧೯೪೬ ರಲ್ಲಿ ಕೋಲಾರ ಚಿನ್ನದ ಗಣಿ ಕಾರ್ಮಿಕರ ೧೦೦ ದಿನಗಳ ಐತಿಹಾಸಿಕ ಮುಷ್ಕರ, ಹೀಗೆ ಹಲವಾರು ಕಾರ್ಮಿಕ ಸಂಘಟನೆಗಳ ವೀರೋಚಿತ ಹೋರಾಟಗಳ ಮೂಲಕ ರಾಜ್ಯದಲ್ಲಿ ಕಾರ್ಮಿಕ ವರ್ಗಗಳ ಹಿತಾಸಕ್ತಿಗಳನ್ನು ಕಾಪಾಡುವುದರೊಂದಿಗೇ, ಸ್ವಾತಂತ್ರ ಹೋರಾಟದಲ್ಲೂ ಭಾಗ ವಹಿಸಿ, ವಸಾಹತುಶಾಹಿಯ ವಿರುದ್ಧ ಹೋರಾಡಿದ್ದ ಶ್ರೇಯ ಕರ್ನಾಟಕದ ಕಾರ್ಮಿಕ ಚಳುವಳಿಗೆ ಸಲ್ಲುತ್ತದೆ.

ಬೆಂಗಳೂರು ಕೇಂದ್ರಿತ ಕೈಗಾರೀಕರಣ ಪ್ರಕ್ರಿಯೆ ನಾಡಿನ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಎಷ್ಟೇ ನೇತ್ಯಾತ್ಮಕವಾದರೂ, ಈ ಸಾರ್ವಜನಿಕ ಉದ್ದಿಮೆಗಳ ಕೊಡುಗೆಯನ್ನು ಅಲ್ಲಗಳೆಯಲಾಗುವುದಿಲ್ಲ. ಸ್ವಾತಂತ್ರ ಪೂರ್ವದಿಂದಲೇ ಕಾರ್ಮಿಕ ವರ್ಗವನ್ನು ಚಳುವಳಿಗಳಲ್ಲಿ ತೊಡಗಿಸಿದ ಎಡ ಪಕ್ಷಗಳು, ನಂತರದಲ್ಲೂ ತಮ್ಮ ಸಂಘಟನಾ ಸಾಮರ್ಥ್ಯದಲ್ಲಿ ಹಿನ್ನಡೆ ಕಾಣಲಿಲ್ಲ ಎಂದರೆ ತಪ್ಪಲ್ಲ. ಎಪ್ಪತ್ತರ ದಶಕದಲ್ಲಿ ಆರಂಭಗೊಂಡ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಜಂಟಿ ಹೋರಾಟ ಸಮಿತಿ ತನ್ನ ಹೋರಾಟಗಳಿಂದ ಕಾರ್ಮಿಕರಿಗೆ ಅನೇಕ ಸವಲತ್ತುಗಳನ್ನು ಒದಗಿಸಿಕೊಟ್ಟಿದೆ. ಇಂದು ಬೆಂಗಳೂರಿನಲ್ಲಿ ಕನ್ನಡ ಪರ ಸಂಘಟನೆಗಳ ಒಂದು ಮಹಾಪೂರವನ್ನೇ ಕಾಣುವುದಾದರೆ, ಅದಕ್ಕೆ ಈ ಉದ್ದಿಮೆಗಳ ಕಾರ್ಮಿಕರೇ ಕಾರಣ ಎಂದು ನಿಸ್ಸಂಶಯವಾಗಿ ಹೇಳಬಹುದು. ಪ್ರತಿಯೊಂದು ಕಾರ್ಖಾನೆಗಳಲ್ಲೂ ಕನ್ನಡ ಸಂಘಗಳನ್ನು ಸ್ಥಾಪಿಸುವುದರ ಮೂಲಕ, ಕಾರ್ಮಿಕರಲ್ಲಿ ಸಾಹಿತ್ಯಾಸಕ್ತಿಯನ್ನು ಹೆಚ್ಚಿಸುವುದಲ್ಲದೆ, ನಿರಂತರ ಪರಿಶ್ರಮದ ನಡುವೆ ಮನೋರಂಜನೆಯನ್ನೂ ನೀಡಿದ ಹೆಮ್ಮೆ ಈ ಸಂಘಟನೆಗಳಿಗಿದೆ. ಪರ ರಾಜ್ಯಗಳಿಂದ ಬಂದು ಇಲ್ಲಿ ನೆಲೆಸಿದ್ದ ಕಾರ್ಮಿಕರನ್ನೂ ತಮ್ಮೊಡನೆ ಕೂಡಿಸಿಕೊಂಡು ಕನ್ನಡ ಪರ ಕೆಲಸ ಮಾಡಿದ ನಿದರ್ಶನಗಳೂ ಇವೆ.

ಬಂಡವಾಳಶಾಹೀ ವ್ಯವಸ್ಥೆಯನ್ನು ಕಾಪಾಡುತ್ತಲೇ, ಸಮಾಜವಾದಿ ಪರಿಕಲ್ಪನೆಯನ್ನು ಸಾಕಾರಗೊಳಿಸಲೆತ್ನಿಸಿದ ನೆಹರೂರವರ ಆರ್ಥಿಕ ಚಿಂತನೆಗಳ ಫಲವಾಗಿ ಉಗಮಿಸಿದ ಈ ಉದ್ದಿಮೆಗಳಲ್ಲಿ, ಕಾರ್ಮಿಕರಿಗೇನೂ ರತ್ನಗಂಬಳಿ ಹಾಸಿ ಸೌಲಭ್ಯಗಳನ್ನು ಒದಗಿಸಲಿಲ್ಲ ಎಂಬ ಅಂಶವನ್ನು ನಾವಿಂದು ಮನಗಾಣಬೇಕಾಗಿದೆ. ಬಹುತೇಕ ಮಾಧ್ಯಮಗಳಲ್ಲಿ, ಎಡ ಪಕ್ಷಗಳು ಮತ್ತು ಅವುಗಳ ಕಾರ್ಮಿಕ ಸಂಘಟನೆಗಳು, ಮುಷ್ಕರಗಳ ಮೂಲಕವೇ ಉದ್ದಿಮೆಗಳನ್ನು ನಷ್ಟಕ್ಕೊಳಪಡಿಸುತ್ತಾರೆ ಎಂಬ ವಾದವನ್ನು ಹುಟ್ಟುಹಾಕಲಾಗುತ್ತಿತ್ತು. ಇಂದಿಗೂ ಇದೇ ವಾದವನ್ನು ಮಂಡಿಸಲಾಗುತ್ತದೆ. ಆದರೆ ಕಾರ್ಮಿಕರು ಹೋರಾಟದ ಹಾದಿ ಹಿಡಿಯದಿದ್ದರೆ ತಮ್ಮ ಸವಲತ್ತುಗಳನ್ನು ಪಡೆಯಲಾಗುತ್ತಿರಲಿಲ್ಲ ಎಂಬ ಅಂಶವನ್ನು ಈ ವಾದಕರು ಮರೆಯುತ್ತಾರೆ. ಉದಾಹರಣೆಗೆ ಕೋಲಾರ ಚಿನ್ನದ ಗಣಿ ಕಾರ್ಮಿಕರು ಸ್ವಾತಂತ್ರ ಪೂರ್ವದಲ್ಲಿ ನಡೆಸಿದ ೧೦೦ ದಿನಗಳ ಮುಷ್ಕರದ ಫಲವೇ ಇಂದು, ಗಣಿಯನ್ನು ಮುಚ್ಚಲಾಗಿದ್ದರೂ, ಅಲ್ಲಿನ ಮೂರು ಲಕ್ಷ ಜನತೆಗೆ ಮುರುಕಲು ಗುಡಿಸಲುಗಳಾದರೂ, ಅಗ್ಗದ ಬಾಡಿಗೆಯಲ್ಲಿ ದೊರೆತಿದೆ. ಇಲ್ಲದಿದ್ದಲ್ಲಿ ಅಷ್ಟೂ ಜನ ಇಂದು ಬೀದಿ ಪಾಲಾಗುವ ಸಾಧ್ಯತೆಗಳಿದ್ದವು. ಎಪ್ಪತ್ತರ ದಶಕದಲ್ಲಿ ಸಾರ್ವಜನಿಕ ಉದ್ದಿಮೆಗಳ ಜಂಟಿ ಹೋರಾಟ ಸಮಿತಿ ನಡೆಸಿದ ೭೭ ದಿನಗಳ ಮುಷ್ಕರದ ನಂತರವೇ, ಎಲ್ಲಾ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರಿಗೂ ಸಮಾನ ವೇತನ, ಬೋನಸ್ ಮುಂತಾದ ಸೌಲಭ್ಯಗಳು ಒದಗಿದ್ದನ್ನೂ ಇಲ್ಲಿ ಸ್ಮರಿಸಬಹುದು. ಈ ಮುಷ್ಕರದ ನಂತರವೇ ಕಾಲಕಾಲಕ್ಕೆ ವೇತನ ಪರಿಷ್ಕರಣೆಗಾಗಿ ಕಾರ್ಮಿಕ ಸಂಘಗಳೊಡನೆ ಮಾತುಕತೆ ನಡೆಸುವ ಪರಂಪರೆಯೂ ಆರಂಭವಾಗಿತ್ತು. ತಮ್ಮ ಸವಲತ್ತುಗಳ ಜೊತೆಗೇ, ಉದ್ದಿಮೆಯ ರಕ್ಷಣೆಗೂ ಹೋರಾಟ ನಡೆಸಿದ್ದು ರಾಜ್ಯದ ಕಾರ್ಮಿಕರ ಹೆಮ್ಮೆ ಎಂದು ಹೇಳಬಹುದು.

ಎಪ್ಪತ್ತರ ದಶಕದಲ್ಲೇ ರಾಜ್ಯದಲ್ಲಿ ಆರಂಭಗೊಂಡ ಏಷ್ಯಾದಲ್ಲೇ ಅತಿ ದೊಡ್ಡ ಕೈಗಾರಿಕಾ ಸಂಕೀರ್ಣವಾದ ಪೀಣ್ಯಾ ಕೈಗಾರಿಕಾ ನಗರ ಕರ್ನಾಟಕದ ಹೆಮ್ಮೆಯ ರತ್ನಗಳಲ್ಲೊಂದಾಗಿತ್ತು. ಸಣ್ಣ ಕೈಗಾರಿಕೋದ್ಯಮಗಳನ್ನು ಬೆಂಬಲಿಸಲು, ಕೇಂದ್ರ ಮತ್ತು ರಾಜ್ಯ ಉದ್ಯಮಗಳಿಗೆ ಅಗತ್ಯವಾದ ಸಲಕರಣೆ-ಪರಿಕರಗಳನ್ನು ಒದಗಿಸುವ ದೃಷ್ಟಿಯಿಂದ ಈ ಪೀಣ್ಯಾ ಕೈಗಾರಿಕಾ ನಗರದಲ್ಲಿ ಸಾವಿರಾರು ಉದ್ದಿಮೆಗಳು ಆರಂಭಗೊಂಡವು. ಎಂಬತ್ತರ ದಶಕದಲ್ಲಿ ರಾಜ್ಯದ ನಿರುದ್ಯೋಗ ಸಮಸ್ಯೆ ಕೊಂಚ ಮಟ್ಟಿಗಾದರೂ ಪರಿಹಾರ ನೀಡಿದ ಕೀರ್ತಿ ಈ ಕೈಗಾರಿಕಾ ನಗರಕ್ಕೆ ಸಲ್ಲುತ್ತದೆ ಎಂದರೆ ಅತಿಶಯೋಕ್ತಿಯೇನಲ್ಲ.

ಎಪ್ಪತ್ತರ ದಶಕದಲ್ಲೇ ರಾಜ್ಯದಲ್ಲಿ ಆರಂಭಗೊಂಡ ಏಷ್ಯಾದಲ್ಲೇ ಅತಿ ದೊಡ್ಡ ಕೈಗಾರಿಕಾ ಸಂಕೀರ್ಣವಾದ ಪೀಣ್ಯಾ ಕೈಗಾರಿಕಾ ನಗರ ಕರ್ನಾಟಕದ ಹೆಮ್ಮೆಯ ರತ್ನಗಳಲ್ಲೊಂದಾಗಿತ್ತು. ಸಣ್ಣ ಕೈಗಾರಿಕೋದ್ಯಮಗಳನ್ನು ಬೆಂಬಲಿಸಲು, ಕೇಂದ್ರ ಮತ್ತು ರಾಜ್ಯ ಉದ್ಯಮಗಳಿಗೆ ಅಗತ್ಯವಾದ ಸಲಕರಣೆ-ಪರಿಕರಗಳನ್ನು ಒದಗಿಸುವ ದೃಷ್ಟಿಯಿಂದ ಈ ಪೀಣ್ಯಾ ಕೈಗಾರಿಕಾ ನಗರದಲ್ಲಿ ಸಾವಿರಾರು ಉದ್ದಿಮೆಗಳು ಆರಂಭಗೊಂಡವು. ಎಂಬತ್ತರ ದಶಕದಲ್ಲಿ ರಾಜ್ಯದ ನಿರುದ್ಯೋಗ ಸಮಸ್ಯೆ ಕೊಂಚಮಟ್ಟಿಗಾದರೂ ಪರಿಹಾರ ನೀಡಿದ ಕೀರ್ತಿ ಈ ಕೈಗಾರಿಕಾ ನಗರಕ್ಕೆ ಸಲ್ಲುತ್ತದೆ ಎಂದರೆ ಅತಿಶಯೋಕ್ತಿಯೇನಲ್ಲ. ಇಲ್ಲಿಯೂ ಸಹ ಕಾರ್ಮಿಕ ಸಂಘಟನೆಗಳ ಹೋರಾಟದ ಫಲವಾಗಿ, ಖಾಸಗೀ ಕ್ಷೇತ್ರದ ಸಣ್ಣ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದ ಲಕ್ಷಾಂತರ ಕಾರ್ಮಿಕರಿಗೆ ಉತ್ತಮ ವೇತನ, ಬೋನಸ್ ಮತ್ತಿತರ ಸೌಲಭ್ಯಗಳು ದೊರೆತ್ತಿದ್ದವು. ಒಂದು ಸಮಯದಲ್ಲಿ ಭಾರತೀಯ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದ ಎ.ಐ.ಟಿ.ಯು.ಸಿ ಕಾರ್ಮಿಕ ಸಂಘಟನೆಯು ಪೀಣ್ಯಾ ಕ್ಷೇತ್ರದಲ್ಲಿ ಇಪ್ಪತ್ತು ಸಾವಿರಕ್ಕೂ ಹೆಚ್ಚು ಕಾರ್ಮಿಕರನ್ನು ಒಂದೆಡೆ ಸೇರಿಸಿ ರ್‍ಯಾಲಿ ನಡೆಸಿದ್ದು ಇಂದಿಗೂ ರಾಜ್ಯದ ಕಾರ್ಮಿಕ ಇತಿಹಾಸದಲ್ಲಿ ದಾಖಲೆಯಾಗಿದೆ. ಈ ಸಂಘಟನೆಗಳ ಫಲವಾಗಿಯೇ ಪೀಣ್ಯಾದ ಕಾರ್ಮಿಕರಿಗೆ ಭವಿಷ್ಯ ನಿಧಿ, ಬೋನಸ್ ಮತ್ತಿತರ ಹಕ್ಕುಗಳ ಪ್ರಾಪ್ತಿಯಾಯಿತೆಂದು ಹೇಳಬಹುದು. ಖಾಸಗೀ ಕಾರ್ಖಾನೆಗಳ ಮಾಲೀಕರುಗಳ ದಬ್ಬಾಳಿಕೆಗಳ ವಿರುದ್ಧ ಹೋರಾಡುವುದಷ್ಟೇ ಅಲ್ಲದೆ, ಲೇಬರ್ ಕೋರ್ಟ್‌ಗಳ ಮೊರೆ ಹೋಗುವುದರ ಮೂಲಕವೂ ಅನೇಕ ಕಾರ್ಮಿಕ ಸಮಸ್ಯೆಗಳನ್ನು ಪರಿಹರಿಸಿರುವುದು ಕಾರ್ಮಿಕ ಸಂಘಟನೆಗಳ ಸಾಧನೆ ಎಂದು ಹೇಳಬಹುದು.

ಎಡ ಪಂಥೀಯ ಕಾರ್ಮಿಕ ಚಳುವಳಿಗಳು ಮಂಗಳೂರಿನ ಬೀಡಿ ಉದ್ದಿಮೆ, ಚಿಕ್ಕಮಗಳೂರಿನ ಕಾಫಿ ಎಸ್ಟೇಟ್‌ಗಳಲ್ಲಿ ಮಹತ್ತರವಾದ ಸಾಧನೆಗೈದಿರುವುದನ್ನೂ ಇಲ್ಲಿ ಸ್ಮರಿಸಬೇಕಾಗುತ್ತದೆ. ಬೀಡಿ ಕಾರ್ಮಿಕರಿಗೆ ವಸತಿ ಸೌಕರ್ಯ, ಬೋನಸ್, ಕನಿಷ್ಠ ವೇತನ, ಸರ್ಕಾರ ನಿಗಧಿ ಪಡಿಸಿದ ಕನಿಷ್ಠ ದಿನಗೂಲಿ, ಇತ್ಯಾದಿ ಸವಲತ್ತುಗಳನ್ನು ಒದಗಿಸುವಲ್ಲಿ ಕಾರ್ಮಿಕ ಸಂಘಟನೆಗಳ ಪಾತ್ರ ಮಹತ್ತರವಾದುದು. ಕರ್ನಾಟಕದ ಕಾರ್ಮಿಕ ಸಂಘಟನೆಯ ಇತಿಹಾಸದಲ್ಲಿ ಮಹತ್ತರವಾದ ತಿರುವು ಕಂಡು ಬಂದಿದ್ದು ಎಪ್ಪತ್ತರ ದಶಕದಲ್ಲೇ. ದೇವರಾಜ ಅರಸುರವರ ಆಡಳಿತಾವಧಿಯಲ್ಲಿ ರಾಷ್ಟ್ರೀಕರಣಗೊಂಡ ಸಾರಿಗೆ ಸಂಸ್ಥೆಯ ಕಾರ್ಮಿಕರು, ಯಾವುದೇ ಸಂಘಟನೆ ಇಲ್ಲದೆ, ಅಥವಾ ಇದ್ದ ಸಂಘಟನೆಗಳು ಮಾಲೀಕರ ಪರವಾಗಿದ್ದ ಸಂದರ್ಭದಲ್ಲಿ, ಎ.ಐ.ಟಿ.ಯು.ಸಿ ಸಂಘಟನೆಯು, ಕ.ರಾ.ರ.ಸಾ. ಸಂಸ್ಥೆಯಲ್ಲಿ ಕಾರ್ಮಿಕರನ್ನು ಸಂಘಟಿಸಲು ತೊಡಗಿದಾಗ ಸಾಕಷ್ಟು ತೊಂದರೆಗಳನ್ನೆದುರಿಸಬೇಕಾಯಿತು. ವರ್ಗಾವಣೆ, ಅಮಾನತು, ಇನ್ನಿತರ ಶಿಕ್ಷೆಗಳನ್ನೆದುರಿಸಬೇಕಾಯಿತು. ಆದರೆ ಸಾರಿಗೆ ಕಾರ್ಮಿಕರ ಅಪ್ರತಿಮ ಸಂಘಟನಾ ಸಾಮರ್ಥ್ಯದ ಮುಂದೆ ನಿಲ್ಲಲಾಗದ ಆಡಳಿತವರ್ಗ ಕಾರ್ಮಿಕರ ಅನೇಕ ಬೇಡಿಕೆಗಳನ್ನು ಮನ್ನಿಸಬೇಕಾಯಿತು. ದೇಶದ ಅತ್ಯುತ್ತಮ ಸಾರಿಗೆ ಸಂಸ್ಥೆಗಳಲ್ಲೊಂದಾಗಿ ಇಂದು ಕ.ರಾ.ರ.ಸಾ ಸಂಸ್ಥೆ ಹೆಸರಾಗಿದ್ದರೆ, ಅದರ ಹಿಂದೆ ಸಾರಿಗೆ ಕಾರ್ಮಿಕರ ಪರಿಶ್ರಮವಿದೆ ಎಂಬ ಅಂಶವನ್ನು ನಾವು ಮರೆಯುವಂತಿಲ್ಲ.

ಇಷ್ಟೆಲ್ಲಾ ಸಾಧನೆಗಳನ್ನು ಹೆಮ್ಮೆಯಿಂದ ಹೇಳಿಕೊಳ್ಳಬಹುದಾದ, ಕರ್ನಾಟಕದ ಕಾರ್ಮಿಕ ವರ್ಗದ ಇಂದಿನ ಪರಿಸ್ಥಿತಿ ಚಿಂತಾಜನಕವಾಗಿದೆ. ಆಧುನಿಕ ಭಾರತದ ಭವ್ಯ ದೇವಾಲಯಗಳೆಂದು ಬೀಗುತ್ತಿದ್ದ ಹೆಚ್.ಎಂ.ಟಿ, ಐ.ಟಿ.ಐ, ಮುಂತಾದ ಉದ್ದಿಮೆಗಳು ತಮ್ಮ ಉಳಿವಿಗಾಗಿ ಹೋರಾಡುತ್ತಿವೆ. ಕನ್ನಡ ನಾಡು ಚಿನ್ನದ ಬೀಡು ಎಂಬ ನಾಣ್ಣುಡಿಗೆ ಕಾರಣೀಭೂತವಾದ ಚಿನ್ನದ ಗಣಿ ಮುಚ್ಚಲ್ಪಟ್ಟು ಮೂರು ಲಕ್ಷ ಜನ ಬೀದಿಪಾಲಾಗಿದ್ದಾರೆ. ರಾಜ್ಯದ ಸಾರ್ವಜನಿಕ ಉದ್ದಿಮೆಗಳಾದ ಎನ್.ಜಿ.ಇ.ಎಫ್. ಕೆ.ಎಸ್.ಡಿ.ಎಲ್, ಮುಂತಾದವುಗಳು ಅವಸಾನ ಹೊಂದಿವೆ ಅಥವಾ ಅವಸಾನದ ಅಂಚಿನಲ್ಲಿವೆ. ಏಷ್ಯಾದಲ್ಲೇ ಅತಿ ದೊಡ್ಡ ಕೈಗಾರಿಕಾ ಪ್ರದೇಶವೆಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ಪೀಣ್ಯ ಪ್ರದೇಶ ಇಂದು ಮುಚ್ಚಿದ ಕಾರ್ಖಾನೆಗಳ ಬೆಂಗಾಡಾಗಿದೆ. ವಿದೇಶೀ ಕಂಪನಿಗಳ ವಿರುದ್ಧ ಪೈಪೋಟಿ ನಡೆಸಲಾರದೆ ಹಲವಾರು

ಸಣ್ಣ ಉದ್ದಿಮೆಗಳು ಅವಸಾನ ಹೊಂದಿವೆ. ಒಂದು ಕಾಲದಲ್ಲಿ ದಿನವಿಡೀ ದುಡಿದು ರಾಜ್ಯದ ಉತ್ಪಾದಕತೆಗೆ ಅಪಾರ ಕೊಡುಗೆ ನೀಡುತ್ತಿದ್ದ ಕಾರ್ಮಿಕರನೇಕರು ಇಂದು ಕಡಲೆ ಕಾಯಿ ಮಾರುತ್ತಿರುವ ವರದಿಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ದೇಶದಲ್ಲಿ ಅತ್ಯುತ್ತಮ ಸಾರಿಗೆ ಸಂಸ್ಥೆಯೆಂಬ ಕೀರ್ತಿ ಗಳಿಸಿದ ರಾಜ್ಯ ಸಾರಿಗೆ ಸಂಸ್ಥೆಯ ನೌಕರರನ್ನು ಇಂದು ಎಸ್ಮಾ ಕಾಯಿದೆಯ ನೆಪದಲ್ಲಿ ದಮನಗೊಳಿಸಲಾಗುತ್ತಿದೆ. ಭೂ ಮಾಫಿಯಾಗಳ ಲಾಲಸೆಗೆ ಬಲಿಯಾಗಿ ಸಾವಿರಾರು ಎಕರೆ ಭೂಮಿಯನ್ನು ಹೊಂದಿದ್ದ ಅನೇಕ ಕಾರ್ಖಾನೆಗಳನ್ನು ಮುಚ್ಚಿ ಮಾರಾಟ ಮಾಡಲಾಗುತ್ತಿದೆ. ಈಗ ಕೋಲಾರ ಚಿನ್ನದ ಗಣಿಯನ್ನು ಸಹ ಹರಾಜು ಮಾಡಲು ಸರ್ಕಾರ ತೀರ್ಮಾನಿಸಿದೆ.

ಜಾಗತೀಕರಣದ ಹೊಸ ಆರ್ಥಿಕ ನೀತಿಗಳ ಫಲವಾಗಿ, ಉತ್ತಮ ಸಂಘಟಿತ ವಲಯದ ಕಾರ್ಮಿಕರೇ ಅಪಾಯದ ಅಂಚಿನಲ್ಲಿದ್ದಾರೆ. ಒಂದು ಕಾಲದಲ್ಲಿ ಬಿ.ಇ.ಎಲ್, ಹೆಚ್.ಎ.ಎಲ್ ಮುಂತಾದ ಉದ್ದಿಮೆಗಳಲ್ಲಿ ತಮ್ಮ ಸಂಘಟನಾ ಸಾಮರ್ಥ್ಯದಿಂದಲೇ ತಮ್ಮ ಹಕ್ಕುಗಳನ್ನು ಕಾಪಾಡುತ್ತಿದ್ದ ಕಾರ್ಮಿಕರು ಇಂದು ಬಹುತೇಕವಾಗಿ ಅಸಂಘಟಿತರಾಗಿದ್ದಾರೆ. ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳುವುದರ ಮೂಲಕ ಸರ್ಕಾರ ಮತ್ತು ಖಾಸಗೀ ಉದ್ಯಮಿಗಳು ಕಾರ್ಮಿಕ ಸಂಘಟನೆಗಳನ್ನು ಶಿಥಿಲಗೊಳಿಸುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ. ಕರ್ನಾಟಕದ ಮಾಂಚೆಸ್ಟರ್ ಎಂದೇ ಕರೆಯಲ್ಪಡುತ್ತಿದ್ದ ದಾವಣಗೆರೆಯಲ್ಲಿ ಇಂದು ಜವಳಿ ಉದ್ಯಮ ನೆಲ ಕಚ್ಚಿದೆ. ಕಿರ್ಲೋಸ್ಕರ್, ಗೆಸ್ಟ್ ಕೀನ್ ವಿಲಿಯಮ್ಸ್ ಮುಂತಾದ ಬೃಹತ್ ಉದ್ದಿಮೆಗಳು ಅವಸಾನ ಹೊಂದಿದೆ. ಒಂದು ಕಾಲದಲ್ಲಿ ರಾಜ್ಯದ ಕೈಗಾರಿಕಾ ಉತ್ಪನ್ನದ ಶೇ ೪೦ ರಷ್ಟು ಪಾಲು ಜವಳಿ ಉದ್ಯಮದ್ದಾಗಿದ್ದು, ಇಂದು ಅದು ಕೇವಲ ಶೇ. ೧೭ಕ್ಕೆ ಇಳಿದಿದೆ. ಬಿ.ಇ.ಎಲ್ ನಂತಹ ನವರತ್ನ ಕಂಪನಿಗಳು ಖಾಸಗೀ ಕ್ಷೇತ್ರದ ಎಲ್.ಅಂಡ್. ಟಿಯೊಡನೆ ಸ್ಪರ್ಧಿಸಬೇಕಾಗಿದ್ದು, ಅಪಾರ ಪೈಪೋಟಿಯನ್ನೆದುರಿಸುತ್ತಿದೆ.

ಈ ಎಲ್ಲಾ ಬೆಳವಣಿಗೆಗಳಿಗೆ ಕಾರ್ಮಿಕ ಸಂಘಟನೆಗಳ ಸಂಘರ್ಷ ನೀತಿಯೇ ಕಾರಣ ಎಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು. ಕಾರ್ಮಿಕರ ಹೋರಾಟವನ್ನೇ ನೆಪವಾಗಿಟ್ಟುಕೊಂಡು ಉದ್ದಿಮೆಗಳನ್ನು ಮುಚ್ಚಿರುವ ಅನೇಕ ಪ್ರಸಂಗಗಳಿವೆ. ಸರ್ಕಾರದ ನವ ಆರ್ಥಿಕ ನೀತಿ, ಖಾಸಗೀ ಉದ್ಯಮಿಗಳ ಲಾಭಕೋರತನ, ಬಹುರಾಷ್ಟ್ರೀಯ ಕಂಪನಿಗಳ ದಾಳಿ, ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ದೊರೆಯುತ್ತಿದ್ದ ಬೆಂಬಲದ ಹಿಂತೆಗೆತ ಇವೆಲ್ಲಾ ಕರ್ನಾಟಕದ ಕೈಗಾರಿಕಾ ಸಮಸ್ಯೆಗಳಿಗೆ, ಕಾರ್ಮಿಕ ಸಮಸ್ಯೆಗಳಿಗೆ ಪ್ರಮುಖ ಕಾರಣಗಳಾಗಿವೆ. ಕಾರ್ಮಿಕ ಚಳುವಳಿಗಳಲ್ಲೂ ಸಹ ಮೂರು ದಶಕಗಳ ಹಿಂದೆ ಕಂಡು ಬರುತ್ತಿದ್ದ ಹೋರಾಟದ ಮನೋಭಾವ ಇಂದು ಕಾಣುತ್ತಿಲ್ಲ. ನವ ಪೀಳಿಗೆಯ ಯುವಕರು ಡಾಲರ್ ಸಂಸ್ಕೃತಿಗೆ ಮಾರುಹೋಗಿದ್ದಾರೆ. ಎಡ ಪಕ್ಷಗಳ ಕಾರ್ಮಿಕ ಸಂಘಟನೆಗಳಲ್ಲೂ ಹೊಂದಾಣಿಕೆಯ ಮನೋಭಾವವೇ ಹೆಚ್ಚಾಗಿ ಕಂಡು ಬರುತ್ತಿದ್ದು, ಕಾರ್ಮಿಕ ಸಂಘಟನೆ ಮಾಲೀಕರ ದಬ್ಬಾಳಿಕೆಯ ವಿರುದ್ಧ ಹೋರಾಡುವ ಬದಲು, ತಮ್ಮ ಅಳಿವು ಉಳಿವಿಗಾಗಿ ಹೋರಾಡುವ ಪರಿಸ್ಥಿತಿ ಎದುರಾಗಿದೆ. ಕೈಗಾರಿಕಾ ಕಾರ್ಮಿಕರಿಗೆ ದಾರಿದೀಪವಾಗಬೇಕಿದ್ದ, ಬ್ಯಾಂಕು, ವಿಮಾ ಕ್ಷೇತ್ರದ ಬಿಳಿ ಕಾಲರ್ ಉದ್ಯೋಗಿಗಳು ಯಾವುದೇ ರಾಜಕೀಯ ಧ್ಯೇಯಗಳಿಲ್ಲದೆ ಕೇವಲ ಆರ್ಥಿಕ ಸವಲತ್ತುಗಳಿಗಾಗಿ ತಮ್ಮ ಹೋರಾಟಗಳನ್ನು ಮೀಸಲಾಗಿಟ್ಟಿರುವುದೂ, ಮುಷ್ಕರಗಳನ್ನು ಹೊರತಾಗಿ ಕೈಗಾರಿಕಾ ಕ್ಷೇತ್ರದ ಕಾರ್ಮಿಕರಿಗೆ ತಾತ್ವಿಕ ಬೆಂಬಲ, ನಾಯಕತ್ವ ನೀಡುವುದರಲ್ಲಿ ವಿಫಲರಾಗಿರುವುದೂ ಈ ನೇತ್ಯಾತ್ಮಕ ಬೆಳವಣಿಗೆಗೆ ಪ್ರಮುಖ ಕಾರಣವಾಗಿದೆ. ಅಸಂಘಟಿತ ಕಾರ್ಮಿಕರನ್ನು ಸಂಘಟಿಸುವುದರಲ್ಲಿ ಎಲ್ಲಾ ಕಾರ್ಮಿಕ ಸಂಘಟನೆಗಳು, ರಾಜಕೀಯ ಪಕ್ಷಗಳೂ ವಿಫಲವಾಗಿರುವುದು ಶೋಚನೀಯವಾದ ಅಂಶ.

ಸಾಮಾಜಿಕ ರಾಜಕೀಯ ಕ್ರಾಂತಿಯ ಮುಂಚೂಣಿಯಲ್ಲಿರಬೇಕಾದ ಕಾರ್ಮಿಕ ವರ್ಗವನ್ನು ಜಾತಿ, ಧರ್ಮ, ಭಾಷೆಗಳ ಆಧಾರದ ಮೇಲೆ ಸಂಘಟಿಸಿರುವುದೂ ಈ ವೈಫಲ್ಯಕ್ಕೆ ಕಾರಣವೆಂದು ಹೇಳಬಹುದು. ೬೦ರ ದಶಕದ ನಂತರದಲ್ಲಿ ರಾಜ್ಯದಲ್ಲಿ ಬೇರೂರಿದ ಧರ್ಮಾಧಾರಿತ ರಾಜಕೀಯ ಕಾರ್ಮಿಕ ವಲಯದ ಮೇಲೂ ಸಾಕಷ್ಟು ಪ್ರಭಾವ ಬೀರಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ತಮ್ಮ ಬೇಡಿಕೆಗಳ ಈಡೇರಿಕೆಗಳಿಗಾಗಿ ಕೆಂಬಾವುಟದಡಿ ಹೋರಾಡುವ ಕಾರ್ಮಿಕರೇ ಚುನಾವಣಾ ಸಮಯದಲ್ಲಿ ಕೇಸರಿ ಬಾವುಟದಡಿ ರಾರಾಜಿಸುವುದನ್ನು ಕಂಡಿದ್ದೇವೆ. ಹಾಗಾಗಿಯೇ ಒಂದು ಕಾಲದಲ್ಲಿ ಕಾರ್ಮಿಕ ನಾಯಕರುಗಳನ್ನು ವಿಧಾನಸಭೆಗೆ ಆರಿಸಿ ಕಳುಹಿಸುತ್ತಿದ್ದ ಕ್ಷೇತ್ರಗಳು ಇಂದು ಆ ಮಹತ್ವವನ್ನು ಕಳೆದುಕೊಂಡಿವೆ. ಕಾರ್ಮಿಕರ ಭದ್ರ ಕೋಟೆ ಎನಿಸಿದ್ದ ಕೋಲಾರ ಚಿನ್ನದ ಗಣಿ, ದಾವಣಗೆರೆ ಮುಂತಾದ ಕ್ಷೇತ್ರಗಳು ಇಂದು ಭ್ರಷ್ಟ ರಾಜಕಾರಣದ ತವರೂರಾಗಿವೆ.

ಜಾಗತೀಕರಣದ ಹೊಸ ಆರ್ಥಿಕ ನೀತಿಗಳ ಫಲವಾಗಿ, ಉತ್ತಮ ಸಂಘಟಿತ ವಲಯದ ಕಾರ್ಮಿಕರೇ ಅಪಾಯದ ಅಂಚಿನಲ್ಲಿದ್ದಾರೆ. ಒಂದು ಕಾಲದಲ್ಲಿ ಬಿ.ಇ.ಎಲ್, ಹೆಚ್.ಎ.ಎಲ್ ಮುಂತಾದ ಉದ್ದಿಮೆಗಳಲ್ಲಿ ತಮ್ಮ ಸಂಘಟನಾ ಸಾಮರ್ಥ್ಯದಿಂದಲೇ ತಮ್ಮ ಹಕ್ಕುಗಳನ್ನು ಕಾಪಾಡುತ್ತಿದ್ದ ಕಾರ್ಮಿಕರು ಇಂದು ಬಹುತೇಕವಾಗಿ ಅಸಂಘಟಿತರಾಗಿದ್ದಾರೆ. ಗುತ್ತಿಗೆ ಕಾರ್ಮಿಕರನ್ನು ನೇಮಿಸಿ ಕೊಳ್ಳುವುದರ ಮೂಲಕ ಸರ್ಕಾರ ಮತ್ತು ಖಾಸಗೀ ಉದ್ಯಮಿಗಳು ಕಾರ್ಮಿಕ ಸಂಘಟನೆಗಳನ್ನು ಶಿಥಿಲಗೊಳಿಸುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ. ಕರ್ನಾಟಕದ ಮಾಂಚೆಸ್ಟರ್ ಎಂದೇ ಕರೆಯಲ್ಪಡುತ್ತಿದ್ದ ದಾವಣಗೆರೆಯಲ್ಲಿ ಇಂದು ಜವಳಿ ಉದ್ಯಮ ನೆಲ ಕಚ್ಚಿದೆ. ಕಿರ್ಲೋಸ್ಕರ್, ಗೆಸ್ಟ್ ಕೀನ್ ವಿಲಿಯಮ್ಸ್ ಮುಂತಾದ ಬೃಹತ್ ಉದ್ದಿಮೆ ಗಳು ಅವಸಾನ ಹೊಂದಿದೆ. ಒಂದು ಕಾಲದಲ್ಲಿ ರಾಜ್ಯದ ಕೈಗಾರಿಕಾ ಉತ್ಪನ್ನದ ಶೇ ೪೦ ರಷ್ಟು ಪಾಲು ಜವಳಿ ಉದ್ಯಮದ್ದಾಗಿದ್ದು, ಇಂದು ಅದು ಕೇವಲ ಶೇ. ೧೭ಕ್ಕೆ ಇಳಿದಿದೆ. ಬಿ.ಇ.ಎಲ್ ನಂತಹ ನವರತ್ನ ಕಂಪನಿಗಳು ಖಾಸಗೀ ಕ್ಷೇತ್ರದ ಎಲ್.ಅಂಡ್. ಟಿಯೊಡನೆ ಸ್ಪರ್ಧಿಸಬೇಕಾಗಿದ್ದು, ಅಪಾರ ಪೈಪೋಟಿಯನ್ನೆದುರಿಸುತ್ತಿದೆ.

ಇಂದು ಕಂಪ್ಯೂಟರ್ ಕೂಲಿಗಳೆಂದೇ ಕರೆಯಲಾಗುವ ಬಿ.ಪಿ.ಓ. ನೌಕರರ ಸಮಸ್ಯೆ ಕಾರ್ಮಿಕ ಸಂಘಟನೆಗಳನ್ನು ಕಾಡುತ್ತಿದೆ. ಮಾಹಿತಿ ತಂತ್ರಜ್ಞಾನದ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆಗೈದಿರುವ ರಾಜ್ಯವು, ಲಕ್ಷಾಂತರ ಯುವಕರಿಗೆ ಉದ್ಯೋಗ ಒದಗಿಸಿದ್ದರೂ, ಅವರಿಗೆ ನೀಡಲಾಗುವ ಕಡಿಮೆ ವೇತನವು, ವಿದೇಶೀ ಸಾಫ್ಟ್‌ವೇರ್ ಕಂಪನಿಗಳಿಗೆ ಲಾಭ ದೊರಕಿಸಿಕೊಡುತ್ತಿದೆ. ದಿನಕ್ಕೆ ಹನ್ನೆರಡು ಗಂಟೆ, ಕೆಲವೊಮ್ಮೆ ದಿನವಿಡೀ ದುಡಿಯುವ ಕಾಲ್ ಸೆಂಟರ್ ನೌಕರರಿಗೆ ದೊರೆಯುವ ವೇತನ ಡಾಲರ್‌ಗಳ ಲೆಕ್ಕದಲ್ಲಿ ಭಾರೀ ಮೊತ್ತವೇ ಇದ್ದರೂ, ಅವರ ಸಾಮಾಜಿಕ ಜೀವನ ಅಸ್ತವ್ಯಸ್ತವಾಗಿರುವುದಂತೂ ಶತಸಿದ್ಧ. ಸಾರ್ವಜನಿಕ ಉದ್ದಿಮೆಗಳಲ್ಲಿ ಕಂಡು ಬರುತ್ತಿದ್ದ ಸುಭದ್ರತೆಯನ್ನು ಆಧುನಿಕ ಕಾರ್ಮಿಕ ವರ್ಗ ಕಳೆದುಕೊಳ್ಳುತ್ತಿದೆ. ಈ ನಿಟ್ಟಿನಲ್ಲಿ ಎಡ ಪಕ್ಷಗಳು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕಾರ್ಮಿಕರನ್ನು ಸಂಘಟಿಸಲು ಮುಂದಾಗಿರುವುದು ಶ್ಲಾಘನೀಯವೆಂದು ಹೇಳಬಹುದು.

ಕರ್ನಾಟಕದ ಐವತ್ತು ವರ್ಷಗಳ ಭವ್ಯ ಇತಿಹಾಸದಲ್ಲಿ ಲಕ್ಷಾಂತರ ಕಾರ್ಮಿಕರ ಬೆವರಿನ ಪರಿಶ್ರಮವಿದೆ. ಈ ಕಾರ್ಮಿಕರ ಪರಿಶ್ರಮದ ಹಿಂದೆ ಕಮ್ಯುನಿಸ್ಟ್ ಪಕ್ಷಗಳ ಸಾಧನೆಯೂ ಅಡಗಿದೆ. ಎಷ್ಟೇ ಸಂಘಟನಾ ವೈಫಲ್ಯಗಳಿದ್ದರೂ ಇಂದಿಗೂ ಜಾಗತೀಕರಣದ ವಿರುದ್ಧ, ಕಾರ್ಮಿಕರ ರಕ್ಷಣೆಗಾಗಿ ಹೋರಾಡುತ್ತಿರುವುದು ಎಡ ಪಕ್ಷಗಳೇ ಎಂಬ ಅಂಶವನ್ನು ಗಮನಿಸಬೇಕಾಗುತ್ತದೆ. ಇತ್ತೀಚೆಗೆ ಡಿಸೆಂಬರ್ ೧೪ರಂದು ನಡೆದ ದೇಶವ್ಯಾಪಿ ಮುಷ್ಕರ ಇದಕ್ಕೊಂದು ನಿದರ್ಶನವಷ್ಟೆ. ಬೇರೆ ರಾಜಕೀಯ ಪಕ್ಷಗಳಿಗೆ ಸಂಯೋಜಿತವಾದ ಕಾರ್ಮಿಕ ಸಂಘಟನೆಗಳು ಈ ನಿಟ್ಟಿನಲ್ಲಿ ಹಲವಾರು ಸಾಧನೆಗೈದಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಆದಾಗ್ಯೂ ಪ್ರಸ್ತುತ ಪರಿಸ್ಥಿತಿಯಲ್ಲಿ ಕಾರ್ಮಿಕರ ಸಂರಕ್ಷಣೆ ಎಡ ಪಕ್ಷಗಳ ಕೈಯಲ್ಲಿದೆ ಎಂಬ ಅಂಶವನ್ನು ಒಪ್ಪಲೇಬೇಕಾಗಿದೆ.

ಭಾಷೆ, ಧರ್ಮ, ಜಾತಿಗಳನ್ನು ಪರಿಗಣಿಸದೆ. ರಾಜ್ಯದ ಅಭ್ಯುದಯಕ್ಕಾಗಿ ತಮ್ಮ ಜೀವವನ್ನೇ ತೇಯ್ದ ಕಾರ್ಮಿಕ ವರ್ಗಕ್ಕೆ ರಾಜ್ಯ ಸರ್ಕಾರಗಳು ನೀಡಿರುವುದು, ನಿರುದ್ಯೋಗ, ಎಸ್ಮಾ ಕಾಯ್ದೆ, ಕಾರ್ಖಾನೆಗಳ ಬೀಗಮುದ್ರೆ ಇತ್ಯಾದಿ. ಆದಾಗ್ಯೂ ಸುವರ್ಣ ಕರ್ನಾಟಕದ ಈ ಸುಸಂದರ್ಭದಲ್ಲಿ ಕರ್ನಾಟಕದ ಸಮಗ್ರ ಕಾರ್ಮಿಕ ವರ್ಗದ ಕೊಡುಗೆಯನ್ನು, ಕಾರ್ಮಿಕ ಸಂಘಟನೆಗಳ ಕೊಡುಗೆಯನ್ನೂ ಸ್ಮರಿಸುವುದು ಸೂಕ್ತ. ಕೈಕೆಲಸವಿಲ್ಲದ ಉತ್ಪಾದನೆಯ ಯುಗದತ್ತ ಚಲಿಸುತ್ತಿರುವ ಹೊಸ ಜಗತ್ತಿನ ಹೊಸ್ತಿಲಲ್ಲಿರುವ ಸಂದರ್ಭದಲ್ಲಿ, ಈ ಐತಿಹಾಸಿಕ ಮೆಲುಕು ಅಗತ್ಯವಲ್ಲವೇ.? □

ಭಾರತದಲ್ಲಿ ದಲಿತರೇಕೆ ಕ್ರೈಸ್ತರಾಗುತ್ತಾರೆ ?

ಭಾರತದಲ್ಲಿ ಕ್ರೈಸ್ತ ಧರ್ಮವು ಪುರಾತನ ಕಾಲದ್ದು. ಕ್ರಿಸ್ತನು ಬದುಕಿರುವಾಗಲೇ ಅವನ ವಿಚಾರಗಳು ಭಾರತದಲ್ಲಿ ಪ್ರಚಲಿತದಲ್ಲಿದ್ದವು ಎಂಬುದನ್ನು ನಾವು ಕಾಣುತ್ತೇವೆ. ಕ್ರಿ.ಶ. ೫೨ರಲ್ಲಿ ಸಂತ ಥಾಮಸರು ಕೇರಳದ ಮಲಬಾರು ತೀರಕ್ಕೆ ಬರುವುದರ ಮೂಲಕ ಕ್ರಿಸ್ತನ ವಿಚಾರಗಳು ಇನ್ನು ಹೆಚ್ಚು ಹೆಚ್ಚಾಗಿ ಭಾರತಧಲ್ಲಿ ಹರಡಿಕೊಂಡವು. ಸಂತ ಥಾಮಸರು ಕ್ರಿಸ್ತನ ವಿಚಾರಗಳನ್ನು ಬೋಧಿಸುವುದರ ಮೂಲಕ ಪಾಶ್ಚಿಮಾತ್ಯ ವ್ಯಾಪಾರ ಸಂಬಂಧವನ್ನು ಭಾರತದಲ್ಲಿ ಉತ್ತಮಪಡಿಸಿದರು. ವ್ಯಾಪಾರ ಮತ್ತು ಶಿಕ್ಷಣದ ವ್ಯಾಮೋಹಕ್ಕೆ ಬ್ರಾಹ್ಮಣರು ಮೊದಲು ಭಾರತದಲ್ಲಿ ಸಂತ ಥಾಮಸರ ಮೂಲಕ ಮಲಬಾರು ತೀರಗಳಲ್ಲಿ ಮತಾಂತರಗೊಂಡವರು. ಅವರನ್ನು ಇಂದಿಗೂ ಸಿರಿಯನ್ ಕ್ರೈಸ್ತರೆಂದು ಕರೆಯುತ್ತಾರೆ. ಅವರ ಕಾಲದಲ್ಲಿ ಆಗಲೆ ೫ ಚರ್ಚುಗಳು ಭಾರತದಲ್ಲಿ ಸ್ಥಾಪನೆಗೊಂಡಿದ್ದವು, ಅದರಲ್ಲಿ ಸಿರಿಯನ್ ಕ್ರೈಸ್ತರ ಭಾಗವಹಿಸುವಿಕೆ ಚರ್ಚುಗಳಲ್ಲಿ ಕಂಡು ಬರುತಿತ್ತು. ಸಂತ ಥಾಮಸರು ಭಾರತದಲ್ಲಿ ಹಲವಾರು ವರ್ಷಗಳನ್ನು ಕಳೆದ ನಂತರ ಭಾರತದಲ್ಲಿ ಜಾತಿವ್ಯವಸ್ಥೆಯನ್ನು ಚೆನ್ನಾಗಿ ಅರ್ಥ ಮಾಡಿಕೊಂಡರು. ಅವರು ಜಾತಿವ್ಯವಸ್ಥೆಯನ್ನು ಮಹಿಳೆಯರ ಸಮಾನತೆಯನ್ನು ಪ್ರಶ್ನಿಸಿದ್ದಕ್ಕಾಗಿ ಅವರನ್ನು ಕಲ್ಲೆಸದು ಕೊಲ್ಲಲಾಯಿತು ಎಂದು ತಿಳಿದು ಬರುತ್ತದೆ. ಆದರೂ ಸಂತ ಥಾಮಸರ ಕಾಲದಲ್ಲಿ ಬ್ರಾಹ್ಮಣರಷ್ಟು ಕೆಳವರ್ಗದ ಜನ ಮತಾಂತರಗೊಳ್ಳಲಿಲ್ಲ ಎಂಬುವುದು ನಿಜ.

ವ್ಯಾಪಾರ ಉದ್ದೇಶಕ್ಕಾಗಿ ಪೋರ್ಚುಗೀಸರು ವಾಸ್ಕೊಡಗಾಮನ ನೇತೃತ್ವದಲ್ಲಿ ಕ್ರಿ.ಶ. ೧೪೯೮ ರಲ್ಲಿ ಭಾರತಕ್ಕೆ ಬರುವುದರ ಮೂಲಕ ಇವರು ತಮ್ಮ ಪ್ರಬಲ ಅಧಿಕಾರವನ್ನು ಸ್ಥಾಪಿಸಿಕೊಂಡರು. ಅದೇ ಸಮಯದಲ್ಲಿ ಪೋಪ್ ನಿಕೋಲಸ್-೫ ರವರು ಪ್ರಪಂಚದಾದ್ಯಂತ ಕ್ರೈಸ್ತ ಮತವನ್ನು ಸಾರಬೇಕು ಎಂಬ ಆದೇಶ ಮೇರೆಗೆ ಪ್ರಾನಿಸ್ಕನ್, ಡೋಮಿನಿಸ್ಕರು, ಜೆಸ್ಟಿವಿಡ್ ಮತ್ತು ಆಗಸ್ಟಿನ್ ೫ ಗುಂಪುಗಳು ಭಾರತಕ್ಕೆ ಸುವಾರ್ತೆ ಸಾರಲು ಬಂದರು. ಇದರಲ್ಲಿ ಜೆಸ್ಟಿವಿಡ್ ಸಂಸ್ಥೆಯು ಸಕ್ರೀಯವಾಗಿ ದಕ್ಷಿಣ ಭಾರತದಲ್ಲಿ ಕೆಳವರ್ಗದ ಜನರನ್ನು ಮತಾಂತರಗೊಳಿಸುವದರಲ್ಲಿ ಆಸಕ್ತಿವಹಿಸಿದರು. ೧೫ನೇ ಶತಮಾನದ ಆರಂಭದಲ್ಲಿ ಪೋರ್ಚುಗೀಸರ ಆಳ್ವಿಕೆಯ ಸಮಯದಲ್ಲಿ ಕನ್ಯಾಕುಮಾರಿಯಿಂದ ರಾಮೇಶ್ವರವನ್ನು ತ್ರಿವಾಂಕೂರ ಅರಸರಿಂದ ಮಧುರೆ ದೊರೆಗಳು ಮತ್ತು ಮುಸ್ಲಿಂ ದೊರೆಗಳು ಆಳುತ್ತಿ

ಕೆಳವರ್ಗದ ಬೆಸ್ತ ಜನರಿಗೆ ತುಂಬ ಕಿರುಕುಳ ಶೋಷಣೆಯಾಗುತ್ತಿತ್ತು. ಹೆಚ್ಚಿನ ತೆರಿಗೆ ಈ ಬಡ ಜನರ ಮೇಲೆ ವಿಧಿಸುತ್ತಿದ್ದರು. ಇದು ಅವರ ಬದುಕಿನ ಪ್ರಶ್ನೆಯಾಗಿ ಕಾಡುತ್ತಿತ್ತು. ಈ ಜನರು ಈ ಎಲ್ಲಾ ದೌರ್ಜನ್ಯಗಳನ್ನು ಎಷ್ಟಾಗಿ ಸಹಿಸಿಕೊಂಡಿದ್ದರೆಂದರೆ ಒಂದು ದಿನ ಅಧಿಕಾರ ವರ್ಗದ ಮನುಷ್ಯ ಬೆಸ್ತ ಜನರ ಕಿವಿಯ ಒಲೆಯನ್ನು ಕಿತ್ತುಕೊಂಡು, ಕಿವಿಯನ್ನು ಕತ್ತರಿಸಿದನು. ಈ ದೌರ್ಜನ್ಯವನ್ನು ಪ್ರಶ್ನಿಸಿದ್ದಕ್ಕಾಗಿ ಈ ಅರಸರುಗಳು ಕೆಳವರ್ಗದ ಎಲ್ಲ ಜನರ ಗುಡಿಸಲನ್ನು ಸುಟ್ಟುಹಾಕಿದರು. ಇದನ್ನು (ಕಿವಿಯುದ್ಧ) ಎಂದು ಕರೆಯುತ್ತಾರೆ. ದಿಕ್ಕುಕಾಣದ ಈ ಜನ ಪೋರ್ಚ್‌ಗೀಸರ ಮೊರೆ ಹೋದರು. ಆಗ ಪೋರ್ಚುಗೀಸರು ಈ ನೊಂದ ಜನರಿಗೆ ರಕ್ಷಣೆ ಮತ್ತು ಆಶ್ರಯ ನೀಡಿದರು. ಇದರಿಂದ ಪ್ರೇರಣೆ ಹೊಂದಿದ ಈ ಜನ ಒಟ್ಟಿಗೆ ೨೦,೦೦೦ ಜನ ಮತಾಂತರ ಹೊಂದಿದರು ಎಂದು ಟುಟೀ ಕೋರಿಯನ್ ಧರ್ಮಪ್ರಾಂತ್ಯದ ಇತಿಹಾಸದಲ್ಲಿ ನಾವು ಕಾಣುತ್ತೇವೆ.

ಮನೋರಂಜಿನಿ

ದ್ದರು. ಇವರುಗಳ ಸಮುದ್ರತೀರದ ಸಂಪೂರ್ಣ ಅಧಿಕಾರ ವನ್ನು ಸ್ಥಾಪಿಸಿದ್ದರು. ಇವರ ಆಡಳಿತದಿಂದ ಕೆಳವರ್ಗದ ಬೆಸ್ತ ಜನರಿಗೆ ತುಂಬ ಕಿರುಕುಳ ಶೋಷಣೆಯಾಗುತ್ತಿತ್ತು. ಹೆಚ್ಚಿನ ತೆರಿಗೆ ಈ ಬಡಜನರ ಮೇಲೆ ವಿಧಿಸುತ್ತಿದ್ದರು. ಇದು ಅವರ ಬದುಕಿನ ಪ್ರಶ್ನೆಯಾಗಿ ಕಾಡುತ್ತಿತ್ತು. ಈ ಜನರು ಈ ಎಲ್ಲಾ ದೌರ್ಜನ್ಯಗಳನ್ನು ಎಷ್ಟಾಗಿ ಸಹಿಸಿ ಕೊಂಡಿದ್ದರೆಂದರೆ ಒಂದು ದಿನ ಅಧಿಕಾರ ವರ್ಗದ ಮನುಷ್ಯ ಬೆಸ್ತ ಜನರ ಕಿವಿಯ ಒಲೆಯನ್ನು ಕಿತ್ತುಕೊಂಡು, ಕಿವಿಯನ್ನು ಕತ್ತರಿಸಿದನು. ಈ ದೌರ್ಜನ್ಯವನ್ನು ಪ್ರಶ್ನಿಸಿದ್ದ ಕ್ಕಾಗಿ ಈ ಅರಸರುಗಳು ಕೆಳವರ್ಗದ ಎಲ್ಲ ಜನರ ಗುಡಿ ಸಲನ್ನು ಸುಟ್ಟುಹಾಕಿದರು.

ಇದನ್ನು (ಕಿವಿಯುದ್ಧ) ಎಂದು ಕರೆಯುತ್ತಾರೆ. ದಿಕ್ಕುಕಾಣದ ಈ ಜನ ಪೋರ್ಚುಗೀಸರ ಮೊರೆಹೋ ದರು. ಆಗ ಪೋರ್ಚುಗೀಸರು ಈ ನೊಂದ ಜನರಿಗೆ ರಕ್ಷಣೆ ಮತ್ತು ಆಶ್ರಯ ನೀಡಿದರು. ಇದರಿಂದ ಪ್ರೇರಣೆ ಹೊಂದಿದ ಈ ಜನ ಒಟ್ಟಿಗೆ ೨೦,೦೦೦ ಜನ ಮತಾಂತರ ಹೊಂದಿದರು ಎಂದು ಟುಟೀ ಕೋರಿಯನ್ ಧರ್ಮಪ್ರಾಂತ್ಯದ ಇತಿಹಾಸದಲ್ಲಿ ನಾವು ಕಾಣುತ್ತೇವೆ. ಅಷ್ಟ ರಲ್ಲಿ ಆಗಲೇ ಭಾರತದಲ್ಲಿ ಇಂತಹ ಅಮಾನುಷ ಕೃತ್ಯ ಗಳಿಂದ ತಪ್ಪಿಸಿಕೊಳ್ಳಲು ಅಸ್ಪೃಶ್ಯರು ಮತ್ತು ಇತರೆ ಕೆಳ ವರ್ಗದ ಜನ ಸಮಾನತೆ, ಶಿಕ್ಷಣ, ಜೀವರಕ್ಷಣೆಗಾಗಿ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದ ಘಟನೆಗಳು ನಮ್ಮ ಇತಿಹಾಸದಲ್ಲಿ ಕಾಣಬರುತ್ತವೆ. ಕೆಳಜಾತಿಯ ಜನರ ಅಭಿ ವೃದ್ಧಿಗೆ ತುಂಬ ಮಹತ್ವವನ್ನು ನೀಡಿದವರು ಕ್ರೈಸ್ತ ಮಿಶ ನರಿಗಳು ಅದರಲ್ಲೂ ವಿಶೇಷವಾಗಿ ಸಂತ ಫ್ರಾನ್ಸಿಸ್ ಕ್ಸೇವಿ ಯರ್, ಇವರು ಜೆಸ್ವಿಟ್ ಸಭೆಯಿಂದ ಇಗನೇಷಿಯಸ್ ಲಯೋಲರವರ ಆದೇಶದ ಮೇರೆಗೆ ಭಾರತದ ಸಮು ದ್ರತೀರದ ಕೆಳಜಾತಿಯ ಜನರನ್ನು ಅದರಲ್ಲೂ ವಿಶೇಷ ವಾಗಿ ಬೆಸ್ತರನ್ನು ಸಬಲರಾನ್ನಾಗಿ ಮಾಡಿದರು. ಇವರಿಗೆ ಭಾರತದ ಸಾಮಾಜಿಕ ವ್ಯವಸ್ಥೆಯ ಮೂಲಕ ಪ್ರಾರ್ಥ ನೆಗಳನ್ನು ಕಲಿಸುವುದರ ಮೂಲಕ ಭಾರತದ ಕ್ರೈಸ್ತ ಧರ್ಮಕ್ಕೆ ರೂಪವನ್ನು ನೀಡಿದರು. ಸಂತ ಕ್ಸೇವಿಯರ್ ರಿಂದ ಮತಾಂತರಗೊಂಡ ಕೆಳಜಾತಿಯ ಜನರನ್ನು ಡೀಸೋಜ, ಫೆರ್ನಾಂಡಿಸ್, ಡಿಸಿಲ್ವಾ ಎಂಬ ಫ್ರೆಂಚ್ ನಾಮದಿಂದ ಇಂದಿಗೂ ನಾವು ಮಂಗಳೂರು, ಗೋವಾ ಸಮುದ್ರತೀರಗಳಲ್ಲಿ ಕಾಣಬಹುದು. ೧೫೭೧ರ ಜೆಸವಿಟ್ ವರದಿಯ ಪ್ರಕಾರ ಭಾರತದಲ್ಲಿ ಆಗಲೇ ೧೧ ಚರ್ಚ್‌ಗಳು, ೭ ಆಸ್ಪತ್ರೆಗಳು, ೫೦,೦೦೦ ಮತಾಂತರ ಗೊಂಡ ಜನ ಇದ್ದರು ಎಂದು ತಿಳಿದು ಬರುತ್ತದೆ.

ಕ್ರೈಸ್ತಧರ್ಮಕ್ಕೆ ಹೆಚ್ಚು ಹೆಚ್ಚಾಗಿ ಅಸ್ಪೃಶ್ಯರು ಮತಾಂತರಗೊಂಡಿದ್ದು ಬ್ರಿಟಿಷರ ಕಾಲ ದಲ್ಲಿ ಬ್ರಿಟಿಷರ ಆರ್ಥಿಕ ನೀತಿ, ಸಾರ್ವ ತ್ರಿಕ ಶಿಕ್ಷಣ ಪದ್ಧತಿ ಅಸ್ಪೃಶ್ಯರನ್ನು ಸೆಳೆದು ಕೊಂಡಿತು. ಬ್ರಿಟಿಷರು ಭಾರತದಲ್ಲಿದ್ದ ಅಸ್ಪೃಶ್ಯತಾ ಪದ್ಧತಿ ಗುಲಾಮಗಿರಿ ಜೀತ ಪದ್ಧತಿಯನ್ನು ಕಟುವಾಗಿ ವಿರೋಧಿಸಿ ದರು. ೧೮೧೩ರಲ್ಲಿ ಮೆಕಾಲೆ ವರದಿ ಆಧರಿಸಿ ಸಾರ್ವತ್ರಿಕ ಶಿಕ್ಷಣ ಪದ್ಧತಿಯನ್ನು ಜಾರಿಗೊಳಿಸು ವುದರ ಮೂಲಕ ಹೆಚ್ಚಿನ ಸಂಖ್ಯೆಯ ಅಸ್ಪೃಶ್ಯರಿಗೆ ಶಿಕ್ಷಣ ಕೊಡಲು ಪರದೇಶ್ ಮಿಷನರಿಗಳು ಭಾರತಕ್ಕೆ ಬಂದರು. ಶೋಷಿತ ಜನರಿಗೆ ಶಿಕ್ಷಣ ನೀಡುವುದರ ಮೂಲಕ ಅವರನ್ನು ಗುಲಾ ಮಗಿರಿ, ಜೀತಪದ್ಧತಿ, ಅಸ್ಪೃಶ್ಯತೆಯಿಂದ ವಿಮುಕ್ತಗೊಳಿಸಿದರು.

ಕ್ರೈಸ್ತಧರ್ಮಕ್ಕೆ ಹೆಚ್ಚು ಹೆಚ್ಚಾಗಿ ಅಸ್ಪೃಶ್ಯರು ಮತಾಂತರಗೊಂಡಿದ್ದು ಬ್ರಿಟಿಷರ ಕಾಲದಲ್ಲಿ ಬ್ರಿಟಿಷರ ಆರ್ಥಿಕ ನೀತಿ, ಸಾರ್ವತ್ರಿಕ ಶಿಕ್ಷಣ ಪದ್ಧತಿ ಅಸ್ಪೃಶ್ಯರನ್ನು ಸೆಳೆದುಕೊಂಡಿತು. ಬ್ರಿಟಿಷರು ಭಾರತದಲ್ಲಿದ್ದ ಅಸ್ಪೃಶ್ಯತಾ ಪದ್ಧತಿ ಗುಲಾಮಗಿರಿ ಜೀತಪದ್ಧತಿಯನ್ನು ಕಟುವಾಗಿ ವಿರೋಧಿಸಿದರು. ೧೮೧೩ ರಲ್ಲಿ ಮೆಕಾಲೆ ವರದಿ ಆಧರಿಸಿ ಸಾರ್ವತ್ರಿಕ ಶಿಕ್ಷಣ ಪದ್ಧತಿಯನ್ನು ಜಾರಿಗೊಳಿಸು ವುದರ ಮೂಲಕ ಹೆಚ್ಚಿನ ಸಂಖ್ಯೆಯ ಅಸ್ಪೃಶ್ಯರಿಗೆ ಶಿಕ್ಷಣ ಕೊಡಲು ಪರದೇಶ್ ಮಿಷನರಿಗಳು ಭಾರತಕ್ಕೆ ಬಂದರು. ಶೋಷಿತ ಜನರಿಗೆ ಶಿಕ್ಷಣ ನೀಡುವುದರ ಮೂಲಕ ಅವ ರನ್ನು ಗುಲಾಮಗಿರಿ, ಜೀತಪದ್ಧತಿ, ಅಸ್ಪೃಶ್ಯತೆಯಿಂದ ವಿಮುಕ್ತಗೊಳಿಸಿದರು. ಈ ಸಮಯದಲ್ಲೂ ಕೇರಳದ ಸಿರಿ ಯನ್ ಕ್ರೈಸ್ತ ಕುಟುಂಬಗಳಲ್ಲಿ ಮತ್ತು ಗೋವಾದ ಬ್ರಾಹ್ಮಣ ಕ್ರೈಸ್ತ ಕುಟುಂಬಗಳಲ್ಲಿ ದಲಿತ ಕ್ರೈಸ್ತರು ಜೀತ ಪದ್ಧತಿಯಲ್ಲಿದ್ದ ಅಸ್ಪೃಶ್ಯತಾ ಮತ್ತು ಗುಲಾಮತನದಲ್ಲಿ ಹೆಚ್ಚಾಗಿ ಇದ್ದರು ಎಂದು ವರದಿಗಳು ತಿಳಿಸುತ್ತದೆ.

ಅದಕ್ಕಾಗಿಯೇ ತಿರುವಾಂಕೂರದಲ್ಲಿ ದಲಿತರ ಮತಾಂತರ ಮತ್ತು ಸಾಮಾಜಿಕ ಜಾತಿವ್ಯವಸ್ಥೆಯ ವಿರುದ್ಧ ಕ್ರಿ.ಶ. ೧೮೫೪-೧೮೯೦ರವರೆಗೆ ಹೋರಾಟವಾದದ್ದನ್ನು ಜಾಜ್ ಊಮಿನ್‌ರವರ ತಮ್ಮ ಬರಹದಲ್ಲಿ ತುಂಬ ಸ್ಪಷ್ಟ ವಾಗಿ ಗುಲಾಮಗಿರಿ ಮತ್ತು ಜೀತಪದ್ಧತಿಯಿಂದ ದಲಿ ತರನ್ನು ವಿಮುಕ್ತಿಗೊಳಿಸಲು ಅಂದಿನ ಸರ್ಕಾರದ ವಿರುದ್ಧ ದಲಿತ ಕ್ರೈಸ್ತರು ಮತ್ತು ದಲಿತರು ಹೋರಾಡಿದರೆಂದು ಅದಕ್ಕೆ ಕ್ರೈಸ್ತ ಮಿಶನರಿಗಳು ಬೆಂಬಲವಾಗಿದ್ದವೆಂದು ತಿಳಿ ಸುತ್ತಾರೆ. ಬಹುಶಃ ಇದು ದಲಿತ ಕ್ರೈಸ್ತರ ಮೊದಲ ಹೋರಾಟವಾಗಿರಬಹುದು. ಕ್ರಿ.ಶ. ೧೯೭೫ ರಲ್ಲಿ ಒಡ್ಡಿ, ೧೯೭೭ ಮಾನಿಕಮ್, ೧೮೯ ಕೊಹಿಮನ್ ಎಂಬ ಇತಿಹಾಸಕಾರರು ಕ್ರೈಸ್ತ ಮತಾಂತರ ಮತ್ತು ದಲಿತರ ಕ್ರೈಸ್ತರ ಚಳವಳಿಗಳು ಭಾರತದಲ್ಲಿ ಜಾತಿ ವ್ಯವಸ್ಥೆಯ ವಿರುದ್ಧವಾಗಿದ್ದವೆ ವಿನಃ ಬೇರೆ ಯಾವ ಕಾರಣವು ಇಲ್ಲ ಎಂದು ಸ್ಪಷ್ಟವಾಗಿ ಬರೆದಿದ್ದಾರೆ.

ನಮ್ಮ ದೇಶದಲ್ಲಿ ಜಾತಿವ್ಯವಸ್ಥೆ ಉಸಿರಿನಂತೆ ಸತ್ಯ. ಸಾಮಾಜಿಕ ಜಾತಿ ವ್ಯವಸ್ಥೆಯಿಂದ ಬಂದರೆ, ಧರ್ಮ ನಂಬಿಕೆಯಿಂದ ಬೆಳೆದು ಬಂದಿದ್ದು. ಮನುಷ್ಯನ ಘನತೆ ಗಿಂತಲೂ ಜಾತಿಯ ಘನತೆಗೆ ನಮ್ಮ ದೇಶದಲ್ಲಿ ಮಾನ್ಯತೆ ಹೆಚ್ಚಾಗಿದೆ. ಇಂದಿಗೂ ಇದು ಮಹಾರಾಷ್ಟ್ರ, ಬೀದರ್‌ನಲ್ಲಿ ದಲಿತ ನಾಯಕನನ್ನು ಅಪಮಾನಿಸುವುದು ಕಂಬಾಲಪಲ್ಲಿ ಯಲ್ಲಿ ದಲಿತರ ಜೀವಂತ ದಹನ ಮತ್ತು ಎಷ್ಟೋ ಹಳ್ಳಿ ಗಳಲ್ಲಿ ಅಸ್ಪೃಶ್ಯತೆಯನ್ನು ಆಚರಣೆ ಮಾಡುವುದರ ಮೂಲಕ ದಲಿತರಿಗೆ ಜೀವ ಭಯವನ್ನು ಉಂಟುಮಾಡುತ್ತಿರುವುದು ಮಾತ್ರವಲ್ಲದೆ ಅವರ ನಂಬಿಕೆ, ಸಂಸ್ಕೃತಿಯನ್ನು ಅಪಮಾನ ಪಡಿಸುವುದು ಮತ್ತು ಅವರನ್ನು ಪಶುಗಳಿಗಿಂತಲು ಕೀಳಾಗಿ ಕಾಣುವ ನೀಚ ಕೃತ್ಯಗಳು ನಮ್ಮ ಭಾರತೀಯ ಹಿಂದೂ ಸಂಸ್ಕೃತಿಯಲ್ಲಿ ತನ್ನ ಪೋಷಕರಿಂದ ಪರಿಪಾಲನೆ ಪಡೆಯುತ್ತಿರುವುದನ್ನು ಇಂದಿಗೂ ಸಾಬೀತುಪಡಿಸುತ್ತಿರು ವುದು ಶೋಚನೀಯ.

ಇಂತಹ ಘಟನೆಗಳಿಂದ ಹಿಂದೂ ಸಂಸ್ಕೃತಿಯು ಯಾರ ಮನಸ್ಸನ್ನು ಗೆಲ್ಲಲಾರದು. ಅದಕ್ಕೆ ಹೋಲಿಸಿ ನೋಡಿದಾಗ ಕ್ರೈಸ್ತಧರ್ಮವು ಸಮಾನತೆ ಮತ್ತು ಪ್ರತಿ ಯೊಬ್ಬ ವ್ಯಕ್ತಿಯನ್ನು ಗೌರವದಿಂದ ಕಾಣುವುದರ ಮೂಲಕ ಎಲ್ಲರ ಮನಸ್ಸನ್ನು ವಿಶೇಷವಾಗಿ ದಲಿತರ ಮನ ಸ್ಸನ್ನು ಗೆದ್ದುಕೊಂಡಿದೆ. ಎಲ್ಲಿಯವರೆಗೂ ಇಂತಹ ದೌರ್ಜ ನ್ಯಗಳು ಜಾತಿಯ ಹೆಸರಿನಲ್ಲಿ ನಡೆಯುತ್ತವಯೋ ಅಲ್ಲಿಯ ವರೆಗೂ ಮತಾಂತರ ಕ್ರಿಯೆ ಹೆಚ್ಚುತ್ತಲೇ ಇರುತ್ತದೆ. ಹಿಂದೂ ಧರ್ಮವು ಕೆಳ ಜಾತಿಯನ್ನು ಗೌರವಿಸಿದಾಗ ಮಾತ್ರ ಅದು ಹಿಂದೂ ಧರ್ಮಕ್ಕೆ ಸೀಮಿತವಾಗಿರುತ್ತದೆ. ಜಾತಿಯ ಹೆಸರಿನಲ್ಲಿ ಶೋಷಣೆಗೆ ಅದು ಅವಕಾಶ ಮಾಡಿ ಕೊಟ್ಟಾಗ ಶೋಷಿತ ಜನರು ತಮ್ಮ ರಕ್ಷಣೆಗೆ ಪರಿಹಾರ ವನ್ನು ಹುಡುಕಲೇಬೇಕಾಗುತ್ತದೆ. ಆ ಪರಿಹಾರಗಳು ಅನೇಕ ರೀತಿಯಲ್ಲಿ ಬೆಳೆಯಲು ಸಹಾಯಕವಾಗುತ್ತದೆ. ನಿರ್ದಿಷ್ಟವಾಗಿ ಹೇಳುವುದಾದರೆ ಹಿಂದೂ ಧರ್ಮದ ಜಾತಿ ವ್ಯವಸ್ಥೆಯು ಒಂದು ಜನಾಂಗದ ಜನರನ್ನು ಅಸ್ಪೃಶ್ಯರೆಂದು ತನ್ನ ಪರಿಮಿತಿಯಿಂದ ಹೊರಗಿಡುವುದರ ಮೂಲಕ, ಅವರು ಕಂಡುಕೊಳ್ಳುವ ಪರಿಹಾರಗಳಲ್ಲೂ ತನ್ನ ಸ್ವರೂಪ ವನ್ನು ಬೇರೂರುತ್ತದೆ.

ಜಾತಿಗೆ ಕ್ರೈಸ್ತನಾದರೇನು, ಮುಸ್ಲಿಂನಾದರೇನು, ಬೌದ್ಧನಾದರೇನು ಅಸ್ಪೃಶ್ಯ ಅಸ್ಪೃಶ್ಯನೇ...! ಈ ಕಾರಣ ಗಳಿಂದಲೇ ನಮ್ಮ ದೇಶದ ಕ್ರೈಸ್ತ ಮತಕ್ಕೂ ಜಾತಿಪದ್ಧತಿ ಇದೆ. ಶಿಕ್ಷಣ, ಆಸ್ತಿ ವ್ಯಾಪಾರಕ್ಕೆ ಮೋಹಗೊಂಡು ಬ್ರಾಹ್ಮ ಣರು ಕ್ರೈಸ್ತರಾದರೆ, ಜೀವರಕ್ಷಣೆ ಸಮಾನತೆ ಮತ್ತು ಘನ ತೆಯ ಜೀವನಕ್ಕಾಗಿ ಕೆಳಜಾತಿಯ ಜನ ಅದರಲ್ಲೂ ವಿಶೇ ಷವಾಗಿ ಅಸ್ಪೃಶ್ಯರು ಮತಾಂತರಗೊಂಡರು ಎಂಬುವುದು ಸತ್ಯ. ಹಾಗಾಗಿ ಬ್ರಾಹ್ಮಣನು, ಅತಿ ಶೂದ್ರನು ಕ್ರೈಸ್ತ ಧರ್ಮ ಸ್ವೀಕಾರ ಮಾಡಿದ್ದರಿಂದ ಜಾತಿಪದ್ಧತಿ ಭಾರತೀಯ ಚರ್ಚ್ ಗಳಲ್ಲಿಯೂ ಭೂತವಾಗಿ ಬಿಟ್ಟಿತು. ಜಾತಿಯ ಶೋಷಣೆ ಯಿಂದ ತಪ್ಪಿಸಿಕೊಳ್ಳಲು ಮತಾಂತರಗೊಂಡ ಅಸ್ಪೃಶ್ಯನಿಗೆ ಈಗ ಚರ್ಚ್ ಮತ್ತು ಸಮಾಜ ಎರಡು ಕಡೆಯಿಂದ ಶೋಷಣೆ ಪ್ರಾರಂಭವಾಯಿತು. ಇಲ್ಲಿ ಜಾತಿಯೇ ಧರ್ಮ ಕ್ಕಿಂತ ಮುಖ್ಯವಾಗಿ ಕಂಡು ಬಂದಿರುವುದರಿಂದ ಭಾರತದ ದಲಿತ ಕ್ರೈಸ್ತರಿಗೂ ಜಾತಿ ಅಂಟಿಕೊಂಡಿತು ಎಂದು ಜೀವಂತ ಘಟನೆಗಳು ಮತ್ತು ಅನೇಕ ವರದಿಗಳು ಮುಖ್ಯ ವಾಗಿ ಕಾಕ ಕಾಲೇಲ್ಕರ್, ಮಂಡಲ್ ಕಮೀಷನ್‌ನಂತಹ ಪ್ರಸಿದ್ಧ ವರದಿಗಳು ಕೂಡ ಭಾರತದ ಕ್ರೈಸ್ತರಲ್ಲಿ ಜಾತಿ ಬೇಧವಿದೆ ಎಂದು ಪ್ರಸಿದ್ಧ ಪಡಿಸಿದವು. ಕ್ರೈಸ್ತಧರ್ಮಕ್ಕೆ ಜಾತಿಯ ವ್ಯವಸ್ಥೆ ಇಲ್ಲವೆನ್ನುವುದು ಸತ್ಯ. ಆದರೆ ಭಾರತ ದಲ್ಲಿ ಕ್ರೈಸ್ತಧರ್ಮಕ್ಕೆ ಜಾತಿಪದ್ಧತಿ ಅಂಟಿಕೊಂಡಿದೆ ಎನ್ನುವುದು ಅದಕ್ಕಿಂತಲೂ ಸತ್ಯ ಎಲ್ಲ ದೃಷ್ಟಿಕೋನಗ ಳಿಂದಲೂ ಭಾರತದಲ್ಲಿ ದಲಿತ ಕ್ರೈಸ್ತರಿಗೆ ಅನ್ಯಾಯವಾಗು ತ್ತಿದೆ ಎಂಬುವುದು ಈ ಎರಡಕ್ಕಿಂತಲೂ ಸತ್ಯ.

ನಮ್ಮ ಸಂವಿಧಾನದ ಪೀಠಿಕೆಯಲ್ಲಿ ಭಾರತವು 'ಜಾತ್ಯತೀತ' ರಾಷ್ಟ್ರವೆಂದು ಹೇಳುತ್ತದೆ. ಆದರೆ ಇನ್ನೊಂ ದೆಡೆ ಭಾರತ ದೇಶವನ್ನು ಹಿಂದೂ ದೇಶವೆಂದು ಪರಿಗ 'ಣಿಸುತ್ತದೆ. ಸಿಖ್ ಮತ್ತು ಬೌದ್ಧಧರ್ಮಗಳು ಹಿಂದು

ಧರ್ಮದ ಮೂಲಗಳೆಂದು ತಿಳಿಸಿ ಅನುಚ್ಛೇಧ ೨೫ (ಉಪಕಾಲಂ ೨ಬಿ)ಯಲ್ಲಿ ಗುರ್ತಿಸುವುದರ ಮೂಲಕ ರಾಷ್ಟ್ರಪತಿ ೧೯೫೦ರ ಆದೇಶ ಪ್ಯಾರ ೩ರಲ್ಲಿ ಸಿಖ್ ಮತ್ತು ಬೌದ್ಧ ಧರ್ಮವನ್ನು ಪರಿಶಿಷ್ಟ ಜಾತಿಯೆಂದು ಗುರ್ತಿಸುವುದರ ಮೂಲಕ ಈ ಧರ್ಮಗಳಿಗೆ ಸಮಾನ ಅವಕಾಶ ಒದಗಿಸಿದೆ. ಕ್ರೈಸ್ತಧರ್ಮವನ್ನು ಮತ್ತು ಮುಸ್ಲಿಂ ಧರ್ಮವನ್ನು ಇದರ ಪರಿಮಿತಿಯಲ್ಲಿ ಅವರನ್ನು ಹೊರತುಪಡಿಸುತ್ತದೆ. ಕ್ರೈಸ್ತಧರ್ಮ ಪರದೇಶಿಯ ಧರ್ಮ ಎಂಬ ನಂಬಿಕೆ ನಮ್ಮ ದೇಶದಲ್ಲಿರಬಹುದು, ಆದರೆ ಮತಾಂತರಗೊಂಡ ಕ್ರೈಸ್ತರು ನಮ್ಮ ನೆಲದವರು, ನಮ್ಮ ದೇಶದ ಪ್ರಜೆಗಳು. ಪರದೇಶದ ಎಷ್ಟೊ ಸಂಸ್ಕೃತಿಗಳಿಗೆ ಹಾವಭಾವಗಳಿಗೆ ನಮ್ಮ ದೇಶ ಮಾರುಹೋಗಿರುವಾಗ, ಸಮಾನತೆಗಾಗಿ ಪರದೇಶದ ಧರ್ಮಕ್ಕೆ ಮಾರು ಹೋಗಿರುವುದರಲ್ಲಿ ತಪ್ಪೇನಿಲ್ಲ.

ಇವರು ಭಾರತದ ಪ್ರಜೆಗಳಾಗಿರುವ ಕಾರಣ ನಮ್ಮ ಸಂವಿಧಾನದ ಅನುಚ್ಛೇಧ ೨೫ರ ಧಾರ್ಮಿಕ ಹಕ್ಕಿನ ಮೂಲಕ ಮತಾಂತರಗೊಂಡರೂ ಸಹ ಅವರ ಸಮಾನತೆ ಮತ್ತು ಜೀವಿಸುವ ಹಕ್ಕನ್ನು ಉಲ್ಲಂಘಿಸುತ್ತಿರುವುದು ಸಮಂಜಸವಲ್ಲ. ಇನ್ನೊಂದೆಡೆ ಅನುಚ್ಛೇಧ ೨೪೦ರಲ್ಲಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಇತರ ವರ್ಗಗಳನ್ನು ರಾಷ್ಟ್ರಪತಿಯವರು ಗುರ್ತಿಸಬೇಕು. ಅನುಚ್ಛೇಧ ೧೫(೪)ರಲ್ಲಿ ಇವರ ಉನ್ನತಿಗಾಗಿ ಶ್ರಮಿಸಬೇಕು. ಅನುಚ್ಛೇಧ ೩೪೧ರಲ್ಲಿ ರಾಷ್ಟ್ರಪತಿಯವರು ಪರಿಶಿಷ್ಟ ಜಾತಿ ಪಂಗಡ ಬುಡಕಟ್ಟಿನವರನ್ನು ಗುರ್ತಿಸಬೇಕು ಅನುಚ್ಛೇಧ ೧೫(೪) ಇವರ ಉನ್ನತಿಗಾಗಿ ಶ್ರಮಿಸಬೇಕು ಎಂದು ಅಧಿಕಾರವನ್ನು ನೀಡುತ್ತದೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರು ಜಾತಿಯ ಹೆಸರಿನಲ್ಲಿ ಅಸ್ಪೃಶ್ಯತೆ ಜಾತಿ ನಿಂದನೆ ಮತ್ತು ಸಾಮಾಜಿಕವಾಗಿಯೂ, ಶೈಕ್ಷಣಿಕವಾಗಿಯೂ ಹಿಂದೂಳಿದವರು ಅದಕ್ಕಾಗಿ ಅವರಿಗೆ ವಿಶೇಷ ಪ್ರಾಧಾನ್ಯತೆಯನ್ನು ನಮ್ಮ ಸಂವಿಧಾನದಲ್ಲಿ ನೀಡಲಾಗಿದೆ ಆದರೆ ಇತರೆ ಹಿಂದುಳಿದ ವರ್ಗಗಳು ಕೇವಲ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರು ಇವರಿಗೆ ಜಾತಿಯ ಅವಮಾನಗಳು ಇರುವುದಿಲ್ಲವೆಂಬ ಕಾರಣಕ್ಕಾಗಿ ಇವರನ್ನು ಜಾತಿಯಿಂದ ಹೊರತುಪಡಿಸಿದೆ. ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಇತರೆ ಹಿಂದುಳಿದ ವರ್ಗಗಳ ಪಟ್ಟಿಯನ್ನು ನೋಡಿದಾಗ ದಲಿತ ಕ್ರೈಸ್ತರನ್ನು 'ಪರಿಶಿಷ್ಟ ಜಾತಿಯಿಂದ ಮತಾಂತರಗೊಂಡ ಕ್ರೈಸ್ತರು' ಎಂದು ಇವರನ್ನು ಇತರ ಹಿಂದುಳಿದ ವರ್ಗಗಳೆಂದು ಗುರುತಿಸಲಾಗಿದೆ. ಸರ್ಕಾರ ಯಾವ ಅನುಚ್ಛೇಧದ ಪ್ರಕಾರ ಪರಿಶಿಷ್ಟಜಾತಿಯ ಹಣೆಪಟ್ಟಿಯನ್ನು ಕ್ರೈಸ್ತರು ಹೊತ್ತುಕೊಂಡರು ಸಹ 'ಮತಾಂತರಗೊಂಡವರು' ಎಂಬ ಉದ್ದೇಶದಿಂದ ಈ ಪಟ್ಟಿಯಲ್ಲಿ ಸೇರಿಸಲಾಗಿದೆ.

ಇವರನ್ನು ಈ ಪಟ್ಟಿಯಲ್ಲಿ ಸೇರಿಸುವುದರ ಮೂಲಕ ಅವರ ಮೇಲೆ ಜಾತಿಯ ಹೆಸರಿನಲ್ಲಿ ಆಗುತ್ತಿರುವ ದೌರ್ಜನ್ಯಗಳಿಗೆ 'ಯಾವ ಕಾನೂನಿನ ಪ್ರಕಾರ ಪರಿಹಾರವನ್ನು ಒದಗಿಸಿಕೊಡುತ್ತದೆ? ಎಂಬ ಪ್ರಶ್ನೆ ಸಹಜವಾಗಿ ಮೂಡಿ ಬರುವಂತದ್ದು. ಒಂದು ಕಡೆ ಜಾತಿಪದ್ಧತಿ ಹಿಂದೂಧರ್ಮದ ಮೂಲ ಎಂದು ಹೇಳಿದರೆ ಇನ್ನೊಂದೆಡೆ ಸರ್ವೋಚ್ಛನ್ಯಾಯಾಲಯ ತನ್ನ ಹಲವಾರು ತೀರ್ಪುಗಳಲ್ಲಿ ಜಾತಿಗೂ ಧರ್ಮಕ್ಕೂ ಯಾವುದೇ ಸಂಬಂಧವಿಲ್ಲ ಜಾತಿ ಪದ್ಧತಿ ಸಾಮಾಜಿಕವ್ಯವಸ್ಥೆಯಿಂದ ಬಂದದ್ದು ಒಬ್ಬ ವ್ಯಕ್ತಿ ಯಾವುದೇ ಧರ್ಮ ಸ್ವೀಕಾರ ಮಾಡುವುದರಿಂದ ಅವನು ಜಾತಿ ವ್ಯವಸ್ಥೆಯಿಂದ ತಪ್ಪಿಸಿಕೊಳ್ಳುತ್ತಾನೆ ಎಂಬುವುದು ಸುಳ್ಳು. ಇಲ್ಲಿ ಜಾತಿ ಪ್ರಮುಖವಾಗಿದೆಯೇ ಹೊರತು ಧರ್ಮವಲ್ಲ. ಅದಕ್ಕಾಗಿ ಅವನು ಯಾವುದೇ ಧರ್ಮಕ್ಕೂ ಸೇರಿದರು ಅವನು ತನ್ನ ಜಾತಿಯಲ್ಲಿಯೇ ಮುಂದುವರೆಯುತ್ತಾನೆ ಎಂದು ತಿಳಿಸುತ್ತದೆ. ಈ ರೀತಿಯ ವಿರುದ್ಧ ಅಭಿಪ್ರಾಯಗಳು ನಮ್ಮ ದೇಶದ ಆಡಳಿತ ಮತ್ತು ನ್ಯಾಯಾಂಗದಲ್ಲಿ ಕಂಡುಬರುವುದರ ಮೂಲಕ ರಾಷ್ಟ್ರದಲ್ಲಿಯೇ ದಲಿತ ಕ್ರೈಸ್ತರ ಗುರ್ತಿನಲ್ಲಿ ಗೊಂದಲವಿದೆ ಎಂದು ಸ್ಪಷ್ಟವಾಗುತ್ತದೆ. ಸರ್ಕಾರವೇ ಸೃಷ್ಟಿಸಿದ ಈ ಗೊಂದಲ ಅವರ ಘನತೆಯಿಂದ ಜೀವಿಸುವ ಹಕ್ಕಿಗೆ ಚ್ಯುತಿಯನ್ನುಂಟುಮಾಡಿದೆ. ಮತ್ತು ಅವರನ್ನು ಪುನಃ ಹಿಂದು ಧರ್ಮಕ್ಕೆ ಮತಾಂತರಗೊಳಿಸುತ್ತಿದೆ. ರಾಜ್ಯ ಜಾತ್ಯತೀತ ಪದಕ್ಕೆ ಬದಲಾಗಿ ಕೋಮುವಾದಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದೆ ಎಂಬುವುದು ಇದರಿಂದ ಸ್ಪಷ್ಟವಾಗುತ್ತದೆ.

ಇನ್ನೊಂದು ದೃಷ್ಟಿಕೋನದಲ್ಲಿ 'ದಲಿತ ಕ್ರೈಸ್ತರ' ಹೋರಾಟಕ್ಕೆ ಸರ್ಕಾರದ ಉತ್ತರವೇನೆಂದರೆ ಕ್ರೈಸ್ತಧರ್ಮಕ್ಕೆ ಜಾತಿಪದ್ಧತಿ ಇಲ್ಲ ಒಂದು ವೇಳೆ ಭಾರತದಲ್ಲಿ ಕ್ರೈಸ್ತ ಧರ್ಮಕ್ಕೆ ಜಾತಿಯನ್ನು ಅಂಟಿಸುವುದರಿಂದ ಅದು ಅಂತಾರಾಷ್ಟ್ರೀಯ ವಿವಾದಕ್ಕೆ ಕಾರಣವಾಗಬಹುದೆಂಬ ಹೇಳಿಕೆಯ ಭಯವಿದೆ. ಇದಕ್ಕೆ ಉತ್ತರವಾಗಿ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಭಾರತದಲ್ಲಿ ಜಾತಿವ್ಯವಸ್ಥೆ ಇದೆ ಎನ್ನುವುದು ತಿಳಿದಿರುವ ವಿಷಯ, ಪೋಪ್ ಜಾರ್ಜ್ ೧೫ (೧೬೨೧ -೧೬೨೩) ಭಾರತದ ಚರ್ಚ್‌ಗಳಲ್ಲಿ ರೂಢಿಸಿಕೊಳ್ಳಬಹುದೆಂಬು ಸಮ್ಮತಿಯನ್ನು ನೀಡಿದ್ದಾರೆ. ಅದರ ಪ್ರಕಾರವೇ ೧೫೯೯ರಲ್ಲ ಡೈಂಪರ್ ಸಭೆ ಮತ್ತು ೧೬೦೬ರಲ್ಲಿ ಗೋವಾದ ಕ್ರೈಸ್ತ ಸಭೆಗಳು ಈ ಆದೇಶವನ್ನು ಮರು ಪ್ರಕಟಣೆ ಮಾಡಿ ಜಾತಿ ಪದ್ಧತಿಯನ್ನು ಭಾರತದ ಚರ್ಚ್‌ಗಳಲ್ಲಿ ಅಳವಡಿಸಿದರು. ಪೋಪ್ ಜಾನ್ ಪಾಲ್-೨ ಕ್ರಿಸ್ತಜಯಂತಿ ೨೦೦೨ ವರ್ಷದ ಆಚರಣೆಯಲ್ಲಿ ಭಾರತದ ಧರ್ಮಗುರುಗಳಿಗೆ ಭಾರತದ ಚರ್ಚ್‌ಗಳಲ್ಲಿ ಜಾತಿ ಭೇದ ಇರಕೂಡದು ಎಲ್ಲರೂ ಯೇಸುವಿನ ಪ್ರೀತಿ ಮತ್ತು ಸಮಾನತೆಯನ್ನು ಎತ್ತಿಹಿಡಿಯಬೇಕೆಂದು ಅವರು ಆದೇಶ ನೀಡಿದ್ದಾರೆ ಹಾಗೆಯೇ ಜಾತಿಯ ಮತ್ತು ಬಣ್ಣದ ಹೆಸರಿನಲ್ಲಿ ಮಾನವ ಹಕ್ಕುಗಳು ಉಲ್ಲಂಘನೆಯಾಗಬಾರದೆಂದು ಅಂತರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ತಿಳಿಸುತ್ತದೆ. ಇಂತಹ ಉದಾಹರಣೆಯನ್ನು ನಾವು ಗಮನಿಸುವಾಗ ದಲಿತ ಕ್ರೈಸ್ತರನ್ನು ಜಾತಿವ್ಯವಸ್ಥೆಯಿಂದ ತಪ್ಪಿಸಿ ಅವರ ಮಾನವ ಹಕ್ಕುಗಳನ್ನು ರಕ್ಷಿಸುವುದಕ್ಕಾಗಿಯೇ ಭಾರತದ ಕ್ರೈಸ್ತಧರ್ಮಕ್ಕೆ ಜಾತಿಯನ್ನು ಸೇರಿಸುವುದು ಅಂತಾರಾಷ್ಟ್ರೀಯ ಕಲಹಕ್ಕೆ ಕಾರಣವಾಗತದು. ಒಂದು ವೇಳೆ ಹಾಗೆಯೇ ಆದರೆ ಕ್ರೈಸ್ತನ ವಿಚಾರಗಳಿಗೆ ಕ್ರೈಸ್ತ ಧರ್ಮ ವಿರುದ್ಧವಾಗಿದೆ ಎಂಬ ಕಳಂಕ ಕ್ರೈಸ್ತ ಧರ್ಮಕ್ಕೆ ಬರುವ ಸಾಧ್ಯತೆ ಇದೆ.

ನಮ್ಮ ಸಂವಿಧಾನದ ಅನುಚ್ಛೇಧ ೨೫ರ ಧಾರ್ಮಿಕ ಹಕ್ಕಿನ ಮೂಲಕ ಮತಾಂತರಗೊಂಡರೂ ಸಹ ಅವರ ಸಮಾನತೆ ಮತ್ತು ಜೀವಿಸುವ ಹಕ್ಕನ್ನು ಉಲ್ಲಂಘಿಸುತ್ತಿರುವುದು ಸಮಂಜಸವಲ್ಲ. ಇನ್ನೊಂದೆಡೆ ಅನುಚ್ಛೇಧ ೨೪೦ರಲ್ಲಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಇತರ ವರ್ಗಗಳನ್ನು ರಾಷ್ಟ್ರಪತಿಯವರು ಗುರ್ತಿಸಬೇಕು. ಅನುಚ್ಛೇಧ ೧೫(೪)ರಲ್ಲಿ ಇವರ ಉನ್ನತಿಗಾಗಿ ಶ್ರಮಿಸಬೇಕು. ಅನುಚ್ಛೇಧ ೩೪೧ರಲ್ಲಿ ರಾಷ್ಟ್ರಪತಿಯವರು ಪರಿಶಿಷ್ಟ ಜಾತಿ ಪಂಗಡ ಬುಡಕಟ್ಟಿನವರನ್ನು ಗುರ್ತಿಸಬೇಕು ಅನುಚ್ಛೇಧ ೧೫(೪) ಇವರ ಉನ್ನತಿಗಾಗಿ ಶ್ರಮಿಸಬೇಕು ಎಂದು ಅಧಿಕಾರವನ್ನು ನೀಡುತ್ತದೆ.

ಎಲ್ಲಾ ರೀತಿಯಿಂದ ಗಮನಿಸಿದಾಗಲೂ ದಲಿತ ಕ್ರೈಸ್ತರನ್ನು 'ಪರಿಶಿಷ್ಟ ಜಾತಿ' ಎಂದು ಗುರ್ತಿಸಲು ಯಾವುದೇ ಅಡ್ಡಿಗಳು ಇಲ್ಲ. ದಲಿತ ಕ್ರೈಸ್ತರ ಹೋರಾಟ ಸರಿಸುಮಾರು ಶತಶತಮಾನಗಳಿಂದ ನಡೆಯುತ್ತಲೇ ಬರುತ್ತಿದೆ. ಇದು ನಮ್ಮ ಸಂಸತ್ತಿನಲ್ಲಿ ಹಾವು ಏಣಿ ಆಟದಂತಾಗಿದೆ. ದಲಿತ ಕ್ರೈಸ್ತರು ಅವರನ್ನು ತಮ್ಮ ಜಾತಿಯಲ್ಲಿ ಗುರ್ತಿಸಲು ಕೇಳುತ್ತಿರುವುದು ಕೇವಲ ಶಿಕ್ಷಣ ಮತ್ತು ಉದ್ಯೋಗದ ಉದ್ದೇಶದಿಂದಲ್ಲ ಅದಕ್ಕಿಂತಲೂ ಮುಖ್ಯವಾಗಿ ಅವರ ಮೇಲೆ ಆಗುತ್ತಿರುವ ಜಾತಿ ನಿಂದನೆ ಮತ್ತು ಇತರೆ ದೌರ್ಜನ್ಯಗಳನ್ನು ತಪ್ಪಿಸಿ ಮಾನವ ಹಕ್ಕುಗಳನ್ನು ಕಾಪಾಡಬೇಕಾಗಿದೆ. ಅಂದು ಪರದೇಶೀಯ ಮಿಷನರಿಗಳಿಂದ ಜೀವ ರಕ್ಷಣೆ ಪಡೆದ ಜನ ಇಂದು ಸ್ವಜನರಿಂದ ಜೀವಾಪಾಯದಲ್ಲಿರುವುದು ವಿಪರ್ಯಾಸ. ಸರ್ಕಾರವಾಗಲಿ, ಸಮಾಜವಾಗಲಿ ಹಲವಾರು ತಂತ್ರಗಳಿಂದ ಅವರ ಹಕ್ಕುಗಳನ್ನು ವಂಚಿಸಿದಷ್ಟು ವರ್ಷ ಹೋರಾಟಗಳು ಗಂಭೀರ ಸ್ವಭಾವ ತಾಳುತ್ತವೆ. ಅನೇಕ ಹೋರಾಟಗಳು ಚಳವಳಿಗಳು ಉಪವಾಸ ಸತ್ಯಾಗ್ರಹಗಳು ಮೊಕದ್ದಮೆಗಳು ವರದಿಗಳು ಬರಹಗಳು ಹಲವಾರು ವರ್ಷಗಳಿಂದ ಈ ಅನ್ಯಾಯದ ವಿರುದ್ಧ ಧ್ವನಿ ಎತ್ತುತ್ತಲೇ ಇವೆ.

ಇತ್ತೀಚೆಗೆ ದೆಹಲಿಯ ಜಂತರ್ ಮಂತರ್‌ನಲ್ಲಿ ೧೬ ರಾಜ್ಯಗಳ ೧೫ ದಿನಗಳ ಉಪವಾಸ ಸತ್ಯಾಗ್ರಹ ಕೂಡ ಸ್ವಾತಂತ್ರ್ಯ ಪೂರ್ವದಿಂದಲೂ ಇದುವರೆಗೂ ಅನ್ಯಾಯ ಈ ಜನರ ಮೇಲೆ ಅನ್ಯಾಯ ಈ ಜನರ ಮೇಲೆ ಅನ್ಯಾಯ ಆಗುತ್ತಲೇ ಇದೆ ಎಂದು ತಿಳಿಸುತ್ತದೆ. ಇದನ್ನು ಸರಿಪಡಿಸಲು ಯಾವ ರಾಜಕೀಯ ಅಧಿಕಾರ ವರ್ಗಗಳು ಮುಂದು ಬರುತ್ತಿಲ್ಲ. ಕ್ರಿಸ್ತನ ಶಾಂತಿ ಮತ್ತು ಕ್ಷಮೆಯನ್ನು ಪರಿಪಾಲಿಸುತ್ತಿರುವ ಈ ಜನ ಹೋರಾಟಕ್ಕೆ ಇಳಿಯಬೇಕಾಗುತ್ತದೆ. ತಮಿಳುನಾಡಿನ ಆರ್ಚ್ ಬಿಷಪ್ ಚಿನ್ನಪ್ಪರವರು ಜಂತರ್ ಮಂತರ್ ಸತ್ಯಾಗ್ರಹದಲ್ಲಿ ತಿಳಿಸಿದಂತೆ ಸರ್ಕಾರ ದಲಿತ ಕ್ರೈಸ್ತರನ್ನು ಪರಿಶಿಷ್ಟ ಜಾತಿಯೆಂದು ಗುರ್ತಿಸಲು ಒಪ್ಪದಿದ್ದರೆ ಅದಕ್ಕೆ ಕಾರಣ ತಿಳಿಸಲಿ ಇಲ್ಲವಾದರೆ ನಾವು ಎಷ್ಟರವರೆಗೆ ಕಾಯುತ್ತೇವೆ. ಎಷ್ಟೋ ಕ್ರೈಸ್ತ ದಲಿತರ ತಲೆಮಾರುಗಳು ಜಾತಿ ವ್ಯವಸ್ಥೆಯ ಶೋಷಣೆ ಅವಮಾನಗಳಲ್ಲಿಯೇ ಮುಗಿದಿರುವಾಗ ನಾವು ಇನ್ನೂ ಎಲ್ಲಿಯವರೆಗೆ ನಮ್ಮ ಹಕ್ಕುಗಳಿಗಾಗಿ ಕಾಯಬೇಕು.........? ಇದು ನಮ್ಮ ಇತಿಹಾಸವನ್ನು ಅವಮಾನ ಪಡಿಸುವ ಕೃತ್ಯವಲ್ಲವೇ?

□

ಜಾತಿಯಾಚೆಗಿನವರು ಮತ್ತು ಕೆಳಜಾತಿಗಳು

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಸಾಮಾಜಿಕವಾಗಿ ಅವಮಾನಿತರಾದ ಈ ಧೂಂಡ ಹಳ್ಳಿಗರು ಒಂದು ಟೀ ಅಥವಾ ತರಕಾರಿ ಅಂಗಡಿ ತೆರೆಯಲು ಸಾಧ್ಯವೇ? ಮುಖ್ಯ ಸಂಗತಿ ಎಂದರೆ ಗ್ರಾಮೀಣ ಪ್ರದೇಶದಲ್ಲಿ ಸಣ್ಣ ಉದ್ಯಮವೆಂದರೆ ಆಹಾರ ಪದಾರ್ಥಗಳ ಅಂಗಡಿಗಳಷ್ಟೆ. ಯಾರು ಒಂದು ಟೀ ಅಂಗಡಿ ಅಥವಾ ಪಾನ್ ಶಾಪ್ ತೆರೆಯಲು ಸಾಧ್ಯವಿಲ್ಲದವರು ಒಂದು ಕಬ್ಬಿಣದ ಅಂಗಡಿ, ಬಟ್ಟೆಯಂಗಡಿ ತೆರೆಯುವುದು ದೂರದ ಕನಸಷ್ಟೆ. ಮತ್ತೊಂದೆಡೆ ಎಷ್ಟೇ ಬಡಪಾಯಿಯಾದರೂ ಕೆಳಜಾತಿಯವರು ಸಣ್ಣ ಪುಟ್ಟ ವ್ಯಾಪಾರವನ್ನು ಮಾಡಿಕೊಳ್ಳಲು ಸಮಾಜ ಸಾಕಷ್ಟು ಅವಕಾಶಗಳನ್ನು ಒದಗಿಸುತ್ತದೆ. ಅಂದರೆ ಇದುವೇ ಜಾತಿಯಾಚೆಗಿರುವವರಿಗೂ ಮತ್ತು ಕೆಳಜಾತಿಯವರಿಗೂ ಇರುವ ವ್ಯತ್ಯಾಸ. ಈ ಬಲವಾದ ಕಾರಣದಿಂದಾಗಿಯೇ ಸಕಾರಾತ್ಮಕ ಕ್ರಿಯೆ/ವೈವಿಧ್ಯತೆ ನೀತಿಗೆ ಹಕ್ಕಿಲ್ಲವರಾಗಿದ್ದಾರೆ.

ಅನೇಕ ಮಂದಿ ಸಮಾಜಶಾಸ್ತ್ರಜ್ಞರು, ರಾಜಕೀಯ ಸಿದ್ಧಾಂತಿಗಳು ಮತ್ತು ಪತ್ರಕರ್ತರು ದಲಿತರನ್ನು ಕೆಳಜಾತಿಯವರೆಂದು ವಿವರಿಸಿಬಿಡುತ್ತಾರೆ. ಈ ಜಾತಿಯ ಸರ್ವನಾಮದಡಿ ಶೂದ್ರರು ಮತ್ತು ದಲಿತರು ಒಂದೇ ಸಾಮಾಜಿಕ ವಿಭಾಗವಾಗಿರುವುದರಿಂದ ಅವರೆಲ್ಲಾ ಒಂದೇ ರೀತಿಯಾಗಿ ಅಪಮಾನಕ್ಕೊಳಗಾದವರೆಂದು ಭಾವಿಸಲಾಗಿದೆ. ಈ ತರ್ಕದಡಿ ಮೀಸಲಾತಿ/ಸಕಾರಾತ್ಮಕ ಕ್ರಿಯೆ/ವೈವಿಧ್ಯತೆಯ ನೀತಿ ಈ ಎಲ್ಲಾ ಕೆಳಜಾತಿಗಳನ್ನು ಒಳಗೊಳ್ಳಬೇಕೆಂದು ಅರ್ಥೈಸಲಾಗುತ್ತದೆ. ಈ ಕುತರ್ಕವು ದಲಿತರನ್ನು ತೀವ್ರವಾಗಿ ಬಾಧಿಸುತ್ತದೆ. ಕಾರಣ ಕೆಳಜಾತಿಗಳೆಂದು ಸಾರ್ವಜನಿಕ ನೀತಿಯಲ್ಲಿ ಪಾಲು ಪಡೆಯುವವರು ಎಂದೂ ದಲಿತರಂತೆ ತಾರತಮ್ಯವನ್ನು ಎದುರಿಸುವುದಿಲ್ಲ. ಆದ್ದರಿಂದ ಸಾರ್ವಜನಿಕ ನೀತಿ ವಿವಾದಕ್ಕೊಳಗಾಗುತ್ತದೆ.

ದಲಿತರಿಗಾಗುವ ಈ ತಾರತಮ್ಯವನ್ನು ಬೇರ್ಯಾವುದೇ ತಾರತಮ್ಯ ನೀತಿಯೊಂದಿಗೆ ಹೋಲಿಸಬಹುದೇ? ಅಥವಾ ಅಸ್ಪೃಶ್ಯತೆ ಎನ್ನುವುದಕ್ಕಿಂತ ಹೆಚ್ಚಿನ ಅವಮಾನ ಬೇರೊಂದು ಇದೆಯೇ? ಅಸ್ಪೃಶ್ಯತೆಯು ಅಸ್ಪೃಶ್ಯರನ್ನು ಸಾಮಾಜಿಕವಾಗಿ ದೂರೀಕರಿಸುತ್ತದೆ. ರಾಜ್ಯಾಂಗದ ಮಧ್ಯಪ್ರವೇಶ ಇಲ್ಲದಿದ್ದಲ್ಲಿ ಈ ಸಾಮಾಜಿಕ ದೂರೀಕರಿಸುವಿಕೆಯಿಂದ ದಲಿತರಿಗೆ ರಕ್ಷಣೆ ದೊರೆಯುವುದಿಲ್ಲ.

ಹೀಗಿರುವಲ್ಲಿ ದಲಿತರು ಬೀದಿ ಬದಿಯಲ್ಲಿ ಚಾಹ ಮಾರುವುದು ಅಥವಾ ಸಣ್ಣ ಅಂಗಡಿಗಾರರಾಗಿರುವ ಬದಲು, ಅವರು ಹೇಗೆ ಜಿಲ್ಲಾಧಿಕಾರಿಗಳಾಗಬಹುದು, ಇಂಜಿನಿಯರ್, ಮಂತ್ರಿಗಳು ಮತ್ತು ವೈದ್ಯರಾಗಬಹುದು ಎಂಬುದನ್ನು ನಾವು ಯೋಚಿಸಬೇಕಾಗಿದೆ. ರಾಜಸ್ಥಾನದ ಬಾರ್‌ಮರ್‌ನಲ್ಲಿ ಪ್ರವಾಸ ಮಾಡಿದ ನನ್ನ ಅನುಭವವನ್ನು ಜೆ.ಎನ್.ಯುನ ಯುವ ದಲಿತ ವಿದ್ವಾಂಸನಾದ ಸುನಿಲಕುಮಾರ್ ಸುಮನ್ ಜತೆ ಹಂಚಿಕೊಳ್ಳುತ್ತಿದ್ದೆ. ನಮ್ಮ ಸಂಭಾಷಣೆ ಮುಗಿಯುತ್ತಿದ್ದಂತೆ ಅಂತಹದ್ದೇ ಅನುಭವವನ್ನು ಆತ ಹೇಳಲಾರಂಭಿಸಿದ.

ಸುನಿಲನ ಪ್ರಕಾರ ಅಮೂಲ್ಯ ದಾಸ್ ಗುಪ್ತಾ ಅಸ್ಪೃಶ್ಯ ಎನ್ನೋ ಒಂದು ಕಥೆಯನ್ನು ಬರೆದಿದ್ದಾನೆ. ಅಮೂಲ್ಯನ ಕಲ್ಪನೆಯಲ್ಲಿ ಬಾಲ ಗಂಗಾಧರ ವೆಂಕಟ್ ನಾರಾಯಣ ಎನ್ನೋ ಒಬ್ಬ ನಂಬೂದರಿ ಬ್ರಾಹ್ಮಣ, ತನ್ನ ದೈನಂದಿನ ವಿಧಿಯಂತೆ ನದಿಯಲ್ಲಿ ಸ್ನಾನ ಮಾಡಲು ಹೋಗುತ್ತಿದ್ದ. ಒಂದು ದಿನ ಗಂಗಾಧರ ಸ್ನಾನ ಮುಗಿಸಿ ವಾಪಸ್ಸಾಗುತ್ತಿದ್ದಾಗ ಕುಮಾರಪ್ಪ ಎನ್ನೋ ಒಬ್ಬ ಅಸ್ಪೃಶ್ಯ ತನ್ನತ್ತ ಬರುವುದನ್ನು ಕಾಣುತ್ತಾನೆ. ಜಾತಿ ಪದ್ಧತಿಯ ಪ್ರಕಾರ ಆತ ತನ್ನ ಬಗ್ಗೆ ಗಮನ ಸೆಳೆಯಲು ತನ್ನ ಕುತ್ತಿಗೆಗೆ ಒಂದು ಸಣ್ಣ ಗಂಟೆಯನ್ನು ಕಟ್ಟಿರುತ್ತಾನೆ. ಈ ಗಂಟೆಯ ನಾದ ದಲಿತೇತರರಿಗೆ ಎಚ್ಚರಿಕೆಯ ಗಂಟೆಯಾಗಿ ಮೈಲಿಗೆಯಿಂದ ತಪ್ಪಿಸಿಕೊಳ್ಳುತ್ತಿದ್ದರು. ಅಂದು ಆ ಗಂಟೆಯಿಂದ ಯಾವುದೇ ಶಬ್ದ ಬರಲಿಲ್ಲ. ಗಂಗಾಧರನ ಬಗ್ಗೆ ಯಾವುದೇ ಅರಿವಿಲ್ಲದೆ ಕುಮಾರಪ್ಪ ನದಿಯತ್ತ ಮುಂದುವರೆಯುತ್ತಿದ್ದ.

ಕುಮಾರಪ್ಪ ಮೈಲಿಗೆ ಮಾಡುವ ಸಲುವಾಗಿಯೇ ತನ್ನತ್ತ ಬರುತ್ತಿದ್ದಾನೆಂದು ಭಾವಿಸಿದ ಗಂಗಾಧರ್ ಕುಮಾರಪ್ಪನತ್ತ ಕೂಗಿಕೊಂಡ. ಆಗ ಒಂದು ಸುಂಟರಗಾಳಿಯೊಂದು ಕಾಣಿಸಿಕೊಂಡ ಪರಿಣಾಮವಾಗಿ ಕುಮಾರಪ್ಪನಿಗೆ ಆ ಕೂಗು ಕೇಳಲಿಲ್ಲವಾದ್ದರಿಂದ ಆತ ನದಿಯತ್ತ ಮುನ್ನಡೆದ. ಗಂಗಾಧರ್ ಕುಮಾರಪ್ಪನಿಂದ ತಪ್ಪಿಸಿಕೊಳ್ಳಲು ಮತ್ತೆ ಹಿಂದಕ್ಕೆ ಚಲಿಸುತ್ತಾ ಸಾಗಿ ನದಿಯಲ್ಲಿ ಬಿದ್ದುಬಿಟ್ಟ. ಇದನ್ನು ಕಂಡ ಕುಮಾರಪ್ಪ ಕೂಡಲೇ ಹಗ್ಗವೊಂದನ್ನು ಬೀಸಿ ಆತನನ್ನು ರಕ್ಷಿಸಲು ಮುಂದಾದ. ಗಂಗಾಧರ್ ಹಗ್ಗವನ್ನು ಗಟ್ಟಿಯಾಗಿ ಹಿಡಿದುಕೊಂಡ. ಕುಮಾರಪ್ಪ ನಿಧಾನವಾಗಿ ಅದನ್ನು ಎಳೆಯತೊಡಗಿದ. ಗಂಗಾಧರ್ ದಡದತ್ತ ಬರುತ್ತಿದ್ದಂತೆ ಆತನ ಧರ್ಮಗ್ರಂಥಗಳು ಆತನ ಪ್ರಜ್ಞೆಯನ್ನು ಚುಚ್ಚತೊಡಗಿದವು. ಶಾಸ್ತ್ರಗಳ ಪ್ರಕಾರ ದಲಿತನ ಸ್ಪರ್ಶ ಮೈಲಿಗೆಯನ್ನುಂಟುಮಾಡುತ್ತದೆಯಲ್ಲವೆ. ಆದ್ದರಿಂದ ಆತ ಮಾರುದ್ದ ನಿಲ್ಲಬೇಕು. ಗಂಗಾಧರ ಅರಚಿದ, " ಈ ಹಗ್ಗ ಎಷ್ಟುದ್ದವಿದೆ". "ಅದು ಸುಮಾರು ಮುಕ್ಕಾಲು ಕೈಯುದ್ದವಿದೆ" ಎಂದು ಕುಮಾರಪ್ಪ ಉತ್ತರಿಸಿದ. ಕೂಡಲೇ ಗಂಗಾಧರ ಹಗ್ಗವನ್ನು ಬಿಟ್ಟು ನದಿಯಲ್ಲಿ ಮುಳುಗಿಹೋದ. ಅಸ್ಪೃಶ್ಯ ಮತ್ತು ಸಾವಿನ ನಡುವೆ ಗಂಗಾಧರ್ ಸಾವನ್ನು ಆಯ್ದುಕೊಂಡ. ಅಮೂಲ್ಯನ ಈ ಅಸ್ಪೃಶ್ಯ ಕಥೆಯನ್ನು ವರ್ತಮಾನದಲ್ಲಿ ಅನ್ವಯಿಸಿ ನೋಡಬಹುದೇ? ಧೂಂಡ ಹಳ್ಳಿಯ ಈ ಘಟನೆಯನ್ನು ನೋಡಿ.

ಆಗಸ್ಟ್ ೨೦೦೬ರಲ್ಲಿ ಬಾರ್‌ಮರ್‌ನಲ್ಲಿ ಕಾಣಿಸಿಕೊಂಡ ಪ್ರವಾಹದಿಂದಾಗಿ ೧೩೨ ಮಂದಿ ತಮ್ಮ ಜೀವ ಕಳೆದುಕೊಂಡರಲ್ಲದೆ ಸಾವಿರಾರು ಮಂದಿ ನಿರಾಶ್ರಿತರಾದರು. ಧೂಂಡಾ ಹಳ್ಳಿಯ ಸುಮಾರು ಮೂರು ಡಜನ್ ಜನ ಪ್ರವಾಹದಿಂದ ತಪ್ಪಿಸಿಕೊಂಡು ಯಾವುದೋ ಒಂದು ರಸ್ತೆಯನ್ನು ಹಿಡಿದುಕೊಂಡರು. ಹಸಿವು ಮತ್ತು ಚಳಿಯಿಂದ ನಡುಗುತ್ತಿದ್ದ ಅವರೆಲ್ಲಾ ಸಹಾಯಕ್ಕಾಗಿ ಕೂಗಿಕೊಂಡರು. ಮತ್ತೊಂದು ಗ್ರಾಮದ ದಲಿತರು ಅವರಿಗೆ ಸಹಾಯಹಸ್ತನೀಡಲು ಮುಂದಾದರು. ಅವರಿಗೆ ಮೂರು ದಿನಗಳ ಕಾಲ ಆಹಾರ ಮತ್ತು ವಸತಿಯನ್ನು ಒದಗಿಸಲಾಯಿತು. ತಮ್ಮ ರಕ್ಷಕರು ದಲಿತರು ಎಂದು ಅರಿತ ಈ ನಿರಾಶ್ರಿತರು ಕುಪಿತರಾಗಿ, "ನೀವೇಕೆ ದಲಿತರೆಂದು ನಮಗೆ ತಿಳಿಸಲಿಲ್ಲ?" ಎಂದು ಅವರಲ್ಲೊಬ್ಬ ಕೇಳಿದ. ದಲಿತರಿಗೆ ಛೀಮಾರಿ ಹಾಕಿ ಅವರು ದಲಿತೇತರ ಆಶ್ರಯ ಬೇಡಿದರು. ರಕ್ಷಕರಾದ ದಲಿತರು ಅವಮಾನಕ್ಕೊಳಗಾದರು.

ದಾಖಲೆಗಾಗಿ ಪ್ರವಾಹ ಪೀಡಿತರಾದವರು ಜಾತಿ ಶ್ರೇಣಿಯಲ್ಲಿ ಕೆಳಗೆ ನಿಂತವರಾದ ಮಾಲಿಗಳು. ಸಾಮಾಜಿಕವಾಗಿ ಅವಮಾನಿತರಾದ ಈ ಧೂಂಡ ಹಳ್ಳಿಗರು ಒಂದು ಟೀ ಅಥವಾ ತರಕಾರಿ ಅಂಗಡಿ ತೆರೆಯಲು ಸಾಧ್ಯವೇ? ಮುಖ್ಯ ಸಂಗತಿ ಎಂದರೆ ಗ್ರಾಮೀಣ ಪ್ರದೇಶದಲ್ಲಿ ಸಣ್ಣ ಉದ್ಯಮವೆಂದರೆ ಆಹಾರ ಪದಾರ್ಥಗಳ ಅಂಗಡಿಗಳಷ್ಟೆ.ಯಾರು ಒಂದು ಟೀ ಅಂಗಡಿ ಅಥವಾ ಪಾನ್ ಶಾಪ್ ತೆರೆಯಲು ಸಾಧ್ಯವಿಲ್ಲದವರು ಒಂದು ಕಬ್ಬಿಣದಂಗಡಿ, ಬಟ್ಟೆಯಂಗಡಿ ತೆರೆಯುವುದು ದೂರದ ಕನಸಷ್ಟೆ. ಮತ್ತೊಂದೆಡೆ ಎಷ್ಟೇ ಬಡಪಾಯಿಯಾದರೂ ಕೆಳಜಾತಿಯವರು ಸಣ್ಣ ಪುಟ್ಟ ವ್ಯಾಪಾರ

ಅನು: ಡೊಮಿನಿಕ್. ಡಿ

ವನ್ನು ಮಾಡಿಕೊಳ್ಳಲು ಸಮಾಜ ಸಾಕಷ್ಟು ಅವಕಾಶಗಳನ್ನು ಒದಗಿಸುತ್ತದೆ. ಅಂದರೆ ಇದುವೇ ಜಾತಿಯಾಚೆಗಿರುವವರಿಗೂ ಮತ್ತು ಕೆಳಜಾತಿಯವರಿಗೂ ಇರುವ ವ್ಯತ್ಯಾಸ. ಈ ಬಲವಾದ ಕಾರಣದಿಂದಾಗಿಯೇ ಸಕಾರಾತ್ಮಕ ಕ್ರಿಯೆ/ ವೈವಿಧ್ಯತೆ ನೀತಿಗೆ ಹಕ್ಕುಳ್ಳವರಾಗಿದ್ದಾರೆ. ಹಾಗದಾರೆ ಈ ಕೆಳಜಾತಿಗಳವರು ಕೆಲವು ದಶಕಗಳ ವರೆಗಾದರೂ ಬಾಯಿ ಮುಚ್ಚಿಕೊಂಡಿರಬಾರದೇ?

ಸಂವಿಧಾನಕ್ಕೆ ದ್ರೋಹ

ಸಂವಿಧಾನದ ಧ್ಯೇಯ ಮತ್ತು ಪಾರಂಪರಿಕ ಸಮಾಜದ ಹಿತಾಸಕ್ತಿಗಳ ನಡುವೆ ಸಂಘರ್ಷ ಎದುರಾದಾಗ ನ್ಯಾಯಾಂಗವು ಯಾರ ಹಿತಾಸಕ್ತಿಯನ್ನು ಕಾಯುತ್ತದೆ?

ಒಂದು ಹಳೇ ಚರ್ಚೆಯನ್ನು ಎತ್ತುವ ಸಲುವಾಗ ಹೊಸ ಪ್ರಶ್ನೆಯನ್ನು ಕೇಳುವ ಮೂಲಕ ನಮ್ಮ ವಾದ ಆರಂಭಿಸೋಣ: ನ್ಯಾಯಾಂಗದ ಯಾರೊಬ್ಬರಾದರೂ ಸಂವಿಧಾನದ ಧ್ಯೇಯ ಏನೆಂಬುದನ್ನು ಓದಿಕೊಂಡಿದ್ದಾರೆಯೇ? ಮತ್ತೊಂದು ರೀತಿಯಲ್ಲಿ ಕೇಳುವುದಾದರೆ ಸಂವಿಧಾನದ ಪ್ರಸ್ತಾವನೆಯನ್ನು(ಪ್ರಿಯಾಂಬಲ್) ನ್ಯಾಯಾಂಗದ ಯಾರೊಬ್ಬರಾದರೂ ನಿಜವಾಗಿಯೂ ಓದಿಕೊಂಡಿದ್ದಾರೆಯೇ?. ಒಂದು ಪಠ್ಯದ ಉದ್ದೇಶ ಏನೆಂಬುದನ್ನು ಅದರ ಪ್ರಸ್ತಾವನೆ ಹೇಳುತ್ತದೆ. ಪಠ್ಯದ ಈ ಪ್ರಸ್ತಾವನೆಗೆ ಬದ್ಧವಾಗಿಯೇ ಅನಂತರದಲ್ಲಿ ಏನು ಬಂದಿದೆ ಎನ್ನುವುದು ಅನಾವರಣಗೊಳ್ಳುತ್ತದೆ. ಅರ್ಥಾತ್ ಸಂವಿಧಾನದ ಪ್ರಸ್ತಾವನೆಯೂ ಸಹ ಅದನ್ನೇ ಮಾಡುತ್ತದೆ.

ಒಂದು ಹಳೇ ಚರ್ಚೆಯನ್ನು ಎತ್ತುವ ಸಲುವಾಗ ಹೊಸ ಪ್ರಶ್ನೆಯನ್ನು ಕೇಳುವ ಮೂಲಕ ನಮ್ಮ ವಾದ ಆರಂಭಿಸೋಣ: ನ್ಯಾಯಾಂಗದ ಯಾರೊಬ್ಬರಾದರೂ ಸಂವಿಧಾನದ ಧ್ಯೇಯ ಏನೆಂಬುದನ್ನು ಓದಿಕೊಂಡಿದ್ದಾರೆಯೇ? ಮತ್ತೊಂದು ರೀತಿಯಲ್ಲಿ ಕೇಳುವುದಾದರೆ ಸಂವಿಧಾನದ ಪ್ರಸ್ತಾವನೆಯನ್ನು(ಪ್ರಿಯಾಂಬಲ್) ನ್ಯಾಯಾಂಗದ ಯಾರೊಬ್ಬರಾದರೂ ನಿಜವಾಗಿಯೂ ಓದಿಕೊಂಡಿದ್ದಾರೆಯೇ? ಒಂದು ಪಠ್ಯದ ಉದ್ದೇಶ ಏನೆಂಬುದನ್ನು ಅದರ ಪ್ರಸ್ತಾವನೆ ಹೇಳುತ್ತದೆ. ಪಠ್ಯದ ಈ ಪ್ರಸ್ತಾವನೆಗೆ ಬದ್ಧವಾಗಿಯೇ ಅನಂತರದಲ್ಲಿ ಏನು ಬಂದಿದೆ ಎನ್ನುವುದು ಅನಾವರಣಗೊಳ್ಳುತ್ತದೆ. ಅರ್ಥಾತ್ ಸಂವಿಧಾನದ ಪ್ರಸ್ತಾವನೆಯೂ ಸಹ ಅದನ್ನೇ ಮಾಡುತ್ತದೆ.

ಆದ್ದರಿಂದ, ಭಾರತದ ಇಡೀ ಸಂವಿಧಾನವು ತನ್ನ ಪೀಠಿಕಾ ಭಾಗದಲ್ಲಿ ಯಾವ ಸಂಗತಿಗಳ ಬಗ್ಗೆ ಇದೆ ಎಂಬುದನ್ನು ಗಮನಿಸಲೇಬೇಕಾಗುತ್ತದೆ. ಹಾಗಾದರೆ ಆ ಪೀಠಿಕಾ ಭಾಗವು ಏನನ್ನು ಹೇಳಲು ಬಯಸುತ್ತದೆ? "ನ್ಯಾಯ – ಸಾಮಾಜಿಕ, ರಾಜಕೀಯ ಮತ್ತು ಸಮಾನತೆ" ಎನ್ನುವ ಪರಿಕಲ್ಪನೆಗಳಿಂದ ಆ ಭಾಗ ತುಂಬಿಕೊಂಡಿದೆ. ಅಂದರೆ ಭಾರತದಲ್ಲಿ ನ್ಯಾಯಯುತವಾದ ಸಮಾಜವನ್ನು ಸ್ಥಾಪಿಸುವುದರಿಂದಲೇ ಭಾರತ ಒಂದು ರಾಷ್ಟ್ರವಾಗಿ ಹೊರಹೊಮ್ಮಬೇಕು ಎಂಬುದೇ ಅದರ ಬಹುಮುಖ್ಯ ಉದ್ದೇಶವಾಗಿದೆ.

ಹಾಗಾದರೆ ಸರ್ವೋಚ್ಚ ನ್ಯಾಯಾಲಯದ ಪ್ರಧಾನ ಕರ್ತವ್ಯ ಏನು? ಪ್ರಧಾನವಾಗಿ ಸಂವಿಧಾನವನ್ನು ರಕ್ಷಿಸುವುದು ಮತ್ತು ಗಣರಾಜ್ಯದ ಹಿತಾಸಕ್ತಿಗಳನ್ನು ಕಾಯುವುದೇ ಆಗಿದೆಯಲ್ಲವೇ? ಅಥವಾ ಪಾರಂಪರಿಕ ಭಾರತೀಯ ಸಮಾಜ ಪ್ರತಿಪಾದಿಸುವ ನ್ಯಾಯವನ್ನು ಕಾವುದೇ? ಸ್ವಾತಂತ್ರ್ಯ ಚಳುವಳಿಯ ಧ್ಯೇಯವನ್ನು ಸಾಧಿಸಲು ರಚಿತವಾದ ಸಂವಿಧಾನ ಸಭೆಯಿಂದ ಒಪ್ಪಿಗೆಯನ್ನು ಪಡೆದು ಅಸ್ತಿತ್ವಕ್ಕೆ ಬಂದ ಸಂವಿಧಾನವು **'ನ್ಯಾಯ'**ದ ಕುರಿತು ಮಾತನಾಡುತ್ತದೆ. ಅಂದರೆ ಅನ್ಯಾಯ ಎಂಬುದನ್ನು ನಾವು ಕಲ್ಪಿಸಿಕೊಳ್ಳಬೇಕಾಗಿದೆ. ಈ ಅನ್ಯಾಯದ ಮೂಲ ಗಣರಾಜ್ಯದಲ್ಲಿ ಇದೆಯೇ ಅಥವಾ ಪಾರಂಪರಿಕ ಸಮಾಜದಲ್ಲಿ ಇದೆಯೇ?

ಇದಕ್ಕೆ ಉತ್ತರ ಸರಳವಾಗಿದೆ. ಗಣರಾಜ್ಯವು ಈ ಪಾರಂಪರಿಕ ಸಮಾಜವನ್ನು ತಿದ್ದಬೇಕೆಂದು ಸಂವಿಧಾನವು ನಿರೀಕ್ಷಿಸುತ್ತದೆ. ಆದ್ದರಿಂದ, ಪಾರಂಪರಿಕ ಸಮಾಜ ಅನ್ಯಾಯದ ಮೂಲ ಎಂಬುದನ್ನು ಸಂವಿಧಾನ ಘೋಷಿಸುತ್ತದೆ.

ಯಾವ ಸಮಾಜದಲ್ಲಿ ಜಾತಿಗಳು ಮತ್ತು ಜಾತಿಯಾಚೆಗಿರುವವರು ಪರಸ್ಪರ ಸೆಣಸಾಟದಲ್ಲಿರುವಾಗ – Eax ಪಾರಂಪರಿಕ ಸಮಾಜ ಮತ್ತು ಸಂವಿಧಾನದ ನಡುವೆ ನ್ಯಾಯಾಂಗ ನಿಂತಿರುವುದಾದರೂ ಎಲ್ಲಿ? ಉದಾಹರಣೆಯೊಂದನ್ನು ತೆಗೆದುಕೊಳ್ಳೋಣ: ಭೂಸುಧಾರಣಾ ಕಾನೂನು ಜಮೀನ್ದಾರಿ ಪದ್ಧತಿಯನ್ನು ನಿರ್ಮೂಲನೆ ಮಾಡಬೇಕಿತ್ತು. ಈ ಪಂಡಿತ ನ್ಯಾಯಾದಿಶರು ಮಧ್ಯಯುಗೀನ ಜಮೀನ್ದಾರಿ ವ್ಯವಸ್ಥೆಯ ಬಗ್ಗೆ ತಿಳಿದುಕೊಂಡಿದ್ದಾರೆಯೇ? ಭಾರತದ ಸ್ವಾತಂತ್ರ್ಯನಂತರದಲ್ಲಿ ಬಹುಸಂಖ್ಯಾತರ ಘನತೆಯನ್ನು ಎತ್ತಿಹಿಡಿಯಬೇಕಾದರೆ ಈ ಜಮೀನ್ದಾರಿ ಪದ್ಧತಿಯ ನಿರ್ಮೂಲನೆ ಅತ್ಯಗತ್ಯವಾಗುತ್ತದಲ್ಲವೇ?

ಇದು ಪ್ರಶ್ನೆಯ ಬಹು ಮುಖ್ಯವಾದ ಸಂಗತಿ: ಹೀಗಿರುವಾಗ ಈಗ ವಿವಾದದಲ್ಲಿರುವ ೯ನೇ ಪರಿಚ್ಛೇಧದಲ್ಲಿ ಭೂ ಸುಧಾರಣಾ ಕಾನೂನನ್ನು ಮೊಟ್ಟಮೊದಲ ಬಾರಿಗೆ ಸೇರಿಸಿದ್ದಾದರೂ ಏಕೆ?

ಅಂದರೆ ೯ನೇ ಪರಿಚ್ಛೇಧವನ್ನು ಸ್ಪಷ್ಟವಾಗಿ ಗುರುತಿಸಿಕೊಳ್ಳಬೇಕಾದರೆ ಮಾಜಿ–ಜಮೀನ್ದಾರಿಗಳು ಜಮೀನ್ದಾರಿ ಪದ್ಧತಿಯನ್ನು ನಿರ್ಮೂಲನೆ ಮಾಡಲು ನ್ಯಾಯಾಂಗವನ್ನೇ ಬಳಸಿ, ಜವಾಹರಲಾಲ್ ನೆಹರೂ ಸರ್ಕಾರದ ಪರಮೋದ್ದೇಶವಾದ ಭೂಸುಧಾರಣಾನೀತಿ ಯನ್ನು ದಿಕ್ಕುತಪ್ಪಿಸಿದ್ದಾರೆ. ಜಮೀನ್ದಾರಿ ಪದ್ಧತಿಯ ಕೆಳಗೆ ರೈತಾಪಿಜನರನ್ನು ಪ್ರಾಣಿಗಳಂತೆ ಪರಿಗಣಿಸಲಾಗಿತ್ತು. ಮಿಲಿಯಗಟ್ಟಳೆ ಹೆಕ್ಟೆರ್ ಭೂಮಿ ಈಗ ಕಾನೂನಿನ ಗೋಜಲಿನಲ್ಲಿ ಸಿಕ್ಕಿಹಾಕಿಕೊಂಡಿದೆ. ನಿಜವಾಗಿ ನೋಡಿದರೆ, ಭೂಮಿತಿ ಕಾನೂನನ್ನು ಜಾರಿಯಾಗಿಸಬೇಕಾದರೆ ಬಿಹಾರ, ಕರ್ನಾಟಕ ಮತ್ತು ಒರಿಸ್ಸಾ ರಾಜ್ಯಗಳಲ್ಲಿ ಒಂದೇ ಒಂದು ಸೆಂಟಿಮೀಟರ್ ಜಾಗನೂ ಸಹ ಹೆಚ್ಚುವರಿಯಾಗಿ ಇರಲಿಲ್ಲ.

ಹಾಗಾದರೆ, ಭೂಸುಧಾರಣಾ ಸಂದರ್ಭದಲ್ಲಿ ನ್ಯಾಯಾಂಗ ಯಾರ ಪರವಾಗಿ ನಿಂತಿತ್ತು? ಅದು ಗಣರಾಜ್ಯದೊಟ್ಟಿಗೆ ನಿಂತಿತ್ತೇ ಅಥವಾ ಪಾರಂಪರಿಕ ಊಳಿಗಮಾನ ಸಮಾಜದೊಟ್ಟಿಗೆ ನಿಂತಿತ್ತೇ? ಒಬ್ಬ ಸಮಾನ್ಯ ಪ್ರಜೆಗೆ ಜಮೀನ್ದಾರಿ ಪದ್ಧತಿ ಏನಾಗಿತ್ತು ಎಂಬುದನ್ನು ನ್ಯಾಯಾಧೀಶರು ಅರಿತಿರಲಿಲ್ಲವೇ? ಇವರ್‍ಯಾರಿಗೂ ಭಾರತೀಯ ಗಣರಾಜ್ಯದ ಹಿತಾಸಕ್ತಿಗಳು ಏನಾಗಿದ್ದವು ಎಂಬುದು ತಿಳಿದಿರಲಿಲ್ಲವೇ? ಇವರು ಯಾವ ಸಂವಿಧಾನದ ಧ್ಯೇಯವನ್ನು ಎತ್ತಿಹಿಡಿಯಬೇಕಿತ್ತೋ ಅದರ ಪೀಠಿಕಾಭಾಗವನ್ನು ಓದಿಕೊಂಡಿರಲಿಲ್ಲವೇ?

ಈ ಹಿನ್ನೆಲೆಯಲ್ಲಿ ೯ನೇ ಪರಿಚ್ಛೇಧವನ್ನು ಅರ್ಥೈಸಬೇಕಾಗಿದೆ.

ಸಮಾನ್ಯವಾದ ದಲಿತ ದೃಷ್ಟಿಯಲ್ಲಿ ಭಾರತೀಯ ನ್ಯಾಯಾಂಗವು ನ್ಯಾಯವನ್ನು ನೀಡುವುದಿಲ್ಲ. ಅನೇಕಬಾರಿ ಈ ನ್ಯಾಯಾಂಗವೇ ನ್ಯಾಯದ ದಾರಿಯನ್ನು ದಿಕ್ಕುತಪ್ಪಿಸುತ್ತದೆ ಎಂದರೆ ಅತಿಶಯೋಕ್ತಿಯೇನಲ್ಲ.

ಕೆಲವೊಮ್ಮೆ ಎದೆಗೆ ಒದೆಯುವ ಸಂಗತಿಗಳನ್ನು ಮಾಧ್ಯಮಗಳು ವರದಿಮಾಡಿದಾಗ ಅವುಗಳನ್ನೇ ನ್ಯಾಯಾಂಗವು ಅಂತಿಮ ಎಂದು ಪರಿಗಣಿಸಿದೆ. ಹೀಗಿರುವಾಗ ಎಂದಾದರೂ ಮಾಧ್ಯಮಗಳು ವರದಿಮಾಡಿರುವ ದಲಿತ ಸಮಸ್ಯೆಗಳನ್ನು ತೆಗೆದುಕೊಂಡಿದ್ದು ಕಾಣುತ್ತದೆಯೇ? ಉದಾಹರಣೆಗೆ, ಈಗ ದಂತಕತೆಯಾಗಿರುವ ಪತ್ರಕರ್ತ ತನ್ನ ಸಂಶೋಧನಾ ಲೇಖನ, "ದಲಿತ ಪತ್ರಕರ್ತನ ಶೋಧನೆಯಲ್ಲಿ" ಎಂಬುದನ್ನು ನವೆಂಬರ್ ೧೬, ೧೯೯೬ರಲ್ಲಿ ಪ್ರಕಟಿಸಿ ದೆಹಲಿ ಮುಖ್ಯವಾಹಿನಿಯ ಮಾಧ್ಯಮ ಸಂಸ್ಥೆಗಳಲ್ಲಿ ಒಬ್ಬ ದಲಿತ ಪತ್ರಕರ್ತನೂ ಇಲ್ಲ ಎಂದು ತೋರಿಸಿದಾಗ ಸರ್ವೋಚ್ಚ ನ್ಯಾಯಾಲಯ ಸಂಪಾದಕರಿಂದ ವಿವರಣೆಯನ್ನು ಪಡೆಯಲಿಲ್ಲವೇಕೆ? ಇಂಗ್ಲೆಂಡ್, ಫ್ರಾನ್ಸ್ ಮತ್ತು ಇಟಲಿಯ ಜನಸಂಖ್ಯೆಗೆ ಸಮನಾಗಿರುವಂಥ ದೆಹಲಿಯಲ್ಲಿ ಒಬ್ಬನೇ ಒಬ್ಬ ಪತ್ರಕರ್ತ ತಯಾರಾಗಿಲ್ಲವೆಂದರೆ ನಂಬಲು ಸಾಧ್ಯವೇ?

ಭಾರತೀಯ ಸಾರ್ವಜನಿಕ ಸಂಸ್ಥೆಗಳಲ್ಲಿ ದಲಿತರನ್ನು ಹೊರಗಿಡುವುದು ಸಂವಿಧಾನದ ಆಶಯವಾಗಿತ್ತೇ? ಇಂದಿಗೂ ಸಹ ಸರ್ಕಾರಿ ಹುದ್ದೆಗಳು ಮತ್ತು ಶಿಕ್ಷಣ ಮಾತ್ರ ದಲಿತರಿಗೆ ಬಿಡುಗಡೆಯ ಮಾರ್ಗಗಳಾಗಿ ಕಾಣುತ್ತಿವೆ. ಮೀಸಲಾತಿಯಿಂದಷ್ಟೇ ದಲಿತ ಮಧ್ಯವರ್ಗವೊಂದು ಇಂದು ಸಾರ್ವಜನಿಕವಾಗಿ ಕಾಣುತ್ತಿರುವುದು. ದಲಿತರಿಗಾಗಿರುವ ಈ ವಿಶೇಷ ಸಾರ್ವಜನಿಕ ನೀತಿಯ ಬಗ್ಗೆ ನ್ಯಾಯಾಂಗ ಅನುಕಂಪ ಸೂಚಿಸಿದೆಯೇ? ಅನೇಕ ಬಾರಿ ಶೈಕ್ಷಣಿಕ ಸಂಸ್ಥೆಗಳಿಂದ ದಲಿತರಿಗೆ ನ್ಯಾಯ ತಿರಸ್ಕರಿಸಲಾಗಿದೆ. ಜೆ.ಎನ್.ಯು ಮತ್ತು ದೆಹಲಿ ವಿವಿಗಳು ದಲಿತರಿಗೆ ಡಾಕ್ಟರೇಟ್ ಪದವಿಗಳನ್ನು ನೀಡಿದಾಗಿಯೂ, ನೇಮಕಾತಿ ಸಂಗತಿ ಬಂದಾಗ ಅದೇ ವಿವಿಗಳು 'ಅರ್ಹತೆ'ಯ ಮಾನದಂಡದ ಮೇಲೆ ದಲಿತರನ್ನು ತಿರಸ್ಕರಿಸಿಸುವುದಾದರೂ ಹೇಗೆ? ಇಂಥ ಸಂಗತಿಗಳ ಬಗ್ಗೆ ಸರ್ವೋಚ್ಚನ್ಯಾಯಾಲಯಗಳು ಏಕೆ ಮಧ್ಯೆ ಪ್ರವೇಶಿಸಿಲ್ಲ?

ಪಟ್ಟಿಗೆ ಸೇರಿಸಲ್ಪಟ್ಟಿರುವ ೨೦೦ ತಿದ್ದುಪಡಿಗಳಲ್ಲಿ [illegible] ಇಲ್ಲ [illegible] ಅವನ್ನು ನ್ಯಾಯಾಂಗವು ಗಮನಿಸಿತ್ತೇ?

ಈ ಸಂಗತಿಗಳ ಹಿನ್ನೆಲೆಯಲ್ಲಿ ೯ನೇ ಪರಿಚ್ಛೇದದ [illegible] ಮುಂದುವರೆಸುತ್ತಲೇ [illegible] ಸಂಗತಿಯನ್ನು ಅದರಲ್ಲಿ ಸೇರಿಸಿಕೊಳ್ಳಬೇಕಾಗಿದೆ. [illegible] ಮತ್ತು ಪಾರಂಪರಿಕ ಸಮಾಜದ ಹಿತಾಸಕ್ತಿಗಳ ನಡುವೆ ಸಂಘರ್ಷ ಎದುರಾದಾಗ ನ್ಯಾಯಾಂಗವು ಯಾರ ಹಿತಾಸಕ್ತಿಯನ್ನು ಕಾಯುತ್ತದೆ?

ಹೀಗಿರುವಾಗ ಸರ್ಕಾರವು ಹಲವಾರು ವಿಷಯಗಳನ್ನು ೯ನೇ ಪರಿಚ್ಛೇಧವಡಿ ತರುವ ಮೂಲಕ ನ್ಯಾಯಾಂಗವನು ನಿರ್ಲಕ್ಷಿಸಲು ಹವಣಿಸುತ್ತಲೇ ಇದೆ. ಇದೊಂದು ಅನಾರೋಗ್ಯಕರ ಮುನ್ಸೂಚನೆ. ನ್ಯಾಯಾಂಗವು ತನ್ನನ್ನೇ ರಕ್ಷಿಸಿಕೊಳ್ಳುವ ಎಲ್ಲಾ ಹಕ್ಕುಗಳು ಇವೆ. ಆದರೆ ಹಾಗೆ ಮಾಡುವಾಗ ನ್ಯಾಯಾಂಗವು ಸಾಮಾಜಿಕ 'ವಾಗಿ ದಮನಿತವರ್ಗವನ್ನು ದಂಡಿಸಬಾರದು. ಅದು ಸಾಮಾಜಿಕ ಮತ್ತು ರಾಜಕೀಯ ಸಂಗತಿಗಳ ನಡು ವಿನ ವ್ಯತ್ಯಾಸವನ್ನು ಗಮನಿಸಬೇಕಾಗುತ್ತದೆ.

ಸಾಮ್ಯುವೇಲ್ ಜಾನ್ಸನ್ ವರ್ಣ ದ್ವೇಷಿಯಾಗಿದ್ದನೇ? ೧೮ನೇ ಶತಮಾನದ ಇಂಗ್ಲೆಂಡಿನ ಬಹುದೊಡ್ಡ ಸಾಹಿತಿಯಾದ ಜಾನ್ಸನ್ ಬಿಳಿ ಅಮೆರಿಕನ್ನರ ಬಗ್ಗೆ ಹೀಗೆಂದಿದ್ದ: "ನಾನು ಇಡೀ ವಿಶ್ವದ ಮಾನವರೆಲ್ಲರನ್ನು ಪ್ರೀತಿಸುತ್ತೇನೆ ಆದರೆ ಅಮೆರಿಕಾದವರನ್ನು ಅಲ್ಲ."

ಆಸ್ಕರ್ ವೈಲ್ಡ್ ಒಬ್ಬ ವರ್ಣ ದ್ವೇಷಿಯಾಗಿದ್ದನೇ? ವಿಕ್ಟೋರಿಯನ್ ಯುಗದ ಶ್ರೇಷ್ಠ ನಾಟಕಕಾರನಾದ ಆತ ಐರ್ಲ್ಯಾಂಡ್‌ನವನಾಗಿದ್ದು ಬಿಳಿ ಅಮೆರಿಕಾದವರನ್ನು ಬೈಯ್ಯುತ್ತಿದ್ದ: "ನಾಗರಿಕತೆಯಿಲ್ಲದೆ ಅನಾಗರಿಕತೆಯಿಂದ ಸರ್ವನಾಶದತ್ತ ಸಾಗಿದ ಏಕ ಮಾತ್ರ ದೇಶವೆಂದರೆ ಅಮೇರಿಕಾ."

ಜರ್ಮನಿಯ ಖ್ಯಾತ ತತ್ತ್ವಶಾಸ್ತ್ರಜ್ಞನಾದ ಇಮ್ಮಾನ್ಯುವೇಲ್ ಕಾಂಟ್‌ನೂ ಸಹ ಜನಾಂಗ ದ್ವೇಷಿಯಾಗಿದ್ದನೇ? **ಕ್ರಿಟೀಕ್ ಆಫ್ ಪ್ಯೂರ್ ರೀಸನ್** ಕೃತಿಯ ಲೇಖಕನಾದ ಈತನ ಪ್ರಕಾರ, "ಅಮೇರಿಕಾದವರು ಯಾವುದೇ ಸಂಸ್ಕೃತಿಯಲ್ಲೂ ಇಲ್ಲದ ಮೃಗಗಳಾಗಿದ್ದು ಶಕ್ತಿಹೀನರಾಗಿದ್ದಾರೆ.

ಸಾಮ್ಯುವೇಲ್ ಜಾನ್ಸನ್, ಆಸ್ಕರ್ ವೈಲ್ಡ್ ಅಥವಾ ಯೂರೋಪಿನ ಇತರರು ಜನಾಂಗದ್ವೇಷಿಗಳಾಗಿದ್ದರು. ಅಮೆರಿಕನ್ನರ ಬಗ್ಗೆ ಅವರ ಬೈಯುಗಳು ಜನಾಂಗದ್ವೇಷದಿಂದೇನೂ ಕೂಡಿರಲಿಲ್ಲ. ಅವರ ಹೇಳಿಕೆಗಳು ಕೇವಲ ವರ್ಗ ದೂಷಣೆಗಳಿಂದ ಕೂಡಿದ್ದವು. ಕಾರಣ ಯೂರೋಪಿನಿಂದ ಅಮೆರಿಕಾಕ್ಕೆ ವಲಸೆ ಹೋದವರು ಕೆಳವರ್ಗಗಳಿಗೆ ಸೇರಿದವರಾಗಿದ್ದರು. ಅಥವಾ ರಾಷ್ಟ್ರ-ರಾಷ್ಟ್ರಗಳ ಮಧ್ಯೆ ಬೇರುಬಿಟ್ಟಿರುವ ಪೂರ್ವಾಗ್ರಹಗಳನ್ನಷ್ಟೆ ಅವರು ವ್ಯಕ್ತಪಡಿಸಿದ್ದರು. ಇವರು ಕೆಟ್ಟ ಬಾಯನ್ನು ಹೊಂದಿದವರಾಗಿದ್ದರೇ ಹೊರತು ಜನಾಂಗ ದ್ವೇಷಿಗಳಾಗಿದ್ದರು ಎಂದು ಹೇಳಲಾಗದು.

ಹೀಗಿರುವಾಗ ಜೇಡ್‌ಗೂಡಿ ಶಿಲ್ಪಾಶೆಟ್ಟಿಯನ್ನು 'ಪಾಕಿ' (ಪಾಕಿಸ್ತಾನದವಳೆಂದು ಅರ್ಥ) ಎಂದು ಕರೆದದ್ದು ಜನಾಂಗೀಯ ದ್ವೇಷದ್ದು ಎಂದು ಹೇಳಬಹುದೇ? ಹಾಗೇನಾದರೂ ಶಿಲ್ಪಾಳನ್ನು ಆಕೆ ನೋಯಿಸಬೇಕೆಂದು ಉದ್ದೇಶಿಸಿದ್ದಲ್ಲಿ ಆಕೆಯ ಮೂಲವಾದ ಇಂಡಿಯಾದವಳೆಂದು ಜರೆಯಬೇಕಿತ್ತಲ್ಲವೇ? ಇಂಡಿಯನ್ ಎನ್ನೋ ಪರಿಕಲ್ಪನೆ ಇನ್ನೂ ಜರೆ ಯುವಷ್ಟು ಡಿಗ್ರಿಯನ್ನು ಪಡೆದಿಲ್ಲ. ಆದರೆ ಇಂಗ್ಲೆಂಡಿನಲ್ಲಿರುವ ಭಾರತೀಯರು ಯೂರೋಪ್ ಮತ್ತು ಉತ್ತರ ಅಮೆರಿಕಾದ ವಿವಿಧೆಡೆಗಳಲ್ಲಿರುವಂತೆ ವರ್ತಿಸಿದರು. ಬೇಗನೆ ಇಂಡಿಯನ್ ಎನ್ನುವುದೂ ಸಹ ಜರೆಯುವ ಪದವಾಗಿ ಮಾರ್ಪಡುತ್ತದೆ.

ಕುತೂಹಲದ ಸಂಗತಿಯೆಂದರೆ ಪಾಕಿ ಎನ್ನೋ ಪದ ಯೂರೋಪಿನ ಅನೇಕ ಕಡೆಗಳಲ್ಲಿ ನಕಾರಾತ್ಮಕ ಪದವಾಗಿಬಿಟ್ಟಿದೆ. ಇದಕ್ಕೆ ಕಾರಣಗಳು ಅನೇಕ. ಆದರೆ ಆ ಕಾರಣಗಳಲ್ಲಿ ಜನಾಂಗೀಯ ದ್ವೇಷ ಎನ್ನುವುದು ಯಾವುದೂ ಇಲ್ಲ. ಜೇಡ್ ಆ ಪದವನ್ನು ಬಳಸಿ ಶಿಲ್ಪಾಗೆ ನೋವುಂಟುಮಾಡಿದಳು. ಆದರೆ ಅದಕ್ಕೆ ಜನಾಂಗೀಯ ದ್ವೇಷದ ಲೇಪ ಹಚ್ಚಬಹುದೇ?

ಜೇಡ್ ಶಿಲ್ಪಾಳಿಗೆ ನಾಯಿ ಎಂದು ಕರೆದಳು. ಯಾರನ್ನಾದರೂ ನಾಯಿ ಎಂದು ಕರೆಯುವುದು ಜನಾಂಗೀಯ ದ್ವೇಷ ಎಂದು ಹೇಳಬಹುದೇ? ಬಿಳಿಯರು ಜಗಳವಾಡುವಾಗ ಡಾಗ್ ಅ್ಯಂಡ್ ಬಿಚ್ ಎಂಬ ಪದಗಳನ್ನು ಬಳಸುವುದಿಲ್ಲವೇ? ಭಾರತೀಯರು ಜಾತಿಯನ್ನು ಬಳಸಿ, ತಮ್ಮವರನ್ನೇ ನಾಯಿ ಎಂದು ಹಂಗಿಸುವುದಿಲ್ಲವೇ? ಹಾಗೇನಾದರೂ ಜೇಡ್ ಶಿಲ್ಪಾಳನ್ನು ಗೋಧಿ ಬಣ್ಣದವಳೆಂದು ಅಥವಾ ಬ್ಲಡಿ ಇಂಡಿಯನ್ ಎಂದು ಕರೆದಿದ್ದಲ್ಲಿ ಅದಕ್ಕೆ ಜನಾಂಗೀಯ ದೇಷದ ಲೇಪ ಹಚ್ಚಬಹುದೇನೋ. ಜೇಡ್ ಅವ್ಯಾವುದನ್ನು ಮಾಡಿಲ್ಲ.

ಆದರೆ ಇಂಗ್ಲೆಂಡ್‌ನಲ್ಲಿ ನೆಲೆಸಿರುವ ಭಾರತೀಯರು ಮಾತ್ರ ಜೇಡ್‌ನ ಹೇಳಿಕೆಯಿಂದ ಅತಂತ್ರರಾದರು. ಹಾಗೆಯೇ ಮಿಲಿಯನ್‌ಗಟ್ಟಲೆ ಭಾರತದಲ್ಲಿರುವವರು ಸಹ ಅಲ್ಲಿ ನೆಲೆಸಲು ಕಾತುರರಾಗಿದ್ದು ಅವರೆಲ್ಲಾ ಅತಂತ್ರರಾದರು. ಭಾರತೀಯ ಮಧ್ಯಮವರ್ಗದವರಿಗೆ ಬಿಗ್ ಬ್ರದರ್ ಎಪಿಸೋಡ್ ಒಂದು ರಾಷ್ಟ್ರೀಯ ಸಂಸ್ಕೃತಿ ಬಿಕ್ಕಟ್ಟಿನಂತೆ ಭಾಸವಾಯಿತು. ಇಂಗ್ಲೆಂಡಿನ ಸಾವಿರಾರು ಮಂದಿ ಚಾನಲ್-೪ರಲ್ಲಿ ತಮ್ಮ ವಿರೋಧವನ್ನು ದಾಖಲಿಸಿದರು. ಭಾರತದಲ್ಲೂ ಅನೇಕರು ಸುದ್ದಿ ಚಾನಲ್‌ಗಳಿಗೆ ಎಸ್‌ಎಂಎಸ್ ಕಳುಹಿಸಿದರು. ಕೆಲವರು ಬೀದಿಯಲ್ಲೂ ಪ್ರತಿಭಟನೆ ನಡೆಸಿದರು.

ಜೇಡ್‌ನ ಅವಹೇಳನ ಮಾತುಗಳು ಆಕೆಯು ಪ್ರಜ್ಞಾಪೂರ್ವಕವಾಗಿ ಬಿಳಿಯ ವ್ಯಕ್ತಿತ್ವವನ್ನು ಎತ್ತಿಹಿಡಿದು ಜನಾಂಗೀಯ ದೇಷವನ್ನು ವ್ಯಕ್ತಪಡಿಸುತ್ತಿದ್ದವು ಎಂದು ಗ್ರಹಿಸುವುದಾದರೆ ದಲಿತ್ ಡೈರಿಯು ನೋವಾದ ಭಾರತೀಯರೊಂದಿಗೆ ಧ್ವನಿಗೂಡಿಸುತ್ತದೆ.

ಅತ್ತ ಬಿಗ್ ಬ್ರದರ್ ಆಘಾತ ಶಿಖರ ಮುಟ್ಟಿರುವಾಗ, ಇತ್ತ ಹಿಂದಿ ಚಾನಲ್ಲೊಂದು ಹಲವು ಗಂಟೆಗಳ ಕಾಲ ಜೈಪುರದ ಒಂದು ಎಪಿಸೋಡನ್ನು ಚಿತ್ತರಿಸಿತ್ತು. ಶ್ರೀಮಂತ ಕುಟುಂಬದಿಂದ ಬಂದ ದಲಿತ ಹುಡುಗನೊಬ್ಬ ದಲಿತೇತರ ಹುಡುಗಿಯೊಂದಿಗೆ ಕಾಣೆಯಾಗಿದ್ದ.

ಒಬ್ಬರಿಗೊಬ್ಬರು ಪ್ರೇಮಿಸಿದ್ದ ಅವರು ನಗರದ ನ್ಯಾಯಾಲಯ ಒಂದರಲ್ಲಿ ಮದುವೆಯಾಗಿದ್ದರು. ಅಲ್ಲಿಂದಲೇ ಆರಂಭವಾಯಿತು ನೋಡಿ ಜಾತಿ ಆಘಾತ. ಹೆಣ್ಣಿನ ಪೋಷಕರು, ಸಂಬಂಧಿಕರು ಮತ್ತು ಸ್ನೇಹಿತರು ಹುಡುಗನ ರಕ್ತಕ್ಕಾಗಿ ಕೂಗುತ್ತಿದ್ದರು. ಈ ಸಂಗತಿ ನಿಯಂತ್ರಣ ತಪ್ಪಿದ್ದಂತಾಯಿತು. ಆಗಲೇ ಸುದ್ದಿ ಚಾನಲ್‌ಗಳು ಈ ಹೊಸ ದಂಪತಿಗಳ ಬಗ್ಗೆ ವರದಿಯನ್ನು ಮಾಡಿದ್ದು.

ಈ ದಲಿತ ಯುವಕನ ಪಲಾಯನದ ಬಗ್ಗೆ ದಲಿತೇತರರು ನೋವುಂಡರೇ? ಶಿಲ್ಪಾಳ ಘಟನೆಯಿಂದ ನೋವನುಭವಿಸಿದರಲ್ಲಿ ಯಾರೊಬ್ಬರಾದರೂ ಈ ಯುವ ದಂಪತಿಗಳಿಗೆ ಎಸ್‌ಎಂಎಸ್ ಕಳುಹಿಸಿ ಧೈರ್ಯ ತುಂಬಿದರೇ? ಅಸ್ಪೃಶ್ಯತೆ ಭಾರತದ ತುಂಬಾ ಇದೆ. ದಲಿತೇತರರು ಎಂದಾದರು ನ್ಯಾಯಾಲಯ ಅಥವಾ ಪೋಲೀಸ್ ಠಾಣೆಯಲ್ಲಿ ಅಸ್ಪೃಶ್ಯತೆಯ ಆಚರಣೆಯ ವಿರುದ್ಧ ದಾವೆ ಹೂಡಿದ್ದಾರೆಯೇ?

ಇಂಗ್ಲೆಂಡಿನಲ್ಲೇ ದಲಿತರು ಪ್ರತ್ಯೇಕವಾದ ಗುರುದ್ವಾರ

ಜಾತಿವಾದಿಗಳೆಂದರೆ ಜನಾಂಗ ದ್ವೇಷಿಗಳು

ಜಾತಿ ಪದ್ಧತಿ ವಿಷ ಕಕ್ಕುತ್ತದೆ

ಗಳನ್ನು ಹೊಂದಿದ್ದಾರೆ. ಅಲ್ಲಿ ಅಸ್ಪೃಶ್ಯತೆಯನ್ನು ಆಚರಿಸುವವರನ್ನು ಇಂಗ್ಲೆಂಡಿನಿಂದ ವಾಪಸ್ಸು ಭಾರತಕ್ಕೆ ಕಳುಹಿಸುವಂತೆ ದಲಿತೇತರ ಎನ್‌ಆರ್‌ಐ ಎಂದಾದರೂ ಬ್ರಿಟಿಷ್ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆಯೇ?

ಭಾರತ ಎಂಥ ಜಾತಿ ತಾರತಮ್ಯವನ್ನು ಹೊಂದಿರುವ ಸಮಾಜವಾಗಿದೆ! ಯಾರು ಶಿಲ್ಪಾಳಿಗೆ ಅವಮಾನವಾಯಿತು ಎಂದು ಹೇಳುತ್ತಾರೋ ಅವರೇ ಜಾತಿವಾದಿಗಳಾಗಿದ್ದಾರೆ. ಅವರಿಗೆ ಜನಾಂಗೀಯ ವಾದ ನೋವನ್ನುಂಟು ಮಾಡಿದರೆ ಜಾತಿವಾದ ಸಾಂತ್ವಾನ ನೀಡುತ್ತದೆ. ಜಾತಿವಾದ ಅದರ ಆರ್ಚಕರಲ್ಲಿ ಹೆಮ್ಮೆಯನ್ನುಂಟುಮಾಡುತ್ತದೆ. ಅಸ್ಪೃಶ್ಯತೆಯನ್ನು ಆಚರಿಸುವ ದಲಿತೇತರರು ಒಂದು ರೀತಿಯ ಮೇಲರಿಮೆಯನ್ನು ಅನುಭವಿಸುತ್ತಾರೆ. ಬಿಳಿಯರಲ್ಲದವರು ಹೇಗೆ ಬಿಳಿಯರ ಸಮಾಜ ನೈತಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅಧಪತನ ಹೊಂದಿದೆ ಎನ್ನುತ್ತಾರಲ್ಲವೇ? ಹಾಗಾದರೆ ಜಾತಿವಾದಿಗಳು ಭಯಂಕರ ಜನಾಂಗೀಯ ದ್ವೇಷಿಗಳೂ ಹೌದು.

ಟಾಟಾ -ಕೋರಸ್ ಡೀಲ್ ಇಲ್ಲದಿದ್ದಲ್ಲಿ ಶಿಲ್ಪಾಶೆಟ್ಟಿಯ ವಿಜಯ ಪತಾಕೆಯನ್ನು ಮತ್ತಷ್ಟು ಸುದ್ದಿ ಚಾನೆಲ್‌ಗಳು ಮುಂದುವರೆಸುತ್ತಿದ್ದವು. **ಸೆಲೆಬ್ರಿಟಿ ಬಿಗ್‌ಬ್ರದರ್ ಶೋ**ನಲ್ಲಿ ಶಿಲ್ಪಾಶೆಟ್ಟಿ ವಿಜಯಿಯಾದಳು ಎಂದಾಕ್ಷಣ ಭಾರತೀಯ ಮಧ್ಯಮವರ್ಗ ಬೀದಿಗಳಲ್ಲಿ ಉಲ್ಲಾಸದಿಂದ ಕುಣಿಯಿತು. **ಶಿಲ್ಪಾಶೆಟ್ಟಿ** ವಿಜಯಿಯಾಗಲೇಬೇಕಿತ್ತು. ಆದರೆ ಜನಾಂಗೀಯ ದ್ವೇಷದ ವಿರುದ್ಧದ ಕೂಗೂ ಸಹ ಅದರೊಡನೆ ಗಾಳಿಯಲ್ಲಿ ಕಣ್ಮರೆಯಾಯಿತು. ಜನವರಿ ೨೯ರ ಪೂರ್ವದಲ್ಲಿ ಜೇಡ್ ಗೂಡಿಯ ಎಪಿಸೋಡ್ ಹೇಗೆ ನಿರ್ಧಾರವಾಯಿತು ಎಂಬುದನ್ನು ಪರಿಗಣಿಸಿ. ಈ ಪ್ರಸಂಗದಿಂದ ನೊಂದ ಪಾರ್ಲಿಮೆಂಟ್ ಸದಸ್ಯರು, ರಾಯಭಾರಿಗಳು, ವಿರೋಧ ಪಕ್ಷದವರು, ಫ್ಯಾಶನ್ ವಿನ್ಯಾಸಕರು, ಅಂಕಣಕಾರರು, ಚಿಂತಕರು, ನಿರ್ಮಾಣಕಾರರು, ಶಾಂತಿಪ್ರಿಯರು, ಎನ್‌ಜಿಓ ಕಾರ್ಯಕರ್ತರು – ಎಲ್ಲರೂ ಬ್ರಿಟನ್‌ನ ಜನಾಂಗೀಯ ದ್ವೇಷಿಗಳೆಂದು ಕೂಗಿದರು.

ಆದರೆ, ಶಿಲ್ಪಾಳ ವಿಜಯಕ್ಕೆ ಯಾರು ಮತ ಹಾಕಿದರು ಎಂದು ಯಾರಾದರೂ ವಿವರಿಸಿದರೆ? ಅನೇಕ ಭಾರತೀಯರು, ದಕ್ಷಿಣ ಏಶಿಯಾದವರು, ಬಿಳಿಯೇತರರು, ಶಿಲ್ಪಾಳ ಪರವಾಗಿ ಮತ ಚಲಾಯಿಸಿದ್ದಾರೆ. ಇಂಗ್ಲೆಂಡ್ ಜನಾಂಗೀಯವಾಗಿ ವಿಘಟನೆಯಾಗಿದ್ದಲ್ಲಿ ಅಥವಾ ಜನಾಂಗೀಯವಾಗಿ ಪೂರ್ವಗ್ರಹಪೀಡಿತ ಎಂದಾದಲ್ಲಿ ಈ ಬಿಳಿಯೇತರ ಮತಗಳು ಶಿಲ್ಪಾಳಿಗೆ ವಿಜಯವನ್ನು ತರುತ್ತಿತ್ತೇ? ದಾಖಲೆಗೆಂಬಂತೆ ಬ್ರಿಟನ್ನಿನ ಶೇ. ೯೨.೧ ರಷ್ಟು ಜನ ಬಿಳಿಯರೇ ಆಗಿದ್ದಾರೆ. ಉಳಿದವರಲ್ಲಿ ಶೇ.೨ ರಷ್ಟು ಕಪ್ಪುಜನ, ಶೇ.೧.೮ರಷ್ಟು ಭಾರತೀಯರು, ಶೇ.೧.೩ರಷ್ಟು ಪಾಕಿಸ್ತಾನದವರು, ಶೇ.೧.೩ರಷ್ಟು ಮಿಶ್ರ ತಳಿಯವರು ಹಾಗೂ ಶೇ.೧.೬ ರಷ್ಟು ಇತರರು ಇದ್ದಾರೆ. ಆದ್ದರಿಂದ ಜನಾಂಗೀಯ ತಾರತಮ್ಯದ ಬಗ್ಗೆ ಪ್ರಜ್ಞಾವಂತರಾಗಿರುವ ಭಾರತೀಯ ಮಧ್ಯಮವರ್ಗಕ್ಕೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳಬೇಕೆನ್ನಿಸುತ್ತದೆ:

– ಶೇ. ೯೨ ರಷ್ಟು ಬಿಳಿಯರನ್ನೇ ಹೊಂದಿರುವ ಇಂಗ್ಲೆಂಡ್ ಏನಾದರೂ ಜನಾಂಗೀಯ ದ್ವೇಷದ ಸಮಾಜವಾಗದ್ದಿದ್ದಲ್ಲಿ ಸೆಲೆಬ್ರಿಟಿ ಬಿಗ್‌ಬ್ರದರ್ ಶೋನಿಂದ ಜೇಡ್ ಗೂಡಿಯನ್ನು ಶೇ.೮೨ರಷ್ಟು ಮತಹಾಕಿ ಹೊರಹಾಕುತ್ತಿದ್ದರೇ?

– ಶೇ. ೯೨ ರಷ್ಟು ಬಿಳಿಯರನ್ನೇ ಹೊಂದಿರುವ ಇಂಗ್ಲೆಂಡ್ ಏನಾದರೂ ಜನಾಂಗೀಯ ದ್ವೇಷದ ಸಮಾಜವಾಗದ್ದಿದ್ದಲ್ಲಿ ಶಿಲ್ಪಶೆಟ್ಟಿಗೆ ದೊರೆತ ಒಟ್ಟು ಮತಗಳಲ್ಲಿ ಶೇ.೬೩ರಷ್ಟು ಮತಗಳು ಯಾರಿಂದ ದೊರೆತವು?

– ಇಂಗ್ಲೇಂಡ್ ಏನಾದರೂ ಜನಾಂಗೀಯ ದ್ವೇಷದ ಸಮಾಜವಾಗದ್ದಿದ್ದಲ್ಲಿ ಕಪ್ಪು ವರ್ಣೀಯವನಾದ ಜೆರೇಮಿ ಜಾಕ್‌ಸನ್ ಶೇ. ೩೭ರಷ್ಟು ಮತಗಳನ್ನು ಗಳಿಸುತ್ತಿದ್ದರೆ?

ಇವುಗಳೊಡನೆ ಮತ್ತೊಂದು ಬಗೆಯ ಪ್ರಶ್ನೆಯನ್ನು ಹಾಕೋಣ. ಶಿಲ್ಪಾಶೆಟ್ಟಿಯು ಜನಾಂಗೀಯ ನಿಂದೆಯ ಲೇಪಕ್ಕೊಳಗಾದಾಗ ಆಕೆಗೆ ಸಾಂತ್ವಾನ ನೀಡಿದ ಒಬ್ಬನೇ ಒಬ್ಬ ಸ್ಪರ್ಧಿ ಎಂಬುದನ್ನು ಗಮನಿಸಿದಲ್ಲಿ ಭಾರತೀಯರಲ್ಲಿ ಒಬ್ಬರಾದರೂ ಆತನ ಪರವಾಗಿ ಮತ ಚಲಾಯಿಸಿದ್ದಾರೆಯೇ? ಜರೇಮಿ ಜಾಕ್ಸನ್ ಸ್ವತಃ ಸಂಗೀತಗಾರನಾಗಿದ್ದು, ಜಗತ್ಪ್ರಸಿದ್ಧ ಮೈಕಲ್ ಜಾಕ್ಸನ್‌ನ ಸಹೋದರನಾಗಿದ್ದ. ಈ ಜನಾಂಗೀಯ ನಿಂದೆಯ ಘಟನೆ ಸಂಭವಿಸುವ ಮೊದಲು ಆತ ಇಂಗ್ಲೆಂಡ್‌ನಲ್ಲಿ ಶಿಲ್ಪಾಳಿಗಿಂತ ಹೆಚ್ಚು ಪ್ರಸಿದ್ಧನಾಗಿದ್ದವನು.

ಈ ಸಂಗತಿಯನ್ನು ಒಂದು ಚೌಕಟ್ಟಿನಲ್ಲಿ ನೋಡುವುದಾದರೆ ಭಾರತೀಯ ಜಾತಿ ಪ್ರಶ್ನೆ ಮತ್ತು ಅಸ್ಪೃಶ್ಯತೆಯಿಂದ ಬಹುದೊಡ್ಡ ಸಮುದಾಯವಾದ ದಲಿತರು ಸಂಕಷ್ಟಕ್ಕೀಡಾಗಿರುವುದನ್ನು ಗಮನಿಸಲೇಬೇಕು. ಭಾರತದಲ್ಲೂ ಬಿಗ್‌ಬ್ರದರ್ ಟೀವಿ ಶೋನಂತೆ ಬಿಗ್ ಬಾಸ್ ಶೋ ಇದೆ. ಈ ಬಿಗ್ ಬಾಸ್ ಶೊನಲ್ಲಿ ದಲಿತ ಸ್ಪರ್ಧಿಯೊಬ್ಬ ಮತ್ತೊಬ್ಬ ದಲಿತೇತರನನ್ನು ಜಾತಿ ತಾರತಮ್ಯ ಆಚರಿಸುತ್ತಿದ್ದಾನೆಂದು ಆರೋಪಿಸಿದ ಸಂಗತಿ ಸಾರ್ವಜನಿಕವಾಗಿ ಬಂದಲ್ಲಿ ಏನಾದೀತು?

ಶಿಲ್ಪಾಶೆಟ್ಟಿಯು ಜನಾಂಗೀಯ ನಿಂದೆಯ ಲೇಪಕ್ಕೊಳಗಾದಾಗ ಆಕೆಗೆ ಸಾಂತ್ವಾನ ನೀಡಿದ ಒಬ್ಬನೇ ಒಬ್ಬ ಸ್ಪರ್ಧಿ ಎಂಬುದನ್ನು ಗಮನಿಸಿದಲ್ಲಿ ಭಾರತೀಯರಲ್ಲಿ ಒಬ್ಬರಾದರೂ ಆತನ ಪರವಾಗಿ ಮತ ಚಲಾಯಿಸಿದ್ದಾರೆಯೇ? ಜರೇಮಿ ಜಾಕ್ಸನ್ ಸ್ವತಃ ಸಂಗೀತಗಾರನಾಗಿದ್ದು, ಜಗತ್ಪ್ರಸಿದ್ಧ ಮೈಕಲ್ ಜಾಕ್ಸನ್‌ನ ಸಹೋದರನಾಗಿದ್ದ. ಈ ಜನಾಂಗೀಯ ನಿಂದೆಯ ಘಟನೆ ಸಂಭವಿಸುವ ಮೊದಲು ಆತ ಇಂಗ್ಲೆಂಡ್‌ನಲ್ಲಿ ಶಿಲ್ಪಾಳಿಗಿಂತ ಹೆಚ್ಚು ಪ್ರಸಿದ್ಧನಾಗಿದ್ದವನು.

ಈ ಜಾತಿ ತಾರತಮ್ಯ ಸಂಗತಿಯು ನಿಜವೇ ಆಗಿದ್ದು, ಭಾರತೀಯ ಮಧ್ಯಮವರ್ಗ ಅದನ್ನು ನೋಡುತ್ತಿದ್ದಾರೆಂದು ಭಾವಿಸೋಣ. ಅಲ್ಲಿ ದಲಿತ ಸ್ಪರ್ಧಿ ವಿಜಯಿಯಾಗುವ ಅವಕಾಶ ಎಷ್ಟಿರುತ್ತಿತ್ತು? ಆಧುನಿಕ ಭಾರತಕ್ಕೆ ಸಂವಿಧಾನವೊಂದು ದೊರೆತ ಮೇಲೆಯೂ ಡಾ.ಅಂಬೇಡ್ಕರ್ ಎರಡು ಸಲ ಪಾರ್ಲಿಮೆಂಟ್ ಚುನಾವಣೆಯಲ್ಲಿ ಸೋತರು ಎಂಬುದನ್ನು ಗಮನದಲ್ಲಿಡಬೇಕಾಗುತ್ತದೆ. ಚೀನಾ ಮತ್ತು ಅಮೆರಿಕಾಕ್ಕೆ ಭಾರತದ ರಾಯಭಾರಿಯಾಗಿ ಸೇವೆ ಸಲ್ಲಿಸಿದ ಕೆ.ಆರ್.ನಾರಾಯಣ್ ಸಹ ರಾಜಕೀಯ ಪ್ರವೇಶ ಮಾಡಿದಾಗ ಅವರು ಮೀಸಲು ಕ್ಷೇತ್ರದಿಂದಲೇ ಸ್ಪರ್ಧಿಸಬೇಕಾಗಿತ್ತು. ಪ್ರತಿವರ್ಷ ಭಾರತದಲ್ಲಿ ನೀಡಲಾಗುವ ಪದ್ಮಶ್ರೀ/ಪದ್ಮವಿಭೂಷಣ ಪ್ರಶಸ್ತಿಗಳಿಗಾಗಿ ಎಷ್ಟು ಮಂದಿ ದಲಿತರ ಹೆಸರು ಸ್ಪರ್ಧೆಯಲ್ಲಿರುತ್ತದೆ?

ಬ್ರಿಟನ್‌ನಲ್ಲಿರುವ ಬಿಳಿಯರ ಸಂಖ್ಯೆ ಶೇ.೯೨.೧ರಷ್ಟಿದ್ದು ಶಿಲ್ಪಾಳ ವಿಜಯಕ್ಕೆ ಕಾರಣರಾಗಿರುವುದನ್ನು ಯೋಚಿಸಿದಾಗ ಭಾರತೀಯರು ತಮ್ಮ ಜಾತಿ ಸಮಸ್ಯೆಯನ್ನು ಹೇಗೆ ನಿಭಾಯಿಸಬೇಕು ಎನ್ನುವುದಕ್ಕೆ ಬ್ರಿಟನ್ ಜನರಿಂದ ಪಾಠಕಲಿಯಬೇಕಿದೆ. ಆ ಸೆಲೆಬ್ರಿಟಿ ಬಿಗ್‌ಬ್ರದರ್ ಶೋ ಬಿಳಿಯರಿಂದ ಕೂಡಿದ ಬ್ರಿಟಿಷ್ ಸಮಾಜವನ್ನಷ್ಟೆ ಪ್ರತಿನಿಧಿಸುತ್ತದೆ. ಭಾರತೀಯರ ಸಮಸ್ಯೆಯು ಚಾರಿತ್ರಿಕವಾಗಿ ರೂಪುಗೊಂಡಿದ್ದಾಗಿದೆ. ಶಿಲ್ಪಾ ಮತ್ತು ಜೇಡ್‌ರ ಸಮಸ್ಯೆಯನ್ನು ಭಾರತೀಯರು ಬಿಳಿ ಹೆಂಗಸಿನ ಜನಾಂಗೀಯ ದ್ವೇಷ ಎಂದು ನೋಡಿದರು. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಭಾರತೀಯರಿಗೆ ವಾಣಿಜ್ಯ ಕಂಪನಿಯೆಂದಾಗದೆ ಆಕ್ರಮಣಕಾರಿ ಕಂಪನಿ ಎಂದು ಕಾಣುತ್ತದೆ. ಹೀಗೆ ಚರಿತ್ರೆಯಿಂದ ಬಂಧಿಯಾಗಿರುವ ಭಾರತೀಯರಿಗೆ ಬ್ರಿಟಿಷರೆಂದರೆ ಆಕ್ರಮಣಕಾರರೇ ಆಗಿದ್ದಾರೆಯೇ ಹೊರತು ವಿಮೋಚನೆ ನೀಡಿದವರು ಅಲ್ಲ. ಆದರೆ ವಸ್ತು ಸಂಗತಿ ಹೇಗಿದೆಯೆಂದರೆ ಬ್ರಿಟಿಷ್ ವಸಾಹತುಶಾಹಿ ಭಾರತಕ್ಕೆ ಚರಿತ್ರೆಯ ಬಹುದೊಡ್ಡ ಮಾನವೀಯತೆಯ ಕೊಡುಗೆಯಾಗಿ ಬಂದಿದೆ. ಬ್ರಿಟಿಷ್ ಸಾಮ್ರಾಜ್ಯವಾದ ಹಿಂದೂಸ್ಥಾನಕ್ಕೆ ಇಂಡಿಯಾ ಎನ್ನುವ ಹೆಮ್ಮೆಯ ಹೆಸರನ್ನು ನೀಡಿತ್ತಲ್ಲದೆ ಇಂಡಿಯಾವನ್ನು ಒಂದು ರಾಷ್ಟ್ರವಾಗಿಸಿತು. ಹೀಗಿರುವಲ್ಲಿ ಬ್ರಿಟಿಷರು ಭಾರತದಲ್ಲಿ ಪೌರತ್ವದ ಬೀಜ ಬಿತ್ತಿತ್ತಲ್ಲವೇ?

ಬ್ರಿಟಿಷ್ ಆಧುನಿಕತೆ ಮತ್ತು ಜ್ಞಾನದ ತೊಟ್ಟಿಲಾಗಿ ವಿಜ್ಞಾನ ಮತ್ತು ಪೌರತ್ವದ ನೆಲೆಯಾಗಿರುವುದರಿಂದ ಭಾರತೀಯರು ಅವರನ್ನು ಗೌರವಿಸುವುದನ್ನು ಕಲಿಯಬೇಕಾಗಿದೆ. ಅವರು ಹೇಗೆ ಶಿಲ್ಪಾ ಮತ್ತು ಜೆರೇಮಿ ಜಾಕ್ಸನ್‌ರನ್ನು ಅಪ್ಪಿಕೊಂಡಂತೆ ಭಾರತೀಯರು ಸಹ ದಲಿತರನ್ನು ಅಪ್ಪಿಕೊಂಡು ಜಾತಿ ಪದ್ಧತಿಯನ್ನು ಕೆಡವಿಹಾಕಬೇಕು. ಭಾರತದ ಜಾತಿ ಪದ್ಧತಿ ಜನಾಂಗೀಯವಾದಕ್ಕಿಂತ ಹೆಚ್ಚು ವಿಷಕಾರಿ ಮತ್ತು ದಮನಕಾರಿಯಾದುದು. □

ಬುದ್ಧಾಯಣ

೧೯

ಬುದ್ಧನೇಕೆ ನಿರಾಕರಿಸಿದ ಆ ಹತ್ತು ಪ್ರಶ್ನೆಗಳನ್ನ...!?

ಸಿ. ಎಚ್. ರಾಜಶೇಖರ್

'ಸಹೋದರ ಮಾಲುಕ್ಯಪುತ್ತನೇ, ಈ ಜಗತ್ತಿನಲ್ಲಿ ದುಃಖ, ಸ್ವಾರ್ಥ, ಅಜ್ಞಾನ, ಅಹಂಕಾರ, ಅಸೂಯೆ, ದ್ವೇಷ, ಅಸಮಾನತೆ, ಅವಿದ್ಯೆ ಮುಂತಾದ ಸಂಕಟವೇ ತುಂಬಿರುವಾಗ ಮೊದಲು ಇಹಕ್ಕಲ್ಲವೇ ಪ್ರಾಮುಖ್ಯತೆ ಕೊಡಬೇಕಾಗಿರುವುದು. ಮನುಷ್ಯನನ್ನು ಮುತ್ತಿರುವ ಅಸಂಖ್ಯಾತ ಬಂಧನದಿಂದ ಬಿಡುಗಡೆ ಮಾಡುವುದೇ ನಿಜವಾದ ಮುಕ್ತಿ ಅಲ್ಲವೇ? ಹಾಗಾಗಿ ನಾನು ಎಂದಿಗೂ, ಎಲ್ಲಿಯೂ ನಾನು ಕಾಣದ, ನೋಡದ, ಅರಿಯದ 'ಪರದ' ಬಗ್ಗೆ ಮಾತನಾಡಲೇ ಇಲ್ಲ ಎಂದ ಬುದ್ಧ. ಆಗ ಮಾಲುಕ್ಯಪುತ್ತನ ಸಂಶಯವು ನೀಗಿತು. ತನ್ನ ಜಿಜ್ಞಾಸೆಗೆ ಉತ್ತರವು ದೊರೆಯಿತು.

ಬುದ್ಧನ ಪರಮಾಪ್ತ ಶಿಷ್ಯರಲ್ಲಿ ಮಾಲುಕ್ಯಪುತ್ತ ಕೂಡ ಒಬ್ಬ ಈತನಿಗೆ ತನ್ನ ಗುರುವಿನ ಬಗ್ಗೆ ಅಪಾರ ಪ್ರೀತಿ ಮತ್ತು ವಿಶ್ವಾಸ. ಬುದ್ಧ ಮಾಲುಕ್ಯಪುತ್ತನನ್ನು ತಾಳ್ಮೆಯ ಸಂಕೇತವೆಂದು ತಿಳಿದಿದ್ದ. ಅವನ ಚಿಂತನಾಕ್ರಮ, ಕುತೋಹಲ, ತಿಳಿಯದರ ಬಗ್ಗೆ ಅವನು ತಾಳುವ ಶ್ರದ್ಧೆ ಅಪಾರ ಪರಿಶ್ರಮ ಮತ್ತು ಸಚ್ಚಾರಿತ್ರ್ಯ ಬಹಳ ಹಿಡಿಸಿತ್ತು. ಅವನ ಸಂಕೋಚ ಸ್ವಭಾವವನ್ನು ಅರಿತಿದ್ದ ಬುದ್ಧ ಆಗಾಗ ಮಾಲುಕ್ಯಪುತ್ತನನ್ನುದ್ದೇಶಿಸಿ;

'ಗೆಳೆಯ ನಿನಗೆ ಸಂಶಯವಿದ್ದ ವಿಷಯದ ಬಗ್ಗೆ ನಿಸ್ಸಂಶಯವಾಗಿ ನನ್ನನ್ನು ಭೇಟಿ ಮಾಡಿ ಚರ್ಚಿಸು' ಎನ್ನುತ್ತಿದ್ದ.

ನಿಜ ಸಂಗತಿ ಎಂದರೆ ಹಲವು ಹತ್ತು ವರ್ಷಗಳಿಂದ ಅವನ ಮನಸ್ಸನ್ನು ಹತ್ತು ಪ್ರಶ್ನೆಗಳು ಕಾಡುತ್ತಿದ್ದವು. ಅವುಗಳಿಗೆ ಬುದ್ಧ ಎಂದಾದರೂ ಭಿಕ್ಷುಗಳ ಬಳಿ ಉತ್ತರಸಬಹುದು ಅಥವಾ ಸಾರ್ವಜನಿಕ ಉಪನ್ಯಾಸ ಮಂದಿರದಲ್ಲಿ ಉತ್ತರಿಸಬಹುದೆಂದು ತಾಳ್ಮೆಯಿಂದ ಕಾಯ್ದಿದ್ದು ವ್ಯರ್ಥವಾಯಿತು. ಏಕೆಂದರೆ ಆ ಹತ್ತು ಪ್ರಶ್ನೆಗಳಿಗೆ ಅವನೆಂದು ಉತ್ತರಿಸುವ ಗೋಜಿಗೆ ಹೋಗಲಿಲ್ಲ. ಹಾಗಾಗಿ ಮಾಲುಕ್ಯಪುತ್ತನ ಮಾನಸಿಕ ನೆಮ್ಮದಿಗೆ ಅಪಾರ ಭಂಗ ಉಂಟಾಯಿತು. ಅವನ ನೆಮ್ಮದಿ ಮತ್ತು ತಾಳ್ಮೆಯನ್ನು ಕೆಡಿಸುವ ಆ ಹತ್ತು ಪ್ರಶ್ನೆಗಳೆಂದರೆ;

ಈ ಜಗತ್ತು ಶಾಶ್ವತವೇ? ಈ ಜಗತ್ತು ಅಶಾಶ್ವತವೇ? ಈ ಜಗತ್ತು ಆದಿ ಅಥವಾ ಮಿತಿಯುಳ್ಳದ್ದೆ? ಈ ಜಗತ್ತು ಅಂತ್ಯವಿಲ್ಲದ ಅನಂತವೆ? ಆತ್ಮವು ದೇಹದ ಒಂದು ಭಾಗವೇ? ಅಥವಾ ಆತ್ಮವು ದೇಹದಿಂದ ಪ್ರತ್ಯೇಕವಾದ ಅಂಗವೆ? ತಥಾಗತ ಸತ್ತ ನಂತರವೂ ಬದುಕಿರುವನೆ? ಅಥವಾ ತಥಾಗತ ಸತ್ತ ನಂತರ ಇರುವುದಿಲ್ಲವೆ? ತಥಾಗತ ಇದ್ದಂತೆಯೂ ಇದ್ದು, ಸತ್ತಂತೆಯು ಮತ್ತೊಂದು ಕಡೆ ಬದುಕಿಯೂ ಸತ್ತಂತೆ ಇರುವನೇ? ಇವುಗಳಿಗೆ ಉತ್ತರ ಕಾಣದ ಮಾಲುಕ್ಯಪುತ್ತ ಮರು ದಿನ ಬೆಳಿಗ್ಗೆ ಬುದ್ಧನನ್ನು ಸಂಧಿಸಿ ತನ್ನ ಸಂಶಯಗಳಿಗೆ ಉತ್ತರ ಪಡೆಯಲು ನಿರ್ಧರಿಸಿದ.

ಮರುದಿನ ಮುಂಜಾನೆ ಎದ್ದು ಮಾಲುಕ್ಯಪುತ್ತ ಬುದ್ಧ ಬೀಡು ಬಿಟ್ಟಿದ್ದ ಚೇತನ ವನವನ್ನು ತಲುಪಿ ಬುದ್ಧನಿಗೆ ವಂದಿಸಿ ಅವನೆದುರು ಕುಳಿತು;

'ಗುರುದೇವಾ, ಹಲವು ಹತ್ತು ವರ್ಷಗಳಿಂದ ನನ್ನ ಮನಸ್ಸಿನಲ್ಲಿ ಹತ್ತು ಪ್ರಶ್ನೆಗಳು ನಿರಂತರವಾಗಿ ಉತ್ತರ ಕಾಣದ ಅಂತರ್‌ಪಿಶಾಚಿಯ ತರಹ ಅಲೆಯುತ್ತಿವೆ. ಅದಕ್ಕೆ ಮುಕ್ತಿ ನೀಡು ಗುರುವೆ' ಎಂದಾಗ ಬುದ್ಧನು;

'ಸಹೋದರ; ನಿನ್ನನ್ನು ಅಷ್ಟು ಗಾಢವಾಗಿ ಕಾಡಿದ ಪ್ರಶ್ನೆಗಳಾವು? ನಿಸ್ಸಂಕೋಚವಾಗಿ ಪ್ರಶ್ನಿಸು' ಎಂದಾಗ ಮಾಲುಕ್ಯಪುತ್ತ.

'ಗುರುದೇವಾ, ಆ ಜಗತ್ತು ಶಾಶ್ವತವೇ? ಅಶಾಶ್ವತವೆ? ಇದು ಮಿತಿಯಿಂದ ಕೂಡಿದ್ದೋ? ಅಥವಾ ಅಪರಿಮಿತದಿಂದ ಕೂಡಿದ್ದೋ?'

'ಸಹೋದರ, ನಿನ್ನ ಈ ನಾಲ್ಕು ಪ್ರಶ್ನೆ ನನ್ನ ಅನುಭವ ಮತ್ತು ಆಯುಷ್ಯಕ್ಕೆ ಮೀರಿದಂತವು. ಈ ಪ್ರಶ್ನೆಗಳು ಅಸಂಬದ್ಧ ತರ್ಕ, ಅಜ್ಞಾನ ಮತ್ತು ಉಹಾಪೋಹದಿಂದ ಕೂಡಿದ್ದವಾಗಿವೆ. ವಿಶ್ವದ



ವಿಕಾಸಕ್ಕೆ ಒಂದು ನಿರ್ದಿಷ್ಟ ಕಾಲ ಮತ್ತು ಮಿತಿ ಇದೆ ಎಂಬುದನ್ನು ನಾನು ನಿರಾಕರಿಸುತ್ತೇನೆ. ನಮ್ಮ ಪ್ರಾಚೀನ ಧಾರ್ಮಿಕ ಗುರುಗಳು ಪ್ರಚಾರ ಮಾಡಿದಂತೆ ಶೂನ್ಯತಾವಾದದಿಂದ ಯಾವ ಸೃಷ್ಟಿಯು, ಪ್ರಳಯವೂ ಸಾಧ್ಯವಿಲ್ಲ. ಏಕೆಂದರೆ, ಜಗತ್ತು ಕಾರ್ಯಕಾರಣ ಸಿದ್ಧಾಂತದ ಆಧಾರದ ಮೇಲೆ ನಿಂತಿದೆ ಎಂಬುದನ್ನು ಒಪ್ಪಬೇಕು.'

'ಗುರುದೇವಾ, ಆತ್ಮವು ದೇಹದ ಒಂದು ಭಾಗವೆ? ಅಥವಾ ಆತ್ಮವು ದೇಹದಿಂದ ಪ್ರತ್ಯೇಕವಾದ ಅಂಗವೆ?'

'ಸಹೋದರ, ನಾನು ಈ ವಾದವನ್ನು ಒಪ್ಪಬೇಕಾದರೆ ಮೊದಲು ಅಜ್ಞಾನವನ್ನು ಒಪ್ಪಬೇಕು. ನನ್ನ ಬದುಕಿಡಿ ನಾನು ಹೋರಾಡಿದ್ದೆ ಈ ಅಜ್ಞಾನ ಮತ್ತು ಅಸಂಬದ್ಧತೆಯ ವಿರುದ್ಧ. ಆತ್ಮವನ್ನು ಒಪ್ಪುವುದಾದರೆ ಪರಮಾತ್ಮನನ್ನು ಒಪ್ಪಬೇಕು. ಬ್ರಹ್ಮನೆ ಮನುಷ್ಯನ ಸೃಷ್ಟಿಕರ್ತ ಅಥವಾ ಬ್ರಹ್ಮನ ದೇಹದ ಒಂದು ಅಂಗವೇ ಮನುಷ್ಯ ಎಂಬುದು ಒಂದು ಊಹೆ ಅಥವಾ ಕಲ್ಪನೆ ಅಲ್ಲದೆ ಮತ್ತೇನು?'

'ಗುರುದೇವಾ, ತಥಾಗತ ಸತ್ತ ನಂತರವೂ ಬದುಕಿರುವನೆ? ಅಥವಾ ಸತ್ತನಂತರ ಇರುವುದಿಲ್ಲವೆ? ಇದ್ದಂತೆಯೂ ಸತ್ತಂತಾಗುವನೆ?'

'ಸಹೋದರ, ಈ ದೇಹವು ಸಂಯುಕ್ತ ವಸ್ತುವಿನಿಂದ ಕೂಡಿದ್ದು ಎಂಬ ಸತ್ಯವನ್ನು ಮತ್ತು ವಾಸ್ತವವನ್ನು ಒಪ್ಪುವುದಾದರೆ, ವಿಧಿವಾದವನ್ನು ಯಾರೋ ಒಬ್ಬ ದೇವರು ಮನುಷ್ಯನಿಗೂ ಪ್ರಪಂಚಕ್ಕೂ ಏನಾಗಬೇಕೆಂಬುದನ್ನು ಪೂರ್ವ ನಿರ್ಧಾರ ಮಾಡುತ್ತಾನೆಂಬುದು ಅಷ್ಟೇ ಬಾಲಿಷ ಸಿದ್ಧಾಂತವಲ್ಲವೆ?'

'ಸಹೋದರ ಮಾಲುಕ್ಯಪುತ್ತನೇ, ಈ ಜಗತ್ತಿನಲ್ಲಿ ದುಃಖ, ಸ್ವಾರ್ಥ, ಅಜ್ಞಾನ, ಅಹಂಕಾರ, ಅಸೂಯೆ, ದ್ವೇಷ, ಅಸಮಾನತೆ, ಅವಿದ್ಯೆ ಮುಂತಾದ ಸಂಕಟವೇ ತುಂಬಿರುವಾಗ ಮೊದಲು ಇಹಕ್ಕಲ್ಲವೇ ಪ್ರಾಮುಖ್ಯತೆ ಕೊಡಬೇಕಾಗಿರುವುದು. ಮನುಷ್ಯನನ್ನು ಮುತ್ತಿರುವ ಅಸಂಖ್ಯಾತ ಬಂಧನದಿಂದ ಬಿಡುಗಡೆ ಮಾಡುವುದೇ ನಿಜವಾದ ಮುಕ್ತಿ ಅಲ್ಲವೆ? ಹಾಗಾಗಿ ನಾನು ಎಂದಿಗೂ, ಎಲ್ಲಿಯೂ ನಾನು ಕಾಣದ, ನೋಡದ, ಅರಿಯದ 'ಪರದ' ಬಗ್ಗೆ ಮಾತನಾಡಲೇ ಇಲ್ಲ ಎಂದ ಬುದ್ಧ. ಆಗ ಮಾಲುಕ್ಯಪುತ್ತನ ಸಂಶಯವು ನೀಗಿತು. ತನ್ನ ಜಿಜ್ಞಾಸೆಗೆ ಉತ್ತರವು ದೊರೆಯಿತು. ಆಗ ಅವನು:

'ಅದ್ಭುತ ಗುರುದೇವಾ... ಅದ್ಭುತ... ನಿನ್ನ ವಾದ... ನಿನ್ನ ಚಿಂತನೆ... ನಿನ್ನ ಅಸಾಮಾನ್ಯ ಮಾನವೀಯತೆ...! ನಿನ್ನಂತಹ ಗುರುವನ್ನು ಪಡೆದ ನಾನೇ ಧನ್ಯ...! ಹೌದು ಗುರುದೇವಾ, ನೀನು ನಿಜಕ್ಕೂ ಮನುಕುಲದ ಮಹಾಗುರುವೇ ಸರಿ...! ಎಲ್ಲರೂ ಪರವೇ ಎಲ್ಲಾ. ಇಹವು ಏನೇನೂ ಅಲ್ಲ. ಎಂದು ಸಾರಿ ಸಾರಿ ಹೇಳುತ್ತಿರುವಾಗ ನೀನು ಅದಕ್ಕೆ ತದ್ವಿರುದ್ಧವಾಗಿ ಇಹವೇ ಎಲ್ಲಾ ಪರವೂ ಏನೇನೂ ಅಲ್ಲ...! ಎನ್ನುವ ಮೂಲಕ ಸಹಸ್ರಾರು ವರ್ಷಗಳ ಅಜ್ಞಾನಕ್ಕೆ ವಿಚಾರದ ಕಿಚ್ಚಿಟ್ಟು ಬಿಟ್ಟೆ ಋಷಿಮುನಿಗಳ ನಂಬಿಕೆ ಎಂಬ ಸೌಧವನ್ನೆ, ಬುಡಮೇಲು ಮಾಡಿಬಿಟ್ಟೆ, ಯಾವುದನ್ನು ಅಲೌಕಿಕವೆಂದು, ಧಾರ್ಮಿಕವೆಂದು, ಪವಿತ್ರವೆಂದು, ಮೂಲಭೂತವೆಂದು, ಪ್ರಶ್ನಾತೀತವೆಂದು ನಂಬಿದ್ದರೋ ಅದಕ್ಕೆ ಕವಡೆಕಾಸಿನ ಮೌಲ್ಯವನ್ನು ಕೊಡದೆ ಧೂಳಿಪಟ ಮಾಡಿಬಿಟ್ಟೆ...!! ನಿನ್ನ ವಿಚಾರ ಪರಂಪರೆಯಿಂದ ಈ ಭೂಮಿಯಲ್ಲಿ ವಿಜ್ಞಾನವು ತಲೆ ಇಎತ್ತಿ ಅಜ್ಞಾನವು ಅಳಿಯಲು ಸುಜ್ಞಾನವು ಮೊಳಗಲಿ...!!!' ಎಂದು ಮತ್ತೊಮ್ಮೆ ಬುದ್ಧನಿಗೆ ನಮಿಸಿ ಮುನ್ನಡೆದ. □

ಮನಸ್ಸಿನ ಆರೋಗ್ಯವೇ ಮಿಗಿಲು!



ಬುದ್ಧನ ವ್ಯಕ್ತಿತ್ವ ಅಜರಾಮರವಾಗಲು ಅವನ ಸರಳತೆ. ಸತ್ಯತೆ ಮತ್ತು ಪ್ರೀತಿಯೆ ಕಾರಣ. ದೊರೆಗಾಗಿ ವಿಶೇಷ ಪ್ರೀತಿ. ಬಡವನಿಗಾಗಿ ಅಸಡ್ಡೆಯ ಪ್ರೀತಿಯನ್ನು ತೋರಲಿಲ್ಲ. ಸರ್ವರಿಗೂ ಸಮನಾಗಿ ಪ್ರೀತಿ ಮತ್ತು ಅನುಕಂಪವನ್ನು ಹಂಚಿದ. ಒಮ್ಮೆ ಬುದ್ಧನನ್ನು ಕಂಡವರು. ಭೇಟಿ ಆದವರು ಬದುಕಿಡಿ ಅವನಿಗಾಗಿ ಹಂಬಲಿಸುತ್ತಿದ್ದರು. ಆ ಕ್ಷಣದಲ್ಲಿ ಆತ ತೋರಿದ ಪ್ರೀತಿ. ನುಡಿದ ಸತ್ಯ ಅವರ ಬದುಕನ್ನೇ ಬದಲು ಮಾಡಿ ಬಿಡುತ್ತಿತ್ತು. ಇಂತಹ ಮಾಂತ್ರಿಕ ಶಕ್ತಿ ಇದ್ದದ್ದು ಬುದ್ಧನಿಗೆ ಮಾತ್ರ!

ನಕುಲಪಿತನೆಂಬ ವಯೋವೃದ್ಧನು ಬುದ್ಧನ ಮಹಾ ಅಭಿಮಾನಿ. ತನ್ನ ಗುರು ಮಕರ ಸರೋವರದ ಬಳಿಯ ಮೃಗ ವನದ ಭೇಶಕಾಲ ತೋಪಿಗೆ ಮತ್ತೆ ಬರುವನೆಂದು, ತಂಗುವನೆಂದು ತಿಳಿದು ಮಹಾದಾನಂದ ಪಟ್ಟುಕೊಂಡ. ಬುದ್ಧನ ಬರುವಿಕೆಗಾಗಿ ಜಾತಕ ಪಕ್ಷಿಯಂತೆ ಕಾಯ್ದು ಕುಳಿತ. ಬುದ್ಧ ಬಂದ ವಿಷಯ ಕಿವಿಗೆ ಬೀಳುತ್ತಲೆ ಆ ಮುದುಕ ತನ್ನ ಅನಾರೋಗ್ಯವನ್ನು ಲೆಕ್ಕಿಸದೆ ಊರುಗೋಲು ಊರಿಕೊಂಡು ಬುದ್ಧನ ಬಳಿ ಬಂದು ಅವನಿಗೆ ವಂದಿಸಿದ.

ಬುದ್ಧನಿಗೆ ಮುದುಕನಾದ ತನ್ನ ಆಪ್ತ ಗೆಳೆಯ ಗೃಹಪಿತನಾದ ನಕುಲಪಿತನು ಬಂದದ್ದು ತನ್ನನ್ನು ಸಂದಿಸಿದ್ದು. ಬಹು ಸಂತೋಷ ತಂದಿತ್ತು. ಆ ಹಳೆಯ ಇಬ್ಬರು ಗೆಳೆಯರು ಉಭಯ ಕುಶಲೋಪರಿಯನ್ನು ವಿಚಾರಿಸಿಕೊಂಡರು. ಬಳಿಕ ನಕುಲಪಿತ ಬುದ್ಧನನ್ನು ಉದ್ದೇಶಿಸಿ;

'ಗುರುದೇವಾ. ನನ್ನ ಒಡೆಯಾ... ಈ ಮುದುಕನದೊಂದು ಬೇಡಿಕೆ ಇತ್ತು. ಅದು ಇಂದು ನೆರವೇರಿತ್ತು!'

'ವಯಸ್ಸಿನಲ್ಲಿ ಹಿರಿಯನು. ವಿನಯದಲ್ಲಿ ಘನವಂತನೂ ಆದ ಎಲೈ ನಕುಲಪಿತನೇ ಆ ನಿನ್ನ ಬೇಡಿಕೆ ಏನಾಗಿತ್ತು?'

'ಗುರುದೇವಾ. ಈ ಮುದುಕ ಸಾಯುವ ಮುನ್ನ ತಥಾಗತರನ್ನು ಕೊನೆಯದಾಗಿ ಕಣ್ ತುಂಬಾ ನೋಡಬೇಕು ಮತ್ತು ನಮಿಸಬೇಕು ಎಂಬುದೇ ಆ ಬೇಡಿಕೆ'

'ಎಲೈ ಸ್ನೇಹಿತನೇ. ಇದೆಂತಹ ನಿನ್ನ ಹುಚ್ಚು ಬೇಡಿಕೆ. ನನ್ನನ್ನು ಕಂಡಾಯಿತಲ್ಲ ಹಾಗಾದರೆ ನೀನಿನ್ನು ಚಿರಂಜೀವಿಯೆ?'

'ಗುರುವೆ. ಅದು ಹಾಗಲ್ಲ. ನನ್ನ ಸಾವಿಗೊಂದು ಅರ್ಥ ಬರುತ್ತದೆ. ಘನತೆ ಬರುತ್ತದೆ. ನಾನು ಬರೀ ಸಾವನಷ್ಟೇ ಇಚ್ಚಿಸುವುದಿಲ್ಲ. ಘನತೆಯಿಂದ ಕೂಡಿದ ಸಾವನ್ನು ಇಚ್ಚಿಸುತ್ತೇನೆ. ಆ ಸಾವಿನಲ್ಲಿ ಚಿಂತೆ ಇರುವುದಿಲ್ಲ. ನೆಮ್ಮದಿ ಮತ್ತು ಸಂತೃಪ್ತಿ ಇರುತ್ತದೆ'

'ಭಲೇ ನಕುಲಪಿತ... ಭಲೇ...! ಬದುಕಿನಲ್ಲಿಯೂ ಘನತೆಯನ್ನು ಸಂಪಾದಿಸಿದ ನೀನು ಸಾವಿನಲ್ಲಿಯೂ ಘನತೆಯನ್ನು ಬಯಸುವಿಯ ಅಲ್ಲ. ನೀನು ನಿಜಕ್ಕೂ ಮಹಾಜೀವಿಯೇ ಹೌದು.'

'ಗುರುದೇವಾ. ನನ್ನೊಡೆಯ.. ಇದೆಲ್ಲವೂ ನಿನ್ನ ಬುತ್ತಿಯೇ ಸರಿ. ಆದರೂ ಈ ನನ್ನ ಶರೀರ ಕ್ಷೀಣವಾಗಿ ಝುರ್ಝರಿತವಾಗಿದೆ. ಅದೇಕೋ ಏನೋ ಒಂದು ಕ್ಷಣವಾದರೂ ಈ ದೇಹ ಆರೋಗ್ಯವನ್ನು ಬಯಸುತ್ತದೆ'

'ಎಲೈ ಸ್ನೇಹಿತನೇ ನಿನ್ನದು ಅದೆಂತಹ ಮೂರ್ಖವಾದ ಈ ವಯಸ್ಸಿನಲ್ಲಿಯೂ ದೇಹದ ಆರೋಗ್ಯಕ್ಕಿಂತ ಮನಸ್ಸಿನ ಆರೋಗ್ಯವನ್ನು ಹೊಂದಿರುವುದು ನಿನ್ನ ಸಾಧನೆ ಅಲ್ಲವೆ?'

'ಹೌದು ಗುರುದೇವಾ. ಈ ಸಾಧನೆಯ ಶ್ರೇಯಸ್ಸು ನಿನಗೆ ಸಿಗಬೇಕು. ಇದು ನೀನು ಕಲಿಸಿದ ಪಾಠ...!!' ಎಂದು ಬುದ್ಧನಿಗೆ ನಕುಲಪಿತನು ಕೊನೆಯದಾಗಿ ಧನ್ಯತೆಯಿಂದ ನಮಿಸಿ ಮುನ್ನಡೆಯುತ್ತಾನೆ. □

'SAMVADA' Kannada Monthly, Mar 2007 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಮೈತ್ರಿ ಸರ್ಕಾರದ ಸಾಧನೆಗಳು

ರಾಜ್ಯದ ಸರ್ವತೋಮುಖ ಪ್ರಗತಿಗೆ ಪಣತೊಟ್ಟು ಫೆಬ್ರವರಿ ೩, ೨೦೦೬ ರಂದು ಶ್ರೀ ಹೆಚ್.ಡಿ ಕುಮಾರಸ್ವಾಮಿರವರ ನೇತೃತ್ವದಲ್ಲಿ ಆಡಳಿತದ ಚುಕ್ಕಾಣಿ ಹಿಡಿದ ಮೈತ್ರಿಕೂಟ ಸರ್ಕಾರವು ಗ್ರಾಮೀಣ ಮತ್ತು ನಗರ ಪ್ರದೇಶಗಳ ಅಭಿವೃದ್ಧಿಗೆ ಸಮಾನ ಆದ್ಯತೆ ನೀಡಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಈ ದಿಕ್ಕಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಹಗಲು-ಇರುಳು ಎನ್ನದೆ, ಹಳ್ಳಿ-ಹಳ್ಳಿಗೆ ಭೇಟಿ ನೀಡಿ ಅಲ್ಲಿಯೇ ವಾಸ್ತವ್ಯ ಹೂಡಿ, ಹಳ್ಳಿಗರ ಮನದಾಳಕ್ಕೆ ಇಳಿದು ಅವರ ಕುಂದು-ಕೊರತೆಗಳಿಗೆ ಸ್ಪಂದಿಸುತ್ತಿರುವುದು ಜನತೆಯಲ್ಲಿ ಹೊಸ ಭರವಸೆ ಮೂಡಿಸಿದೆ. ಮೈತ್ರಿಕೂಟ ಸರ್ಕಾರದ ಪರಿಶ್ರಮದ ಫಲವಾಗಿ ಕರ್ನಾಟಕ ಇಂದು ದೇಶದ ಹಲವಾರು ರಂಗಗಳಲ್ಲಿ ಪ್ರಥಮ ಸ್ಥಾನದಲ್ಲಿದೆ.

ಬೆಂಗಳೂರು ಸಮಗ್ರ ಅಭಿವೃದ್ಧಿಗೆ ನೀಲನಕ್ಷೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ- ಮೈಸೂರು ರಸ್ತೆ ಹಾಗೂ ಮಾಗಡಿ ರಸ್ತೆ ನಡುವೆ ೯೨ ಕೋಟಿ ರೂ. ವೆಚ್ಚದಲ್ಲಿ ಹೊರವರ್ತುಲ ರಸ್ತೆ ಕೆಲಸ *೨೦೦೭ ಜೂನ್ ವೇಳೆಗೆ ಮಾಗಡಿ ರಸ್ತೆ-ಕಾರ್ಡ್ ರಸ್ತೆ ನಡುವೆ ಅಂಡರ್‌ಪಾಸ್. *ಆರ್ಥಿಕ ದುರ್ಬಲ ವರ್ಗಗಳಿಗಾಗಿ ತಲಾ ೩ ಲಕ್ಷ ಮೊತ್ತದ ೨ ಲಕ್ಷ ಮನೆ ವಿತರಿಸುವ ಮಿತ ಬಜೆಟ್ ವಸತಿ ಕಾರ್ಯಕ್ರಮ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ: ೨೦ ತಿಂಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿರುವ ೧೮೦೦ ಕೋಟಿ ರೂ. ವೆಚ್ಚದ ೩೦ ಕಿ.ಮೀ. ಒಳವರ್ತುಲ ರಸ್ತೆ ಮತ್ತು ೩೩ ಅಂಡರ್‌ಪಾಸ್‌ಗಳು. *೧೩೧ ಕೋಟಿ ರೂ. ವೆಚ್ಚದಲ್ಲಿ ೬ ಅಂಡರ್‌ಪಾಸ್ ನಿರ್ಮಿಸಲು ಉದ್ದೇಶ. *೧೫೫ ಕಿ.ಮೀ. ಉದ್ದದ ೭೦ ಒಳರಸ್ತೆಗಳ ಅಭಿವೃದ್ಧಿ.

ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ: ಕಾವೇರಿ ನಾಲ್ಕನೇ ಹಂತದ ೨ನೇ ಘಟ್ಟದ ಯೋಜನೆ ಒಂದು ವರ್ಷ ಮೊದಲೇ ಪೂರ್ಣಗೊಳಿಸುವ ಗುರಿ. *ಹೆಚ್ಚುವರಿಯಾಗಿ ೫೦೦ ಎಂಎಲ್‌ಡಿ ನೀರು ಬೆಂಗಳೂರಿಗೆ. *ಸಮರೋಪಾದಿಯಲ್ಲಿ ಮ್ಯಾನ್‌ಹೋಲ್‌ಗಳ ಸ್ವಚ್ಛತಾ ಕಾರ್ಯಕ್ರಮ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ: ಬೆಂಗಳೂರು ಮಹಾನಗರದಲ್ಲಿ ಬಸ್‌ಗಳು ಸಂಚರಿಸುತ್ತಿರುವ ನಿಖರ ಮಾಹಿತಿ ಒದಗಿಸುವ ಗ್ರಿಡ್ ವ್ಯವಸ್ಥೆ ಪರಿಣಾಮಕಾರಿ ಅಳವಡಿಕೆ *ಒಂದು ಸಾವಿರ ಓಲ್ವೋ ಬಸ್‌ಗಳು, ೭೩೭ ಯುರೋ-ಬಸ್‌ಗಳು.

ಬೆಂಗಳೂರು ಮೆಟ್ರೋ ರೈಲು ನಿಗಮ: ಕಂಠೀರವ ಕ್ರೀಡಾಂಗಣ ಹಾಗೂ ಬೈಯಪ್ಪನಹಳ್ಳಿಯವರೆಗೆ ೭ ಕಿ.ಮೀ. ಉದ್ದದ ೧೩೮ ಕೋಟಿ ರೂ. ವೆಚ್ಚದ ನಮ್ಮ ಮೆಟ್ರೋ ಕಾಮಗಾರಿಗೆ ಚಾಲನೆ.

ಬೆಂಗಳೂರು ಮಹಾನಗರಾಭಿವೃದ್ಧಿ ಪ್ರಾಧಿಕಾರ: ಸಕಲ-ಸವಲತ್ತು ಒಳಗೊಂಡ ದುಡಿಯುವ ವರ್ಗಕ್ಕೆ ಅನುಕೂಲಕರವಾದ, ಜೀವನ ನಿರ್ವಹಣೆಗೆ ಸಹಕಾರಿಯಾದ ಉಪನಗರಗಳ ನಿರ್ಮಾಣ. *೧೮೦ ಕಿ.ಮೀ. ವೇಗದಲ್ಲಿ ಸಂಚರಿಸಲು ಅನುಕೂಲವಾದ ಬೆಂಗಳೂರು ಮಹಾನಗರ ರಿಂಗ್ ರಸ್ತೆ, ೨ನೇ ಹಂತದಲ್ಲಿ ವಿಮಾನ ನಿಲ್ದಾಣ ಎಕ್ಸ್‌ಪ್ರೆಸ್ ಹೆದ್ದಾರಿಯಿಂದ ರಾಷ್ಟ್ರೀಯ ಹೆದ್ದಾರಿ ೨೦೭ಕ್ಕೆ ಸಂಪರ್ಕಿಸುವ ರಸ್ತೆ ಕಾಮಗಾರಿ..

ಕರ್ನಾಟಕ ವಾರ್ತೆ
Karnataka Information